ಬುಧವಾರ, ಆಗಸ್ಟ್ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 219 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ

ಬಾಂಗ್ಲಾ: ಮಗ್ಗುಲ ಮುಳ್ಳು?

ವಿದ್ಯುತ್ ಉತ್ಪಾದಿಸುವ ಶೂ ಆವಿಷ್ಕಾರ 10

ಸಾವಿರಕ್ಕೂ ಹೆಚ್ಚು ಎಕರೆ ಅರಣ್ಯ ಒತ್ತುವರಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,593	23,992	₹71,480 (ಬೆಂಗಳೂರು)	₹82,100 (ಬೆಂಗಳೂರು)	83.92

ಪದಕ ಪಥದಲ್ಲಿ ನೀರಜ್

ಪ್ಯಾರಿಸ್: ಭಾರತದ ಅಥ್ಲೀಟ್ ನೀರಜ್ ಚೋಪ್ರಾ ಅವರು ಕ್ರೀಡಾಪ್ರೇಮಿಗಳ ನಿರೀಕ್ಷೆಯಂತೆಯೇ ಪುರುಷರ ಜಾವೆಲಿನ್ ಥ್ರೋ ಫೈನಲ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಭರವಸೆ ಮೂಡಿಸಿದ್ದಾರೆ.

89.34 ಮೀ.
ಅರ್ಹತಾ ಸುತ್ತಿನಲ್ಲಿ ನೀರಜ್ ಥ್ರೋ

ಹೋಟೆಲ್‌ಗೆ ಬೆಂಕಿ– 24 ಮಂದಿ ಸಜೀವ ದಹನ • ಮೃತರ ಸಂಖ್ಯೆ 440ಕ್ಕೆ ಏರಿಕೆ

ಬಾಂಗ್ಲಾ: ಹಿಂಸೆಗಿಲ್ಲ ಅಂಕುಶ

ಢಾಕಾ (ಪಿಟಿಐ): ಮಾಜಿ ಪ್ರಧಾನಿ ಶೇಖ್ ಹಸೀನಾ ಬಾಂಗ್ಲಾದೇಶ ತೊರೆದ ಬಳಿಕವೂ ಢಾಕಾ, ಇತರ ನಗರಗಳಲ್ಲಿ ಹಿಂಸಾಚಾರ ಮತ್ತೆ ಭುಗಿಲೆದ್ದಿದೆ.

ಶೇಖ್ ಹಸೀನಾ ನೇತೃತ್ವದ ಪಕ್ಷ ಅವಾಮಿ ಲೀಗ್‌ನ ಮುಖಂಡರೊಬ್ಬರ ಒಡೆತನದ ಐಷಾರಾಮಿ ಹೋಟೆಲ್‌ಗೆ ನುಗ್ಗಿದ ಉದ್ರಿಕ್ತರ ಗುಂಪೊಂದು, ಇಂಡೊನೇಷ್ಯಾ ಪ್ರಜೆ ಸೇರಿದಂತೆ ಕನಿಷ್ಠ 24 ಜನರನ್ನು ಸಜೀವ ದಹನ ಮಾಡಿದೆ ಎಂದು ಮೂಲಗಳು ಮಂಗಳವಾರ ಹೇಳಿವೆ. ಅವಾಮಿ ಲೀಗ್ ಪಕ್ಷದ ಜೋಷರ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಶಾಹಿನ್ ಚಕ್ಲಾದರ್ ಮಾಲೀಕತ್ವದ 'ಜಬೀರ್ ಇಂಟರ್ ನ್ಯಾಷನಲ್ ಹೋಟೆಲ್'ಗೆ ಸೋಮವಾರ ತಡರಾತ್ರಿ ನುಗ್ಗಿದ್ದ ಗುಂಪು, ಹೋಟೆಲ್‌ಗೆ ಬೆಂಕಿ ಹಚ್ಚಿತು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಸರ್ಕಾರದ ವಿರುದ್ಧದ ಪ್ರತಿಭಟನೆ ತೀವ್ರಗೊಂಡಿದ್ದರಿಂದ ಶೇಖ್ ಹಸೀನಾ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿ, ದೇಶ ತೊರೆದ ನಂತರ ಭುಗಿ ಲೆದ್ದ ಹಿಂಸಾಚಾರದಲ್ಲಿ ಸೋಮವಾರ 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು.

8ನೇ ಪುಟ ನೋಡಿ

ಢಾಕಾದಲ್ಲಿರುವ ಅವಾಮಿ ಲೀಗ್ ಪಕ್ಷದ ಕೇಂದ್ರ ಕಚೇರಿಯ ಮೇಲೆ ಪ್ರತಿಭಟನಕಾರರು ದಾಳಿ ನಡೆಸಿದರು —ಪಿಟಿಐ ಚಿತ್ರ

ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಯೂನಸ್ ನೇಮಕ



ಢಾಕಾ/ಪ್ಯಾರಿಸ್(ಪಿಟಿಐ/ಎಎಫ್‌ಪಿ): ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ, ಆರ್ಥಿಕ ತಜ್ಞ ಮೊಹಮ್ಮದ್ ಯೂನಸ್ ಅವರನ್ನು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರನ್ನಾಗಿ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಮಂಗಳವಾರ ರಾತ್ರಿ ನೇಮಕ ಮಾಡಿದ್ದಾರೆ ಎಂದು ಅಧ್ಯಕ್ಷರ ಪತ್ರಿಕಾ ಕಾರ್ಯದರ್ಶಿ ತಿಳಿಸಿದ್ದಾರೆ.

ಕ್ಷಿಪ್ರ ರಾಜಕೀಯ ಬೆಳವಣಿಗೆಯಿಂದಾಗಿ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ವಿದ್ಯಾರ್ಥಿ ಆಂದೋಲನದ ಸಂಯೋಜಕರೊಂದಿಗೆ ಶಹಾಬುದ್ದೀನ್ ನಡೆಸಿದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

5Aನೇ ಪುಟ ನೋಡಿ

ನಾಜೂಕಾಗಿ ಟೀಕಿಸಿದ ಕೇಂದ್ರ

ನವದೆಹಲಿ: ಬಾಂಗ್ಲಾದೇಶದ ಪರಿಸ್ಥಿತಿ ಇನ್ನಷ್ಟು ಪ್ರಕ್ಷುಬ್ಧಗೊಳ್ಳುವುದಕ್ಕೆ ಶೇಖ್ ಹಸೀನಾ ನೇತೃತ್ವದ ಸರ್ಕಾರವೇ ಕಾರಣ ಎಂದು ಕೇಂದ್ರ ಸರ್ಕಾರವು ಸೂಕ್ಷ್ಮವಾಗಿ ತಿಳಿಸಿದೆ.

ಬಾಂಗ್ಲಾದೇಶದ ಸುಪ್ರೀಂ ಕೋರ್ಟ್ ಜುಲೈ 21ರಂದು ನೀಡಿದ ತೀರ್ಪಿನ ನಂತರದ 'ತೀರ್ಮಾನಗಳು ಹಾಗೂ ಕ್ರಮಗಳು' ಪರಿಸ್ಥಿತಿಯನ್ನು ವಿಷಮಗೊಳಿಸಿದವು ಎನ್ನುವ ಮೂಲಕ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಹಸೀನಾ ನೇತೃತ್ವದ ಸರ್ಕಾರವನ್ನು ನಾಜೂಕಾಗಿ ಟೀಕಿಸಿದರು.

'ಜುಲೈ ತಿಂಗಳಾದ್ಯಂತ ಹಿಂಸಾಚಾರ ನಡೆಯಿತು. ವಿದ್ಯಾರ್ಥಿಗಳ ಜೊತೆ ಮಾತುಕತೆಯ ಮೂಲಕ ಪರಿಸ್ಥಿತಿಯನ್ನು ತಿಳಿಗೊಳಿಸುವಂತೆ ನಾವು ಮತ್ತೆ ಮತ್ತೆ ಕಿವಿಮಾತು ಹೇಳಿದ್ದೆವು' ಎಂದು ಜೈಶಂಕರ್ ಸಂಸತ್ತಿಗೆ ತಿಳಿಸಿದ್ದಾರೆ.

ಕುಸ್ತಿ: ಫೈನಲ್‌ಗೆ ಲಗ್ಗೆಯಿಟ್ಟ ವಿನೇಶಾ

ಭಾರತದ ವಿನೇಶಾ ಫೋಗಟ್ ಅವರು ಒಲಿಂಪಿಕ್ಸ್ ಕುಸ್ತಿಯಲ್ಲಿ ಮಹಿಳೆಯರ 50 ಕೆ.ಜಿ ವಿಭಾಗದ ಫೈನಲ್‌ಗೆ ಲಗ್ಗೆ ಇಟ್ಟರು. ಮಂಗಳವಾರ ನಡೆದ ಸೆಮಿಫೈನಲ್‌ನಲ್ಲಿ 5–0ಯಿಂದ ಕ್ಯೂಬಾದ ಯುಸ್ನೈಲಿಸ್ ಗುಜ್ಮನ್ ಲೋಪೆಜ್ ಅವರನ್ನು ಸೋಲಿಸಿದರು. ಒಲಿಂಪಿಕ್ಸ್ ಫೈನಲ್ ಪ್ರವೇಶಿಸಿದ ಭಾರತದ ಮೊದಲ ಮಹಿಳಾ ಕುಸ್ತಿಪಟುವೆಂಬ ಹೆಗ್ಗಳಿಕೆ ಅವರದ್ದಾಗಿದೆ. ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

PARIS 2024

50 ಕೆ.ಜಿ. ಮಹಿಳೆಯರ ಕುಸ್ತಿ ವಿಭಾಗದಲ್ಲಿ ವಿನೇಶಾ ಗೆಲುವಿನ ಹಾದಿ

16 ರ ಘಟ್ಟದಲ್ಲಿ ಒಲಿಂಪಿಕ್ ಚಾಂಪಿಯನ್, ಜಪಾನಿನ ಯುಯಿ ಸುಸಾಕಿ ವಿರುದ್ಧ ಜಯ

8 ರ ಘಟ್ಟದಲ್ಲಿ ಉಕ್ರೇನ್‌ನ ಒಕ್ಸಾನಾ ಲಿವಾಚ್ ವಿರುದ್ಧ ಗೆಲುವು

ದೇಶದ ಗಮನ ಸೆಳೆದಿದ್ದ ಹೋಂ ಸ್ಟೇ ದಾಳಿ ಪ್ರಕರಣದ ತೀರ್ಪು ಪ್ರಕಟ

ಎಲ್ಲ 39 ಆರೋಪಿಗಳು ಖುಲಾಸೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರ ಹೊರವಲಯದ ಪಡೀಲ್‌ನ 'ಮಾರ್ನಿಂಗ್ ಮಿಸ್ಟ್' ಹೋಂ ಸ್ಟೇಗೆ ನುಗ್ಗಿ ಐವರು ವಿದ್ಯಾರ್ಥಿನಿಯರು ಸೇರಿದಂತೆ 14 ಮಂದಿ ಮೇಲೆ ಹಲ್ಲೆ ನಡೆಸಿದ ಪ್ರಕರಣದ 39 ಆರೋಪಿಗಳನ್ನು ಇಲ್ಲಿನ ಆರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮಂಗಳವಾರ ಖುಲಾಸೆಗೊಳಿಸಿದೆ.

2012ರ ಜುಲೈ 28ರಂದು ಮುಸ್ಸಂಜೆ ವೇಳೆ ಸಂತೋಷ ಕೂಟದಲ್ಲಿ ಪಾಲ್ಗೊಂಡಿದ್ದ ಯುವಕ-ಯುವತಿಯರ ಮೇಲೆ 40ಕ್ಕೂ ಹೆಚ್ಚು ಮಂದಿ ಇದ್ದ ಯುವಕರ ಗುಂಪು ಹಲ್ಲೆ ನಡೆಸಿತ್ತು. 'ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಈ ಹಲ್ಲೆ ನಡೆಸಿದ್ದಾರೆ' ಎಂದು ಆರೋಪಿಸಲಾಗಿತ್ತು. ಹಲ್ಲೆ ನಡೆಸಿದ ದೃಶ್ಯಗಳು ಸುದ್ದಿ ವಾಹಿನಿಗಳಲ್ಲಿ ಬಿತ್ತರವಾಗುವ ಮೂಲಕ ಈ ಪ್ರಕರಣ ದೇಶದಾದ್ಯಂತ ಗಮನ ಸೆಳೆದಿತ್ತು. ಪೊಲೀಸರು 43 ಆರೋಪಿಗಳನ್ನು ಬಂಧಿಸಿದ್ದರು.

ತನಿಖಾಧಿಕಾರಿಯಾಗಿದ್ದ ಸಹಾಯಕ ಪೊಲೀಸ್ ಕಮಿಷನರ್ ಟಿ.ಆರ್. ಜಗನ್ನಾಥ್ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 323 , 324ರ ಅಡಿ ಆರೋಪಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ಕಾಂತರಾಜು ಎಸ್.ವಿ ಅವರು ಈ ಪ್ರಕರಣದ ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿ ಆದೇಶ ಮಾಡಿದರು.

9ನೇ ಪುಟ ನೋಡಿ

ಒಳಪುಟದಲ್ಲಿ

ಅಳಿದ ಊರಲ್ಲಿ ಉಳಿದ ವಸ್ತುಗಳ ಹೆಕ್ಕುತ್ತ... 8

ನಡಾವಳಿ ಸಿದ್ಧ • ಜಿ.ಪಂ ಸಿಇಒಗಳಿಂದ ವರದಿ ಕೇಳಿದ ಇಲಾಖೆ

ಆರ್ಥಿಕ ಅಪರಾಧಕ್ಕೆ ಗ್ರಾ.ಪಂ ಅಧ್ಯಕ್ಷರೂ ಹೊಣೆ

• ಚಂದ್ರಹಾಸ ಹಿರೇಮಳಲಿ

> ಆರ್ಥಿಕ ಅಪರಾಧಕ್ಕೆ ಚುನಾಯಿತ ಪ್ರತಿನಿಧಿಗಳನ್ನೂ ಹೊಣೆ ಮಾಡಿದರೆ ಒತ್ತಡ ಕಡಿಮೆಯಾಗುತ್ತದೆ. ಪಿಡಿಒಗಳ ಆತ್ಮಹತ್ಯೆ ತಡೆಗೂ ಸಹಕಾರಿಯಾಗುತ್ತದೆ. ಸಂಘದ ಮನವಿಗೆ ಸರ್ಕಾರ ಸ್ಪಂದಿಸಿದೆ
>
> **ರಾಜು ವಾರದ,** ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ

ಬೆಂಗಳೂರು: ಕಾಮಗಾರಿಗಳಲ್ಲಿನ ಅವ್ಯವಹಾರ, ಹಣ ದುರುಪಯೋಗ ಪ್ರಕರಣಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಜೊತೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನೂ ಹೊಣೆಗಾರರನ್ನಾಗಿ ಮಾಡಲು ಗ್ರಾಮೀಣಾಭಿವೃದ್ಧಿ ಇಲಾಖೆ ಮುಂದಾಗಿದೆ.

ಈ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉನ್ನತಾಧಿಕಾರಿಗಳ ಸಭೆಯಲ್ಲಿ ನಡಾವಳಿ ರೂಪಿಸಲಾಗಿದ್ದು, ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿ ಸಿಇಒಗಳಿಂದ ವರದಿ ಕೇಳಲಾಗಿದೆ.

ಅವ್ಯವಹಾರ, ಹಣ ದುರುಪಯೋಗ ಪ್ರಕರಣಗಳಲ್ಲಿ ಅಧ್ಯಕ್ಷ ಹಾಗೂ ಸದಸ್ಯರ ವಿರುದ್ಧ ಯಾವುದೇ ಪ್ರಕರಣ ದಾಖಲು ಮಾಡುತ್ತಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾತ್ರ ದಂಡನೆ ವಿಧಿಸಲಾಗುತ್ತಿದೆ. ನಿಮ್ಮ ವ್ಯಾಪ್ತಿಯ ಪಂಚಾಯಿತಿಗಳಲ್ಲಿ ಹಿಂದೆ ನಡೆದ ಹಣಕಾಸು ದುರ್ಬಳಕೆ ಪ್ರಕರಣಗಳ ಸ್ವರೂಪ, ಕಾನೂನು ಕ್ರಮಗಳ ಕುರಿತು ಸಮಗ್ರ ಮಾಹಿತಿ ನೀಡಬೇಕು.

5ನೇ ಪುಟ ನೋಡಿ

ಮಧ್ಯರಾತ್ರಿ 1 ರವರೆಗೆ ಬಾರ್, ಕ್ಲಬ್‌ಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಬಾರ್, ಹೋಟೆಲ್, ಕ್ಲಬ್, ಸ್ಟಾರ್ ಹೋಟೆಲ್‌ಗಳು ಮತ್ತು ಬೋರ್ಡಿಂಗ್ ಹೌಸ್‌ಗಳಲ್ಲಿ ಮಧ್ಯರಾತ್ರಿ 1 ಗಂಟೆವರೆಗೆ ವಹಿವಾಟು ನಡೆಸಲು ಸರ್ಕಾರ ಅವಕಾಶ ನೀಡಿದೆ.

ಇದರಿಂದಾಗಿ ಮಧ್ಯರಾತ್ರಿ 1 ರವರೆಗೆ ಮದ್ಯ ಪೂರೈಕೆಗೆ ಅವಕಾಶ ಸಿಗಲಿದೆ.

2024–25 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದಂತೆ ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ ನಿರ್ಬಂಧವನ್ನು ವಿಸ್ತರಿಸಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆ ಆದೇಶ ತಿಳಿಸಿದೆ.

ಸಿಎಲ್-4(ಕ್ಲಬ್), ಸಿಎಲ್-6(ಎ)(ಸ್ಟಾರ್ ಹೋಟೆಲ್),ಸಿಎಲ್-7(ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್), ಸಿಎಲ್-7ಡಿ (ಎಸ್‌ಸಿ ಎಸ್ಟಿ ವರ್ಗದವರು ನಡೆಸುವ ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್) ಮತ್ತು ಸಿಎಲ್ -9 (ಬಾರ್)ಗಳು ಬೆಳಿಗ್ಗೆ 9 ರಿಂದ ರಾತ್ರಿ 1 ಗಂಟೆಯವರೆಗೆ ಕಾರ್ಯನಿರ್ವಹಿಸಬಹುದು. ಕಾರ್ಮಿಕ ಇಲಾಖೆ 2021 ರ ಜನವರಿ 2 ರಲ್ಲಿ ಹೊರಡಿಸಿದ ಅಧಿಸೂಚನೆಯ ಪ್ರಕಾರ ಹತ್ತು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ನೌಕರರನ್ನು ಹೊಂದಿದ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ತೆರೆದಿರಲು ಅವಕಾಶ ಕಲ್ಪಿಸಲಾಗಿದೆ ಎಂದು ಆದೇಶ ಹೇಳಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಆಸ್ಪತ್ರೆಗೆ ಅಡ್ವಾಣಿ



ನವದೆಹಲಿ: ಮಾಜಿ ಉಪಪ್ರಧಾನಿ ಹಾಗೂ ಬಿಜೆಪಿ ಹಿರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿ ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಮಂಗಳವಾರ ಅವರನ್ನು ಇಲ್ಲಿನ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಇದೀಗ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ' ಎಂದು ಹೇಳಿವೆ.

ಕೆಲವು ದಿನಗಳ ಹಿಂದೆಯೂ ಅಪೋಲೊ ಆಸ್ಪತ್ರೆಗೆ ಅಡ್ವಾಣಿ ದಾಖಲಾಗಿದ್ದರು. ನರರೋಗ ತಜ್ಞ ಡಾ. ವಿನಿತ್ ಸೂರಿ ಅವರು ಚಿಕಿತ್ಸೆ ನೀಡಿದ್ದರು.



ಸುಧಾ, ಮಯೂರ ಓದಿರಿ

SBI ಭಾರತೀಯ ಸ್ಟೇಟ್ ಬ್ಯಾಂಕ್

ಸ್ಟ್ರೆಸ್ಡ್ ಅಸೆಟ್ ರಿಕವರಿ ಬ್ರಾಂಚ್–1 (ಕೋಡ್: 05172)
2ನೇ ಮಹಡಿ, ಟಿಎಸ್‌ಆರ್‌ಟಿಸಿ ಕಮ್ಯುಟರ್ ಅಮೆನಿಟಿ ಸೆಂಟರ್, ಬಸ್ ಟರ್ಮಿನಲ್ ಕಾಂಪ್ಲೆಕ್ಸ್, ಕೋಟಿ, ಹೈದರಾಬಾದ್–500095.
ತೆಲಂಗಾಣ ರಾಜ್ಯ. ಇ-ಮೇಲ್: sbi.05172@sbi.co.in

ಅನುಬಂಧ – 4 ಎ [ರೂಲ್ 8(6)ರ ನಿಯಮಗಳನ್ನು ನೋಡಿ]

ಇ–ಹರಾಜು ಮಾರಾಟ ಪ್ರಕಟಣೆ

ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(6)ರ ನಿಯಮಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಹೊರಡಿಸಲಾಗಿರುವ ಇ–ಹರಾಜು ಮಾರಾಟ ಪ್ರಕಟಣೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ವಿವರಿಸಲಾಗಿರುವ ಚರಾಸ್ತಿ ಮತ್ತು ಸ್ಥಿರಾಸ್ತಿಗಳು ಸೆಕ್ಯೂರ್ಡ್ ಕ್ರೆಡಿಟರ್‌ವರಿಗೆ ಈಡು/ಅಡಮಾನ ನೀಡಲ್ಪಟ್ಟಿದ್ದು, ಭಾರತೀಯ ಸ್ಟೇಟ್ ಬ್ಯಾಂಕ್‌ನ ಸೆಕ್ಯೂರ್ಡ್ ಕ್ರೆಡಿಟರ್‌ವರ ಅಧಿಕೃತ ಅಧಿಕಾರಿಯು ಸದರಿ ಅಡಮಾನ ಸ್ವತ್ತುಗಳನ್ನು ತಮ್ಮ ಭೌತಿಕ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ ಮತ್ತು **ಸಾಲಗಾರರಾದ: ಮೆ. ಸ್ಟಾಲಿನ ಟೆಲೆಕಾಂ ಪ್ರೈವೇಟ್ ಲಿಮಿಟೆಡ್ (ಎಸ್‌ಟಿಪಿಎಲ್), ವ್ಯವಸ್ಥಾಪಕ ನಿರ್ದೇಶಕರು: ಶ್ರೀ. ಕೆ. ರಾಮಚಂದ್ರನ್, ನಿರ್ದೇಶಕರು: ಶ್ರೀಮತಿ. ಕೆ. ಕುಂದವಿ, ನೋಂದಾಯಿತ ಕಚೇರಿ**: 109, ಇಂಡಸ್ಟ್ರಿ ಹೌಸ್, ಮಾರವಾ ಕಾಂಪ್ಲೆಕ್ಸ್, ಕೃಷನ್‌ಲಾಲ್ ಮಾರವಾ ಮಾರ್ಗ್, ಅಂಧೇರಿ (ಪೂರ್ವ), ಮುಂಬೈ–4005. **ಉತ್ಪಾದನಾ ಘಟಕ**: ಷೆಡ್ ನಂ. 8, ವರ್ಕ್‌ಶಾಪ್ ಕಾಂಪ್ಲೆಕ್ಸ್, ಎಪಿಎಸ್ ಆಗ್ರೊ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಶನ್ ಲಿಮಿಟೆಡ್, ಹೆಚ್‌ಎಂಟಿ ರೋಡ್, ಚಿಂತಲ, ಹೈದರಾಬಾದ್–500064 ಇವರಿಂದ, ಡಿಆರ್‌ಟಿ–1, ಹೈದರಾಬಾದ್ ಇವರಿಂದ ಒಎ 312/2014 ವಿಷಯದಲ್ಲಿ ಹೊರಡಿಸಲಾಗಿರುವ ಡಿಕ್ರಿ ಆದೇಶದ ಪ್ರಕಾರ, ಸೆಕ್ಯೂರ್ಡ್ ಕ್ರೆಡಿಟರ್‌ವರಿಗೆ ಸಂದಾಯ ಆಗಬೇಕಿರುವ 06–08–2024 ರಂತೆಗಿನ **ರೂ. 15,42,83,637/– (ರೂಪಾಯಿ ಹದಿನೈದು ಕೋಟಿ ನಲವತ್ತೆರಡು ಲಕ್ಷ ಎಂಬತ್ತೂರು ಸಾವಿರದ ಆರು ನೂರ ಮೂವತ್ತೇಳು ಮಾತ್ರ)** + 07–08–2024 ರಿಂದ ಅನ್ವಯಿಕ ಮುಂದಿನ ಬಡ್ಡಿಶುಲ್ಕ ಜೊತೆಗೆ ಸಾಂದರ್ಭಿಕ ವೆಚ್ಚಗಳು, ಚಾರ್ಜ್‌ಗಳು, ಶುಲ್ಕಗಳು ಇತ್ಯಾದಿಗಳ ವಸೂಲಾತಿಗಾಗಿ, ಸದರಿ ಸ್ವಾಧೀನ ಸ್ವತ್ತುಗಳನ್ನು 13–09–2024 ರಂದು **"ಹೇಗಿದೆಯೊ ಎಲ್ಲಿದೆಯೊ", "ಹೇಗಿದೆಯೊ ಏನಿದೆಯೊ" ಮತ್ತು "ಅಲ್ಲಿ ಏನೇನಿದೆಯೊ"** ಆಧಾರದಲ್ಲಿ ಮಾರಾಟ ಮಾಡುತ್ತಲಿದ್ದಾರೆ.

ಪ್ರಾಪರ್ಟಿ ಐಡಿ: **ಎಸ್‌ಬಿಐಎನ್771925145492: ಉಪ ನೋಂದಣಿ ಕಚೇರಿ, ಗಾಂಧಿನಗರ** ಕಚೇರಿಯಲ್ಲಿ ನೋಂದಾಯಿತ, ದಿನಾಂಕ 24–01–2003ರ ಡಾಕ್ಯೂಮೆಂಟ್ ನಂ. 4436/2003 ಮುಖೇನ **ಶ್ರೀ. ಕೆ ರಾಮಚಂದ್ರನ್ ರವರಿಗೆ** ಸಂಬಂಧಿತ, 2ನೇ ಮುಖ್ಯರಸ್ತೆ, **ಜಯಮಹಲ್ ಎಕ್ಸ್‌ಟೆನ್ಷನ್**, ಬೆಂಗಳೂರು ವಿಳಾಸದಲ್ಲಿರುವ **"ಗುಲ್‌ಮೊಹರ್"ನ** ನೆಲಮಹಡಿಯಲ್ಲಿರುವ, ರೆಸಿಡೆನ್ಷಿಯಲ್ ಫ್ಲ್ಯಾಟ್ ನಂ. ಜಿ1, ಮುನಿಪಲ್ ನಂ. 13 ಹೊಂದಿರುವ ಒಟ್ಟಾರೆ 2615 ಚ.ಅ. ವಿಸ್ತೀರ್ಣವುಳ್ಳ ಇಕ್ವಿಟೇಬಲ್ ಮಾರ್ಟ್‌ಗೇಜ್ ಸ್ವತ್ತಿನ ಎಲ್ಲಾ ಭೂಭಗಗಳು ಸೇರಿರುತ್ತವೆ. **ಸದರಿ ಸ್ವತ್ತಿನ ಚಕ್ಕುಬಂದಿ: ಉತ್ತರಕ್ಕೆ**: ಪ್ಲಾಟ್ ಬೇರಿಂಗ್ ನಂ. 12, **ದಕ್ಷಿಣಕ್ಕೆ**: ಖಾಸಗಿ ಸ್ವತ್ತು, **ಪೂರ್ವಕ್ಕೆ**: ಖಾಸಗಿ ಸ್ವತ್ತು, **ಪಶ್ಚಿಮಕ್ಕೆ**: 2ನೇ ಮುಖ್ಯರಸ್ತೆ.

ಮೀಸಲು ಬೆಲೆ: ರೂ. 3,95,00,000/–; ಇಎಂಡಿ: ರೂ. 39,50,000/–; ಬಿಡ್ ಹೆಚ್ಚಳ ರೂ. 1,00,000/–; ಹರಾಜು ದಿನಾಂಕ: 13–09–2024, ಹರಾಜು ಸಮಯ: ಬೆಳಗ್ಗೆ 10.00 ರಿಂದ ಮಧ್ಯಾಹ್ನ 02.00 ಗಂಟೆ, 10 ನಿಮಿಷಗಳ ಆಟೋ ಎಕ್ಸ್‌ಟೆನ್ಷನ್ ಜೊತೆಗೆ.

ಸ್ವತ್ತು ಪರಿಶೀಲನೆಯ ದಿನಾಂಕ ಮತ್ತು ಸಮಯ: 08–08–2024 ರಿಂದ 10–09–2024 ರವರೆಗೆ ಬೆಳಗ್ಗೆ 11.00 ರಿಂದ ಸಂಜೆ 4.00 ಗಂಟೆಯೊಳಗೆ.

1. ಅಧಿಕೃತ ಅಧಿಕಾರಿಯವರಿಗೆ ತಿಳಿದಿರುವಂತೆ ಮತ್ತು ಅವರ ಮಾಹಿತಿಯ ಪ್ರಕಾರ, ಯಾವುದೇ ಸ್ವತ್ತಿನ ಮೇಲೆ ಋಣಭಾರವಿರುವುದಿಲ್ಲ. ಅದಾಗ್ಯೂ, ಆಸಕ್ತಿಯುಳ್ಳ ಬಿಡ್‌ದಾರರು ತಮ್ಮ ಬಿಡ್ ಸಲ್ಲಿಸುವುದಕ್ಕೂ ಮುನ್ನವೇ, ಹರಾಜಿಗಿಟ್ಟ ಸ್ವತ್ತಿಗೆ ಸಂಬಂಧಿತ ಋಣಭಾರಗಳು ಮತ್ತು ಹಕ್ಕುಗಳ ಕುರಿತಂತೆ ಹಾಗೂ ಸ್ವತ್ತಿನ ಮೇಲೆ ಪರಿಣಾಮ ಬೀರಬಹುದಾದ ಕ್ಲೇಮ್/ಹಕ್ಕು/ಡ್ಯೂಗಳನ್ನು ಕುರಿತಂತೆ ತಾವೇ ಸ್ವತಃ ವೈಯಕ್ತಿಕವಾಗಿ ಸ್ವತಂತ್ರದಿಂದ ಪರಿಶೀಲನೆ ಮಾಡಿಕೊಳ್ಳಬಹುದಾಗಿರುತ್ತದೆ. ಯಾವುದೇ ಸ್ಪಷ್ಟೀಕರಣಗಳಿಗಾಗಿ ಅಥವಾ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ **ಅಧಿಕೃತ ಅಧಿಕಾರಿ ಶ್ರೀ ಡಿ.ಜಿ.ಸುರೇಶ್ ಅತ್ರೇಯಾ**, 9440201771, 7386623173 ಮತ್ತು ಬ್ಯಾಂಕ್‌ನಿಂದ ಅನುಮೋದಿತ ಸೇವಾ ಪೂರೈಕೆದಾರರಾದ **ಮೆ. ಪಿಎಸ್‌ಬಿ ಅಲಯನ್ಸ್** ಇವರನ್ನು ಕೂಡ, ಅವರ **https://www.ebkray.in** ವೆಬ್ ಪೋರ್ಟಲ್‌ನಲ್ಲಿ ಸಂಪರ್ಕಿಸಬಹುದು. ಸಂಭಾವ್ಯ ಬಿಡ್‌ದಾರರು ಇ–ಹರಾಜು ದಿನಾಂಕಕ್ಕೆ ಮುಂಚಿತವಾಗಿಯೇ, ಇ–ಹರಾಜು ವೆಬ್‌ಸೈಟ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವುದನ್ನು ಮತ್ತು **https://www.ebkray.in** ಪೋರ್ಟಲ್‌ನಲ್ಲಿ ನೀಡಲಾಗಿರುವ ಮಾರ್ಗಸೂಚಿಗಳ ಪ್ರಕಾರ, ಸೇವಾ ಪೂರೈಕೆದಾರರು ರೂಪಿಸಿರುವ ವರ್ಚುಯಲ್ ವ್ಯಾಲೆಟ್‌ನಲ್ಲಿ ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು.
2. ಖರೀದಿದಾರರು ಸಂಬಂಧಿತ ಮುದ್ರಾಂಕ ಶುಲ್ಕ/ಹೆಚ್ಚುವರಿ ಮುದ್ರಾಂಕ ಶುಲ್ಕ/ವರ್ಗಾವಣೆ ಶುಲ್ಕ, ಫೀ ಇತ್ಯಾದಿಗಳನ್ನು ಮತ್ತು ಯಾವುದೇ ಪ್ರಾಧಿಕಾರಕ್ಕೆ ಸಲ್ಲಬೇಕಾಗಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಯಾವುದೇ ಬಾಕಿ, ತೆರಿಗೆ, ದರ, ಮಾಲ್ಯಮಾಪನ ಶುಲ್ಕ, ಫೀ ಇತ್ಯಾದಿಗಳನ್ನು ಭರಿಸತಕ್ಕದ್ದು.
3. ಆಸಕ್ತಿಯುಳ್ಳ ಬಿಡ್‌ದಾರರಲ್ಲಿ ಯಾರಿಗೆ ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಕ್ರಿಯೇಟ್ ಮಾಡಲು, ಡೇಟಾ ಅಪ್‌ಲೋಡ್ ಮಾಡಲು, ಬಿಡ್ ದಾಖಲಾತಿಗಳನ್ನು ಸಲ್ಲಿಸಲು ನೆರವು ಬೇಕಾಗಿದ್ದಲ್ಲಿ ಮತ್ತು ಆನ್‌ಲೈನ್ ಬಿಡ್ಡಿಂಗ್ ಕುರಿತಾದ ತರಬೇತಿ/ಪ್ರಾತ್ಯಕ್ಷಿಕೆ, ಷರತ್ತು ಮತ್ತು ನಿಬಂಧನೆ ಮುಂತಾದ ವಿವರಗಳು ಬೇಕಾಗಿದ್ದಲ್ಲಿ, ಅಂತಹವರು **https://www.ebkray.in** ಭೇಟಿ ನೀಡಬಹುದು. ಬ್ಯಾಂಕಿಂಗ್ ಪ್ರಾಸೆಸ್‌ನ ಪ್ರಕಾರ ಇದಕ್ಕೆಲ್ಲ ಸಮಯ ತಗಲುತ್ತದೆಯಾದ್ದರಿಂದ, ಬಿಡ್‌ದಾರರು ತಮ್ಮ ಸ್ವಹಿತಾಸಕ್ತಿಗಾಗಿ, ಸಾಕಷ್ಟು ಮುಂಚಿತವಾಗಿಯೇ ತಮ್ಮ ಬಿಡ್‌ಪೂರ್ವ ಇಎಂಡಿ ಮೊತ್ತವನ್ನು ಪಾವತಿಸಿ, ಕೊನೆಯ ನಿಮಿಷಗಳಲ್ಲಿ ಉಂಟಾಗಬಹುದಾದ ಸಮಸ್ಯೆಗಳನ್ನು ತಡೆಗಟ್ಟಬಹುದೆಂದು ಸೂಚಿಸಲಾಗಿದೆ.
4. ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 194–1ಎ ಪ್ರಕಾರ, ಮಾರಾಟ ಮೌಲ್ಯದಿಂದ ಸಿಗುವ ಲಾಭಾಂಶವು ರೂ. 50,00,000/– (ರೂಪಾಯಿ ಐವತ್ತು ಲಕ್ಷ) ಮತ್ತು ಮೇಲ್ಪಟ್ಟು ಆಗಿದ್ದಲ್ಲಿ, ಅಂತಹ ಮೊತ್ತಕ್ಕೆ 1% ಟಿಡಿಎಸ್ ಅನ್ವಯವಾಗುತ್ತದೆ. ಯಶಸ್ವಿ ಬಿಡ್‌ದಾರರು ಅಥವಾ ಖರೀದಿದಾರರು, ಟಿಡಿಎಸ್ ಮೊತ್ತವನ್ನು ಆದಾಯ ತೆರಿಗೆ ಇಲಾಖೆಗೆ ನಂ. 16–ಬಿ ನಮೂನೆಲ್ಲಿ ಪಾವತಿಸಬೇಕು ಮತ್ತು ಟಿಡಿಎಸ್ ಸರ್ಟಿಫಿಕೇಟ್‌ನ ಮೂಲ ಪ್ರತಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು (ಕೃಷಿ ಭೂಮಿಯನ್ನು ಹೊರತುಪಡಿಸಿ, ಸ್ಥಿರಾಸ್ತಿಗೆ ಮಾತ್ರ ಅನ್ವಯಿಸುತ್ತದೆ).
5. ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ಸೆಕ್ಯೂರ್ಡ್ ಕ್ರೆಡಿಟರ್‌ವರ **https://www.sbi.co.in** ಮತ್ತು **https://www.ebkray.in** ವೆಬ್‌ಸೈಟ್‌ನಲ್ಲಿರುವ ಲಿಂಕ್‌ನಲ್ಲಿ ಪರಿಶೀಲಿಸಬಹುದು.

ಸ್ಥಳ: ಹೈದರಾಬಾದ್
ದಿನಾಂಕ: 06–08–2024

ಸಹಿ/– ಅಧಿಕೃತ ಅಧಿಕಾರಿ/ಮುಖ್ಯ ಪ್ರಬಂಧಕರು
ಭಾರತೀಯ ಸ್ಟೇಟ್ ಬ್ಯಾಂಕ್, ಎಸ್‌ಎಆರ್‌ಬಿ–1, ಕೋಟಿ, ಹೈದರಾಬಾದ್

ಲಾಲ್‌ಬಾಗ್‌ನಲ್ಲಿ ವೇದಿಕೆ ಸಜ್ಜು • ಪುಷ್ಪಗಳಲ್ಲಿ ಅಂಬೇಡ್ಕರ್ ಜೀವನ ಅನಾವರಣ

ಫಲಪುಷ್ಪ ಪ್ರದರ್ಶನಕ್ಕೆ ನಾಳೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ವಿಷಯ ಆಧಾರಿತ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನವು ಲಾಲ್‌ಬಾಗ್‌ನಲ್ಲಿ ಆಗಸ್ಟ್ 8ರಿಂದ 19ರವರೆಗೆ ನಡೆಯಲಿದೆ' ಎಂದು ತೋಟಗಾರಿಕೆ ಇಲಾಖೆ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ವರ್ಷ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ಅಂಬೇಡ್ಕರ್ ಅವರಿಗೆ ಪುಷ್ಪ ಗೌರವ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ. ಅಂಬೇಡ್ಕರ್ ಅವರ ಜೀವನ, ಸಾಧನೆ, ಹೋರಾಟಗಳನ್ನು ಪ್ರದರ್ಶಿಸಲಾಗುವುದು. ಈ ಬಾರಿಯ ಫಲಪುಷ್ಪ ಪ್ರದರ್ಶನಕ್ಕೆ 10 ಲಕ್ಷಕ್ಕೂ ಹೆಚ್ಚು ಜನ ಭೇಟಿನೀಡುವ ನಿರೀಕ್ಷೆ ಇದೆ' ಎಂದರು.

'ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಹಮ್ಮಿಕೊಂಡಿರುವ 216ನೇ ಫಲಪುಷ್ಪ ಪ್ರದರ್ಶನ ಇದಾಗಿದೆ. ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ವೇದಿಕೆ ಸಜ್ಜು ಮಾಡಲಾಗುತ್ತಿದೆ. ಗುರುವಾರ (ಆಗಸ್ಟ್ 8) ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರದರ್ಶನವನ್ನು ಉದ್ಘಾಟಿಸುವರು' ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್ ಮಾಹಿತಿ ನೀಡಿದರು.

'ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ನವದೆಹಲಿಯಲ್ಲಿರುವ ಸಂಸತ್ ಭವನದ ಪ್ರತಿಕೃತಿಯು 3.6 ಲಕ್ಷ ಗುಲಾಬಿ ಹಾಗೂ 2.4 ಲಕ್ಷ ಸೇವಂತಿಗೆ ಹೂಗಳಲ್ಲಿ ಅನಾವರಣಗೊಳ್ಳಲಿದೆ. ಸಂಸತ್ ಭವನದ ಮುಂಭಾಗದಲ್ಲಿ 12 ಅಡಿ ಎತ್ತರದ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ರಾರಾಜಿಸಲಿದೆ. ಗಾಜಿನ ಮನೆಯ ಬಲಭಾಗದಲ್ಲಿ ಮಧ್ಯಪ್ರದೇಶದ ಮಾಹೋನಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮಸ್ಥಳದ ಸ್ಮಾರಕದ ಮಾದರಿಯನ್ನು 3.4 ಲಕ್ಷ ಹೂಗಳನ್ನು ಬಳಸಿ ನಿರ್ಮಿಸಲಾಗುವುದು' ಎಂದರು.

'ಅಂಬೇಡ್ಕರ್ ಅವರ ಚೈತ್ಯಭೂಮಿ ಸ್ಮಾರಕ ಸ್ತೂಪವನ್ನು 3.4 ಲಕ್ಷ ಹೂಗಳಿಂದ ನಿರ್ಮಿಸಲಾಗುತ್ತಿದೆ. ಗಾಜಿನ ಮನೆ ಕೇಂದ್ರ ಭಾಗದ ಹಿಂಭಾಗದಲ್ಲಿ ಅಂಬೇಡ್ಕರ್ ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಬಿಂಬಿಸುವ ಮಹಾಡ್ ಸತ್ಯಾಗ್ರಹ, ಕಲಾ ರಾಮ್ ದೇವಸ್ಥಾನದ ಪ್ರವೇಶ, ಕೋರೆಗಾಂವ್ ವಿಜಯೋತ್ಸವದ ಸ್ತಂಭದ ಕಲಾಕೃತಿಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ' ಎಂದು ವಿವರಿಸಿದರು.

ಆಗಸ್ಟ್ 10ರಂದು ನಡೆಯುವ ಇಕೆಬಾನ, ತರಕಾರಿ ಕೆತ್ತನೆ, ಪುಷ್ಪಭಾರತಿ, ಬೋನ್ಸಾಯ್, ಡಚ್ ಹೂವಿನ ಜೋಡಣೆ, ಥಾಯ್ ಆರ್ಟ್, ಜಾನೂರು ಒಣಹೂವಿನ ಜೋಡಣೆಯ ಕಲೆಗಳ ಸ್ಪರ್ಧೆಯ ಪ್ರದರ್ಶನವನ್ನು ಚಿತ್ರ ನಟಿ ಸುಧಾರಾಣಿ ಉದ್ಘಾಟಿಸಲಿದ್ದಾರೆ.

ಇಕೆಬಾನ ಸೇರಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಆಗಸ್ಟ್ 17ರಂದು ಚಿತ್ರನಟ 'ಮುಖ್ಯಮಂತ್ರಿ' ಚಂದ್ರು ಬಹುಮಾನಗಳನ್ನು ವಿತರಿಸಿದ್ದಾರೆ. ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್, ಉಪ ನಿರ್ದೇಶಕಿ ಜಿ. ಕುಸುಮಾ ಭಾಗವಹಿಸಿದ್ದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಆಯೋಜಿಸುತ್ತಿರುವ ಫಲಪುಷ್ಪ ಪ್ರದರ್ಶನದಲ್ಲಿ ಸಂಸತ್ ಭವನದ ಪ್ರತಿಕೃತಿ ನಿರ್ಮಿಸಲಾಗುತ್ತಿದೆ

ಲಾಲ್‌ಬಾಗ್‌ನಲ್ಲಿ ಗಾಜಿನ ಮನೆಯಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಗಮನ ಸೆಳೆಯಿತು

–ಪ್ರಜಾವಾಣಿ ಚಿತ್ರಗಳು / ರಂಜು ಪಿ

ವಾಹನ ನಿಲುಗಡೆ ಎಲ್ಲಿ?

- ಹಾಪ್‌ಕಾಮ್ಸ್ ಆವರಣ ಮತ್ತು ಜೆ.ಸಿ. ರಸ್ತೆಯಲ್ಲಿರುವ ಬಿಬಿಎಂಪಿ ಬಹುಮಹಡಿ ವಾಹನ ನಿಲ್ದಾಣ
- ಶಾಂತಿನಗರ ಬಸ್ ನಿಲ್ದಾಣದ ಬಹುಮಹಡಿ ವಾಹನ ನಿಲ್ದಾಣ
- ಅಲ್ ಅಮೀನ್ ಕಾಲೇಜು ಮೈದಾನ

ಪ್ರವೇಶ ಶುಲ್ಕ

ಲಾಲ್‌ಬಾಗ್‌ನ ಎಲ್ಲ ಪ್ರವೇಶ ದ್ವಾರಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರಗಳ ವ್ಯವಸ್ಥೆ ಮಾಡಲಾಗಿದ್ದು, ಆನ್‌ಲೈನ್ ಬುಕಿಂಗ್ ಪಡೆದುಕೊಳ್ಳುವ ಸೌಲಭ್ಯ ಇದೆ.

- ವಯಸ್ಕರಿಗೆ ₹ 80
- ರಜೆ ದಿನಗಳಲ್ಲಿ ₹ 100
- ಮಕ್ಕಳಿಗೆ ₹ 30
- ಸಮವಸ್ತ್ರ ಧರಿಸಿ ಬರುವ ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ

ಪ್ರದರ್ಶನದ ಸಮಯ
ಬೆಳಿಗ್ಗೆ 6ರಿಂದ ಸಂಜೆ 6.30ರವರೆಗೆ

ಅಂಕಿ ಅಂಶ

- **₹2.80 ಕೋಟಿ** ಫಲಪುಷ್ಪ ಪ್ರದರ್ಶನದ ಒಟ್ಟು ವೆಚ್ಚ
- **400** ಭದ್ರತೆಗೆ ಪೊಲೀಸರ ನಿಯೋಜನೆ
- **136** ಉದ್ಯಾನದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು
- **10 ಲಕ್ಷ** ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡುವವರ ಅಂದಾಜು ಸಂಖ್ಯೆ
- **30 ಲಕ್ಷ** ಅಂದಾಜು ಬಳಕೆಯಾಗುವ ಹೂ ಕುಂಡಗಳು, ಪ್ರತ್ಯೇಕಿಸಿದ ಹೂಗಳ ಸಂಖ್ಯೆ

'ಪರೀಕ್ಷೆಗಳು ಕನ್ನಡದಲ್ಲಿ ನಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ಯಾಂಕ್, ವಿಮೆ ಸೇರಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಇಲಾಖೆಗಳ ನೇಮಕಾತಿ ಮತ್ತು ಬಡ್ತಿ ಪರೀಕ್ಷೆಗಳು ಕನ್ನಡದಲ್ಲಿ ನಡೆಯಬೇಕು. ಇದಕ್ಕಾಗಿ ಸಂಘಟಿತ ಹೋರಾಟ ನಡೆಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

ರೈಲ್ವೆ ನೇಮಕಾತಿಗೆ ಸಂಬಂಧಿಸಿದಂತೆ ಕನ್ನಡದಲ್ಲಿಯೂ ಪರೀಕ್ಷೆ ಬರೆಯುವ ಅವಕಾಶವನ್ನು ಸ್ವಾಗತಿಸಿರುವ ಅವರು, 'ಕನ್ನಡದ ಸಚಿವರಿದ್ದಲ್ಲಿ ಕನ್ನಡತನ ರೂಪುಗೊಳ್ಳುತ್ತದೆ ಎನ್ನುವುದಕ್ಕೆ ಇದು ಸಾಕ್ಷಿ. ರೈಲ್ವೆ ಇಲಾಖೆಯಲ್ಲಿ ಬಡ್ತಿ ನೀಡಲು ನಡೆಸುವ ಸಾಮಾನ್ಯ ವಿಭಾಗದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಈ ಹಿಂದೆ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಬರೆಯುವ ಅವಕಾಶವಿತ್ತು. ಇದರಿಂದಾಗಿ ಅನೇಕ ಕನ್ನಡಿಗರು ಅವಕಾಶ ವಂಚಿತರಾಗುತ್ತಿದ್ದರು. ಇನ್ನು ಮುಂದೆ ಈ ಸಮಸ್ಯೆ ಪರಿಹಾರವಾಗಲಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಕೇಂದ್ರ ಸರ್ಕಾರದ ಅಧೀನದಲ್ಲಿರುವ ಇಲಾಖೆಗ ನೇಮಕಾತಿ ಪರೀಕ್ಷೆಗಳು ಕನ್ನಡದಲ್ಲಿ ನಡೆದು, ಸ್ಥಳೀಯರಿಗೆ ಉದ್ಯೋಗ ದೊರಕಬೇಕು. ಇದಕ್ಕಾಗಿ ಸಂಘಟಿತ ಹೋರಾಟ ನಡೆಸಬೇಕು. ಕನ್ನಡಿಗರ ಹಿತಾಸಕ್ತಿ ಕಾಪಾಡುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸದಾ ಮುಂಚೂಣಿಯಲ್ಲಿರುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಎಲ್ಲರೂ ಸ್ವಾವಲಂಬಿಗಳಾಗಬೇಕು'

ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ರೊನಾಲ್ಡ್ ಕೊಲಾಸೊ ಅವರು ವಿದ್ಯಾರ್ಥಿನಿಗೆ ವಿದ್ಯಾರ್ಥಿವೇತನದ ಪ್ರಮಾಣಪತ್ರ ವಿತರಿಸಿದರು. ಮೈಸೂರಿನ ಸ್ವಾಮಿ ಮಹಾಮೇಧಾನಂದಜೀ, ವೂಡೇ ಪಿ.ಕೃಷ್ಣ ಭಾಗವಹಿಸಿದ್ದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಯೊಬ್ಬರೂ ಜೀವನದಲ್ಲಿ ಸ್ವಾವಲಂಬಿಗಳಾಗಬೇಕು. ವಿದ್ಯಾರ್ಥಿಗಳು ಉದ್ಯಮಿಗಳಾಗುವ ಕ್ಷಮತೆಯನ್ನು ರೂಢಿಸಿಕೊಳ್ಳಬೇಕು' ಎಂದು ಉದ್ಯಮಿ ರೊನಾಲ್ಡ್ ಕೊಲಾಸೊ ಹೇಳಿದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ 'ವಿದ್ಯಾರ್ಥಿಗಳಿಗೆ ಪುನರ್‌ಮನನ ಕಾರ್ಯಾಗಾರ ಹಾಗೂ ವಿದ್ಯಾರ್ಥಿವೇತನ ವಿತರಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಆದರ್ಶ ಜೀವನವನ್ನು ರೂಪಿಸಿಕೊಂಡು ಮುಂದಿನ ಪೀಳಿಗೆಗೆ ದಾರಿದೀಪವಾಗಬೇಕು. ಧರ್ಮ, ಜಾತಿಯ ಭೇದವಿಲ್ಲದೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ನಾವು ಮಾಡುವ ಸೇವೆಯಲ್ಲಿ ಪ್ರತಿಯೊಬ್ಬರಿಗೂ ಒಳಿತನ್ನು ಬಯಸಬೇಕು' ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶೇಷಾದ್ರಿಪುರ ಕಾಲೇಜಿನ ಮೊದಲ ಬ್ಯಾಚ್‌ನ ವಿದ್ಯಾರ್ಥಿಯೂ ಆಗಿರುವ ಕೊಲಾಸೊ ಅವರು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲು ಪ್ರತಿ ವರ್ಷ ₹30 ಲಕ್ಷದಂತೆ ಎರಡು ವರ್ಷ ಒಟ್ಟು ₹60 ಲಕ್ಷಗಳನ್ನು ತಾವೇ ನೀಡುವುದಾಗಿ ಘೋಷಿಸಿದರು.

ಮೈಸೂರಿನ ಸ್ವಾಮಿ ಮಹಾಮೇಧಾನಂದಜೀ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಉಪಾಧ್ಯಕ್ಷ ಟಿ.ಎಸ್. ಹೆಂಜಾರಪ್ಪ, ಕಾಲೇಜಿನ ಆಡಳಿತ ಸಲಹಾ ಮಂಡಳಿಯ ಅಧ್ಯಕ್ಷ ಎಂ.ಎಸ್. ನಟರಾಜ್, ಶೇಷಾದ್ರಿಪುರ ಶಿಕ್ಷಣ ದತ್ತಿಯ ಟ್ರಸ್ಟಿ ಕೆ. ಕೃಷ್ಣಸ್ವಾಮಿ, ಪ್ರಾಂಶುಪಾಲ ಬಿ.ಜಿ. ಭಾಸ್ಕರ್ ಭಾಗವಹಿಸಿದ್ದರು.

AXISCADES

AXISCADES Technologies Limited

CIN : L72200KA1990PLC084435
Regd. Office : Block C, Second Floor, Kirloskar Business Park, Bengaluru - 560024, Karnataka, India
Website: www.axiscades.com | Email: info@axiscades.com | Tel : +91 80 4193 9000 | Fax : +91 80 4193 9099

Statement of Unaudited Consolidated Financial Results for the Quarter Ended June 30, 2024

(₹ in Lacs)

Particulars	Quarter Ended			Year Ended
	30 June 2024 (Unaudited)	31 Mar. 2024 Audited	30 June 2023 (Unaudited)	31 Mar. 2024 Audited
Total income	23,377.91	26,127.07	21,633.21	96,505.78
EBITDA*	3,104.63	3,233.10	3,296.91	13,035.27
Finance Costs	806.79	1,251.36	2,010.54	5,636.79
Depreciation and Amortisation expense	928.13	951.91	707.66	3,379.12
Net Profit for the period (before tax, Exceptional and /or Extraordinary items)	2,422.02	1,592.25	848.07	5,302.41
Share in net loss of associate	(0.74)	(0.30)	-	(0.30)
Exceptional items net	-	-	-	-
Net Profit / (Loss) for the period before tax (after Exceptional and / or Extraordinary items)	2,421.28	1,591.95	848.07	5,302.11
Net Profit / (Loss) for the period after tax (after Exceptional and / or Extraordinary items)	1,677.23	898.88	570.90	3,340.94
Total Comprehensive Income for the period [Comprising Profit/(Loss) for the period (after tax) and Other Comprehensive Income (aftertax)]	1,645.11	988.69	703.69	3,477.25
Equity Share Capital	2,098.94	2,098.94	1,911.50	2,098.94
Reserves (Excluding Revaluation Reserve) as shown in the Audited Balance Sheet of the previous year	-	-	-	56,437.17
Earnings Per Share (of Rs. 5/- each) (For continuing and discontinued operations) -				
1. Basic:	4.07	2.11	1.47	8.40
2. Diluted:	3.77	1.95	1.33	7.74

1. In terms of Regulation 33 of the SEBI (Listing Obligations and Disclosure Requirements) Regulations 2015, the aforesaid Statement of unaudited consolidated financial results for the quarter June 30, 2024 of AXISCADES Technologies Limited (the "Holding Company" or the "Company"), its subsidiaries (the Holding Company and its subsidiaries together hereinafter referred to as "the Group") and its associate has been reviewed by the Audit Committee at their meeting held on August 5, 2024 and approved by the Board of Directors at their meeting held on August 6, 2024. The aforesaid unaudited consolidated financial results for the quarter ended June 30, 2024 have been prepared in accordance with the recognition and measurement principles laid down in the applicable Indian Accounting Standards ("Ind AS") as prescribed under Section 133 of the Companies Act, 2013, as amended, read with relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015, as amended from time to time.
2. The unaudited consolidated financial results have been prepared in accordance with the recognition and measurement principles laid down in the applicable Indian Accounting Standards ("Ind AS") as prescribed under Section 133 of the Companies Act, 2013, as amended, read with relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015, as amended from time to time.
3. The previous period / year figures have been regrouped/rearranged wherever necessary to conform with the current period presentation.
4. Additional information on Standalone Financial Results is as follows:

(₹ in Lacs)

Particulars	Quarter Ended			Year Ended
	30 June 2024 (Unaudited)	31 Mar. 2024 Audited (Refer Note 5)	30 June 2023 (Unaudited)	31 Mar. 2024 Audited
Total revenue (including other income)	10,633.43	10,105.03	8,129.89	35,786.27
EBITDA*	2,231.84	1,642.14	1,220.00	5,750.02
Profit / (Loss) before tax	1,929.97	436.40	(1,098.79)	(616.91)
Profit / (Loss) after tax	1,525.13	355.96	(798.25)	(396.81)
Total comprehensive income / (loss)	1,518.83	492.83	(756.05)	(434.58)

* Excluding other income.

5. The figures of the last quarter ended March 31, 2024 are the balancing figures between audited figures in respect of the full financial year up to March 31, 2024 and the published unaudited year to-date figures up to December 31, 2023, being the date of the end of the third quarter of the financial year, which were subjected to limited review.
6. The above audited financial results of the Company are available on the Company's website (www.axiscades.com) and also on the website of BSE (www.bseindia.com) and NSE (www.nseindia.com), where the shares of the Company are listed.

For **AXISCADES Technologies Limited**
Sd/-
Arun Krishnamurthi
CEO and Managing Director

Place : Bengaluru
Dated : 06.08.2024

Dr.AMBEDKAR INSTITUTE OF TECHNOLOGY
(Aided by Government of Karnataka)
Near Jnanabharathi Campus, BDA Outer Ring Road, Bangalore-560056.
Ph. 080-23211232, Fax : 080-23217789, Mail Id : principal@dr-ait.org

Dr.AIT/EST/2024-25 **Date: 06.08.2024**

CORRIGENDUM

In the previous notification dated **25.02.2020** for backlog recruitment issued for the posts of Professors and Associate Professors, the qualification and experience for the said posts mentioned **"As per AICTE Regulations-2006"**, it shall be read **"As per the AICTE Regulations-2019, dated 01.03.2019"**. Other than this, the conditions mentioned in the notification shall apply as it is. **Only applicants who had applied earlier shall submit their applications** as per the revised qualification i.e., as per **AICTE Regulations-2019** along with documents of qualifications, experience (teaching/research/industry) and research publications on or before **16.08.2024.** Incomplete applications and applications submitted after the last date will not be considered.

Sd/- Principal **Sd/- Secretary**

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಾವು **ಮೆ. ದಿವ್ಯಶ್ರೀ ವಲ್‌ಡೆಲ್ ರಿಯಾಲ್‌ಟರ್ಸ್,** ಕಛೇರಿ ವಿಳಾಸ: ದಿವ್ಯಶ್ರೀ ಛೇಂಬರ್ಸ್, ವಿಂಗ್ 'ಎ', # 11, O' ಶಾಗ್‌ನೆಸ್ಸಿ ರಸ್ತೆ, ಬೆಂಗಳೂರು ಕರ್ನಾಟಕ–560025, **(ಮಾಲೀಕರು)** ಇವರ ಮಾಲಿಕತ್ವದ ಭೂ ಪರಿವರ್ತನೆಗೊಳಿಸಿದ ಕೆಳ ಸ್ವತ್ತಿನ ವಿಳಾಸ: ಅಕ್ಕಲೇನಹಳ್ಳಿ ಮಲ್ಲೇನಹಳ್ಳಿ ಗ್ರಾಮ, ಕಸಬ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇದರ ಮಾಲೀಕತ್ವದ ಹಾಗು ಹಕ್ಕು ಬಾದ್ಯತೆಗಳನ್ನು ಪರಿಶೀಲಿಸುತ್ತಿದ್ದೇವೆ. ಇನ್ನುಮುಂದೆ ಕೆಳ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು **ಷೆಡ್ಯೂಲ್ ಸ್ವತ್ತು** ಎಂದು ಉಲ್ಲೇಖಿಸಲಾಗಿದೆ.

ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳಿಗೆ ಯಾವುದೇ ಹಕ್ಕು ಬಾದ್ಯತೆಗಳು, ಹಿತಾಸಕ್ತಿಗಳು, ಬೇಡಿಕೆಗಳು, ಸ್ವತ್ತು ಅಥವ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬದಿಸಿದ ದಾಖಲಾತಿಗಳು ಅಥವ ಮಾಲಿಕರ ವಿರುದ್ಧವಾಗಿದ್ದರೆ ಅವರು ತಮ್ಮ ಹೇಳಿಕೆಗಳನ್ನು, ತಕರಾರುಗಳನ್ನು ಅಥವ ಕ್ಲೇಮುಗಳನ್ನು ಸೂಕ್ತ ದಾಖಲಾತಿ ಪುರಾವೆಗಳೊಂದಿಗೆ ಈ ಪ್ರಕಟಣೆ ಪ್ರಕಟಗೊಂಡ **10 ದಿನಗಳ ಒಳಗಾಗಿ** ಕೆಳ ಸಹಿದಾರರಿಗೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಮ್ಮ ಕಕ್ಷಿದಾರರು ಸದರಿ ಸ್ವತ್ತಿಗೆ ಯಾರದೇ ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಸದರಿ ಸ್ವತ್ತಿನ ವ್ಯವಹಾರಕ್ಕೆ ಮುಂದುವರೆಯುವರು.

ಷೆಡ್ಯೂಲ್–ಸ್ವತ್ತು

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು, ಕಸಬ ಹೋಬಳಿ, ಅಕ್ಕಲೇನಹಳ್ಳಿ, ಮಲ್ಲೇನಹಳ್ಳಿ ಗ್ರಾಮದ, ಭೂ ಪರಿವರ್ತನೆಗೊಳಿಸಿದ ಸ್ವತ್ತಿನ ಒಟ್ಟು ವಿಸ್ತೀರ್ಣ 30 ಎಕರೆ 37 ಗುಂಟೆಗಳು.

ಸರ್ವೆ ನಂ	ವಿಸ್ತೀರ್ಣ		ಚಕ್ಕುಬಂದಿ			
	ಎಕರೆ	ಗುಂಟೆ	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
37/17	5	10.30	ಸರ್ವೆ. ನಂ. 37/6, 37/9, 37/12 ಮತ್ತು 37/27	ಸರ್ವೆ. ನಂ. 37/20 ಮತ್ತು 37/23	ಸರ್ವೆ.ನಂ. 37/20 ಮತ್ತು ಮೆಟ್ರೋಗಾಗಿ ಸ್ವಾದೀನ ಪಡಿಸಿಕೊಂಡ ಜಮೀನು	ಸರ್ವೆ. ನಂ. 37/17 ರ ಉಳಿಕೆ ಭಾಗ
37/27	6	27.80	ಸರ್ವೆ. ನಂ. 37/11	ಸರ್ವೆ. ನಂ. 37/17	ಸರ್ವೆ. ನಂ. 37/17 ಮತ್ತು 37/12	ಸರ್ವೆ. ನಂ. 37/27 ರ ಉಳಿಕೆ ಭಾಗ
37/12	2	37.50	ಸರ್ವೆ. ನಂ. 37/11 ಮತ್ತು ಸರ್ವೆ. ನಂ. 37/12 ರ ಉಳಿಕೆ ಭಾಗ	ಸರ್ವೆ. ನಂ. 37/17	ಸರ್ವೆ. ನಂ. 37/9	ಸರ್ವೆ. ನಂ. 37/27
37/9	3	24.90	ಸರ್ವೆ. ನಂ. 37/11 ಮತ್ತು ಸರ್ವೆ. ನಂ. 37/9 ರ ಉಳಿಕೆ ಭಾಗ	ಸರ್ವೆ. ನಂ. 37/17	ಸರ್ವೆ. ನಂ. 37/6	ಸರ್ವೆ. ನಂ. 37/12
37/6	3	08.50	ಸರ್ವೆ. ನಂ. 37/11	ಸರ್ವೆ.ನಂ. 37/17 ಮತ್ತು ಮೆಟ್ರೋಗಾಗಿ ಸ್ವಾದೀನ ಪಡಿಸಿಕೊಂಡ ಜಮೀನು	ಸರ್ವೆ.ನಂ. 37/24, 37/14 ಮತ್ತು ಮೆಟ್ರೋಗಾಗಿ ಸ್ವಾದೀನ ಪಡಿಸಿಕೊಂಡ ಜಮೀನು	ಸರ್ವೆ. ನಂ. 37/9 ಮತ್ತು 37/11
37/24	0	22.70	ಸರ್ವೆ. ನಂ. 37/14 ಮತ್ತು 37/6	ಸರ್ವೆ.ನಂ. 37/6 ಮತ್ತು ಮೆಟ್ರೋಗಾಗಿ ಸ್ವಾದೀನ ಪಡಿಸಿಕೊಂಡ ಜಮೀನು	ಮೆಟ್ರೋಗಾಗಿ ಸ್ವಾದೀನ ಪಡಿಸಿಕೊಂಡ ಜಮೀನು	ಸರ್ವೆ. ನಂ. 37/6
37/11	3	8.70	ಸರ್ವೆ. ನಂ. 37/8	ಸರ್ವೆ. ನಂ. 37/14, 37/6 ಮತ್ತು 37/9	ಸರ್ವೆ. ನಂ. 37/6 ಮತ್ತು ಸರ್ವೆ. ನಂ. 37/11 ರ ಉಳಿಕೆ ಭಾಗ	ಸರ್ವೆ. ನಂ. 37/8 ಮತ್ತು ಸರ್ವೆ. ನಂ. 37/11 ರ ಉಳಿಕೆ ಭಾಗ
37/14	1	19.90	ಸರ್ವೆ. ನಂ. 37/11	ಸರ್ವೆ.ನಂ. 37/24 ಮತ್ತು ಮೆಟ್ರೋಗಾಗಿ ಸ್ವಾದೀನ ಪಡಿಸಿಕೊಂಡ ಜಮೀನು	ಮೆಟ್ರೋಗಾಗಿ ಸ್ವಾದೀನ ಪಡಿಸಿಕೊಂಡ ಜಮೀನು	ಸರ್ವೆ. ನಂ. 37/6
37/8	2	29.60	ಸರ್ವೆ. ನಂ. 37/5 ಮತ್ತು 37/25	ಸರ್ವೆ. ನಂ. 37/11	ಸರ್ವೆ. ನಂ. 37/11, 37/25 ಮತ್ತು ಸರ್ವೆ. ನಂ. 37/8 ರ ಉಳಿಕೆ ಭಾಗ	ಸರ್ವೆ. ನಂ. 37/8 ರ ಉಳಿಕೆ ಭಾಗ
37/25	0	10.20	ಸರ್ವೆ. ನಂ. 37/25 ರ ಉಳಿಕೆ ಭಾಗ	ಸರ್ವೆ. ನಂ. 37/8	ಸರ್ವೆ. ನಂ. 37/8 ಮತ್ತು ಸರ್ವೆ. ನಂ. 37/25 ರ ಉಳಿಕೆ ಭಾಗ	ಸರ್ವೆ. ನಂ. 37/8
37/5	0	36.90	ಸರ್ವೆ. ನಂ. 37/5 ರ ಉಳಿಕೆ ಭಾಗ	ಸರ್ವೆ. ನಂ. 37/8	ಸರ್ವೆ. ನಂ. 37/25 ಮತ್ತು 37/19	ಸರ್ವೆ. ನಂ. 37/5 ರ ಉಳಿಕೆ ಭಾಗ

ಸ್ಥಳ : ಬೆಂಗಳೂರು
ದಿನಾಂಕ : 07.08.2024

ಮಾಲಿನಿ ರಾಜು
ಎ ಝುಡ್ ಬಿ ಅಂಡ್ ಪಾರ್ಟ್‌ನರ್ಸ್,
ಲೆವೆಲ್ 5, 37, ಕನ್ನಿಂಗ್‌ಹ್ಯಾಮ್,
ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು–560052

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ರಾಮನಗರ ವಿಭಾಗ, ರಾಮನಗರ.
ದೂ. : 080–2991 2608, ಇ–ಮೇಲ್ : dcfrmngr@gmail.com

ಸಂಖ್ಯೆ : ಎ3(ಎ)/ಬಿ.ಯು.ಡಿ./ಟೆಂಡರ್/ಕಾಮಗಾರಿ/ಸಿ.ಆರ್.–51/2024–25
ದಿನಾಂಕ : 05–08–2024

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ರಾಮನಗರ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ 2024–25 ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಅರಣ್ಯೀಕರಣ ಕಾಮಗಾರಿಗಳಾದ ಮಾನ್ಸೂನ್ ಕಾಮಗಾರಿ (ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸುವುದು) ಹಾಗೂ 8X12 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಕರೆಯಲಾಗಿದೆ.

ಇ–ಟೆಂಡರ್‌ನಲ್ಲಿ ಮೊದಲನೇ ಬಾರಿಗೆ ದಿನಾಂಕ : 14–08–2024 ರಂದು ಅಪರಾಹ್ನ 4.00 ಗಂಟೆಯವರೆಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಟೆಂಡರ್ ಮೂಲಕ ಭಾಗವಹಿಸಬಹುದಾಗಿದೆ. ಇ–ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16–08–2024 ರ ಅಪರಾಹ್ನ 4.30 ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 19–08–2024 ರ ಅಪರಾಹ್ನ 5.00 ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ದಿನಾಂಕ : 14–08–2024 ರಂದು ಇ–ಟೆಂಡರ್‌ನಲ್ಲಿ ಮೊದಲನೇ ಬಾರಿ ಯಾರು ಟೆಂಡರ್‌ದಾರರು ಭಾಗವಹಿಸದೇ ಇದ್ದಲ್ಲಿ ಎರಡನೇ ಬಾರಿ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ : 29–08–2024 ರಂದು ಅಪರಾಹ್ನ 4.00 ಗಂಟೆಯವರೆಗೆ ಭಾಗವಹಿಸಬಹುದಾಗಿದೆ. (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30–08–2024 ರ ಅಪರಾಹ್ನ 4.30 ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 02–09–2024 ರ ಅಪರಾಹ್ನ 5.00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಒಂದು ವೇಳೆ ದಿನಾಂಕ : 29–08–2024 ರಂದು ಇ–ಟೆಂಡರ್‌ನಲ್ಲಿ (ಮೊದಲನೇ ಮತ್ತು ಎರಡನೇ ಬಾರಿ ಮೀಸಲು ಕಾಮಗಾರಿಗಳಿಗೆ ಯಾರು ಟೆಂಡರ್‌ದಾರರು ಭಾಗವಹಿಸದೇ ಇದ್ದಲ್ಲಿ ಸಾಮಾನ್ಯ ವರ್ಗದಲ್ಲಿ ಟೆಂಡರ್ ಸಲ್ಲಿಸಲು) ಮೂರನೇ ಬಾರಿ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ : 12–09–2024 ರಂದು ಅಪರಾಹ್ನ 4.00 ಗಂಟೆಯವರೆಗೆ ಭಾಗವಹಿಸಬಹುದಾಗಿದೆ. (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 13–09–2024 ರ ಅಪರಾಹ್ನ 4.30 ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 17–09–2024 ರ ಅಪರಾಹ್ನ 5.00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು.

ಆಸಕ್ತಿಯುಳ್ಳವರು ಟೆಂಡರ್‌ನ್ನ ಷರತ್ತುಗಳನ್ವಯ ಟೆಂಡರ್‌ನ್ನು ಹಾಕಿ ಪಡೆದುಕೊಳ್ಳಬಹುದಾಗಿದೆ. ಇತರೇ ಮಾಹಿತಿ ಬೇಕಾದಲ್ಲಿ ಕರ್ನಾಟಕ ಸರ್ಕಾರದ ಅಂತರ್ಜಾಲದ **ವೆಬ್‌ಸೈಟ್ ವಿಳಾಸ : https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/218/ಮಣಿಪಾಲ್/2024–25

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಮ್ಮ ಪ್ಲಾಟ್‌ಫಾರ್ಮ್‌ನಲ್ಲಿ ಹರೆಯದವರನ್ನು ರಕ್ಷಿಸಲು ಸಹಾಯ ಮಾಡಲು, Instagram ನ ಟೂಲ್‌ಗಳಾದ ಸೂಕ್ಷ್ಮ ಕಂಟೆಂಟ್ ನಿಯಂತ್ರಣದಂತದ್ದನ್ನು ಬಳಸಿ, ಅವು ಹರೆಯದವರ ಎಲ್ಲಾ ಖಾತೆಗಳು ಡೀಫಾಲ್ಟ್ ಆಗಿ ಕಡಿಮೆ ಸೂಕ್ಷ್ಮ ಕಂಟೆಂಟ್ ನೋಡುವಂತೆ ಸೆಟ್ ಮಾಡುತ್ತವೆ.

instagram.com/familytools ಇಲ್ಲಿ ನಮ್ಮ 50+ ಟೂಲ್‌ಗಳೊಂದಿಗೆ ಪ್ರಾರಂಭಿಸಿ

ಗೃಹ ಸಚಿವ ಜಿ.ಪರಮೇಶ್ವರ್ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಪುಲಕೇಶಿನಗರ ವಿಧಾನಸಭೆ ಕ್ಷೇತ್ರದ ಶಾಸಕ ಎ.ಸಿ. ಶ್ರೀನಿವಾಸ್ ಹಾಗೂ ಯಶವಂತಪುರ ವಿಧಾನಸಭೆ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್ ಶುಭ ಕೋರಿದರು

2.76 ಲಕ್ಷ ಪ್ರಾಣಿಗಳಿಗೆ ತುರ್ತು ಚಿಕಿತ್ಸೆ

ಬೆಂಗಳೂರು: ವರ್ಷದ ಅವಧಿಯಲ್ಲಿ ಸಂಚಾರಿ ಪಶು ವೈದ್ಯಕೀಯ ಆಂಬುಲೆನ್ಸ್ ನೆರವಿನಲ್ಲಿ 2.76 ಲಕ್ಷ ಪ್ರಾಣಿಗಳಿಗೆ ತುರ್ತು ಚಿಕಿತ್ಸೆ ಕೊಡಲಾಗಿದೆ.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ 275 ಸಂಚಾರಿ ಆಂಬುಲೆನ್ಸ್‌ಗಳು ಸೇವೆಯಲ್ಲಿವೆ. ನಿತ್ಯ 900ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ವರ್ಷದಲ್ಲಿ 1,78,572 ದನಗಳು, 17,282 ಎಮ್ಮೆಗಳು, 48,566 ಕುರಿಗಳು, 28,293 ಮೇಕೆಗಳು, 359 ಹಂದಿಗಳು ಮತ್ತು 2,939 ನಾಯಿಗಳು ಹಾಗೂ ಇತರೆ ಪ್ರಾಣಿಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಗುಟ್ಟೆ ಆಂಜನೇಯಸ್ವಾಮಿ ರಸ್ತೆಯ ನಿವಾಸಿಗಳಿಗೆ ರಾಜಕಾಲುವೆ ಕಂಟಕ

ಮನೆಗಳಿಗೆ ನುಗ್ಗುವ ಕೊಳಚೆ ನೀರು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಇಲ್ಲಿನ ಗುಟ್ಟೆ ಆಂಜನೇಯ ಸ್ವಾಮಿ ರಸ್ತೆಯ ನಾಗರಿಕರ ಪಾಲಿಗೆ ಪ್ರತಿ ಮಳೆಗಾಲವೂ ದುಃಸ್ವಪ್ನವಾಗಿ ಕಾಡುತ್ತಿದೆ !

ರಸ್ತೆ ಬದಿಯಲ್ಲಿರುವ ರಾಜಕಾಲುವೆಯು ಮಳೆಗಾಲದಲ್ಲಿ ತೋರುವ ಆರ್ಭಟಕ್ಕೆ ಇಲ್ಲಿನ 20ಕ್ಕೂ ಹೆಚ್ಚು ನಿವಾಸಿಗಳು ನಲುಗಿ ಹೋಗಿದ್ದಾರೆ.

ಗುಟ್ಟೆ ಆಂಜನೇಯ ಸ್ವಾಮಿ ರಸ್ತೆ, ಮಾರಮ್ಮ ದೇವಾಲಯ ಬಳಿಯ 1 ನೇ ಮುಖ್ಯರಸ್ತೆ ಬದಿಯಲ್ಲೇ ರಾಜಕಾಲುವೆ ಇದೆ. ಕೆಂಗೇರಿ ಸುತ್ತಮುತ್ತಲ ಪ್ರದೇಶದ ಕೊಳಚೆ ನೀರು ಇದೇ ಕಾಲುವೆ ಮೂಲಕ ಹರಿಯುತ್ತದೆ. ಮಳೆಗಾಲದಲ್ಲಿ ಕೊಳಚೆ ನೀರಿನೊಂದಿಗೆ ಸೇರುವ ಮಳೆ ನೀರು, ಹರಿವಿನ ಪ್ರಮಾಣವನ್ನು ದುಪ್ಪಟ್ಟು ಮಾಡುತ್ತದೆ. ತಡೆಗೋಡೆ ಮೀರಿ ಹರಿಯುವ ಕೊಳಚೆ ನೀರು, ಪ್ರತಿ ಮಳೆಗಾಲದಲ್ಲಿ ಸಮಸ್ಯೆಯನ್ನು ತಂದೊಡ್ಡುತ್ತಿದೆ.

ನೀರು ನುಗ್ಗದಂತೆ ಮನೆ ಬಾಗಿಲ ಬಳಿ ಎತ್ತರದ ಮೆಟ್ಟಿಲುಗಳು ಕಟ್ಟಿಕೊಂಡಿರುವುದು

ಇಷ್ಟೇ ಅಲ್ಲದೇ ಕೆಂಗೇರಿಯ ಕೋಟೆ ಸುತ್ತಮುತ್ತಲಿರುವ ಎತ್ತರ ಪ್ರದೇಶದಿಂದ ಹರಿದು ಬರುವ ಮಳೆ ನೀರು ಕೂಡ 1ನೇ ಮುಖ್ಯರಸ್ತೆಯ ಮುಖಾಂತರವೇ ರಾಜಕಾಲುವೆ ಸೇರಬೇಕು. ಮಳೆ ನೀರು ಹಾಗೂ ರಾಜಕಾಲುವೆ ನೀರು ಒಟ್ಟಿಗೆ ಏಕ ಕಾಲದಲ್ಲಿ ಸಾಗಲು ಸಾಧ್ಯವಾಗದೆ 1ನೇ ಮುಖ್ಯರಸ್ತೆಯತ್ತ ಹಿಂದಕ್ಕೆ ಬರುತ್ತಿದೆ. ರಸ್ತೆ ಆಸುಪಾಸಿನ ಎಲ್ಲಾ ಮನೆಗಳಿಗೂ ಕೊಳಚೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗುತ್ತಿದೆ ಎಂದು ಸ್ಥಳೀಯ ನಿವಾಸಿ ಶಾಂತಮ್ಮ ಅಲವತ್ತು ಕೊಂಡರು.

'ಮಳೆಗಾಲ ಆರಂಭವಾದರೆ ಆತಂಕ ಹೆಚ್ಚಾಗುತ್ತದೆ. ಸಮಸ್ಯೆಯಿಂದ ಪಾರಾಗಲು ಮನೆ ಬಾಗಿಲ ಬಳಿ ಮೂರು ಅಡಿ ಎತ್ತರದ ತಡೆಗೋಡೆ ನಿರ್ಮಾಣ ಮಾಡಿದ್ದೇವೆ. ಹೀಗಿದ್ದರೂ ಕೊಳಚೆ ನೀರು ನುಗ್ಗಿ ಅವಾಂತರವಾಗುತ್ತಿದೆ. ರಾಜಕಾಲುವೆಯ ಕೊಳಚೆ ನೀರಿನೊಂದಿಗೆ ಹಾವು ಚೇಳುಗಳಂತಹ ವಿಷ ಜಂತುಗಳು ಮನೆ ಅಂಗಳಕ್ಕೆ ಬರುತ್ತಿವೆ' ಎಂದು ಗೃಹಿಣಿ ನಾಗಮ್ಮ ಬೇಸರ ವ್ಯಕ್ತಪಡಿಸಿದರು.

ಈ ಸಮಸ್ಯೆ ಪರಿಹರಿಸುವಂತೆ ಹತ್ತು ವರ್ಷಗಳಿಂದ ಪರಿಹಾರಕ್ಕಾಗಿ ಹಲವಾರು ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ್ದೇವೆ. ಶಾಸಕರ ಗಮನಕ್ಕೆ ತರಲಾಗಿದೆ. ಹೀಗಿದ್ದರೂ ಸಮಸ್ಯೆಗೆ ಪರಿಹಾರ ದೊರಕಿಲ್ಲ ಎಂದು ನಿವಾಸಿ ವೇಣು ಮಾಧವಭಟ್ ಅಳಲು ತೋಡಿಕೊಂಡರು. ವೈಜ್ಞಾನಿಕ ಕಾಮಗಾರಿ ನಡೆಸುವ ಮೂಲಕ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು.

> ಬೃಹತ್ ನೀರುಗಾಲುವೆ ವಿಭಾಗದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಶೀಘ್ರ ಪರಿಹಾರಕ್ಕೆ ಕ್ರಮ ವಹಿಸಲಾಗುವುದು.
> **ಗುರುಪ್ರಸಾದ್,** ಸಹಾಯಕ ಕಾರ್ಯಪಾಲಕ ಎಂಜಿನಿಯರ್

ಗ್ರಾಮೀಣಕ್ಕೆ ವಿಶೇಷ ರಿಯಾಯಿತಿ: ಗಣೇಶನ್ ಕಣ್ಣಬೀರನ್

'ನ್ಯಾಕ್' ಮಾನ್ಯತೆಗೆ ಹೊಸ ಪರಿಕಲ್ಪನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಪ್ಟೆಂಬರ್‌ನಿಂದ ಹೊಸ ಮಾನ್ಯತಾ ಪರಿಕಲ್ಪನೆಗಳನ್ನು ಜಾರಿಗೆ ತರುತ್ತಿರುವ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್), ಗ್ರಾಮೀಣ ಪ್ರದೇಶದ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಿಗೆ ಒಂದಷ್ಟು ರಿಯಾಯಿತಿ ನೀಡಲು ನಿರ್ಧರಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನ್ಯಾಕ್ ನಿರ್ದೇಶಕ ಗಣೇಶನ್ ಕಣ್ಣಬೀರನ್, 'ಗ್ರಾಮೀಣ ಭಾಗದ ಶೇ 58ರಷ್ಟು ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣ ಗುಣಮಟ್ಟದ ಸುಧಾರಣೆಗಾಗಿ ಬೈನರಿ ಮಾನ್ಯತೆ ಮತ್ತು ಪ್ರಬುದ್ಧತಾ ಹಂತ ರೂಪಿಸಲಾಗುತ್ತಿದೆ' ಎಂದರು.

'ಗ್ರಾಮೀಣ ಪ್ರದೇಶದಲ್ಲಿ ಮೂಲಸೌಕರ್ಯದ ಕೊರತೆ, ಇಂಟರ್ನೆಟ್ ಮತ್ತು ತಂತ್ರಜ್ಞಾನದ ಲಭ್ಯತೆ ಕೊರತೆಯ ಕಾರಣದಿಂದ ನ್ಯಾಕ್ ಮಾನ್ಯತೆಗೆ ಅರ್ಜಿ ಸಲ್ಲಿಸಿದರೂ, ಉನ್ನತ ಶ್ರೇಣಿ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ದಾಖಲಾತಿ ಸಲ್ಲಿಕೆ ಮತ್ತು ಮಾನ್ಯತಾ ಪ್ರಕ್ರಿಯೆನ್ನು ಸರಳಗೊಳಿಸಲಾಗುತ್ತಿದೆ' ಎಂದು ಹೇಳಿದರು.

'ನ್ಯಾಕ್ ಮಾನ್ಯತೆ ಕೋರಿದ 1,900ಕ್ಕೂ ಹೆಚ್ಚು ಅರ್ಜಿಗಳು ಬಾಕಿ ಉಳಿದಿವೆ. ಅವುಗಳಲ್ಲಿ 100 ಕಾಲೇಜುಗಳು ಮಾತ್ರ ಬೈನರಿ ವ್ಯವಸ್ಥೆಗೆ ಸಮ್ಮತಿಸಿವೆ. ನ್ಯಾಕ್ ಮಾನ್ಯತೆ ಪಡೆಯದ ಹೊಸ ಕಾಲೇಜುಗಳು ಬೈನರಿ ಮಾನ್ಯತೆ ಕೋರಿ ಅರ್ಜಿ ಸಲ್ಲಿಸಬಹುದು.

ನ್ಯಾಕ್ ಸಂಸ್ಥೆಯಲ್ಲಿ ಸೋಮವಾರ ಆಯೋಜಿಸಿದ್ದ 'ಬೈನರಿ ಮಾನ್ಯತೆ' ಕುರಿತು ನಡೆದ ಸಮಾಲೋಚನಾ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ ಕಾಲೇಜುಗಳ ಪ್ರತಿನಿಧಿಗಳು

ಶುಲ್ಕದಲ್ಲೂ ಶೇ 50ರಷ್ಟು ರಿಯಾಯಿತಿ ನೀಡಲಾಗಿದೆ. ಹೊಸ ಮಾನ್ಯತಾ ಪರಿಕಲ್ಪನೆಗಳ ಜಾರಿಯ ನಂತರ ಹಿಂದಿನ ನ್ಯಾಕ್ ಶ್ರೇಣಿ ಪದ್ಧತಿಗಳು ಕ್ರಮೇಣವಾಗಿ ರದ್ದಾಗಲಿವೆ' ಎಂದರು.

'ಬೈನರಿ ಮಾನ್ಯತೆ' ಕುರಿತು ನಡೆದ ಸಮಾಲೋಚನಾ ಕಾರ್ಯಗಾರದಲ್ಲಿ ದೇಶದ 28 ರಾಜ್ಯಗಳ ಮತ್ತು ಐದು ಕೇಂದ್ರಾಡಳಿತ ಪ್ರದೇಶದ ಪ್ರತಿನಿಧಿಗಳು ಭಾಗವಹಿಸಿದ್ದರು.

ಹೊತ್ತಿ ಉರಿದ ಎಲೆಕ್ಟ್ರಿಕ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಟಿನ್ ಫ್ಯಾಕ್ಟರಿಯಿಂದ ಗೊರಗುಂಟೆಪಾಳ್ಯಕ್ಕೆ ತೆರಳುತ್ತಿದ್ದ ಬಿಎಂಟಿಸಿಯ ಎಲೆಕ್ಟ್ರಿಕ್ ಬಸ್‌ನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡು, ಬಸ್ ಬಹುತೇಕ ಸುಟ್ಟು ಹೋಗಿದೆ.

ಬಸ್‌ನಲ್ಲಿದ್ದ 20ಕ್ಕೂ ಹೆಚ್ಚು ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಚಾಲಕ ಹಾಗೂ ನಿರ್ವಾಹಕರ ಮುನ್ನೆಚ್ಚರಿಕೆಯಿಂದ ಅಪಾಯ ತಪ್ಪಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಬಿಎಂಟಿಸಿ ಘಟಕ-9ರಲ್ಲಿ ಜೆಬಿಎಂ- (ಎಲೆಕ್ಟ್ರಿಕ್ ವಾಹನಗಳ ಆಪರೇಟರ್) ಕಂಪನಿಯ ಎಲೆಕ್ಟ್ರಿಕ್ ಬಸ್ ಕಾರ್ಯಚರಿಸುತ್ತಿದೆ. ಸೋಮವಾರ ರಾತ್ರಿ 10.30ರ ಸುಮಾರಿಗೆ ಗೊರಗುಂಟೆ ಪಾಳ್ಯಕ್ಕೆ ಕೆಂಪಾಪುರ ಮಾರ್ಗವಾಗಿ ಬಸ್ ತೆರಳುತ್ತಿತ್ತು. ಅದೇ ವೇಳೆ ಜೋರು ಮಳೆ ಸುರಿಯುತ್ತಿತ್ತು. ಬಸ್ ದಿಢೀರ್ ಆಫ್ ಆದ ಕಾರಣಕ್ಕೆ ಮುಂದಕ್ಕೆ ಚಲಿಸಲು ಸಾಧ್ಯವಾಗಲಿಲ್ಲ.

ಬಸ್‌ನ ಹಿಂಬದಿಯಲ್ಲಿ ಹೊಗೆ ಕಾಣಿಸಿಕೊಂಡಿತ್ತು. ತಕ್ಷಣವೇ ಎಚ್ಚೆತ್ತ ಚಾಲಕ ದಶರಥ ಹಾಗೂ ನಿರ್ವಾಹಕ ನರಸಿಂಹ ರಾಜು ಅವರು ಎಲ್ಲ ಪ್ರಯಾಣಿಕರನ್ನು ಬಸ್‌ನಿಂದ ಕೆಳಕ್ಕೆ ಇಳಿಸಿ ಬೇರೊಂದು ಬಸ್‌ನಲ್ಲಿ ಕಳುಹಿಸಿ ಕೊಟ್ಟರು. ನಂತರ ಬೆಂಕಿ ವ್ಯಾಪಿಸಲು ಆರಂಭಿಸಿತು. ಸ್ಥಳಕ್ಕೆ ಬಂದ ಅಗ್ನಿಶಾಮಕದ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

ಹೊತ್ತಿ ಉರಿದ ಬಿಎಂಟಿಸಿಯ ಎಲೆಕ್ಟ್ರಿಕ್ ಬಸ್

'ಸ್ಥಳಕ್ಕೆ ಜೆಬಿಎಂ ಎಲೆಕ್ಟ್ರಿಕ್ ವಾಹನದ ಉಸ್ತುವಾರಿ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಅಲ್ಲದೇ ಹೆಚ್ಚಿನ ಪರಿಶೀಲನೆಗೆ ಸುಟ್ಟು ಹೋದ ಬಸ್ ಅನ್ನು ಕೆಂಗೇರಿಗೆ ಕೊಂಡೊಯ್ಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ರಸ್ತೆಯಲ್ಲಿ ನಿಂತ ನೀರಿನಿಂದ ಅವಘಡ: 'ಜೋರು ಮಳೆಯಿಂದ ಕೆಂಪಾಪುರದ ಬಳಿ ರಸ್ತೆಯಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ಹಳ್ಳದಂತೆ ಹರಿಯುತ್ತಿತ್ತು. ಅದೇ ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಸ್‌ನಲ್ಲಿ ನೀರು ತುಂಬಿದ ಕಾರಣಕ್ಕೆ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಸಾಧ್ಯತೆ ಇದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ' ಎಂದು ಬಿಎಂಟಿಸಿ ತಿಳಿಸಿದೆ.

ಸುದ್ದಿ 2 ನಿಮಿಷ

ಬೇಡಿಕೆ ಈಡೇರಿಸದಿದ್ದರೆ ಮುಷ್ಕರ ಕೆಎಸ್‌ಡಿಎಲ್ ಕಾರ್ಮಿಕರ ಎಚ್ಚರಿಕೆ

ಬೆಂಗಳೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆ.ಎಸ್. ಆ್ಯಂಡ್ ಡಿ.ಎಲ್.) ಮಾರುಕಟ್ಟೆ ವಿಭಾಗದ ಕಾರ್ಮಿಕರಿಗೆ ವೇತನ ಹೆಚ್ಚಳ, ಬೋನಸ್ ಒದಗಿಸುವಿಕೆ ಸೇರಿ ವಿವಿಧ ಬೇಡಿಕೆಗಳನ್ನು ಹದಿನೈದು ದಿನಗಳೊಳಗೆ ಈಡೇರಿಸಬೇಕು. ಇಲ್ಲವಾದಲ್ಲಿ ಸರ್ಕಾರದ ವಿರುದ್ಧ ಮುಷ್ಕರ ನಡೆಸಲಾಗುವುದು' ಎಂದು ಕೆ.ಎಸ್. ಆ್ಯಂಡ್ ಡಿ.ಎಲ್. ಮಾರ್ಕೆಟಿಂಗ್ ಸ್ಟಾಫ್ ಆ್ಯಂಡ್ ವರ್ಕರ್ಸ್ ಅಸೋಸಿಯೇಷನ್ ಎಚ್ಚರಿಕೆ ನೀಡಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಜಿ.ಆರ್. ಶಿವಶಂಕರ್, 'ಸಂಸ್ಥೆಯಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡದೆ ಶೋಷಣೆ ಮಾಡಲಾಗುತ್ತಿದೆ. ಮಾರುಕಟ್ಟೆ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕಾಯಂ ನೌಕರರಿಗೆ ₹ 65 ಸಾವಿರದಿಂದ ₹ 75 ಸಾವಿರ ವೇತನ ನೀಡಲಾಗುತ್ತಿದೆ. ಗುತ್ತಿಗೆ ಕಾರ್ಮಿಕರಿಗೆ ₹ 20 ಸಾವಿರದಿಂದ ₹ 25 ಸಾವಿರ ನೀಡಲಾಗುತ್ತಿದೆ. ತುಟ್ಟಿ ಭತ್ಯೆ, ಸಾರಿಗೆ ಭತ್ಯೆ ಸೇರಿ ವಿವಿಧ ಸೌಲಭ್ಯವನ್ನು ನೀಡದೆ ಶೋಷಣೆ ಮಾಡಲಾಗುತ್ತಿದೆ. ಉತ್ಪಾದನಾ ಹಾಗೂ ಇತರೆ ವಿಭಾಗಗಳ ಕಾರ್ಮಿಕರಿಗೆ ನೀಡಿದ ಸವಲತ್ತುಗಳನ್ನು ಮಾರುಕಟ್ಟೆ ವಿಭಾಗದ ನೌಕರರಿಗೂ ನಿಡಬೇಕು' ಎಂದು ಆಗ್ರಹಿಸಿದರು.

'ಮಾರುಕಟ್ಟೆ ವಿಭಾಗದ ನೌಕರರಿಗೆ ಎಂಟು ವರ್ಷಗಳಿಂದ ಬೋನಸ್ ನೀಡಿಲ್ಲ. ನಿವೃತ್ತಿಯಾದ ನೌಕರರನ್ನು ಪುನರ್ ನೇಮಕ ಮಾಡಬಾರದೆಂದು ಸರ್ಕಾರದ ಆದೇಶವಿದ್ದರೂ ನಿವೃತ್ತರನ್ನು ಮುಂದುವರಿಸಲಾಗಿದೆ. ಅವರನ್ನು ಕೂಡಲೇ ಕೆಲಸದಿಂದ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ಸ್ವಯಂಪ್ರೇರಿತ ರಕ್ತದಾನ ಶಿಬಿರ



ಯಲಹಂಕ: ಯಲಹಂಕ ಲಯನ್ಸ್ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ಸಹಕಾರ ನಗರದ ಕಾವೇರಿ ಬಿ.ಇಡಿ ಕಾಲೇಜಿನಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಶಿಬಿರ ಉದ್ಘಾಟಿಸಿ ಮಾತನಾಡಿದ ಪ್ರಾಂಶುಪಾಲ ಡಾ.ಇ.ಬಿ. ರಾಜೇಶ್, 'ಇತ್ತೀಚೆಗೆ ಡೆಂಗಿ ಜ್ವರ ಹೆಚ್ಚಾಗುತ್ತಿದೆ. ರೋಗಿಗಳಿಗೆ ತುರ್ತಾಗಿ ರಕ್ತದ ಅವಶ್ಯಕತೆ ಇರುತ್ತದೆ. ಆದರೆ ರಕ್ತನಿಧಿ ಕೇಂದ್ರಗಳಲ್ಲಿ ರಕ್ತ ಸಂಗ್ರಹದ ಕೊರತೆ ಇದೆ. ಹಾಗಾಗಿ ಯುವ ಜನಾಂಗ ರಕ್ತದಾನಕ್ಕೆ ಮುಂದಾಗಬೇಕು' ಎಂದು ಸಲಹೆ ನೀಡಿದರು.

ಶಿಬಿರದಲ್ಲಿ 50 ಯುನಿಟ್ ರಕ್ತ ಸಂಗ್ರಹಿಸಲಾಯಿತು. ಯಲಹಂಕ ಲಯನ್ಸ್ ರಕ್ತನಿಧಿ ಕೇಂದ್ರದ ಅಧ್ಯಕ್ಷ ಕುರಿಯನ್, ಸಪ್ತಗಿರಿ ಆಸ್ಪತ್ರೆಯ ಡಾ.ಹೇಮಂತ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ನಮೂನೆ ನಂ. ಐಎನ್‌ಸಿ–26

ಕಂಪನಿಗಳ (ಸಂಯೋಜನೆ) ನಿಯಮಾವಳಿಗಳು, 2014 ಇದರ ನಿಯಮ 30ಕ್ಕೆ ಅನುಸಾರವಾಗಿ ಕಂಪನಿಯ ಕೇಂದ್ರ ಕಛೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸುವ ಸಲುವಾಗಿ ಜಾಹೀರಾತನ್ನು ಪ್ರಕಟಿಸಬೇಕಾಗಿರುತ್ತದೆ.

ಕೇಂದ್ರ ಸರ್ಕಾರದ ಮುಂದೆ (ಪ್ರಾದೇಶಿಕ ನಿರ್ದೇಶಕರು) ಪೂರ್ವ ವಲಯ

ಕಂಪನಿ ಕಾಯಿದೆ, 2013 ರ ಕಲಂ 13ರ ಉಪ ಕಲಂ (4) ಹಾಗೂ ಕಂಪನಿಗಳ (ಸಂಯೋಜನ) ನಿಯಮಾವಳಿಗಳು, 2014ರ ನಿಯಮ 30 ಉಪ–ನಿಯಮ (5)ರ ಷರತ್ತು (ಎ) ಇವುಗಳ ವಿಷಯದಲ್ಲಿ

ಮತ್ತು

ಅರ್ಜಿದಾರರಾದ ಹಾಗೂ ಭಾರತ, ಕರ್ನಾಟಕ ರಾಜ್ಯ–560100, ಬೆಂಗಳೂರು, ಬೇಗೂರು ಹೋಬಳಿ, ದೊಡ್ಡ ತೋಗೂರ, ಎಲೆಕ್ಟ್ರಾನಿಕ್ ಸಿಟಿ, ವಿಪ್ರೋ ಗೇಟ್ 5ರ ಎದುರು, ನಂ. 56;ಎ ಇಲ್ಲಿ ತನ್ನ ಕೇಂದ್ರ ಕಛೇರಿಯನ್ನು ಹೊಂದಿರುವ **ಮೆ: ಎಕ್ರಮ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್** (ಸಿಐಎನ್: U55101KA2011PTC059354) ಇದರ ವಿಷಯದಲ್ಲಿ.

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುತ್ತಿರುವುದೇನೆಂದರೆ, ಮೇಲ್ಕಂಡ ನಮ್ಮ ಕಂಪನಿಯು ತನ್ನ ಕೇಂದ್ರ ಕಛೇರಿಯನ್ನು ಕರ್ನಾಟಕ ರಾಜ್ಯದಿಂದ ವೆಸ್ಟ್ ಬಂಗಾಲ್ ರಾಜ್ಯಕ್ಕೆ ಬದಲಾಯಿಸಲು ಅನುವಾಗುವಂತೆ ದಿನಾಂಕ: 6ನೇ ಆಗಸ್ಟ್, 2024 ರ ಮಂಗಳವಾರದಂದು ನಡೆದ ವಿಶೇಷ ಮಹಾಸಭೆಯಲ್ಲಿ ಹೊರಡಿಸಿದ ವಿಶೇಷ ಠರಾವು(ನಡಾವಳಿ) ಪ್ರಕಾರ ನಮ್ಮ ಕಂಪನಿಯ ಜ್ಞಾಪನಾ ಪತ್ರದ ತಿದ್ದುಪಡಿಯನ್ನು ಖಚಿತಪಡಿಸಿ ಕೊಡುವಂತೆ ಕೋರಿ ಕಂಪನಿ ಕಾಯಿದೆ. 2013ರ ಕಲಂ 13 ರಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸುವ ಕುರಿತು ಉದ್ದೇಶಿಸಿರುತ್ತದೆ. ಕಂಪನಿಯ ಕೇಂದ್ರ ಕಛೇರಿಯನ್ನು ಬದಲಾವಣೆ ಮಾಡುವ ಸದರಿ ಉದ್ದೇಶದಿಂದ ಯಾವುದೇ ವ್ಯಕ್ತಿಯ ಹಿತಾಸಕ್ತಿಗೆ ಧಕ್ಕೆ ಉಂಟಾಗುವ ಸಂಭವ ಇದದಲ್ಲಿ ಅವರು ಇನ್ವೆಸ್ಟರ್ ಕಂಪ್ಲೆಂಟ್ ಫಾರ್ಮನ್ನು ದಾಖಲು ಮಾಡುವ ಮೂಲಕ ಅಥವಾ ರವಾನಿಸುವ ಮೂಲಕ ಅಥವಾ ನೋಂದಾಯಿತ ಅರ್ಜಿಯ ಮೂಲಕ ಎಂಸಿಎ–21 ಪೋರ್ಟಲ್ (ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ ಎಂಸಿಎ, ಜಿ.ಒ.ವಿ, ಪಾನ್) ಇದರ ಮುಖಾಂತರ ಒಂದು ಪ್ರಮಾಣ ಪತ್ರವನ್ನು ಲಗತ್ತಿಸಿ ಅದರಲ್ಲಿ ತನ್ನ: ಅವನ: ಅವಳ ಹಿತಾಸಕ್ತಿ ಮತ್ತು ತನ್ನ ವಿರೋಧಿಸುವಿಕೆಗೆ ಕಾರಣಗಳನ್ನು ನಮೂದಿಸಿ ಅವನ: ಅವಳ ಆಕ್ಷೇಪಣೆಗಳನ್ನು ಪ್ರಾದೇಶಿಕ ನಿರ್ದೇಶಕರು, ಸೌತ್‌ಈಸ್ಟ್ ರೀಜನ್, 3ನೇ ಮಹಡಿ, ಕಾರ್ಪೊರೇಟ್ ಭವನ್, ಬಾಂಡುಗುಡ, ನಾಗೋಲೆ, ತಟ್ಟಿಯನ್ನರಮ್ ಗ್ರಾಮ ಹಯಾತ್ ನಗರ ಮಂಡಲಿ, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್–569968, ತೆಲಗಾಂಗಣ ರಾಜ್ಯ ಇಲ್ಲಿನ ರೀಜನಲ್ ಡೈರೆಕ್ಟರ್ ರವರಿಗೆ ಈ ನೋಟೀಸ್ ಪ್ರಕಟಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗಾಗಿ ರವಾನಿಸುವುದು ಹಾಗೂ ಇದರ ಪ್ರತಿಯನ್ನು ಅರ್ಜಿದಾರ ಕಂಪನಿಗೆ, ಅರ್ಜಿದಾರ ಕಂಪನಿಯ ಪ್ರತಿಯೊಂದಿಗೆ ಅದರ ಈ ಕೆಳಕಂಡ ಕೇಂದ್ರ ಕಛೇರಿಗೆ ಕಳುಹಿಸುವುದು.

ನಂ. 56:ಎ, ವಿಪ್ರೋ ಗೇಟ್ 5ರ ಎದುರು, ಎಲೆಕ್ಟ್ರಾನಿಕ್ ಸಿಟಿ, ದೊಡ್ಡತೋಗೂರ್, ಬೇಗೂರ್ ಹೋಬಳಿ, ಬೆಂಗಳೂರು, ಕರ್ನಾಟಕ – 570100 ಭಾರತ.

**ಅರ್ಜಿದಾರರಾದ
ಸಹಿ/– ಮೆ: ಎಕ್ರಂ ಹೋಟೆಲ್ ಪ್ರೈವೇಟ್ ಲಿಮಿಟೆಡ್‌ಗಾಗಿ ಹಾಗೂ ಅದರ ಪರವಾಗಿ
ಶ್ರೀ ಮೊಹಮದ್ ತಹೀನ್ ಎಕ್ರಂ.
ಡಿಐಎನ್: 06469810**

**ದಿನಾಂಕ: 06–08–2024
ಸಳ: ಕೋಲ್ಕತ್ತಾ**

JOB OPPORTUNITIES

Teachers/ Professors

MODERN PUBLIC ENGLISH SCHOOL RT-Nagar, Bangalore requires ACADEMIC COORDINATORS and TEACHERS for ENGLISH, COMPUTER SCIENCE, KANNADA, ART AND CRAFT Whatsapp CV:9739981605 info@mpes-edu.com

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage,Bangalore -75. Ph.080-25292930
English medium school under Karnataka State syllabus invites applications for the following post:
HEADMASTER / HEADMISTRESS
FOR PRIMARY SCHOOL
Qualification: Bachelor's degree with M Ed / B Ed, 10+ yrs teaching experience in Primary School or 5+ yrs experience in High School
Apply to the Hon. Secretary before **10-08-2024.**
Email to **contact.indiranagar@ppec.edu.in**

REQUIRED BIOLOGY, PHYSICS (PGT), ENGLISH (MA,B.Ed.), COMPUTER SCIENCE (MCA/BE), CBSE experienced Academic Director/ Retired Kendriya Vidyalaya Principal (Full/Part Time). Contact: HARWARD INTERNATIONAL SCHOOL, Dasanapura, Tumkur Road Bengaluru North 562162. Mobile: 9880112833, 9741337257. Send your resume: info@harwardinter nationalschooledu.in

WANTED ENGLISH MEDIUM TRAINED/ UNTRAINED Lady Graduates interested in Teaching Primary Classes/ Computer Faculty/ PUC Passed Girls with good English fluency to assist primary teachers. Contact in person (10.00 am- 3.00 pm on all working days) - Secretary, Deccan Educational Society®, No. 95, 3rd Cross, Srirampuram, Bengaluru- 560021 (Near Anjaneya Temple, Railway Underbridge).

WANTED EXPERIENCED LECTURERS M.A (English) Attractive Salary, Contact Principal with Original Certificates between 10.00-1.00 pm. SREE VENKATESHWARA DEGREE COLLEGE, Krishnarajapuram, Bangalore. Ph-9036068144, 9731394020, 7411135627. E-Mail: svdc.krp.bangalore@gmail.com

A REPUTED State Board English Medium School needs at BG Road Experienced Female Teachers for Kindergarten, Primary and Computer Classes Immediately. Contact: 9448344014/ 9535293469.

HIGH SCHOOL COMPUTER TEACHER needed for CHITRAKOOTA CBSE School in Nagarbhavi Kengeri Ring Road, Immediately Contact: 7829647333

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003, Website: www.mesinstitutions.in

Advt. No. MES/19 (1)/ADM-1/2024 Dated 07.08.2024

Invites applications for the following posts:

Assistant Professor for Degree Colleges: Full Time
Pay Scale: 43100-104600

SUBJECTS: ENGLISH / COMMERCE / POLITICAL SCIENCE

Essential Qualification: Master's Degree in relevant subject from a recognized university with a minimum of 55% Marks and qualified in NET/KSET examination in the relevant subject(s).

Desirable : Previous Teaching Experience at similar level in College. Knowledge in usage of technology/ ICT in teaching.

SUBJECT: COMPUTER SCIENCE

Essential Qualification: Master's Degree in Computer Science / Master's Degree in Engineering/ Master's Degree in Computer Applications, from a recognized university with a minimum of 55% Marks

Qualified in NET/KSET examination in Computer Science.

Desirable : Previous Teaching Experience at similar level in College.

Knowledge in usage of technology /ICT in teaching, web content management, knowledge of Computer Applications.

The posts carry pay and allowance. Besides this, contribution towards PF and Gratuity as terminal benefit.

1. Applications with BIO-DATA and copies of certificates of their qualifications and experience etc., should reach the Chief Executive, MES at the above address on or before 20.08.2024 duly superscribing the envelope with "Application for the post of ____________________".
2. Candidates with experience are preferred.
3. Competency in ICT enabled teaching is desirable.
4. All posts are tenable in any of the MES Institutions and are transferable.
5. Decision of the selection committee is final.
6. Resorting to any sort of influence will be deemed as a disqualification of the candidature.
7. Download the application form from the mes website: https://mesinstitutions.in

CHIEF EXECUTIVE

Brindavan Group of Institutions
Dwarakanagar, Bagalur Main Road, Yelahanka, Bengaluru - 560063
Recognized by Government of Karnataka, Approved by AICTE, Council of Architecture DTE UGC, & PU Board Affiliated to Bengaluru City University (BCU) & Visveshvaraya Technological University (VTU) Accredited by NAAC
www.brindavancollege.com Ph: +91 8024478388 / 8423, +91 9606487201

Invites Applications from Suitable Applicants for the Proposed Vacancies

Teaching : Assistant Professor/ Associate Professor / Professor
In CSE, ISE, AI&ML, IOT, ECE, MBA, MCA, BCA, Diploma and PUC Departments
Qualification : BE / B.Tech / ME / M.Tech / MCA / MBA / MA and as per UGC and AICTE norms.
Experience : Minimum of 0-10 years in Teaching / Research / Industry in which 5 years shall be at the level of professor preferable 3 years of administrative experience with essential management and leadership qualities.

Non-Teaching : IT & Administrative
Qualification : Graduate in any discipline (IT)
Experience : Minimum of 0-5 years in college/Institute in which 3 years shall be at the level of administrative experience with essential management.

The Interested and eligible candidates with mentioned requirement may send the detailed resume to HR@brindavancollge.com, and also sent your detailed resume with relevant Credentials/Testimonial's to the HR Brindavan Group of Institutions Dwarakanagar, Bagalur Main Road, Yelahanka, Bangalore - 560 063 on or before 31.08.2024

- Salary for the prescribed post as per the UGC/AICTE/ State Scale.
- The Applicants with Ph.D the relevant subject from recognised universities are preferable
- The Institution reserves the rights of Processing applicants by any means.
- The Eligible and Short-listed candidates shall be communicated for the selection process.

Admission open for 2024-2025
Contact : 9606487201/203/220/080-28478388/28478423

Sd/- CEO

WANTED TEACHERS FOR MATHS (PART-TIME) ENGLISH COMPUTERS. ABDUL BARI'S HIGH SCHOOL Near Coles Park 9353111888

General

WANTED OFFICE Boys (Field Work), Office Assistant, for advt. agency near Hanumanthnagar - 41618530, 6361942572

BUSINESS

Business to Business

Business

WANTED BUSINESS PARTNER HOTEL BUSINESS CONTACT: 8892501007/ 9606701007

EDUCATION CORNER

CAMPUS DYNAMIX
Student Lifecycle Management Solution — Move to the next level
Automate your education management workflow from Admissions, Fee Management, Timetable to Attendance, Examination and Placements. Deliver personalized education with LMS, AI based Assessment & AI Tutor.
Integrated with NEP Standards
Plus Student Finance, Accounting, Purchasing, HR and Asset Management.
Schools, Universities, Technical Education, Skill Development & Training Academies
Save 30 - 40% of your overheads and operational costs!
One System for All
Single Source of Truth
Enhance Student experience
Powered by Microsoft — Microsoft is a trademark of Microsoft Corporation Inc
Contact us: info@unikul.com
unikul +91 8748008008

REQUIRE INTERIOR DESIGNER to accomplish the work of Restaurant in Indiranagar. Contact- 9448079775, 9481505241.

REAL ESTATE SELLING

Commerical

General

SALE GOA 5STAR HOTELS WITH CASINO. MANGALORE SALE PROPERTIES : BEACH / RIVERSIDE FOR RESORTS, INVESTMENTS, LAND NEAR MANGALORE PORT FOR WAREHOUSE/ CONTAINERS. COMMERCIAL, RESIDENTIAL LAND , AGRICULTURE FARMS. AVAILABLE READY/BUILT TO SUIT. RENTAL COMMERCIAL SPACE 15000SFT. TO 2,00,000SFT. FOR SOFTWARE / MNC, CORPORATES . 9702932709

Flat

Marathahalli

"SALE 3BHK, 1635 sqft Apartment Flat 82 Lakhs Laxmi Layout, Munnekolal, Marathahalli. Call: 7760388034/ 9242135834"

PERSONAL

Lost

DOCUMENT LOST
I, **S. SUMATHI,** R/at No.77, 12th Cross, Kodandaramapura, Bangalore-03, have lost my **Original Sale Deed of property located at Doddaladamara Vinayakanagara Village, Kengeri. Identification No. KEN-1-16561-2004-05 CD No. KEND125, Sub-Registrar, Kengeri** while shifting residence. If found please contact: **9035290645**

Change of Name

CHANGE OF NAME
I, **GIRISHA KUMARA.N.S,** residing at #128/129, Flat No. 403, Venkatachala Residency, III Floor, 1st Cross, Nandakumar Layout, Arehalli, Subramanyapura Post, Bengaluru- 560061, have changed my name to **N.S.GIRISHKUMAR,** vide affidavit dated 02.08.2024 before Notary Vijayakumari, Bangalore.

I, PRASANTH KRISHNA have changed my name as ABHAY SURYA Vide affidavit dated 16/07/2024 before Notary Mohammed Hussain K, Bangalore

I, RANGANATHA. K, residing at Bengaluru-76 have changed my name as RANGANATH. K, vide affidavit dated 6/8/2024 before Notary K.S.Bammappanavar, Bengaluru

I, LALIT KUMAR R/o #53, HBCS Layout, Vivekananda Nagar, Bengaluru-85 have change my name as LALIT KUMAR JAIN Vide affidavit dated 5/8/2024 before notary Jayappa. A, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact — ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
For more details contact:
+91 9731810277 | +91 9886213331
+91 9901641752 | 080- 45557163/164
*Conditions apply

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ

‘ಮುಂದಿನ ತಿಂಗಳು ಗೃಹ ಆರೋಗ್ಯ ಜಾರಿ’

ಪ್ರಜಾವಾಣಿ ವಾರ್ತೆ

ಮಧುಮೇಹ ಚಿಕಿತ್ಸಾ ತರಬೇತಿ ಕುರಿತ ಒಪ್ಪಂದದ ಪ್ರತಿಗಳನ್ನು ಸಚಿವ ದಿನೇಶ್ ಗುಂಡೂರಾವ್ ಹಾಗೂ ವಿಕ್ರಾಂತ್ ಶ್ರೋತ್ರಿಯ ಪ್ರದರ್ಶಿಸಿದರು. ಡಾ.ತ್ರಿವೇಣಿ ಎಂ.ಜಿ., ನವೀನ್ ಭಟ್ ಹಾಗೂ ಜಾನ್ ಡಾಬರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಮನೆ ಬಾಗಿಲಲ್ಲಿಯೇ ತಪಾಸಣೆ ನಡೆಸಿ, ಅಗತ್ಯ ಔಷಧಗಳನ್ನು ಒದಗಿಸುವ ‘ಗೃಹ ಆರೋಗ್ಯ’ ಯೋಜನೆಯನ್ನು ಮುಂದಿನ ತಿಂಗಳು ರಾಜ್ಯದಲ್ಲಿ ಜಾರಿ ಮಾಡಲಾಗುವುದು’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆ ಹಾಗೂ ನೊವೊ ನಾರ್ಡಿಸ್ಕ್ ಎಜುಕೇಷನ್ ಫೌಂಡೇಶನ್ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಧುಮೇಹ ಚಿಕಿತ್ಸೆ ತರಬೇತಿಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ‘ಗೃಹ ಆರೋಗ್ಯ ಯೋಜನೆ ಜಾರಿಗೆ ಸಚಿವ ಸಂಪುಟದಲ್ಲಿ ಈಗಾಗಲೇ ಅನುಮೋದನೆ ದೊರೆತಿದೆ. ಯೋಜನೆ ಚಾಲನೆಗೆ ದಿನಾಂಕ ನಿಗದಿ ಮಾಡಲು ಇಲಾಖೆ ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಲಾಗುವುದು. ಈ ಯೋಜನೆಗೆ ಮೊದಲ ಹಂತದಲ್ಲಿ ರಾಜ್ಯದ ನಾಲ್ಕು ವಿಭಾಗಗಳಿಂದ ಎಂಟು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಮಧುಮೇಹ ಸೇರಿ ವಿವಿಧ ಸಮಸ್ಯೆಗಳ ಪತ್ತೆಗೆ ಅಲ್ಲಿನ ಎಲ್ಲ ಮನೆಗಳ ಕುಟುಂಬದ ಸದಸ್ಯರಿಗೆ ತಪಾಸಣೆ ನಡೆಸಲಾಗುತ್ತದೆ’ ಎಂದು ಹೇಳಿದರು.

‘ಮಧುಮೇಹ ಹಾಗೂ ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರಲ್ಲಿ ಕೆಲವರು ನಿಯಮಿತವಾಗಿ ಮಾತ್ರೆಗಳನ್ನು ಸೇವಿಸುತ್ತಿಲ್ಲ. ಆರ್ಥಿಕ ಹೊರೆ ಸೇರಿ ವಿವಿಧ ಕಾರಣಗಳಿಂದ ಮಾತ್ರೆಗಳನ್ನು ಖರೀದಿಸುತ್ತಿಲ್ಲ. ಗೃಹ ಆರೋಗ್ಯ’ ಯೋಜನೆಯಡಿ ಮಧುಮೇಹ ಹಾಗೂ ಅಧಿಕ ರಕ್ತದೊತ್ತಡ ಸಮಸ್ಯೆ ಇರುವವರಿಗೆ ಮೂರು ತಿಂಗಳಿಗೆ ಆಗುವಷ್ಟು ಮಾತ್ರೆಗಳನ್ನು ಮನೆಗಳಿಗೆ ನೇರವಾಗಿ ಒದಗಿಸಲಾಗುತ್ತದೆ’ ಎಂದು ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ನವೀನ್ ಭಟ್ ಮಾತನಾಡಿ, ‘ನೊವೊ ನಾರ್ಡಿಸ್ಕ್ ಎಜುಕೇಷನ್ ಫೌಂಡೇಶನ್ ನೆರವಿನಿಂದ ಇಲಾಖೆಯಡಿಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ವೈದ್ಯರಿಗೆ ಮಧುಮೇಹ ಚಿಕಿತ್ಸೆ, ಆರೈಕೆ ಮತ್ತು ರೋಗ ಪತ್ತೆ ಬಗ್ಗೆ ತರಬೇತಿ ನೀಡಲಾಗುತ್ತದೆ’ ಎಂದರು.

ನೊವೊ ನಾರ್ಡಿಸ್ಕ್ ಎಜುಕೇಷನ್ ಫೌಂಡೇಶನ್ ಟ್ರಸ್ಟಿ ವಿಕ್ರಾಂತ್ ಶ್ರೋತ್ರಿಯ, ನೊವೊ ನಾರ್ಡಿಸ್ಕ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಾನ್ ಡಾಬರ್ ಹಾಗೂ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ನಿರ್ದೇಶಕಿ ಡಾ. ತ್ರಿವೇಣಿ ಎಂ.ಜಿ. ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಮೊದಲ ಹಂತದಲ್ಲಿ ನಾಲ್ಕು ವಿಭಾಗದ ಎಂಟು ಜಿಲ್ಲೆಗಳಲ್ಲಿ ಜಾರಿ
- ಮನೆ–ಮನೆಗೆ ತೆರಳಿ ಕುಟುಂಬದ ಸದಸ್ಯರ ಆರೋಗ್ಯ ತಪಾಸಣೆ
- ಮೂರು ತಿಂಗಳಿಗೆ ಬೇಕಾಗುವಷ್ಟು ಔಷಧಿ ಮನೆಗೆ ಪೂರೈಕೆ

‘ರೋಗ ಪತ್ತೆಗೆ ಆದ್ಯತೆ’

‘ರಾಸಾಯನಿಕಯುಕ್ತ ಆಹಾರ ಸೇವನೆ, ಬದಲಾದ ಜೀವನಶೈಲಿ, ವಾಯು ಹಾಗೂ ಜಲ ಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ಅನಾರೋಗ್ಯ ಸಮಸ್ಯೆಗಳು ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತಿವೆ. ರೋಗಕ್ಕೆ ಚಿಕಿತ್ಸೆ ನೀಡುವ ಜತೆಗೆ ರೋಗ ಬರದಂತೆ ತಡೆಯುವುದು ಮುಖ್ಯ. ಆದ್ದರಿಂದ ರೋಗ ಪತ್ತೆ ಸಂಬಂಧ ತಪಾಸಣೆಗೆ ಆದ್ಯತೆ ನೀಡಲಾಗುತ್ತಿದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಯಾದಲ್ಲಿ ಚಿಕಿತ್ಸೆಯೂ ಸುಲಭವಾಗುತ್ತದೆ’ ಎಂದು ದಿನೇಶ್ ಗುಂಡೂರಾವ್ ಹೇಳಿದರು.

‘ನೊವೊ ನಾರ್ಡಿಸ್ಕ್ ಎಜುಕೇಷನ್ ಫೌಂಡೇಶನ್ ಜತೆಗಿನ ಒಪ್ಪಂದದ ಪ್ರಕಾರ ಮಧುಮೇಹ ಪತ್ತೆಗೆ ಜಿಲ್ಲಾ ಆಸ್ಪತ್ರೆಗಳಲ್ಲಿ ‘ಸಮುದಾಯ ಮಧುಮೇಹ ಕೇಂದ್ರ’ (ಸಿಡಿಸಿ) ಆರಂಭಿಸಲಾಗುವುದು. ಮೊದಲ ಹಂತದಲ್ಲಿ ಪ್ರಾಯೋಗಿಕವಾಗಿ ಬೆಂಗಳೂರು ನಗರ, ದಕ್ಷಿಣ ಕನ್ನಡ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಈ ಕೇಂದ್ರಗಳು ಕಾರ್ಯನಿರ್ವಹಿಸಲಿವೆ’ ಎಂದರು.

ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲು: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಖಾಸಗಿ ಕಂಪನಿಗಳಲ್ಲಿ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಮಸೂದೆಯನ್ನು ಸರ್ಕಾರವು ಕೂಡಲೇ ಜಾರಿಗೊಳಿಸಬೇಕು’ ಎಂದು ಸಾಹಿತಿಗಳು ಹಾಗೂ ಕನ್ನಡ ಪರ ಹೋರಾಟಗಾರರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ಪತ್ರ ಬರೆದಿದ್ದು, ಮಸೂದೆ ಜಾರಿ ಮಾಡುವಂತೆ ಸಾಹಿತಿ ಹಂ.ಪ. ನಾಗರಾಜಯ್ಯ, ಕವಿ ಎಲ್. ಹನುಮಂತಯ್ಯ, ಲೇಖಕಿ ಬಿ.ಟಿ. ಲಲಿತಾನಾಯಕ್, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಕನ್ನಡ ಪರ ಹೋರಾಟಗಾರರಾದ ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ಸ.ರ. ಸುದರ್ಶನ ಹಾಗೂ ಅಶ್ವತ್ಥನಾರಾಣ ಅವರು ಆಗ್ರಹಿಸಿದ್ದಾರೆ.

ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಒದಗಿಸುವುದರ ಜೊತೆಗೆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಸ್ವಾಮ್ಯದ ಮತ್ತು ಖಾಸಗಿ ಉದ್ದಿಮೆ, ಬ್ಯಾಂಕ್‌ಗಳ ನೇಮಕಾತಿಯಲ್ಲಿ ಕನ್ನಡಿಗರಿಗೆ ನ್ಯಾಯಯುತ ಪಾಲು ಒದಗಿಸಬೇಕು. ಕನ್ನಡಿಗರ ಉದ್ಯೋಗ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವಂತಾಗಲು ‘ಸರೋಜಿನಿ ಮಹಿಷಿ ಪರಿಷ್ಕೃತ ವರದಿಯ ಶಿಫಾರಸು’ಗಳನ್ನು ಸದನದಲ್ಲಿ ಮಂಡಿಸಿ, ಕಾನೂನು ಬಲ ತಂದುಕೊಡಬೇಕು’ ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ. ‘ಖಾಸಗಿ ಕಂಪನಿಗಳಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇ 50 ರಷ್ಟು ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಲ್ಲಿ ಶೇ 75 ರಷ್ಟು ಮೀಸಲಾತಿ ಕಲ್ಪಿಸುವ ಬಗ್ಗೆ ಸರ್ಕಾರದ ನಡೆ ಸ್ವಾಗತಾರ್ಹ. ಆದರೆ, ಸರ್ಕಾರದ ಈ ನಿರ್ಧಾರದ ಬಗ್ಗೆ ಕೆಲವು ಉದ್ಯಮಿಗಳು ಅಪಸ್ವರ ಎತ್ತಿರುವುದು ದುರದೃಷ್ಟಕರ. ಉದ್ಯಮಿಗಳ ಮಾತು ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ’ ಎಂದು ಹೇಳಲಾಗಿದೆ.

Jiten®
Pyramid Vaastu®
3-DAYS CERTIFICATE COURSE IN BENGALURU
Explore mystic powers of Pyramid Vaastu to enhance health, peace & prosperity. Also get know-how for personal and professional practice. Learn techniques to correct Vaastu defects without physical shifting or breaking, from 'Jiten' Certified Master. World-class teaching methods and presentations. Enriched with new ideas & practical tips for personal, financial & spiritual growth. Includes a special PyraVaastu start-up kit (3 Full days, Timing: 10 to 5 pm with Lunch & Tea). Lecture in English Language.
DATE: 23-24-25 AUGUST AT: FAIRFIELD MARRIOTT, RAJAJI NAGAR, BENGALURU
Call for FREE Leaflet: Bengaluru: 9824179954, 9590006434

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮತ್ತು ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಿ ಗೌರವಿಸಲಾಯಿತು

ಒಕ್ಕಲಿಗರ ಸಂಘದಿಂದ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಕ್ಕಲಿಗರ ಸಂಘವು ರಾಜಕಾರಣಿಗಳಿಗೆ ಬುದ್ಧಿ ಹೇಳುವ ಮಟ್ಟದಲ್ಲಿ ಇರಬೇಕು. ರಾಜಕಾರಣಿಗಳಿಂದ ಬುದ್ಧಿಹೇಳಿಸಿಕೊಳ್ಳುವ ಸ್ಥಿತಿಗೆ ಹೋಗಬಾರದು’ ಎಂದು ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಹೇಳಿದರು.

ರಾಜ್ಯ ಒಕ್ಕಲಿಗರ ಸಂಘವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಂಘದ ಸದಸ್ಯರು, ಪದಾಧಿಕಾರಿಗಳೆಲ್ಲರೂ ಸಂಘದ ಏಳಿಗೆಗೆ ದುಡಿಯಬೇಕು. ಒಕ್ಕಲಿಗರ ಸಂಘವು ಇತರ ಸಂಘಗಳಿಗೆ ಮಾದರಿಯಾಗಿ ಇರುವಂತೆ ಮಾಡಬೇಕು’ ಎಂದರು.

ಸಂಘದ ಅಧ್ಯಕ್ಷ ಮತ್ತು ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ‘ಸಂಘದ ಅಧೀನದಲ್ಲಿರುವ ಬೆಂಗಳೂರು ತಾಂತ್ರಿಕ ಶಿಕ್ಷಣ ಸಂಸ್ಥೆಗೆ (ಬಿಐಟಿ) ಸ್ವಾಯತ್ತ ಸ್ಥಾನಮಾನ ದೊರೆತಿದೆ. ಸೀಟುಗಳ ಸಂಖ್ಯೆ 700ರಿಂದ 1,100ಕ್ಕೆ ಹೆಚ್ಚಳವಾಗಿದೆ. ಮೈಸೂರು ರಸ್ತೆಯಲ್ಲಿ ಬಿಐಟಿಯ ಎರಡನೇ ಕ್ಯಾಂಪಸ್ ಆರಂಭಿಸಲಾಗುತ್ತದೆ’ ಎಂದು ಹೇಳಿದರು.

ಸಂಘದ ಗೌರವಾಧ್ಯಕ್ಷ ಎಂ.ಪುಟ್ಟಸ್ವಾಮಿ, ಉಪಾಧ್ಯಕ್ಷ ಆರ್.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಸಿ.ದೇವರಾಜ್, ಸಹಾಯಕ ಕಾರ್ಯದರ್ಶಿ ಆರ್.ಹನುಮಂತರಾಯಪ್ಪ, ಖಜಾಂಚಿ ಎಂ.ಎಸ್. ಉಮಾಪತಿ, ಇತರ ಪದಾಧಿಕಾರಿಗಳು ಮತ್ತು ಒಕ್ಕಲಿಗರ ಸಂಘದ ವಿವಿಧ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಡಿಸಿಇಟಿ: ಆಯ್ಕೆಗೆ ನಾಳೆಯವರೆಗೆ ಅವಕಾಶ

ಬೆಂಗಳೂರು: ಎಂಜಿನಿಯರಿಂಗ್ ಮೂರನೇ ಸೆಮಿಸ್ಟರ್ ಪ್ರವೇಶಕ್ಕೆ ಸೀಟು ಹಂಚಿಕೆಯಾದ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಆಯ್ಕೆ ನಮೂದಿಸಲು ಆ. 8ರವರೆಗೆ ಅವಕಾಶ ನೀಡಲಾಗಿದೆ.

ಮಳೆ ಕಾರಣಕ್ಕೆ ಶುಲ್ಕ ಪಾವತಿ ಸೇರಿದಂತೆ ಕೆಲ ಸಮಸ್ಯೆಗಳು ಎದುರಾದ ಕಾರಣ ದಿನಾಂಕ ವಿಸ್ತರಿಸಲಾಗಿದೆ. ಹಾಗಾಗಿ, ಎರಡನೇ ಸುತ್ತಿನ ಸೀಟು ಹಂಚಿಕೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಸದ್ಯದಲ್ಲೇ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಮೊದಲ ಸುತ್ತಿನ ವಿದ್ಯಾರ್ಥಿಗಳು ಆ. 8ರಳಗೆ ಚಲನ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಶುಲ್ಕ ಪಾವತಿಗೆ ಆ.9ರವರೆಗೆ ಅವಕಾಶ ಇರುತ್ತದೆ. ಆ.10ರೊಳಗೆ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು. ವಾಸ್ತುಶಿಲ್ಪಶಾಸ್ತ್ರಕ್ಕೆ ಪ್ರವೇಶ ಪಡೆಯುವವರು ಆ. 8ರ ಒಳಗೆ ಪ್ರಾಧಿಕಾರಕ್ಕೆ ದಾಖಲೆಗಳನ್ನು ಸಲ್ಲಿಸಿ, ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಸಂಚಾರಿ ವಾಹನದಲ್ಲಿ ನೇತ್ರ ತಪಾಸಣೆ ನಡೆಸಲಾಯಿತು

ಕಣ್ಣಿನ ಆರೈಕೆಗೆ ಸಂಚಾರಿ ವಾಹನ ದೇಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್ಕಾನ್ ಇಂಡಿಯಾ ಸಂಸ್ಥೆಯು ಕೊಳೆಗೇರಿ ನಿವಾಸಿಗಳಿಗೆ ಉತ್ತಮ ಗುಣಮಟ್ಟದ ಕಣ್ಣಿನ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಸಂಚಾರಿ ಕಣ್ಣಿನ ಆರೈಕೆ ವಾಹನವನ್ನು ಸೈಟ್‌ಸೇವರ್ಸ್ ಇಂಡಿಯಾ ಸಂಸ್ಥೆಗೆ ದೇಣಿಗೆಯಾಗಿ ನೀಡಿದೆ.

ಜಯನಗರದ ಬೆಂಗಳೂರು ಮಧುಮೇಹ ಮತ್ತು ಕಣ್ಣಿನ ಆಸ್ಪತ್ರೆಯಲ್ಲಿ ಸೋಮವಾರ ವಾಹನ ಹಸ್ತಾಂತರ ಕಾರ್ಯಕ್ರಮ ನಡೆಯಿತು.

‘ಆಲ್ಕಾನ್ ಇಂಡಿಯಾದ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಯೋಜನೆಯ ಭಾಗವಾಗಿ ಈ ವಾಹನವನ್ನು ದೇಣಿಗೆಯಾಗಿ ನೀಡಲಾಗಿದೆ. ಬೆಂಗಳೂರು ನಗರದ ಕೊಳೆಗೇರಿಗಳಲ್ಲಿ ವಾಸಿಸುವ ಏಳು ಸಾವಿರ ಜನರಿಗೆ ಉತ್ತಮ ಗುಣಮಟ್ಟದ ಕಣ್ಣಿನ ಆರೈಕೆ ನೀಡುವುದೇ ಸಂಸ್ಥೆಯ ಉದ್ದೇಶ’ ಎಂದು ಸಂಸ್ಥೆಯ ಮುಖ್ಯಸ್ಥ ಅಮರ್ ವ್ಯಾಸ್ ಹೇಳಿದರು.

‘ಸಂಚಾರಿ ವಾಹನದಲ್ಲಿ ಅತ್ಯಾಧುನಿಕ ಉಪಕರಣಗಳ ಮೂಲಕ ಕಣ್ಣಿನ ಸಮಗ್ರ ಪರೀಕ್ಷೆ ನಡೆಯಲಿದೆ. ದೃಷ್ಟಿ ದೋಷಗಳನ್ನು ಪತ್ತೆ ಮಾಡುವುದರ ಜೊತೆಗೆ ಸಾಮಾನ್ಯ ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಹೆಚ್ಚಿನ ಸಮಸ್ಯೆಗಳಿದ್ದಲ್ಲಿ ಚಿಕಿತ್ಸೆಗೆ ರೋಗಿಗಳನ್ನು ಶ್ರದ್ಧಾ ಐ ಕ್ಲಿನಿಕ್ ಟ್ರಸ್ಟ್‌ಗೆ ಶಿಫಾರಸು ಮಾಡಲಾಗುತ್ತದೆ. ಅಲ್ಲಿ ರೋಗಿಯ ಸಾಮಾಜಿಕ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಉಚಿತ ಚಿಕಿತ್ಸೆ ಅಥವಾ ಸಹಾಯಧನ ನೀಡಲಾಗುತ್ತದೆ’ ಎಂದರು.

‘ಎಚ್‌ಎಸ್‌ಆರ್ ಲೇಔಟ್, ಮಡಿವಾಳ, ಕೋರಮಂಗಲ, ಕುಮಾರಸ್ವಾಮಿ ಲೇಔಟ್ ಮತ್ತು ಜಯನಗರ, ಅಬ್ಬಿಗೆರೆ, ಅಮೃತಹಳ್ಳಿ, ದಾಸರಹಳ್ಳಿ, ಯಲಹಂಕ, ಹೆಬ್ಬಾಳ, ಆವಲಹಳ್ಳಿ, ದೊಮ್ಮಸಂದ್ರ, ಬಿದರಹಳ್ಳಿ, ಬಸವೇಶ್ವರನಗರ, ಚಂದ್ರಾ ಲೇಔಟ್, ಕೆಂಗೇರಿ, ಮಹಾಲಕ್ಷ್ಮಿ ಲೇಔಟ್, ಮತ್ತೀಕೆರೆ ಪ್ರದೇಶದಲ್ಲಿ ಸಂಚರಿಸಿ ಸೇವೆ ನೀಡಲಿದೆ’ ಎಂದರು.

ಸೈಟ್‌ಸೇವರ್ಸ್ ಇಂಡಿಯಾದ ಸಿಇಒ ಆರ್.ಎನ್. ಮೊಹಾಂತಿ, ಶ್ರದ್ಧಾ ಐ ಕೇರ್ ಟ್ರಸ್ಟ್‌ನ ಡಾ. ಗಣೇಶ್ ಭಾಗವಹಿಸಿದ್ದರು.

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

EXTRACT OF STATEMENT OF UNAUDITED FINANCIAL RESULTS FOR THE QUARTER ENDED JUNE 30, 2024

(₹. in Lakhs)

Sr. No.	Particulars	STANDALONE			CONSOLIDATED		
		Quarter ended		Year ended	Quarter ended		Year ended
		June 30, 2024 Unaudited	June 30, 2023 Unaudited	March 31, 2024 Audited	June 30, 2024 Unaudited	June 30, 2023 Unaudited	March 31, 2024 Audited
1	Total income from operations	13,440	11,878	56,528	13,445	11,879	56,534
2	Net Profit / (Loss) for the period (before Tax, Exceptional and/or Extraordinary items)	227	210	1,517	200	183	1,408
3	Net Profit / (Loss) for the period before tax (after Exceptional and/or Extraordinary Items)	227	210	1,517	200	183	1,408
4	Net Profit / (Loss) for the period after tax (after Exceptional and/or Extraordinary Items)	227	210	1,517	193	183	1,408
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	231	212	(839)	197	185	(948)
6	Equity Share Capital	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA
8	Earnings Per Share (EPS) (₹.)						
	(a) Basic EPS before extra ordinary items (not annualised)	0.34	0.32	2.28	0.29	0.28	2.12
	(b) Diluted EPS before extra ordinary items (not annualised)	0.34	0.32	2.28	0.29	0.28	2.12
	(c) Basic EPS after extra ordinary items (not annualised)	0.34	0.32	2.28	0.29	0.28	2.12
	(d) Diluted EPS after extra ordinary items (not annualised)	0.34	0.32	2.28	0.29	0.28	2.12

NOTE:

1. The above unaudited standalone and consolidated financial results have been reviewed by the Audit Committee and approved by the Board of Directors at its meeting held on August 06, 2024.
2. The standalone and consolidated financial results of the Company for the quarter ended June 30, 2024 have been subject to limited review by its Statutory auditors.
3. The above is an extract of the detailed format of the unaudited financial results for the quarter ended June 30, 2024 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the unaudited financial results are available on the stock exchange websites. (www.bseindia.com, www.nseindia.com) and also on the company's website (https://www.kirloskarelectric.com/investors/investors-information/financial.html)

Place : Bengaluru
Date : August 06, 2024

Sd/-
Vijay R Kirloskar
Executive Chairman

3M INDIA LIMITED

CIN: L31300KA1987PLC013543, Regd Office: 48-51, Electronics City, Hosur Road, Bengaluru - 560100 Website: www.3m.com/in

Extract of the Standalone and Consolidated Financial Results for the quarter ended 30 June 2024

(Rs. in Lakhs, except per share data, unless otherwise stated)

Particulars	Standalone			Consolidated		
	3 months ended 30 June 2024 (Unaudited)	3 months ended 30 June 2023 (Unaudited)	12 months ended 31 March 2024 (Audited)	3 months ended 30 June 2024 (Unaudited)	3 months ended 30 June 2023 (Unaudited)	12 months ended 31 March 2024 (Audited)
Total income from operations (including other income)	1,01,341.09	98,969.02	3,99,423.42	1,06,832.74	1,06,482.47	4,26,765.33
Net Profit for the period (before tax, Exceptional and / or Extraordinary items)	19,671.30	15,654.16	71,830.60	21,096.51	17,326.12	78,121.42
Net Profit for the period before tax (after Exceptional and / or Extraordinary items)	19,671.30	15,654.16	71,830.60	21,096.51	17,326.12	78,121.42
Net Profit for the period after tax	14,648.13	11,666.94	53,627.17	15,714.95	12,921.18	58,341.68
Total comprehensive income for the period [Comprising Profit / (Loss) for the period (after tax) and other comprehensive income (after tax)]	14,616.54	11,678.05	53,500.82	15,681.62	12,931.42	58,208.36
Equity share capital	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)			2,35,893.06			2,13,563.83
Earnings per share (in Rs.) (of Rs. 10/- each)						
a) Basic (in Rs.)	130.03	103.57	476.05	139.50	114.70	517.90
b) Diluted (in Rs.)	130.03	103.57	476.05	139.50	114.70	517.90

Notes:

1. The above unaudited standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and thereafter approved by the Board of Directors at their meeting held on 6 August 2024.
2. The above is an extract of the detailed format for the unaudited financial results for the quarter ended 30 June 2024 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter ended 30 June 2024 are available on the BSE Limited website (www.bseindia.com), the National Stock Exchange India Limited website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

By Order of the Board
For 3M India Limited

Place: Bengaluru
Date: 06 August 2024

Ramesh Ramadurai
Managing Director

ತಂತ್ರಜ್ಞಾನ



ಬರುತ್ತಿದ್ದಾರೆ 'ಎಐ' ದಲ್ಲಾಳಿಗಳು!

ಕೃಷ್ಣ ಭಟ್

ದಲ್ಲಾಳಿಗಳು ಎಂದ ತಕ್ಷಣ ನಮ್ಮ ತಲೆಯೊಳಗೊಂದು ಋಣಾತ್ಮಕ ಚಿತ್ರಣ ಬಂದು ಕೂರುತ್ತದೆ. ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡಿಸಿಕೊಳ್ಳಲು ಬೇಕಾಗುವ ದಲ್ಲಾಳಿಗಳು, ರಿಯಲ್ ಎಸ್ಟೇಟ್ ವಲಯದಲ್ಲಿರುವ ದಲ್ಲಾಳಿಗಳು ಎಂದೇ ನಾವು ಭಾವಿಸುತ್ತೇವೆ. ಆದರೆ, ಬಹುತೇಕ ಇದೇ ರೀತಿಯ ಕೆಲಸವನ್ನು ಮಾಡಿಯೂ, ನಮ್ಮ ಕೆಲಸವನ್ನು ಹಗುರವಾಗಿಸುವ ದಲ್ಲಾಳಿಗಳು ಈಗ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಕಾಲದಲ್ಲಿ ಮುನ್ನೆಲೆಗೆ ಬರುತ್ತಿದ್ದಾರೆ. ಇವರು ಮನುಷ್ಯರಲ್ಲ. ಆದರೆ ಇವರ ಹಿಂದೆ ಮನುಷ್ಯರಿರುತ್ತಾರೆ!

ಜನರೇಟಿವ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಂದ ಮೇಲಂತೂ ಈ ಏಜೆಂಟ್‌ಗಳ ಮಹತ್ವ ಇನ್ನಷ್ಟು ಹೆಚ್ಚಾಗಿದೆ. ಈಗಾಗಲೇ ಜನರೇಟಿವ್ ಎಐ ಒಂದು ಅಡಿಪಾಯವನ್ನು ಹಾಕಿಕೊಟ್ಟಿದೆ. ಈ ಅಡಿಪಾಯವನ್ನು ಆಧರಿಸಿ, ಇತರ ಸಂಸ್ಥೆಗಳು ಬೇರೆ ಬೇರೆ ಅಪ್ಲಿಕೇಶನ್‌ಗಳನ್ನು ರೂಪಿಸುತ್ತಾರೆ. ಇವು ಮೊಬೈಲ್ ಆ್ಯಪ್‌ಗಳು, ಕಂಪ್ಯೂಟರ್ ಅಪ್ಲಿಕೇಶನ್‌ಗಳು ಮಾತ್ರ ಆಗಬೇಕೆಂದೇನಿಲ್ಲ. ಸಣ್ಣ ಪ್ರಾಡಕ್ಟ್ ಕೂಡ ಆಗಿರಬಹುದು. ಆದರೆ, ನಮಗೆ ನಮ್ಮ ಸಣ್ಣ ಸಣ್ಣ ಅಗತ್ಯಗಳನ್ನು ಪೂರೈಸುವುದಕ್ಕೆ, ಸಣ್ಣ ಸಣ್ಣ ಕೆಲಸವನ್ನು ಮಾಡಿಕೊಡುವುದಕ್ಕೆ ಸಹಾಯ ಮಾಡುತ್ತವೆ. ಇವುಗಳನ್ನು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಜಗತ್ತು ಏಜೆಂಟ್‌ಗಳು ಎಂದು ಕರೆಯುತ್ತದೆ.

'ಕತ್ತಿಗೆ ನೇತುಹಾಕಿಕೊಳ್ಳುವ ಸರವೊಂದರ ಪದಕಕ್ಕೆ ಕಂಪನಿಯೊಂದು ಹೊಸರೂಪ ಕೊಡುತ್ತದೆ. ಇದರಲ್ಲಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅನ್ನು ಸೇರಿಸಲಾಗಿದೆ. ಇದು ನಮ್ಮ ಹೃದಯ ಬಡಿತ ಸೇರಿದ ಹಾಗೆ ಎಲ್ಲ ಆರೋಗ್ಯ ಮಾಹಿತಿಯನ್ನೂ ಸಂಗ್ರಹಿಸಿ ಕೊಡುತ್ತದೆ. ಈ ಚೈನ್ ಮತ್ತು ಪದಕ ನಮ್ಮ ದೇಹಕ್ಕೆ ಅಂಟಿಕೊಂಡೇ ಇರುತ್ತದೆ. ಮಲಗುವಾಗಲೂ ನಾವು ಇದನ್ನು ತೆಗೆಯುವುದಿಲ್ಲ. ಹೀಗಾಗಿ, ಇದರ ಮಾಹಿತಿ ನಿಖರವಾಗಿರುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಎಐ ಏಜೆಂಟ್‌ಗಳು ಹೊಸ ಹೊಸ ಉತ್ಪನ್ನಗಳನ್ನು ಹೊರತರುತ್ತವೆ. ಇವು ಮನುಷ್ಯನ ಬದುಕನ್ನು ಇನ್ನಷ್ಟು ಸುಲಲಿತವಾಗಿಸುತ್ತದೆ. ಜೊತೆಗೆ, ನಮ್ಮ ಉತ್ಪಾದಕತೆಯೂ ಹೆಚ್ಚುತ್ತದೆ' ಎನ್ನುತ್ತಾರೆ ಮರ್ಸಿಡಿಸ್ ಸೊರಿಯಾ.

ಜನರೇಟಿವ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನಲ್ಲಿ ಆಗುತ್ತಿರುವ ಬದಲಾವಣೆ, ಬ್ಯುಸಿನೆಸ್‌ನಲ್ಲಿ ಇದರ ಬಳಕೆ ಹಾಗೂ ಭವಿಷ್ಯದಲ್ಲಿ ಈ ವಲಯದ ಸಾಧ್ಯತೆಗಳ ಬಗ್ಗೆ ಮರ್ಸಿಡಿಸ್ ಸೊರಿಯಾ ಬೆಂಗಳೂರಿನ ಐಐಎಸ್‌ಸಿಯಲ್ಲಿ ಅಮೆರಿಕದ ರಾಯಭಾರ ಕಚೇರಿ ಹಮ್ಮಿಕೊಂಡಿದ್ದ ಸಂವಾದದಲ್ಲಿ ಅವರು, ಈ ಜನರೇಟಿವ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ ಏಜೆಂಟ್‌ಗಳು ಎಷ್ಟು ಹೆಚ್ಚು ಮಹತ್ವ ವಹಿಸುತ್ತವೆ ಎಂಬ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಅಷ್ಟೇ ಅಲ್ಲ, ನಾವು ಈಗ ಬಳಸುತ್ತಿರುವ ಮೊಬೈಲ್ ಫೋನ್‌ಗಳಾಗಲಿ, ಲ್ಯಾಪ್‌ಟಾಪ್, ಟ್ಯಾಬ್‌ಗಳಾಗಲೀ... ಈ ಜೆನ್ ಎಐ ಬಳಸಿಕೊಂಡು ಮುಂದಿನ ದಿನಗಳಲ್ಲಿ ಹುಟ್ಟಿಕೊಳ್ಳುವ ಏಜೆಂಟ್‌ಗಳ ದಯೆಯಿಂದ ಇನ್ನಷ್ಟು ಸಣ್ಣದಾಗುತ್ತ ಸಾಗುತ್ತವೆ. ನಮ್ಮ ಕಿಸೆಯಲ್ಲಿರುವ ಫೋನು ಚಿಕ್ಕದಾಗುತ್ತ ಸಾಗಬಹುದು. ಏಕೆಂದರೆ, ನಾವು ಕೈಯಿಂದ ಮಾಡುವ ಬಹುತೇಕ ಕೆಲಸವನ್ನು ಮುಂದೆ ಈ ಜೆನ್ ಎಐ ಮಾಡುತ್ತದೆ.

ಅಷ್ಟೇ ಯಾಕೆ, ಈಗ ಒಂದು ವೆಬ್‌ಸೈಟ್ ತಯಾರಿಸಿ, ಅದನ್ನು ವಿವಿಧ ಭಾಷೆಗಳಲ್ಲಿ ಒಂದೇ ಕ್ಲಿಕ್‌ನಲ್ಲಿ ಓದುವಂತೆ ಮಾಡಬಲ್ಲ APIಗಳು ಇರುವ ಹಾಗೆಯೇ, ನಮಗೆ ಬೇಕಾದ ಯಾವುದೋ ಒಂದು ಸಾಧನಕ್ಕೋ, ಅಪ್ಲಿಕೇಶನ್‌ಗೋ ಯಾವುದಾದರೂ ಒಂದು ಕಂಪನಿಯ ಜೆನ್ ಎಐ ಅನ್ನು ಇಳಿಸಿಕೊಂಡು ನಮಗೆ ಬೇಕಾದ ಕೆಲಸ ಮಾಡುವಂತೆ ಅದನ್ನು ತಿದ್ದಬಹುದು. ಆಗ ಇದೂ ಒಂದು ಏಜೆಂಟ್ ರೀತಿ ಕೆಲಸ ಮಾಡುತ್ತದೆ. ಹೀಗಾಗಿ, ಇಡೀ ಜೆನ್ ಎಐ ವಲಯದ ಬೆಳವಣಿಗೆ ಮುಂದಿನ ದಿನಗಳಲ್ಲಿ ಈ ಏಜೆಂಟರನ್ನೇ ಅವಲಂಬಿಸಿದೆ.

ಇದು ಇನ್ನೊಂದು ರೀತಿಯ ಅನುಕೂಲವೂ ಹೌದು. ಏಕೆಂದರೆ, ಇದರಿಂದಾಗಿ ಯಾವುದೇ ಒಂದು ಕಂಪನಿಯ ಬಳಿಯೇ ಈ ಜೆನ್ ಎಐ ಎಂಬ ದೈತ್ಯನ ಮೂಗುದಾರ ಇರುವುದಿಲ್ಲ. ಒಂದು ವೇಳೆ, ಒಂದೇ ಕಂಪನಿಯ ಬಳಿಯೇ ಇಡೀ ಜೆನ್ ಎಐ ಎಂಜಿನ್‌ನ ಸೂತ್ರ ಇದ್ದರೆ, ಅದು ಅನಾಹುತಕ್ಕೆ ದಾರಿ. ಸದ್ಯಕ್ಕೆ ಮೂರು ಕಂಪನಿಗಳು ಈ ವಲಯದಲ್ಲಿವೆ. ಮುಂದಿನ ದಿನಗಳಲ್ಲಿ ಇದರ ಅಡಿಪಾಯವನ್ನು ಆಧರಿಸಿ ಇನ್ನಷ್ಟು ಕಂಪನಿಗಳು ತಮ್ಮದೇ ಸಣ್ಣ ಸಣ್ಣ ಕೆಲಸ ಮಾಡುವ ಏಜೆಂಟರನ್ನು ಸೃಷ್ಟಿಸಿಕೊಳ್ಳುತ್ತವೆ. ಈ ಮೂಲಕ ಈ ಕ್ಷೇತ್ರ ಇನ್ನಷ್ಟು ವ್ಯಾಪ್ತವಾಗುತ್ತ ಸಾಗುತ್ತದೆ.

ಅಷ್ಟೇ ಅಲ್ಲ, ಹೀಗೆ ಹೊಸ ಹೊಸ ಏಜೆಂಟರುಗಳು ಎಂಬ ಬಿಳಲುಗಳು ಈ ಜೆನ್ ಎಐ ಎಂಬ ಬೃಹತ್ ಗಾತ್ರದ ಮರದ ಕೆಳಗೆ ಹುಟ್ಟಿಕೊಳ್ಳುವ ಮೂಲಕ ಅದೊಂದು ಜಾಲವಾಗಿ, ಬಂಧವಾಗಿ ನಮ್ಮನ್ನು ಬೆಸೆಯುತ್ತದೆ. ಹೀಗೆ ಈ ವಲಯ ಯಾರದೋ ಒಬ್ಬರ ನಿಯಂತ್ರಣಕ್ಕೆ ಸಿಗದೇ ವಿಕೇಂದ್ರೀಕರಣವೂ ಆಗುತ್ತದೆ. ಜೊತೆಗೆ, ಜನರ ವೈವಿಧ್ಯಮಯ ಬಳಕೆಗೂ ಇದರ ಪ್ರಯೋಜನ ಸಿಗುವಂತಾಗುತ್ತದೆ ಎಂದು ಭವಿಷ್ಯದ ಬಗ್ಗೆ ಸೋರಿಯಾ ಹೇಳುತ್ತಾರೆ. ಸರ್ಕಾರಗಳಿಗೂ ಇದೇ ಬೇಕಾಗಿದೆ. ಯಾವುದೇ ಒಂದು ಕಂಪನಿ ಇದನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಏಕಸ್ವಾಮ್ಯ ಸಾಧಿಸುವುದರ ಬದಲಿಗೆ, ಹಲವು ಕಂಪನಿಗಳು ಇದರಲ್ಲಿ ಭಾಗವಹಿಸಿ, ತನ್ನದೇ ಆವೃತ್ತಿಯನ್ನು ಬೆಳೆಸುತ್ತ ಸಾಗಿದಾಗ ಜನರ ಗೌಪ್ಯತೆಯ ಉಲ್ಲಂಘನೆ ಹಾಗೂ ಇತರ ಅಪತ್ತಿನ ಸಾಧ್ಯತೆಯೂ ಕಡಿಮೆಯಾಗುತ್ತದೆ. ಈ ನಿಟ್ಟಿನಲ್ಲಿ, ಮುಂದಿನ ದಿನಗಳಲ್ಲಿ ಎಐ ಬಳಸಿಕೊಂಡು ಹೊಸ ಹೊಸ ಏಜೆಂಟರುಗಳು ನಮ್ಮೆದುರು ರೂಪವನ್ನು ತಾಳುವ ದಿನಗಳು ದೂರವಿಲ್ಲ.

ರೈತಮಿತ್ರ 'ಕೃಷಿ ಸೆಂಟ್ರಲ್ ಆ್ಯಪ್'



ಪವಿತ್ರಾ ಭಟ್

ನಮ್ಮ ರೈತರು ಕನಿಷ್ಠ ಸೌಲಭ್ಯಗಳಲ್ಲಿಯೇ ಬದುಕುವವರು; ಕಷ್ಟಗಳ ನಡುವೆಯೇ ದುಡಿಯುವವರು. ಹೆಚ್ಚು ಕೆಲಸ, ಕಡಿಮೆ ಆದಾಯ ನಮ್ಮ ರೈತರ ಸ್ಥಿತಿ. ಇಂದಿನ ಡಿಜಿಟಲ್ ಯುಗದಲ್ಲೂ ಅವರು ಹಲವು ಸೌಲಭ್ಯಗಳಿಂದ ವಂಚಿತರೇ ಹೌದು. ರೈತರು ಪ್ರತಿಯೊಂದು ಸೌಲಭ್ಯಕ್ಕೂ ಅಲೆದಾಡುವ ಸ್ಥಿತಿಯಿದೆ. ಇಂಥ ಅಲೆದಾಟವನ್ನು ತಪ್ಪಿಸುವ ಉದ್ದೇಶದಿಂದ ಹಾಗೂ ರೈತರಿಗೆ ಡಿಜಿಟಲ್ ಯುಗದ ಪರಿಚಯ ಮಾಡಿಸಿ ಕೆಲಸಗಳನ್ನು ಸುಲಭವಾಗಿಸುವ ನಿಟ್ಟಿನಲ್ಲಿ 'ಕೃಷಿ ಸೆಂಟ್ರಲ್' ಹೆಸರಿನ ರೈತಸ್ನೇಹಿ ಆ್ಯಪ್‌ವೊಂದನ್ನು ರೈತಮಿತ್ರರೊಬ್ಬರು ಅಭಿವೃದ್ಧಿಪಡಿಸಿದ್ದಾರೆ. ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ವಿನಯ್ ಶಿವಪ್ಪ ಎನ್ನುವವರು ಈ ಆ್ಯಪ್ ಅಭಿವೃದ್ಧಿಪಡಿಸಿದ್ದಾರೆ. ಐಟಿ ಉದ್ಯೋಗದಲ್ಲಿರುವ ವಿನಯ್ ಶಿವಪ್ಪ, ತಮ್ಮ ಭಾಗದ ರೈತರ ಬವಣೆಯನ್ನು ನೀಗಬೇಕೆಂದು ಕೃಷಿ ಆಧಾರಿತ ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದ್ದಾರೆ.

ಆ್ಯಪ್ ಬಳಕೆ ಹೇಗೆ?

ಕೃಷಿ ಸೆಂಟ್ರಲ್ ಆ್ಯಪ್ ಎಲ್ಲಾ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಪ್ಲೇಸ್ಟೋರ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಈ ಆ್ಯಪ್ ಲಭ್ಯವಿದೆ.

ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡುತ್ತಿದ್ದಂತೆ ನಿಮ್ಮ ಮೊಬೈಲ್‌ಗೆ ಒಟಿಪಿ ಬರುತ್ತದೆ. ಅದನ್ನು ನಮೂದಿಸಿದರೆ ನೋಂದಣಿ ಪ್ರಕ್ರಿಯೆ ಪುಟ ತೆರೆದುಕೊಳ್ಳುತ್ತದೆ. ಹೆಸರು, ಉದ್ಯೋಗ, ರಾಜ್ಯ, ಜಿಲ್ಲೆ, ಊರು ಆಯ್ಕೆ ಮಾಡಿ ನೀವು ಆ್ಯಪ್‌ಗೆ ಪ್ರವೇಶ ಪಡೆಯಬಹುದು.

ಲಾಗ್ ಇನ್ ಆಗುತ್ತಿದ್ದಂತೆ ಆ್ಯಪ್ ಬಳಕೆ ಹೇಗೆ ಮಾಡುವುದು ಎನ್ನುವ ಬಗ್ಗೆ ವಿಡಿಯೊವೊಂದು ಪ್ಲೇ ಆಗುತ್ತದೆ.

ಆ್ಯಪ್‌ನ ಮುಖಪುಟದಲ್ಲಿ ಮೊದಲು ನಿಮ್ಮ ಪ್ರದೇಶದಲ್ಲಿ ಬೆಳೆಯುವ ಬೆಳೆಗಳ ಅಂದಿನ ಮಾರುಕಟ್ಟೆ ದರಪಟ್ಟಿ ಕಾಣಿಸುತ್ತದೆ. ಉದಾಹರಣೆಗೆ, ಅಡಕೆ, ಕಾಳುಮೆಣಸು ಇತ್ಯಾದಿ.
ಜತೆಗೆ ರಾಜ್ಯದ ಎಲ್ಲಾ ಪ್ರಮುಖ ಮಾರುಕಟ್ಟೆಗಳಲ್ಲಿ ವಿವಿಧ ಬೆಳೆಗಳ ಮಾರುಕಟ್ಟೆಯ ದರವನ್ನೂ ನೋಡಬಹುದು. ನಂತರ ಯಾವ ಉತ್ಪನ್ನ, ಯಾವ ಪ್ರಾಣಿ ಮಾರಾಟಕ್ಕಿದೆ ಎಂಬುದನ್ನು ಗಮನಿಸಬಹುದು. ಉತ್ಪನ್ನಗಳ ಜತೆಗೆ ಅದರ ಬೆಲೆ, ಯಾವ ದಿನಾಂಕದಂದು ಪೋಸ್ಟ್ ಮಾಡಿರುವುದು ಹಾಗೂ ಯಾವ ಪ್ರದೇಶದಲ್ಲಿ ಲಭ್ಯವಿದೆ ಎನ್ನುವುದನ್ನು ತಿಳಿಯಬಹುದು. ಅದನ್ನು ಕ್ಲಿಕ್ ಮಾಡಿದರೆ ಮಾರಾಟಗಾರರ ವಿವರಗಳು ಸಿಗುತ್ತವೆ.

ಇಷ್ಟೆ ಅಲ್ಲದೆ, ರೈತರಿಗೆ ಉಪಯೋಗವಾಗುವಂತೆ ಕೃಷಿ ಸಂಬಂಧಿತ ಸುದ್ದಿಗಳು, ವಿಡಿಯೊಗಳು ಕೂಡ ದೊರೆಯುತ್ತವೆ. ಆ್ಯಪ್‌ನ ಬಲಭಾಗದಲ್ಲಿ ವಿಡಿಯೊ ಆಯ್ಕೆ ಇದೆ. ಇದನ್ನು ಕ್ಲಿಕ್ ಮಾಡಿದರೆ ಆ್ಯಪ್ ಬಳಸುವ ಬಗೆಯನ್ನು ಕನ್ನಡದಲ್ಲೇ ತಿಳಿಯಬಹುದು.

ಉತ್ಪನ್ನಗಳ ಮಾರಾಟ, ಕೊಳ್ಳುವಿಕೆ ಮಾತ್ರವಲ್ಲದೆ ಕೃಷಿ ಸಂಬಂಧಿತ ಸೇವೆಗಳನ್ನೂ ಈ ಆ್ಯಪ್ ಮೂಲಕ ಪಡೆಯಬಹುದು. ಉದಾಹರಣೆಗೆ, ಅಡಕೆಕೊಯ್ಲು, ಡ್ರೋನ್ ಸ್ಪ್ರೇ, ಸೋಲಾರ್ ಪಂಪ್‌ಸೆಟ್ ನಿಮಗೆ ಅಗತ್ಯವಿರುವ ಕೃಷಿ ಉತ್ಪನ್ನದ ವಿವಿಧ ಯಂತ್ರಗಳನ್ನು ಬಾಡಿಗೆಗೆ ಪಡೆಯಲೂ ಇದು ನೆರವಾಗುತ್ತದೆ.



ಕೃಷಿ ಸೆಂಟ್ರಲ್ ಆ್ಯಪ್

ಇದಲ್ಲದೆ ಪಶುವೈದ್ಯರು, ಬೋರ್ ಪಾಯಿಂಟ್ ನೋಡುವವರು, ಮಣ್ಣು ಪರೀಕ್ಷೆ ಮಾಡುವವರು, ತೆಂಗಿನಕಾಯಿ ಕೀಳುವವರು – ಹೀಗೆ ಹಲವು ಬಗೆಯ ಕೆಲಸಗಳಿಗೂ ಈ ಆ್ಯಪ್‌ನ ಮೂಲಕ ಜನರನ್ನು ಹೊಂದಿಸಿಕೊಳ್ಳಬಹುದು. ನಿಮ್ಮ ಬೆಳೆಗಳಿಗೆ ಕೀಟಬಾಧೆ ಕಾಡುತ್ತಿದ್ದರೆ ಅದರ ಬಗ್ಗೆ ಈ ಆ್ಯಪ್‌ನಲ್ಲಿ ವಿವರ ಹಂಚಿಕೊಂಡರೆ, ತಕ್ಷಣ ಕೃಷಿತಜ್ಞರು ನಿಮ್ಮ ಸಮಸ್ಯೆಗೆ ಪರಿಹಾರವನ್ನೂ ಸೂಚಿಸುತ್ತಾರೆ.

ನಿಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದಾದರೆ ಅದರ ಫೋಟೊ, ನೀವು ಮಾರಾಟ ಮಾಡುವ ಬೆಲೆ ಹಾಗೂ ಕಮೆಂಟ್ ಬಾಕ್ಸ್‌ನಲ್ಲಿ ಉಳಿದ ಮಾಹಿತಿಗಳನ್ನು ಸೇರಿಸಬಹುದು.

ನಿಮಗೆ ಅಗತ್ಯವಾದ ವಸ್ತುಗಳ ಲಭ್ಯತೆ ಎಲ್ಲಿದೆ ಎಂದು ತಿಳಿದುಕೊಳ್ಳಲು ಸರ್ಚ್ ಆಯ್ಕೆಗೆ ಹೋಗಿ 'ಖರೀದಿಗಾಗಿ' ಎನ್ನುವುದನ್ನು ಆಯ್ಕೆ ಮಾಡಿದರೆ ಯಾವೆಲ್ಲಾ ಉತ್ಪನ್ನಗಳಿವೆ ಎನ್ನುವುದನ್ನೂ ತಿಳಿಯಬಹುದು.

ಹೇಗೆ ಉಪಯೋಗ?

ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರು ತಮ್ಮ ಉತ್ಪನ್ನಗಳನ್ನು ಈ ಆ್ಯಪ್ ಮೂಲಕ ಮಾರಾಟ ಮಾಡಬಹುದು.
ಅದೇ ರೀತಿ ರೈತರಿಗೆ ಅಗತ್ಯವಿರುವ ಉತ್ಪನ್ನಗಳನ್ನು ಈ ಆ್ಯಪ್ ಮೂಲಕವೇ ಖರೀದಿಸಬಹುದು.
ಈ ಆ್ಯಪ್‌ನ ಬಳಕೆಯಿಂದ ಕೃಷಿ ಉತ್ಪನ್ನಗಳನ್ನು ಕೊಳ್ಳಲು/ಮಾರಾಟ ಮಾಡಲು ದಲ್ಲಾಳಿಗಳನ್ನು ಹುಡುಕಿಕೊಂಡು ಅಲೆಯಬೇಕಾಗಿಲ್ಲ. ಹೀಗಾಗಿ ರೈತರ ಸಮಯ, ಶ್ರಮ ಹಾಗೂ ಹಣದ ಉಳಿತಾಯವಾಗಲಿದೆ.

ಕೆಲವು ಕೃಷಿ ಉತ್ಪನ್ನಗಳನ್ನು ಹೆಚ್ಚು ದಿನ ಸಂಗ್ರಹಿಸಿಡಲು ಸಾಧ್ಯವಾಗದು. ಅಗತ್ಯವಿರುವವರಿಗೆ ತಕ್ಷಣ ಈ ಆ್ಯಪ್ ಮೂಲಕ ಅದನ್ನು ಮಾರಾಟ ಮಾಡಿ, ಉತ್ಪನ್ನಗಳು ಹಾಳಾಗುವುದನ್ನು ತಡೆಯಬಹುದು.

'ಆ್ಯಪ್‌ನ ಬಳಕೆ ಸುರಕ್ಷಿತವಾಗಿದೆ. 15 ಎಂಬಿ ಗಾತ್ರದ ಈ ಆ್ಯಪ್ ಅನ್ನು ಬಳಕೆದಾರ ಸ್ನೇಹಿಯಾಗಿಯೇ ರೂಪಿಸಲಾಗಿದೆ. ಉತ್ಪನ್ನಗಳ ನಿಖರತೆ ಬಗ್ಗೆ ಅನುಮಾನ ಬಂದಲ್ಲಿ ಅದನ್ನು ನಮ್ಮ ತಂಡ ಪರಿಶೀಲನೆಗೆ ಒಳಪಡಿಸುತ್ತದೆ. ನೇರವಾಗಿ ರೈತರಿಂದ ರೈತರನ್ನು ತಲುಪುವ ಉದ್ದೇಶದಿಂದ ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ' ಎನ್ನುತ್ತಾರೆ ವಿನಯ್ ಶಿವಪ್ಪ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ – 5.3

6) ಒಂದು ಸಮಾಂತರ ಶ್ರೇಢಿಯ ಮೊದಲ ಮತ್ತು ಕೊನೆಯ ಪದಗಳು ಕ್ರಮವಾಗಿ 17 ಮತ್ತು 350 ಆಗಿವೆ. ಸಾಮಾನ್ಯ ವ್ಯತ್ಯಾಸ 9 ಆದರೆ ಪದಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಮೊತ್ತ ಎಷ್ಟು?

ಪರಿಹಾರ: (..........ಹಿಂದಿನ ಸಂಚಿಕೆಯಿಂದ)

ನಮಗೆ ಗೊತ್ತಿರುವಂತೆ $S_n = \frac{n}{2}[a + l]$

$$S_{38} = \frac{38}{2}[17+350]$$
$$S_{38} = (19)(367)$$
$$S_{38} = 6973$$

ಅವುಗಳ ಮೊತ್ತ 6973

7) ಒಂದು ಸಮಾಂತರ ಶ್ರೇಢಿಯಲ್ಲಿ $d = 7$ ಮತ್ತು 22 ನೇ ಪದ 149 ಆದರೆ 22 ಪದಗಳವರೆಗಿನ ಮೊತ್ತವೇನು?

ಪರಿಹಾರ: ಇಲ್ಲಿ $a_{22} = 149$ $d = 7$

ನಮಗೆ ಗೊತ್ತಿರುವಂತೆ $a_n = a + (n-1)d$

$$a_{22} = a + (22 - 1)d$$
$$a_{22} = a + 21d$$
$$149 = a + (21)(7)$$
$$a + 147 = 149$$
$$a = 149 - 147 = 2$$

ನಮಗೆ ಗೊತ್ತಿರುವಂತೆ

$$S_n = \frac{n}{2}[2a + (n-1)d]$$
$$S_{22} = \frac{22}{2}[2(2) + (22-1)7]$$
$$S_{22} = (11)(4+147)$$
$$S_{22} = (11)(151)$$
$$S_{22} = 1661$$

ಒಂದು ಸಮಾಂತರ ಶ್ರೇಢಿಯಲ್ಲಿ $d = 7$ ಮತ್ತು 22 ನೇ ಪದ 149 ಆದರೆ 22 ಪದಗಳವರೆಗಿನ ಮೊತ್ತ 1661

8) ಒಂದು ಸಮಾಂತರ ಶ್ರೇಢಿಯ ಎರಡನೇ ಮತ್ತು ಮೂರನೇ ಪದಗಳು ಕ್ರಮವಾಗಿ 14 ಮತ್ತು 18 ಆದರೆ ಅದರ 51 ಪದಗಳವರೆಗಿನ ಮೊತ್ತವೇನು?

ಪರಿಹಾರ: ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

$a_2 = 14$ $a_3 = 18$ $d = a_3 - a_2$
$d = 18 - 14 = 4$

$$a_2 = a + d$$
$$14 = a + 4$$
$$a = 14 - 10$$
$$a = 10$$

51 ಪದಗಳವರೆಗಿನ ಮೊತ್ತ

$$S_{51}$$
$$S_n = \frac{n}{2}[2a + (n-1)d]$$
$$S_n = \frac{51}{2}[2xa + (51-1)d]$$
$$= \frac{51}{2}[2xa + (50d]$$
$$= 51(a + 25d)$$
$$= (51)(10 + 25x4)$$
$$= (51)(10 + 100)$$
$$= 5610$$

9) ಒಂದು ಸಮಾಂತರ ಶ್ರೇಢಿಯ 7 ಪದಗಳವರೆಗಿನ ಮೊತ್ತ 49 ಮತ್ತು 17 ಪದಗಳವರೆಗಿನ ಮೊತ್ತ 289. ಆದರೆ ಮೊದಲ n ಪದಗಳವರೆಗಿನ ಮೊತ್ತವೇನು?

ಪರಿಹಾರ: ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,
ಸಮಾಂತರ ಶ್ರೇಢಿಯ 7 ಪದಗಳವರೆಗಿನ ಮೊತ್ತ = 49

$$S_7 = 49$$
$$S_n = \frac{n}{2}[2a + (n-1)d]$$
$$S_n = \frac{7}{2}[2xa + (7-1)d]$$
$$\frac{7}{2}[2a + 6d] = 49$$
$$7(a + 3d) = 49$$
$$a + 3d = \frac{49}{7}$$
$$a + 3d = 7 \text{..........................} (1)$$

ಸಮಾಂತರ ಶ್ರೇಢಿಯ 17 ಪದಗಳವರೆಗಿನ ಮೊತ್ತ = 289

$$S_{17} = 289$$
$$S_{17} = 289$$
$$\frac{17}{2}[2a + (17-1)d] = 289$$
$$\frac{17}{2}[2a + 16d] = 289$$
$$17(a + 8d] = 289$$
$$a + 8d = \frac{289}{17}$$
$$a + 8d = 17 \text{..........................} (2)$$

ಸಮೀಕರಣ (2) ರಿಂದ (1)ನ್ನು ಕಳೆದಾಗ

$$5d = 10$$
$$d = 2$$

ಸಮೀಕರಣ (1) ರಿಂದ

$$a + 3(2) = 7$$
$$a + 6 = 7$$
$$a = 1$$

ಈಗ

$$S_n$$
$$S_n = \frac{n}{2}[2a + (n-1)d]$$
$$S_n = \frac{n}{2}[2x1 + (n-1)2]$$
$$= n[1 + n - 1]$$
$$= n(n)$$
$$= n^2$$

10) a_n ಈ ಕೆಳಗಿನಂತೆ ನಿರೂಪಿಸಲ್ಪಟ್ಟಾಗ $a_1, a_2, \ldots, an, \ldots$ ಇದು ಒಂದು ಸಮಾಂತರ ಶ್ರೇಢಿಯನ್ನು ಉಂಟುಮಾಡುತ್ತದೆ ಎಂದು ತೋರಿಸಿ (i) $a_n = 3 + 4n$ (ii) $a_n = 9 - 5n$

ಪರಿಹಾರ: (i) $a_n = 3 + 4n$

$n = 1,2,3,4$ ಹಾಕಿದಾಗ ಕ್ರಮವಾಗಿ ಕೆಳಗಿನದ್ದನ್ನು ಪಡೆಯುತ್ತೇವೆ

$$a_1 = 3 + 4(1) = 3 + 4 = 7$$
$$a_2 = 3 + 4(2) = 3 + 8 = 11$$
$$a_3 = 3 + 4(3) = 3 + 12 = 15$$
$$a_4 = 3 + 4(4) = 3 + 16 = 19$$
$$\therefore a_2 - a_1 = 11 - 7 = 4$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC CHEMISTRY

CHEMICAL KINETICS

39. What is Activation energy (E_a)?

Ans:- The minimum extra energy that the (average) normal reacting molecule should acquire to attain threshold energy i.e., to form products, upon collision is called activation energy (E_a) of the reaction.

Activation energy (E_a) = Threshold energy - average energy

40. How does the catalyst affect the activation energy of the reaction.

Ans:- A positive catalyst decreases the activation energy of the reaction and makes it faster. That is, if E_a is the activation energy of the reaction in the absence of the catalyst and Ea` is the activation energy of the reaction in the presence of the catalyst. Then Ea` < Ea.

41. The activation energy of the first order reaction at 300 K is 60 kJ mol^{-1}. In the presence of the catalyst, the activation energy gets lowered to 50 kJmol^{-1} at 300K. How many times the reaction rate changes in the presence of a catalyst at the same temperature?

Soln :– Let $k_1 = A.\, e^{-Ea/RT}$ and

$$k_2 = A.\, e^{-Ea(c)/RT}$$

$$\log\frac{k_2}{k_1} = \frac{E_a - E_a(c)}{2.303\,RT}$$

$$\log\frac{k_2}{k_1} = \frac{6000 - 5000}{2.303 \times 8.314 \times 300} = 1.741$$

$$\therefore \frac{k_2}{k_1} = 55.08$$

∴ Reaction rate increases by 55.08 times.

42. From a graph of log k versus $\frac{1}{T}$, slope of the graph was found to be 3.4 x 10^3. Calculate the energy of activation of the reaction.

Soln:- Arrhenius equation can be written as -

$$\log k = \log A - \frac{E_a}{2.303\,RT}$$

Hence, the graph of log k versus $\frac{1}{T}$ should be a straight line.

Its slope is $\frac{E_a}{2.303\,R}$

that is, $\frac{E_a}{2.303\,R}$ = slope

$$E_a = \text{slope} \times 2.303\,R = 3.4 \times 10^3 \times 2.303 \times 8.314$$
$$= 6.51 \text{ kJ / mol}$$

43. A first order reaction is 50% completed in 40 minutes. Calculate (i) rate constant and (ii) the time taken for its 90% completion.

Soln:- **Given that** - $t_{1/2} = 40$ min

$$k = \frac{0.693}{40} = 0.017325 \text{ min}^{-1}$$

$$t = \frac{2.303}{k} \times \log\frac{a}{(a-x)}$$

$$t = \frac{2.303}{0.017325} \times \log\frac{100}{10} = 132.93 \text{ min}$$

Rate constant = 0.017325 min^{-1}
Time for 90% completion = 132.93 min

44. A first order reaction is 60% completed in 80 minutes. Calculate –
(i) rate constant and
(ii) half life period of the reaction.

Soln:- **The rate constant k, is given by**

$$k = \frac{2.303}{t} \times \log\frac{a}{(a-x)}$$

$$\Rightarrow k = \frac{2.303}{80} \times \log\frac{100}{(100-60)}$$

$$= \frac{2.303}{80} \times \log\frac{100}{40}$$

$$= \frac{2.303}{80} \times 0.3979 = 0.01145 \text{ min}^{-1}$$

$$\text{and } t_{1/2} = \frac{0.693}{k} = \frac{0.693}{0.01145}$$

$$\therefore t_{1/2} = 60.52 \text{ min.}$$

45. In a first order reaction, show that the time taken for 75% completion of the reaction is twice the time taken for the 50% completion of the reaction.

Soln:- For 50% completion of the reaction,

$$t_1 = \frac{1}{k} \times 2.303 \times \log\frac{100}{50}$$
$$= \frac{1}{k} \times 2.303 \times \log 2$$

For 75% completion of the reaction,

$$t_2 = \frac{1}{k} \times 2.303 \times \log\frac{100}{25}$$
$$= \frac{1}{k} \times 2.303 \times \log 4 \qquad (\because 4 = 2^2)$$
$$= \frac{1}{k} \times 2.303 \times \log 2^2$$
$$= \frac{1}{k} \times 2.303 \times 2\log 2$$
$$\therefore t_2 = 2\left(\frac{1}{k} \times 2.303 \times \log 2\right)$$
$$\Rightarrow t_2 = 2t_1$$

46. What is the significance of the following terms - (i) Arrhenius factor, A (ii) $e^{-Ea/RT}$ in the Arrhenius equation $k = A.\, e^{-Ea/RT}$.

Soln:- (i) The Arrhenius factor, A is known as the frequency factor and is related to the number of binary molecular collisions per dm^3 per second. (ii) The term $e^{-Ea/RT}$ expresses the fraction of the collisions which becomes effective in a reaction.

47. Give different forms of the Arrhenius equation.

Ans:-

(Contd.......)

ಸಾವಿರಕ್ಕೂ ಹೆಚ್ಚು ಎಕರೆ ಅರಣ್ಯ ಒತ್ತುವರಿ

ಶಿವಮೊಗ್ಗ ಜಿಲ್ಲೆಯಲ್ಲಿ 24 ಪ್ರಕರಣ ಪತ್ತೆ ● ಸ್ವಯಂಪ್ರೇರಿತವಾಗಿ ತೆರವು ನೋಟಿಸ್‌ಗೆ ಸಿದ್ಧತೆ: ಸಿಸಿಎಫ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಸೂಚನೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಮೊದಲ ಹಂತದಲ್ಲಿ 30 ಎಕರೆಗಿಂತ ಹೆಚ್ಚಿನ ಅರಣ್ಯ ಒತ್ತುವರಿ ಗುರುತಿಸಿ ತೆರವುಗೊಳಿಸಲು ಅರಣ್ಯ ಇಲಾಖೆ ಪ್ರಕ್ರಿಯೆ ಆರಂಭಿಸಿದೆ.

ಮಲೆನಾಡಿನ ಪರಿಸರ ಸೂಕ್ಷ್ಮ ವಲಯದಲ್ಲಿ 24 ಕಡೆ ಇಂತಹ ಒತ್ತುವರಿ ಪ್ರಕರಣ ಗುರುತಿಸಲಾಗಿದೆ. 1,000 ಎಕರೆಗೂ ಹೆಚ್ಚು ಅರಣ್ಯ ಒತ್ತುವರಿ ಆಗಿದೆ. ಈ ಸಂಬಂಧ ನೋಟಿಸ್ ನೀಡಲು ಇಲಾಖೆ ಸಿದ್ಧತೆ ನಡೆಸಿದೆ.

'ಒತ್ತುವರಿ ಮಾಡಿಕೊಂಡವರೇ ಸ್ವಯಂ ಪ್ರೇರಿತವಾಗಿ ತೆರವು ಮಾಡಲು ಅವಕಾಶ ನೀಡಲಿದ್ದೇವೆ. ನಂತರ ನಾವೇ ತೆರವುಗೊಳಿಸಲಿದ್ದೇವೆ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ಟಿ. ಹನುಮಂತಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಎಸಿಎಫ್ ನ್ಯಾಯಾಲಯದಲ್ಲಿ 64 'ಎ' ಅಡಿ ಆದೇಶ ಹೊರಡಿಸಿದ,

ವಿಚಾರಣೆಗೆ ಬಾಕಿ ಇಲ್ಲದ ಪ್ರಕರಣ ಹಾಗೂ ನ್ಯಾಯಾಲಯದಿಂದ ತಡೆಯಾಜ್ಞೆ ಇಲ್ಲದ ಭಾರಿ ಒತ್ತುವರಿಗಳನ್ನು ಆದ್ಯತೆ ಮೇರೆಗೆ ತೆರವುಗೊಳಿಸಲು ದಾಖಲೆಗಳನ್ನು ಪರಿಶೀಲಿಸಿ ಇಟ್ಟುಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಅವರು ಹೇಳಿದರು.

'ಎರಡನೇ ಹಂತದಲ್ಲಿ ಅಧಿಸೂಚಿತ ಅರಣ್ಯದೊಳಗೆ ಒತ್ತುವರಿ ಮಾಡಿ ನಿರ್ಮಿಸಿರುವ ರೆಸಾರ್ಟ್ ಹಾಗೂ ಹೋಂ ಸ್ಟೇಗಳನ್ನು ಗುರುತಿಸಿ ಕ್ರಮ ಕೈಗೊಳ್ಳಲಿದ್ದೇವೆ. ಮೂರನೇ ಹಂತದಲ್ಲಿ 2015ರ ನಂತರದ ಒತ್ತುವರಿ ತೆರವುಗೊಳಿಸಲಿದ್ದೇವೆ' ಎಂದು ತಿಳಿಸಿದರು.

ಸಂತ್ರಸ್ತರ ಪಾಲು ಹೆಚ್ಚು: 'ಜಿಲ್ಲೆಯಲ್ಲಿ ಅರಣ್ಯ ಅತಿಕ್ರಮಣದಲ್ಲಿ ಶೇ 70ರಷ್ಟು ಭಾಗ ಶರಾವತಿ ಸಂತ್ರಸ್ತರ ಪರ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಹಾಕಿರುವ ಮಧ್ಯಂತರ ಅರ್ಜಿಯ ವ್ಯಾಪ್ತಿಯೊಳಗೆ ಬರುತ್ತವೆ. ಇದರಲ್ಲಿ 9,000 ಎಕರೆಯನ್ನು ಸಂತ್ರಸ್ತರ ಪರವಾಗಿ ಡಿನೋಟಿಫಿಕೇಶನ್ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಕೂಡ ಕಳುಹಿಸಲಾಗಿದೆ. ಇನ್ನು ಅರಣ್ಯಹಕ್ಕು ಕಾಯ್ದೆಯಡಿಯ (ಎಫ್‌ಆರ್‌ಎ) ಅರ್ಜಿಗಳು ಇತ್ಯರ್ಥ ಆಗುವವರೆಗೆ ಹಾಗೂ 3 ಎಕರೆಗಿಂತ ಕಡಿಮೆ ಅತಿಕ್ರಮಣವನ್ನು ಮುಟ್ಟುವುದಿಲ್ಲ. ಆದರೆ 2015ರ ನಂತರ ಆಗಿರುವ ಒತ್ತುವರಿಯನ್ನು ಗುರುತಿಸಿ ತೆರವು ಪ್ರಕ್ರಿಯೆ ವೇಗ ನೀಡಲಾಗುವುದು' ಎಂದು ಹಿರಿಯ ಅರಣ್ಯ ಅಧಿಕಾರಿಯೊಬ್ಬರು ತಿಳಿಸಿದರು.

ವಿಹಂಗಮ ರೆಸಾರ್ಟ್; ಇಬ್ಬರ ವಿರುದ್ಧ ಪ್ರಕರಣ

ತೀರ್ಥಹಳ್ಳಿ: ಬಿಳಿಯ ಭಾರತೀಪುರ ಕಿರು ಅರಣ್ಯ ಪ್ರದೇಶದ ತುಂಗಾ ನದಿಯ ಬಫರ್ ವಲಯದಲ್ಲಿ ಒತ್ತುವರಿ ಮಾಡಿ 'ವಿಹಂಗಮ' ಹೆಸರಿನ ರೆಸಾರ್ಟ್ ನಿರ್ಮಿಸಿ, ಕಲ್ಲು ಕಂಬ, ತಂತಿ ಬೇಲಿ ಹಾಕಿ ಅಡಿಕೆ, ಬಾಳೆ ಬೆಳೆಯುತ್ತಿದ್ದ ಹಾಗೂ ಮನೆ ಇತರೆ ಕಟ್ಟಡಗಳನ್ನು ನಿರ್ಮಿಸಿದ್ದ ಆರೋಪದ ಮೇಲೆ ತೀರ್ಥಹಳ್ಳಿಯ ಕೆ.ಆರ್. ದಯಾನಂದ ಹಾಗೂ ಅವರ ಪುತ್ರ ಕಾರ್ತಿಕ್ ಕಡಿದಾಳ್ ವಿರುದ್ಧ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿದೆ.

ಆಗಸ್ಟ್ 1ರಂದು ತೀರ್ಥಹಳ್ಳಿ ವಲಯ ಅರಣ್ಯಾಧಿಕಾರಿ ಸ್ಥಳ ಪರಿಶೀಲನೆ ಮಾಡಿ ನೀಡಿದ ವರದಿ ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ರೆಸಾರ್ಟ್ ನಿರ್ಮಾಣಕ್ಕೆ ಅನುಮತಿ ನೀಡಿದ್ದ ಕುರುವಳ್ಳಿಯ ಗ್ರಾಮ ಪಂಚಾಯಿತಿಯಿಂದ ವರದಿ ಕೇಳಿ ಪಿಡಿಒಗೆ ನೋಟಿಸ್ ನೀಡಲಾಗಿದೆ. ಆರ್‌ಎಫ್‌ಒ ಮನವಿ ಹಿನ್ನೆಲೆಯಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಮಂಗಳವಾರ ಸರ್ವೆ ನಡೆಸಿ ಗಡಿ ಗುರುತಿಸುವ ಕಾರ್ಯ ಕೂಡ ನಡೆದಿದೆ.

ನದಿ ದಂಡೆಯಲ್ಲಿ ನಿಯಮಾವಳಿ ಉಲ್ಲಂಘಿಸಿ ರೆಸಾರ್ಟ್ ನಿರ್ಮಿಸಲಾಗಿದೆ ಎಂದು ಬೆಂಗಳೂರಿನ ಎಚ್.ಎಂ. ವೆಂಕಟೇಶ್ ಅವರು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ದೂರು ಸಲ್ಲಿಸಿದ್ದರು. ಸತ್ಯಾಸತ್ಯತೆ ಪರಿಶೀಲನೆಗೆ ಸಚಿವರ ಸೂಚನೆ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಪರಿಶೀಲನೆಗೆ ಮುಂದಾಗಿತ್ತು. ಈ ಬಗ್ಗೆ 'ಪ್ರಜಾವಾಣಿ' ಜುಲೈ 26ರಂದು ವರದಿ ಕೂಡ ಪ್ರಕಟಿಸಿತ್ತು.

ಆರ್‌ಎಫ್‌ಒ ವರ್ಗಾವಣೆ: ವಿಹಂಗಮ ಹಾಲಿಡೇ ರೆಸಾರ್ಟ್‌ನ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಿದ್ದ ಆರ್‌ಎಫ್‌ಒ ಲೋಕೇಶ್ ಅವರನ್ನು ಎರಡು ದಿನಗಳಲ್ಲಿಯೇ ವರ್ಗಾವಣೆ ಮಾಡಲಾಗಿದೆ.

ಅರಣ್ಯ ಇಲಾಖೆ ಅಧಿಕಾರಿಗಳಿಂದಲೇ ತೀವ್ರ ಆಕ್ಷೇಪ

'ಶಾರ್ಪ್ ಶೂಟರ್' ಕೂಡ ವನ್ಯಜೀವಿ ಮಂಡಳಿ ಸದಸ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯಭೂಮಿ ಒತ್ತುವರಿ ಮಾಡಿದ ಪ್ರಕರಣದ ಆರೋಪ ಎದುರಿಸುತ್ತಿರುವ ಮತ್ತು ವನ್ಯಜೀವಿಗಳ ಶಾರ್ಪ್ ಶೂಟರ್ ಆಗಿರುವ ಗ್ಯಾನ್‌ಚಂದ್ ಸುಶೀಲ್ ಅವರನ್ನು ಕರ್ನಾಟಕ ವನ್ಯಜೀವಿ ಮಂಡಳಿ ಸದಸ್ಯರನ್ನಾಗಿ ನೇಮಕ ಮಾಡಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ರಾಜ್ಯದ ಅರಣ್ಯದ ಸಂಪತ್ತು ಮತ್ತು ವನ್ಯಜೀವಿ ಸಂಕುಲವನ್ನು ಉಳಿಸಿ, ಬೆಳೆಸಲು ಸರ್ಕಾರಕ್ಕೆ ಸಲಹೆ-ಸೂಚನೆಗಳನ್ನು ನೀಡಬೇಕಾದ ಜಾಗದಲ್ಲಿ 'ಕುರಿಗಳನ್ನು ಕಾಯಲು ತೋಳ'ವನ್ನು ನೇಮಿಸಿದ ಹಾಗೆ ಆಗಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ವನ್ಯಜೀವಿ ಮಂಡಳಿಗೆ ಇತ್ತೀಚೆಗಷ್ಟೇ ಸದಸ್ಯರನ್ನು ನೇಮಕ ಮಾಡಲಾಗಿತ್ತು. ಈ ಪಟ್ಟಿಯಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಅರಣ್ಯ ಸಚಿವರು ಕೊಟ್ಟ ಹೆಸರುಗಳು ಸೇರ್ಪಡೆ ಆಗಲಿಲ್ಲ, ನೇರ ಮುಖ್ಯಮಂತ್ರಿ ಕಚೇರಿಯಿಂದಲೇ ಪಟ್ಟಿಯನ್ನು ಸಿದ್ಧಪಡಿಸಿ ಒಪ್ಪಿಗೆ ಪಡೆಯಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಅದರಲ್ಲಿ ಗ್ಯಾನ್‌ಚಂದ್ ಸುಶೀಲ್ ಹೆಸರು ಕೂಡ ಒಂದು ಎಂದು ಅವರು ಹೇಳಿದರು.

'ಅರಣ್ಯ ಇಲಾಖೆಯ ಕೋರಿಕೆ ಮೇರೆಗೆ ಸುಶೀಲ್ ಅವರು ಅರಣ್ಯಗಳಲ್ಲಿ ಮಾನವ ಭಕ್ಷಕ ಹುಲಿ, ಚಿರತೆಗಳನ್ನು ಕೊಂದಿದ್ದಾರೆ. ಆ ಕ್ಷೇತ್ರದಲ್ಲಿ ಅವರಿಗೆ ಪರಿಣತಿ ಇರುವುದರಿಂದ ಆ ಕೆಲಸಕ್ಕಾಗಿ ಬಳಸಿಕೊಳ್ಳಲಾಗುತ್ತದೆ. ಹಾಗೆಂದ ಮಾತ್ರಕ್ಕೆ ವನ್ಯಜೀವಿ ಮಂಡಳಿಗೇ ಪ್ರವೇಶ ನೀಡಬೇಕೆ' ಎಂದು ಪ್ರಶ್ನೆಯನ್ನು ಅವರು ಮುಂದಿಟ್ಟಿದ್ದಾರೆ.

2009 ರಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದಲ್ಲಿ ಅರಣ್ಯ ಭೂಮಿ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಶೀಲ್ ಅವರ ಮೇಲೆ ಅರಣ್ಯ ಇಲಾಖೆ ಎಫ್‌ಐಆರ್ ದಾಖಲು ಮಾಡಿತ್ತು ಮತ್ತು ಒತ್ತುವರಿ ಮಾಡಿದ ಭೂಮಿಯನ್ನು ಇಲಾಖೆಗೆ ಹಸ್ತಾಂತರಿಸಬೇಕು ಎಂದು ಸೂಚಿಸಿತ್ತು. ಇದನ್ನು ಪ್ರಶ್ನಿಸಿ ಸುಶೀಲ್ ಹೈಕೋರ್ಟ್ ಮೆಟ್ಟಿಲು ಹತ್ತಿದ್ದರು. 'ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಲು ಕೆಳಹಂತದ ಅರಣ್ಯ ಅಧಿಕಾರಿಗಳಿಗೆ ಅಧಿಕಾರವಿಲ್ಲ. ಹೀಗಾಗಿ, ಎಫ್‌ಐಆರ್ ರದ್ದು ಮಾಡಬೇಕು ಎಂದು ರಿಟ್ ಅರ್ಜಿಯಲ್ಲಿ ಕೋರಿದ್ದರು.

ರಿಟ್ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲ. ಅರಣ್ಯ ಕಾಯ್ದೆಯ ಸೆಕ್ಷನ್ 2(6) ರಲ್ಲಿ 'ಅರಣ್ಯ ಅಧಿಕಾರಿಗಳು' ಯಾರು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಅರಣ್ಯವಲಯ ಅಧಿಕಾರಿ, ಅರಣ್ಯಾಧಿಕಾರಿ, ಅರಣ್ಯ ಗಾರ್ಡ್ ಮತ್ತು ಅರಣ್ಯ ವಾಚರ್ ಕೂಡ 'ಅರಣ್ಯ ಅಧಿಕಾರಿ' ವ್ಯಾಪ್ತಿಗೆ ಬರುತ್ತಾರೆ. ಇವರು ಎಫ್‌ಐಆರ್ ದಾಖಲು ಮಾಡಲು ಅಧಿಕಾರ ಹೊಂದಿದ್ದಾರೆ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿತ್ತು.

ತಜ್ಞರ ನೇಮಕಕ್ಕೆ ರಾಜ್ಯಪಾಲರಿಗೆ ಮನವಿ

ರಾಜ್ಯ ವನ್ಯಜೀವಿ ಮಂಡಳಿ ಸದಸ್ಯರ ನೇಮಕ ರದ್ದು ಮಾಡಿ, ವನ್ಯಜೀವಿ ತಜ್ಞರನ್ನು ಒಳಗೊಂಡ ಹೊಸ ತಂಡವನ್ನು ರಚಿಸಬೇಕು ಎಂದು ರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ ರಾಜ್ಯಪಾಲರಿಗೆ ಮನವಿ ಮಾಡಿದೆ.

ಮಂಡಳಿಗೆ ಸಚಿವ ಹಾಗೂ ಶಾಸಕರ ಮಕ್ಕಳನ್ನು ನೇಮಿಸಿರುವುದನ್ನು ಪ್ರಶ್ನಿಸಿ ಒಕ್ಕೂಟದ ಒಕ್ಕೂಟದ ಅಧ್ಯಕ್ಷ ಶಶಿಧರ್ ಶೆಟ್ಟಿ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ.

'ಮೂರು ವರ್ಷಗಳ ಅವಧಿಗೆ ಮಂಡಳಿಯನ್ನು ಪುನರ್ ರಚಿಸಿ, ತಜ್ಞರು ಮತ್ತು ಪರಿಸರವಾದಿಗಳ ಬದಲಿಗೆ ಕೋಟ್ಯಧಿಪತಿ ಶಾಸಕ ಮತ್ತು ಸಚಿವರ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ. ವನ್ಯಜೀವಿ ಹಾಗೂ ಪರಿಸರ ಸಂರಕ್ಷಣೆ ಬಗ್ಗೆ ಅಗಾಧ ಜ್ಞಾನವೇ ಇಲ್ಲದವರನ್ನು ನೇಮಕ ಮಾಡಲಾಗಿದೆ' ಎಂದು ಆರೋಪಿಸಿದ್ದಾರೆ.

'ಜನರಲ್ ಸ್ಟೋರ್, ದಂತ ವೈದ್ಯರನ್ನು ನೇಮಕ ಮಾಡಲಾಗಿದೆ. ನೇಮಕಾತಿಯಲ್ಲಿ ಯಾವುದೇ ಮಾನದಂಡ ಅನುಸರಿಸಿಲ್ಲ. ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ಮಗ ಧ್ರುವ್ ಎಂ. ಪಾಟೀಲ ಮತ್ತು ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರ ಮಗಳು ವೈಶಾಲಿ ಕುಲಕರ್ಣಿ ಅವರನ್ನು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯರನ್ನಾಗಿ ನೇಮಿಸಲಾಗಿತ್ತು.

ಮುಖ್ಯಮಂತ್ರಿ ವಿರುದ್ಧ ಪ್ರಕರಣ: ರಾಜ್ಯಪಾಲರ ನಡೆಯ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ನೀಡುವ ವಿಚಾರದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರ ನಡೆ ಕುತೂಹಲ ಮೂಡಿಸಿದೆ.

ದೆಹಲಿಗೆ ತೆರಳಿದ್ದ ರಾಜ್ಯಪಾಲರು ಸೋಮವಾರ ತಡರಾತ್ರಿ ರಾಜಭವನಕ್ಕೆ ಮರಳಿದ್ದಾರೆ. ಸಿ.ಎಂ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ಕೋರಿರುವ ಟಿ.ಜೆ. ಅಬ್ರಹಾಂ ಅವರು ರಾಜ್ಯಪಾಲರನ್ನು ಮಂಗಳವಾರ ಭೇಟಿ ಮಾಡಿ ಚರ್ಚಿಸಿದರು.

ರಾಜಭವನಕ್ಕೆ ತೆರಳಿದ್ದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ರಾಜ್ಯಪಾಲರ ಜತೆ ಒಂದು ಗಂಟೆ ಚರ್ಚಿಸಿದರು. ಜುಲೈ 31ರಂದು ಅಧಿಕಾರ ಸ್ವೀಕರಿಸಿದ್ದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ರಾಜ್ಯಪಾಲರನ್ನು ಭೇಟಿ ಆದರು.

ಸಿ.ಎಂ ವಿರುದ್ಧ ಪ್ರಕರಣ ದಾಖಲಿಸಲು (ಪ್ರಾಸಿಕ್ಯೂಷನ್) ಅನುಮತಿ ಕೋರಿ ಜುಲೈ 26ರಂದು ಅಬ್ರಹಾಂ ಅವರು ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದರು. ಮರುದಿನವೇ, ಮುಖ್ಯಮಂತ್ರಿಗೆ ರಾಜ್ಯಪಾಲರು ನೋಟಿಸ್ ನೀಡಿದ್ದರು.

ಆಗಸ್ಟ್ 1ರಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಮಂತ್ರಿ ಪರಿಷತ್ ಸಭೆ, ಮುಖ್ಯಮಂತ್ರಿಗೆ ಶೋಕಾಸ್ ನೋಟಿಸ್ ನೀಡಿರುವ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. 'ನೋಟಿಸ್ ಹಿಂಪಡೆಯಬೇಕು ಮತ್ತು ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕು' ಎಂದು ರಾಜ್ಯಪಾಲರಿಗೆ ಸಲಹೆ ನೀಡಲು ತೀರ್ಮಾನ ಕೈಗೊಂಡಿತ್ತು.

ಸಭೆಯ ಬಳಿಕ ಎಲ್ಲ ಸಚಿವರ ಜತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಡಿ.ಕೆ. ಶಿವಕುಮಾರ್, 'ರಾಜ್ಯಪಾಲರು ನೀಡಿರುವ ನೋಟಿಸ್ ಕಾನೂನು ಮತ್ತು ಸಂವಿಧಾನ ಬಾಹಿರ. ರಾಜಭವನವನ್ನು ಬಳಸಿಕೊಂಡು ಬಹುಮತದ ಸರ್ಕಾರವನ್ನು ಅಸ್ಥಿರಗೊಳಿಸುವ ಮತ್ತು ಬುಡಮೇಲು ಮಾಡುವ ಪ್ರಯತ್ನ ನಡೆದಿದೆ. ಕೇಂದ್ರ ರಾಜ್ಯಪಾಲರನ್ನು ಕೈಗೊಂಬೆಯಾಗಿ ಬಳಸಿಕೊಳ್ಳುತ್ತಿದೆ' ಎಂದು ಆರೋಪ ಮಾಡಿದ್ದರು.

ಇದೇ ಮಾತನ್ನು ಸಿದ್ದರಾಮಯ್ಯ ಮಾರನೇ ದಿನ ಪುನರುಚ್ಚರಿಸಿದ್ದರು. ಸರ್ಕಾರ ಉರುಳಿಸುವ ಸಂಚು ನಡೆಯುತ್ತಿದ್ದು, ಪ್ರಕರಣ ದಾಖಲಿಸಲು ಅನುಮತಿ ನೀಡಬಾರದು ಎಂದು ಆಗ್ರಹಿಸಿ, ಹಿಂದುಳಿದ ಸಮುದಾಯದ ಸಂಘಟನೆಗಳು ರಾಜ್ಯದ ವಿವಿಧೆಡೆ ಪ್ರತಿಭಟನೆ, ಬಂದ್ ನಡೆಸುತ್ತಿವೆ.

ಮಂಡ್ಯ: ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಡಿಕೆಶಿ ವಾಗ್ದಾಳಿ

'ನಿಮ್ಮದು ಪಾಪ ವಿಮೋಚನಾ ಯಾತ್ರೆ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಬಿಜೆಪಿ-ಜೆಡಿಎಸ್ ಹಮ್ಮಿಕೊಂಡಿರುವುದು ಪಾದಯಾತ್ರೆಯಲ್ಲ, ಪಾಪ ವಿಮೋಚನಾ ಯಾತ್ರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಟೀಕಿಸಿದರು.

ನಗರದಲ್ಲಿ ಮಂಗಳವಾರ ಕಾಂಗ್ರೆಸ್ ಆಯೋಜಿಸಿದ್ದ 'ಜನಾಂದೋಲನ ಸಮಾವೇಶ'ವನ್ನು ಉದ್ಘಾಟಿಸಿದ ಅವರು, 'ಬಿಜೆಪಿ ಮತ್ತು ಜೆಡಿಎಸ್‌ನವರು, ತಮ್ಮದೇ ಬ್ರಹ್ಮಾಂಡ ಭ್ರಷ್ಟಾಚಾರವನ್ನು ವಿಮರ್ಶಿಸಿಕೊಳ್ಳಲು ಪಾದಯಾತ್ರೆ ನಡೆಸುತ್ತಿದ್ದಾರೆ' ಎಂದರು.

'ಕುಮಾರಣ್ಣ ಮತ್ತು ಯಡಿಯೂರಪ್ಪನವರೇ, ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಲು ನಿಮ್ಮ ಹಣೆಯಲ್ಲೇ ಬರೆದಿಲ್ಲ. ಅಶೋಕ್ ನಿನ್ನ ಕೈಯಲ್ಲಿ ಧಮ್ ಇಲ್ಲ' ಎಂದು ಛೇಡಿಸಿದರು.

'ಏಯ್ ವಿಜಯೇಂದ್ರ, ನಾವು ನಾಗರಾಜೇಗೌಡನಿಗೆ ಟಿಕೆಟ್ ಕೊಟ್ಟಿದ್ದರೆ ನೀನು ಅಸೆಂಬ್ಲಿಗೆ ಬರುತ್ತಿರಲಿಲ್ಲ. ನಿಮ್ಮ ತಂದೆ ಏಕೆ ಮೂರು ಬಾರಿ ರಾಜೀನಾಮೆ ಕೊಟ್ಟರು ಅಂತ ತಿಳಿಸು. ದುಬೈಗೆ ವಿಶೇಷ ವಿಮಾನದಲ್ಲಿ ಹೋಗಿ ಖಾತೆ ತೆರೆದೆಯಲ್ಲ, ನಿನ್ನ ಮೇಲೆ ಯಾಕೆ ಇನ್ನೂ ತನಿಖೆ ನಡೆದಿಲ್ಲ. ನಿನ್ನ ಬಗ್ಗೆ ಅಸೆಂಬ್ಲಿಯಲ್ಲಿ ಮಾತನಾಡುತ್ತೇನೆ' ಎಂದು ಡಿ.ಕೆ ಶಿವಕುಮಾರ್ ಹರಿಹಾಯ್ದರು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅವರು ಮಾತನಾಡಿ, 'ಹಾಸನದಲ್ಲಿ ಪೆನ್ ಡ್ರೈವ್ ಹಂಚಿದ್ದು ವಿಜಯೇಂದ್ರ ಚೇಲಾಗಳು ಎಂಬ ಆರೋಪವಿದೆ. ನಿಮ್ಮ ಕುಟುಂಬದ ಸರ್ವನಾಶ ಮಾಡಲು ಹೊರಟಿರುವ ಜತೆ ಪಾದಯಾತ್ರೆ ಮಾಡುತ್ತಿದ್ದೀರಾ ಕುಮಾರಸ್ವಾಮಿ?' ಎಂದು ಕೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮಾತನಾಡಿ, 'ದೇವೇಗೌಡ ಕುಟುಂಬಕ್ಕೆ ವಿಷವಿಟ್ಟ ಎಂದು ಕುಮಾರಣ್ಣನವರು ಪ್ರೀತಂಗೌಡ ಬಗ್ಗೆ ಹೇಳಿದ್ದಾರೆ. ನೂರಾರು ಬಡ ಹೆಣ್ಣುಮಕ್ಕಳ ಕುಟುಂಬಕ್ಕೆ ನೀವೇನು ಅಮೃತ ಎರೆದಿದ್ದೀರಾ? ಅವರ ಕುಟುಂಬಗಳನ್ನು ಬೀದಿಪಾಲು ಮಾಡಲು ನಾಚಿಕೆಯಾಗಲಿಲ್ಲವೇ? ' ಎಂದು ವಾಗ್ದಾಳಿ ನಡೆಸಿದರು.

ಹೊನ್ನಾಳಿ ವರದಿ (ದಾವಣಗೆರೆ): ಮುಡಾ ನಿವೇಶನ ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅವರಿಗೆ ರಾಜ್ಯಪಾಲರು ನೋಟಿಸ್ ನೀಡಿರುವ ಕ್ರಮವನ್ನು ವಿರೋಧಿಸಿ ಮಂಗಳವಾರ ನೀಡಿದ್ದ ಹೊನ್ನಾಳಿ ಬಂದ್ ಕರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮೈತ್ರಿ ಪಕ್ಷಗಳ ನಾಯಕರ ಕಚ್ಚಾಟಗಳ ಹಿಂದಿನ ವಿಡಿಯೊ ತುಣುಕುಗಳನ್ನು 'ದೋಸ್ತಿ ರಾಂಗ್ ಟರ್ನ್' ಹೆಸರಿನಲ್ಲಿ ಪ್ರಸಾರ ಮಾಡಿದರು –ಪ್ರಜಾವಾಣಿ ಚಿತ್ರ

'ದೋಸ್ತಿ ರಾಂಗ್ ಟರ್ನ್': ಪ್ರಸಾರ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 'ದೋಸ್ತಿ ರಾಂಗ್ ಟರ್ನ್' ಹೆಸರಿನಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಪರಸ್ಪರ ಕಚ್ಚಾಟದ ಹಿಂದಿನ ವಿಡಿಯೊಗಳನ್ನು 'ಜನಾಂದೋಲನ ಸಮಾವೇಶ'ದ ವೇದಿಕೆಯ ಪರದೆಯಲ್ಲಿ ಪ್ರಸಾರ ಮಾಡುವ ಮೂಲಕ ತಿರುಗೇಟು ನೀಡಿದರು.

ಕುಮಾರಸ್ವಾಮಿ ದ್ವಂದ್ವ ಹೇಳಿಕೆಗಳ ಬಗ್ಗೆ 'ಯೂ ಟರ್ನ್ ಕುಮಾರಣ್ಣ' ಹೆಸರಿನಲ್ಲಿ ವಿಡಿಯೊ ತುಣುಕು ಪ್ರದರ್ಶನಗೊಂಡವು. ನೆರೆದಿದ್ದ ಜನ 'ತಿರುಗೇಟು ಹೀಗೆ ಕೊಡಬೇಕು' ಎಂದು ಶಿಳ್ಳೆ, ಚಪ್ಪಾಳೆ ಹಾಕಿ, ಹರ್ಷೋದ್ಗಾರ ಮಾಡಿದರು.

ತಾಂತ್ರಿಕ ದೋಷದಿಂದ ಜೂನ್ ಮತ್ತು ಜುಲೈ ತಿಂಗಳಲ್ಲಿ ಗೃಹಲಕ್ಷ್ಮಿ ಹಣ ಹಾಕಲು ಸಾಧ್ಯವಾಗಿರಲಿಲ್ಲ. ಇಂದಿನಿಂದ ನಿಮ್ಮ ಖಾತೆಗಳಿಗೆ ಹಣ ಹಾಕುತ್ತಿದ್ದೇವೆ

ಲಕ್ಷ್ಮಿ ಹೆಬ್ಬಾಳಕರ
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ

ಬಿಜೆಪಿ-ಜೆಡಿಎಸ್ ಪಾದಯಾತ್ರೆ ಶೋಕಿ ಯಾತ್ರೆ. ಪ್ರತಿಷ್ಠೆಯನ್ನು ಪಣವಾಗಿಟ್ಟುಕೊಂಡು ನಡೆಸುತ್ತಿರುವ ಅವರ ಪಾದಯಾತ್ರೆಗೆ ಯಾವುದೇ ಅರ್ಥವಿಲ್ಲ'

ಸಲೀಂ ಅಹಮದ್
ವಿಧಾನ ಪರಿಷತ್ತಿನ ಸದಸ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಸಾಹಸವನ್ನು ರಾಜ್ಯಪಾಲರು ಮಾಡುವುದಿಲ್ಲ

ಲಕ್ಷ್ಮಣ ಸವದಿ, ಕಾಂಗ್ರೆಸ್ ಶಾಸಕ

ಸಿ.ಎಂ ರಾಜೀನಾಮೆಗೆ ನಿಖಿಲ್ ಆಗ್ರಹ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ): 'ವಾಲ್ಮೀಕಿ ನಿಗಮದಲ್ಲಿ ₹89 ಕೋಟಿ ಹಗರಣವಾಗಿರುವುದು ನಿಜ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಅವರಿಗೆ ನೈತಿಕತೆ ಇದ್ದರೆ, ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದರು.

ತಾಲ್ಲೂಕಿನ ಸೋಮನಹಳ್ಳಿಯಲ್ಲಿ 'ಮೈಸೂರು ಚಲೋ' 4ನೇ ದಿನದ ಪಾದಯಾತ್ರೆ ಆರಂಭಕ್ಕೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮದ್ದೂರು ಪಟ್ಟಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, 'ಮೇಕೆದಾಟು ಯೋಜನೆ ಬಗ್ಗೆ ತಗಾದೆ ತೆಗೆಯದಂತೆ ರಾಜ್ಯ ಸರ್ಕಾರವು ನೆರೆಯ ತಮಿಳುನಾಡು ಸರ್ಕಾರಕ್ಕೆ ಪತ್ರ ಬರೆದು ಒಪ್ಪಿಗೆ ಪಡೆದರೆ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರೇ 15 ದಿನಗಳಲ್ಲಿ ಕೇಂದ್ರದಿಂದ ಅನುಮತಿ ಕೊಡಿಸುತ್ತಾರೆ. ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಅವರ ಪಕ್ಷಕ್ಕೆ 136 ಸ್ಥಾನಗಳನ್ನು ಕೊಟ್ಟ ಜನರೇ ಛೀಮಾರಿ ಹಾಕುತ್ತಿದ್ದಾರೆ' ಎಂದು ಟೀಕಿಸಿದರು

ನಿಡಘಟ್ಟ ಗೇಟ್‌ನಿಂದ ಮದ್ದೂರು ಪಟ್ಟಣದವರೆಗೆ ಬೆಂಗಳೂರು-ಮೈಸೂರು ಹೆದ್ದಾರಿಯ ಹಳೆಯ ರಸ್ತೆಯಲ್ಲಿ ಮುಖಂಡರು ಮತ್ತು ಕಾರ್ಯಕರ್ತರು ಹೆಜ್ಜೆ ಹಾಕಿದರು.

ಪಾದಯಾತ್ರೆಯಲ್ಲಿ ಆರ್‌ಅಶೋಕ, ನಿಖಿಲ್ ಕುಮಾರಸ್ವಾಮಿ, ಬಿ.ವೈ. ವಿಜಯೇಂದ್ರ, ಅಶ್ವತ್ಥನಾರಾಯಣ ಒಗ್ಗಟ್ಟು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

'ಅಧಿಕಾರ ದಾಹದಿಂದ ಪಾದಯಾತ್ರೆ ಹಮ್ಮಿಕೊಂಡಿಲ್ಲ'

'ಭ್ರಷ್ಟ ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಅಧಿಕಾರದಿಂದ ಕಿತ್ತೆಸೆಯಬೇಕೆಂಬ ಸಂಕಲ್ಪದೊಂದಿಗೆ ಹೋರಾಟ ಹಮ್ಮಿಕೊಂಡಿದ್ದೇವೆಯೇ ಹೊರತು ಅಧಿಕಾರ ದಾಹದಿಂದ ಅಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಪಾದಿಸಿದರು.

'ಮೈಸೂರು ಚಲೋ' ಪಾದಯಾತ್ರೆಯಲ್ಲಿ ಮಾತನಾಡಿ, 'ರಾಜ್ಯದ ಆರೂವರೆ ಕೋಟಿ ಜನರಿಗೆ ಚುನಾಯಿತ ಸರ್ಕಾರವಿದೆ ಎಂದೇ ಅನಿಸುತ್ತಿಲ್ಲ. 14 ತಿಂಗಳಿನಲ್ಲಿ ವಿದ್ಯುತ್ ದರ ಏರಿಸಿದ್ದಾರೆ. ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ₹1,200 ಕೋಟಿ ಹಾಗೇ ಉಳಿಸಿಕೊಂಡಿದ್ದಾರೆ. ನೋಂದಣಿ ಶುಲ್ಕ ಹೆಚ್ಚಾಗಿದೆ. ಅಕ್ಕಿ, ದವಸ ಧಾನ್ಯವೂ ದುಬಾರಿಯಾಗಿದೆ. ಸರ್ಕಾರ 1.95 ಲಕ್ಷ ಕೋಟಿ ಸಾಲ ಮಾಡಿದೆ' ಎಂದು ಟೀಕಿಸಿದರು.

ನಮೋಶಿ ಸೇರಿ ಐವರ ವಿರುದ್ಧ ಪ್ರಕರಣ ದಾಖಲು

ಕಲಬುರಗಿ: ಇಲ್ಲಿನ ಹೈದರಾಬಾದ್ ಶಿಕ್ಷಣ ಸಂಸ್ಥೆಯ (ಎಚ್‌ಕೆಇ) ಮಹಾದೇವಪ್ಪ ರಾಂಪೂರೆ ವೈದ್ಯಕೀಯ ಕಾಲೇಜಿನ (ಎಂಆರ್‌ಎಂಸಿ) ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸ್ಟೈಫಂಡ್, ಸೀಟು ಹಂಚಿಕೆ ಸಂಬಂಧ ₹65.17 ಕೋಟಿ ದುರ್ಬಳಕೆ ಮಾಡಿಕೊಂಡ ಆರೋಪದಡಿ ಸಂಸ್ಥೆಯ ಅಧ್ಯಕ್ಷರೂ ಆಗಿರುವ ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ.ನಮೋಶಿ ಸೇರಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

ಸಂಸ್ಥೆಯ ಸದಸ್ಯ, ವಕೀಲ ಪ್ರದೀಪ್ ಸಂಗಪ್ಪ ಅವರು ನೀಡಿದ ದೂರಿನ ಅನ್ವಯ, ಸೈಬರ್, ಆರ್ಥಿಕ ಮತ್ತು ಮಾದಕವಸ್ತು ತಡೆ (ಸೆನ್) ಠಾಣೆಯಲ್ಲಿ ಶಶೀಲ್ ಜಿ.ನಮೋಶಿ, ಮಾಜಿ ಅಧ್ಯಕ್ಷ ಬಸವರಾಜ ಶಿವಶರಣಪ್ಪ ಭೀಮಳ್ಳಿ, ಕಾಲೇಜಿನ ಮಾಜಿ ಡೀನ್‌ಗಳಾದ ಡಾ.ಮಲ್ಲಿಕಾರ್ಜುನ ಬಂಡಾರಿ, ಡಾ.ಸಾಯಿನಾಥ ಕೆ. ಆಂದೋಲ ಹಾಗೂ ಡಾ.ಶರಣಬಸಪ್ಪ ಆರ್. ಹರವಾಳ ವಿರುದ್ಧ ಪ್ರಕರಣ ದಾಖಲಾಗಿದೆ.

ದರ್ಶನ್ ಚಿತ್ರಕ್ಕೆ ಪೂಜೆ: ಅರ್ಚಕ ಅಮಾನತು

ಪ್ರಜಾವಾಣಿ ವಾರ್ತೆ

ಕುರುಗೋಡು(ಬಳ್ಳಾರಿ ಜಿಲ್ಲೆ): ಇಲ್ಲಿನ ದೊಡ್ಡಬಸವೇಶ್ವರ ದೇವಸ್ಥಾನದ ಗರ್ಭಗುಡಿಯಲ್ಲಿ ನಟ ದರ್ಶನ್ ತೂಗುದೀಪ ಅವರ ಭಾವಚಿತ್ರಗಳನ್ನು ಇರಿಸಿ, ಪೂಜಿಸಿದ ಆರೋಪದ ಮೇಲೆ ಅರ್ಚಕ ಜೀರ್ ಮಲ್ಲಿಕಾರ್ಜುನ ಅವರನ್ನು ಸೇವೆಯಿಂದ ಅಮಾನತು ಗೊಳಿಸಿ ದೇವಸ್ಥಾನ ಮಂಡಳಿ ಆದೇಶ ಹೊರಡಿಸಿದೆ.

ಗರ್ಭಗುಡಿಯ ಮೂಲ ವಿಗ್ರಹದ ಮುಂಭಾಗದಲ್ಲಿ ನಟ ದರ್ಶನ್ ಅವರ ವಿವಿಧ ಭಂಗಿಯ ಆರು ಚಿತ್ರಗಳನ್ನು ಇರಿಸಿ ವಿಶೇಷ ಪೂಜೆ ನೆರವೇರಿಸಿದ ವಿಡಿಯೊ ಸೋಮವಾರ ಜಾಲತಾಣದಲ್ಲಿ ಹರಿದಾಡಿತ್ತು. ಇದಕ್ಕೆ ಭಕ್ತರಿಂದ ಟೀಕೆ ವ್ಯಕ್ತವಾಗಿತ್ತು.

'ದೇವಸ್ಥಾನದ ನಿಯಮಗಳನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ' ಎಂದು ದೇವಸ್ಥಾನದ ಆಡಳಿತಾಧಿಕಾರಿ ಹನುಮಂತಪ್ಪ ತಿಳಿಸಿದರು.

ದೊಡ್ಡಬಸವೇಶ್ವರ ದೇವಸ್ಥಾನದಲ್ಲಿ ದರ್ಶನ್ ಭಾವಚಿತ್ರ ಇರಿಸಲಾಗಿತ್ತು

'ಉಳ್ಳವರು ಲಾಡ್ಜ್‌ನಲ್ಲಿ..., ನಾನೇನು ಮಾಡಲಿ ಬಡವನಯ್ಯಾ'

ಪ್ರಜಾವಾಣಿ ವಾರ್ತೆ

ನಂಜನಗೂಡು (ಮೈಸೂರು ಜಿಲ್ಲೆ): 'ಉಳ್ಳವರು ಲಾಡ್ಜ್‌ನಲ್ಲಿ ಉಳಿಯುವರು... ನಾನೇನು ಮಾಡಲಿ ಬಡವನಯ್ಯಾ'

ನಗರದ ಶ್ರೀಕಂಠೇಶ್ವರ ದೇವಾಲಯದ ಹರಕೆ ಹುಂಡಿಯನ್ನು ಮಂಗಳವಾರ ಅಧಿಕಾರಿಗಳು ತೆರೆದಾಗ ನೋಟುಗಳ ಜೊತೆಗೆ ಕಂಡ ಪತ್ರಗಳಲ್ಲಿ ಗಮನ ಸೆಳೆದ ಪತ್ರವಿದು. ರಾಜ್ಯದ ವಿವಿಧೆಡೆಗಳಿಂದ ಬಂದು ದೇವಸ್ಥಾನದಲ್ಲಿ ರಾತ್ರಿ ಉಳಿಯುವ ಭಕ್ತರ ಸಂಕಷ್ಟವನ್ನು ಪತ್ರದ ಒಕ್ಕಣೆಯು ತೆರೆದಿಟ್ಟಿತ್ತು.

'ದೇವಾಲಯದ ಮುಂದೆ ಮಲಗಿದರೆ ಲಾಠಿಯಲ್ಲಿ ತಿವಿಯುವರು, ಬೂಟಿನಲ್ಲಿ ಒದೆಯುವರು, ಲಾಡ್ಜ್‌ಗೆ ಹೋಗೆಂದು ಅಡ್ರೆಸ್ ಕೊಡುವರು, ನಾ ಹೇಗೆ ಹೋಗಲಿ ಬಡವನಯ್ಯಾ.. ಶ್ರೀಕಂಠಪ್ಪ ನಿನ್ನ ಬಡ ಭಕ್ತರ ಕಷ್ಟ ನೀನೇ ಪರಿಹರಿಸಪ್ಪ...' ಎಂದು ವಚನದ ಶೈಲಿಯಲ್ಲಿ ಬರೆಯಲಾಗಿದೆ.

ಎಚ್.ಡಿ.ಕೋಟೆಯ ಭಕ್ತರೊಬ್ಬರು ₹ 500 ನೋಟಿನೊಂದಿಗೆ ಬರೆದ ಪತ್ರದಲ್ಲಿ, 'ದಯವಿಟ್ಟು ಈ ಕಾಣಿಕೆಯನ್ನು ಮೂಲಸೌಕರ್ಯಕ್ಕೆ ಬಳಸಿ' ಎಂದು ಮನವಿ ಮಾಡಿದ್ದಾರೆ.

ಈ ಪತ್ರಗಳೊಂದಿಗೆ, ಭಕ್ತರು ಎದುರಿಸುತ್ತಿರುವ ವಸತಿ ಸಮಸ್ಯೆ, ಮಹಿಳೆಯರಿಗೆ ಬಟ್ಟೆ ಬದಲಾಯಿಸಲು ಸ್ನಾನದ ಕೊಠಡಿಗಳ ಕೊರತೆ, ಮೂಲಸೌಲಭ್ಯ ಕೊರತೆ ಕುರಿತ 150ಕ್ಕೂ ಹೆಚ್ಚು ಪತ್ರಗಳು ಸಿಕ್ಕಿವೆ. ಬೆಂಗಳೂರು, ಮಂಡ್ಯ, ಕೆ.ಎಂ.ದೊಡ್ಡಿ ಸೇರಿದಂತೆ ರಾಜ್ಯದ ಹಲವು ಮೂಲೆಗಳ ವಿಳಾಸಗಳಿವೆ.

ಶಾಸಕ ನರೇಂದ್ರ ಸ್ವಾಮಿಗೆ ಪಿತೃವಿಯೋಗ

ಮಳವಳ್ಳಿ: ಶಾಸಕ ಪಿ.ಎಂ.ನರೇಂದ್ರಸ್ವಾಪಿ.ಎಲ್.ಮಲ್ಲಯ್ಯ (93) ಅವರು ಅನಾರೋಗ್ಯದಿಂದ ಸೋಮವಾರ ಮಧ್ಯರಾತ್ರಿ ನಿಧನರಾದರು. ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರು ಪತ್ನಿ ಮಹದೇವಮ್ಮ, ಪುತ್ರರಾದ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಮುಖಂಡ ಪಿ.ಎಂ. ಪರಶಿವಮೂರ್ತಿ ಹಾಗೂ ಪುತ್ರಿ ಇದ್ದಾರೆ.

ಪಿ.ಎಲ್. ಮಲ್ಲಯ್ಯ

ಆರ್ಥಿಕ ಅಪರಾಧಕ್ಕೆ ಗ್ರಾ.ಪಂ ಅಧ್ಯಕ್ಷರೂ ಹೊಣೆ

ಒಂದನೇ ಪುಟದಿಂದ...

ಪಂಚಾಯಿತಿಗಳಲ್ಲಿ ನಡೆದ ಹಣಕಾಸು ಅವ್ಯವಹಾರಗಳಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ಪಾತ್ರ, ಅವರ ಪಾಲುದಾರಿಕೆ ಹಾಗೂ ಕೈಗೊಳ್ಳಬಹುದಾದ ಕ್ರಮಗಳ ಕುರಿತು ವರದಿ ಸಲ್ಲಿಸಬೇಕು ಎಂದು ಸಿಇಒಗಳಿಗೆ ಸೂಚಿಸಲಾಗಿದೆ.

ಪ್ರಸ್ತುತ ರಾಜ್ಯದ ಯಾವುದೇ ಗ್ರಾಮ ಪಂಚಾಯಿತಿಗಳಲ್ಲಿ ನಡೆಯುವ ಆರ್ಥಿಕ ಅಪರಾಧಕ್ಕೆ ಪಿಡಿಒ, ಕಾರ್ಯದರ್ಶಿ ಸೇರಿದಂತೆ ಅಧಿಕಾರಿ, ಸಿಬ್ಬಂದಿಯನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತಿದೆ. ಹಗರಣ ಬೆಳಕಿಗೆ ಬಂದ ತಕ್ಷಣ ಅಧಿಕಾರಿ, ಸಿಬ್ಬಂದಿಯನ್ನು ಅಮಾನತು ಮಾಡಿ, ವಿಚಾರಣೆಗೆ ಆದೇಶಿಸಲಾಗುತ್ತಿದೆ. ಆರೋಪ ಸಾಬೀತಾದರೆ ಕಾನೂನು ಅನುಸಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ (ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮ 2006) ತಂದಿದ್ದ ತಿದ್ದುಪಡಿಯಂತೆ ಗ್ರಾಮ ಪಂಚಾಯಿತಿಯ ಹಣಕಾಸಿನ ವ್ಯವಹಾರವನ್ನು ಸರ್ಕಾರ ಸೂಚಿಸುವ ಅಧಿಕಾರಿಗಳು ಅಥವಾ ಪ್ರಾಧಿಕಾರ ನಿರ್ವಹಿಸಬಹುದು. ಇಂತಹ ಅಧಿಕಾರವನ್ನು ಸ್ಥಳೀಯ ಆಡಳಿತದ ಚುನಾಯಿತ ಮುಖ್ಯಸ್ಥರಾಗಿರುವ ಅಧ್ಯಕ್ಷರಿಗೂ ನೀಡಲಾಗಿದೆ.

ಉದ್ಯೋಗ ಖಾತ್ರಿ, ವಿವಿಧ ವಸತಿ ಯೋಜನೆಗಳ ಅನುಷ್ಠಾನ, ಹಣಕಾಸಿನ ನಿಧಿ, ಪಂಚಾಯಿತಿ ತೆರಿಗೆ, ಖರ್ಚು ವೆಚ್ಚಗಳ ಎಲ್ಲ ಚೆಕ್‌ಗಳಿಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಹಿಂದೆ ಕಾರ್ಯದರ್ಶಿ) ಹಾಗೂ ಅಧ್ಯಕ್ಷರ ಜಂಟಿ ಸಹಿ ಕಡ್ಡಾಯವಾಗಿದೆ. ವಿವಿಧ ಯೋಜನೆಗಳು, ಕಾರ್ಯಕ್ರಮಗಳ ಬಿಲ್ ಪಾವತಿಗೂ ಸಹಿ ಮಾಡುವ ಅಧಿಕಾರ ಹೊಂದಿದ್ದಾರೆ. ಆದರೆ, ಅಧ್ಯಕ್ಷರು ಚುನಾಯಿತ ಪ್ರತಿನಿಧಿಯಾಗಿದ್ದು, ಹಣಕಾಸಿನ ವ್ಯವಹಾರಗಳಿಗೆ ಹೊಣೆಗಾರರನ್ನಾಗಿ ಮಾಡಲು ಇಲ್ಲಿಯವರೆಗೂ ಅವಕಾಶ ಇರಲಿಲ್ಲ.

ಸಮಾನ ಶಿಕ್ಷೆಗೆ ಪಿಡಿಒಗಳ ಒತ್ತಡ

ಗ್ರಾಮ ಪಂಚಾಯಿತಿ ಆರ್ಥಿಕ ವ್ಯವಹಾರಗಳಿಗೆ ಹೊಣೆಗಾರರಾದರೂ ಪಿಡಿಒಗಳ ಮೇಲೆ ಮಾತ್ರ ಕ್ರಮ ಜರುಗಿಸಲಾಗುತ್ತಿದೆ. ಇದು ನ್ಯಾಯಸಮ್ಮತವಲ್ಲ. ಹೆಚ್ಚಿನ ಪ್ರಕರಣಗಳಲ್ಲಿ ಜನಪ್ರತಿನಿಧಿಗಳ ಒತ್ತಡದಿಂದಲೇ ಹಣಕಾಸಿನ ಅವ್ಯವಹಾರಗಳು ನಡೆಯುತ್ತಿವೆ. ಹಾಗಾಗಿ, ಅವರನ್ನೂ ಹೊಣೆಗಾರರನ್ನಾಗಿ ಮಾಡಬೇಕು. ಕಾನೂನು ಪ್ರಕಾರ ಅವರನ್ನೂ ಶಿಕ್ಷೆಗೆ ಒಳಪಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಇದೇ ಮೇನಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು.

ಪಿಡಿಒಗಳ ಜೊತೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರೂ ಆರ್ಥಿಕ ವ್ಯವಹಾರಗಳಿಗೆ ಸಹಿ ಮಾಡುವ ಅಧಿಕಾರ ಹೊಂದಿದ್ದಾರೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗೃಹ, ವಾಣಿಜ್ಯ ಕಟ್ಟಡ ಕಾಮಗಾರಿಗಳು, ಕೈಗಾರಿಕೆ, ಗಣಿಗಾರಿಕೆ, ಅಂಗಡಿ, ಹೋಟೆಲ್ ಮತ್ತಿತರ ವಾಣಿಜ್ಯ ವಹಿವಾಟುಗಳ ಆರಂಭಕ್ಕೆ ಪರವಾನಗಿ, ಇ–ಸ್ವತ್ತು (ನಮೂನೆ–9, 11ಎ, 11ಬಿ) ನೀಡುವ ಕುರಿತು ಗ್ರಾಮ ಪಂಚಾಯಿತಿ ಸದಸ್ಯರ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತಿದೆ. ಹಾಗಾಗಿ, ಕೆಲ ಅಪರಾಧಗಳಲ್ಲಿ ಸದಸ್ಯರೂ ಹೊಣೆಗಾರಿಕೆ ಹೊಂದಿದ್ದಾರೆ ಎಂದು ಸಂಘ ವಿವರಿಸಿತ್ತು.

ಅಂಕಿ ಅಂಶ

5,963
ರಾಜ್ಯದ ಗ್ರಾಮ ಪಂಚಾಯಿತಿಗಳು

91,437
ಗ್ರಾಮ ಪಂಚಾಯಿತಿ ಸದಸ್ಯರು

5,226
ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು

756
ಎರಡು ವರ್ಷಗಳಲ್ಲಿ ವಿಚಾರಣೆ ಎದುರಿಸಿದ ಪಿಡಿಒಗಳು

125
ಆತ್ಮಹತ್ಯೆ, ಆರೋಗ್ಯ ಸಮಸ್ಯೆಯಿಂದ ಮೃತಪಟ್ಟ ಪಿಡಿಒಗಳು

ಜಲಾಶಯದ ನೀರಿನ ಮಟ್ಟ (ಸಮುದ್ರಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	123.96	16,145	6,654
ಹಾರಂಗಿ	2,859	2,855.79	6,889	2000
ಕಬಿನಿ	2,284.00	2,283.33	8,146	2,000
ಹೇಮಾವತಿ	2,922	2,921.95	11,399	3,525
ಲಿಂಗನಮಕ್ಕಿ	1,819	1,816.15	22,357	17,301
ಸೂಪಾ (ಮೀ)	564	557.92	19,899	3,682.86
ಮಾಣಿ	595	588.29	2,524	-
ತುಂಗಭದ್ರಾ	1,633	1,632.14	84,696	55,227
ಮಲಪ್ರಭಾ	2,079.5	2,076.45	11,850	9,794
ಘಟಪ್ರಭಾ	2175	2,172.33	23,851	11,343
ಭದ್ರಾ	186	180	7,531	7,531
ಆಲಮಟ್ಟಿ (ಮೀ)	519.6	517.15	3,02,660	2,06,607
ನಾರಾಯಣಪುರ (ಮೀ)	492.25	490.95	2,00,000	1,94,860

* ನೆಲಮಟ್ಟದಿಂದ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂಖ್ಯೆ: ಬೆಂಅಪ್ರಾ/ಭೂಸ್ವಾಅ/ಡಿಎಸ್‌ಕೆಎಲ್/367/2024–25 ದಿನಾಂಕ: 06.08.2024

ಪತ್ರಿಕಾ ಪ್ರಕಟಣೆ

ಡಾ|| ಕೆ. ಶಿವರಾಮಕಾರಂತ ಬಡಾವಣೆಗೆ ಭೂಸ್ವಾಧೀನಪಡಿಸಿಕೊಳ್ಳಲು ಹೊರಡಿಸಿರುವ ಅಂತಿಮ ಅಧಿಸೂಚನೆ ಸಂಖ್ಯೆ: ಯುಡಿಡಿ/553/ಎಂಎನ್‌ಎಕ್ಸ್/2018 ಬೆಂಗಳೂರು, ದಿನಾಂಕ: 30.10.2018 ಮತ್ತು ಅಂತಿಮ ಅಧಿಸೂಚನೆ ಸಂಖ್ಯೆ: ಯುಡಿಡಿ/3/ಎಂಎನ್‌ಎಕ್ಸ್/2022(ಇ), ದಿನಾಂಕ: 06.08.2022 ಹಾಗೂ ಅಂತಿಮ ಅಧಿಸೂಚನೆ ಸಂಖ್ಯೆ: ಯುಡಿಡಿ/265/ಎಂಎನ್‌ಎಕ್ಸ್/2022(ಇ), ದಿನಾಂಕ: 18.10.2022 ರಲ್ಲಿ ಒಳಗೊಂಡಿರುವ ಜಮೀನಿನಲ್ಲಿ ರೆವಿನ್ಯೂ ನಿವೇಶನಗಳನ್ನು ಖರೀದಿಸಿದಂತಹ ರೆವಿನ್ಯೂ ನಿವೇಶನದಾರರಿಗೆ ಘನ ಉಚ್ಛ ನ್ಯಾಯಾಲಯದ ಆದೇಶ ಸಂಖ್ಯೆ: W.P.No. 14609/2023 C/w W.P.No. 24932/2022, 8040/2023, 12621/2023, 16876/2023 ರಲ್ಲಿ ದಿನಾಂಕ 11.07.2024 ರಂದು ನೀಡಿರುವ ಆದೇಶದಂತೆ ಅರ್ಹ ರೆವಿನ್ಯೂ ನಿವೇಶನದಾರರಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು **ದಿನಾಂಕ: 06.09.2024 ರವರೆಗೆ** ಅವಕಾಶ ಕಲ್ಪಿಸಲಾಗಿರುತ್ತದೆ. ಅರ್ಹ ರೆವಿನ್ಯೂ ನಿವೇಶನದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ವಿಶೇಷ ಸೂಚನೆ: ಈ ಕೆಳಕಂಡ ದಿನಾಂಕಗಳಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ.

ಕ್ರ.ಸಂ.	ಅರ್ಜಿ ಸ್ವೀಕರಿಸಲು ನಿಗದಿಪಡಿಸಲಾಗಿದ್ದ ಅವಧಿ
1	14.07.2021 ರಿಂದ 21.12.2021
2	11.01.2022 ರಿಂದ 28.02.2022
3	02.11.2022 ರಿಂದ 14.12.2022
4	06.12.2022 ರಿಂದ 28.02.2023

ಸಹಿ/– ಉಪ ಆಯುಕ್ತರು(ಭೂಸ್ವಾ), ಬೆಂ.ಅ.ಪ್ರಾ. ಬೆಂಗಳೂರು.

ಉದ್ಯೋಗ ವಾಣಿ

SBI

ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ

ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427; ಫ್ಯಾಕ್ಸ್: 022-22820411

ಕ್ರೀಡಾ ವ್ಯಕ್ತಿಗಳ ನೇಮಕಾತಿ

ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಕ್ರೀಡಾ ವ್ಯಕ್ತಿಗಳ ನೇಮಕಾತಿಗಾಗಿ ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಯ ಹೆಸರು	ಖಾಲಿ ಹುದ್ದೆ
ಅಧಿಕಾರಿಗಳು (ಕ್ರೀಡಾ ವ್ಯಕ್ತಿಗಳು)	17
ಕ್ಲೆರಿಕಲ್ ಸಿಬ್ಬಂದಿ (ಕ್ರೀಡಾ ವ್ಯಕ್ತಿಗಳು)	51

ಅರ್ಹತೆಯ ಮಾನದಂಡಗಳು (ವಯಸ್ಸು, ಶೈಕ್ಷಣಿಕ, ಕ್ರೀಡೆಗಳು ಅರ್ಹತೆ ಇತ್ಯಾದಿ) ಆವಶ್ಯಕ ಶುಲ್ಕ ಹಾಗೂ ಇನ್ನಿತರ ವಿವರಗಳು ಜಾಹೀರಾತು ಸಂ. **CRPD/SPORTS/2024-25/07** ಬ್ಯಾಂಕಿನ ವೆಬ್ ಸೈಟ್ **https://bank.sbi/web/careers/current-openings** ನಲ್ಲಿ ಲಭ್ಯವಿದೆ, ಇದರೊಂದಿಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಹಾಗೂ ಅರ್ಜಿಯ ಶುಲ್ಕದ ಆನ್ ಲೈನ್ ಪಾವತಿಗಾಗಿ ಲಿಂಕ್ ಸಹ ಲಭ್ಯವಿದೆ. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಹಾಗೂ ಶುಲ್ಕವನ್ನು ಪಾವತಿಸುವ ಮೊದಲು ಜಾಹೀರಾತನ್ನು ವಿವರವಾಗಿ ಪರಿಶೀಲಿಸಿ ತಮ್ಮ ಅರ್ಹತೆಯನ್ನು ಖಚಿತಪಡಿಸಿಕೊಳ್ಳುವಂತೆ ಕೋರಲಾಗಿದೆ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸುವ ದಿನಾಂಕ: 24.07.2024 ರಿಂದ 14.08.2024**

ಸಂದೇಹಗಳೇನಾದರೂ ಇದ್ದಲ್ಲಿ ದಯವಿಟ್ಟು, ಮೇಲೆ ತಿಳಿಸಿರುವ ಬ್ಯಾಂಕಿನ ಅಧಿಕೃತ ವೆಬ್ ಸೈಟ್ ನಲ್ಲಿ ಲಭ್ಯವಿರುವ **"CONTACT US"** ಈ ಲಿಂಕ್ ಮೂಲಕ ನಮಗೆ ಬರೆಯಿರಿ.

ಸ್ಥಳ : ಮುಂಬೈ
ದಿನಾಂಕ : 24.07.2024

ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಂ)

‘ಪಾಪು ಸಮಾಧಿ ಜೀರ್ಣೋದ್ಧಾರ ಮಾಡಿ’

ಪ್ರಜಾವಾಣಿ ವಾರ್ತೆ


ಪಾಟೀಲ ಪುಟ್ಟಪ್ಪ

ಬೆಂಗಳೂರು: ‘ಕನ್ನಡ ಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ ಪಾಟೀಲ ಪುಟ್ಟಪ್ಪ ಅವರ ಸಮಾಧಿಯನ್ನು ಸರ್ಕಾರವು ಜೀರ್ಣೋದ್ಧಾರ ಮಾಡಿ, ಸೂಕ್ತ ರೀತಿಯಲ್ಲಿ ಗೌರವ ಸಲ್ಲಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸರ್ಕಾರಕ್ಕೆ ಮನವಿ ಮಾಡಿದೆ.

ಹಾವೇರಿಯ ಹಲಗೇರಿ ಗ್ರಾಮದಲ್ಲಿ ಇರುವ ಅವರ ಸಮಾಧಿ ಕಡೆಗಣಿಸಲ್ಪಟ್ಟು, ಸುಸ್ಥಿತಿಯಲ್ಲಿ ಇಲ್ಲದಿರುವುದಕ್ಕೆ ಪ್ರಾಧಿಕಾರ ವಿಷಾದ ವ್ಯಕ್ತಪಡಿಸಿದೆ. ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹಾಗೂ ಹಾವೇರಿ ಜಿಲ್ಲಾಧಿಕಾರಿಗೆ ಪತ್ರ ಬರೆದಿದೆ.

‘‘ಕರ್ನಾಟಕ’ ಹೆಸರಿಗೆ 50 ವರ್ಷ ತುಂಬಿದ ಸಂದರ್ಭದಲ್ಲಿ ಸರ್ಕಾರ ಮಾಡುವ ಈ ಕೆಲಸವು ಕನ್ನಡ ಪರ ಹೋರಾಟಗಾರರೊಬ್ಬರಿಗೆ ನೀಡುವ ಅತ್ಯುಚ್ಚ ಗೌರವವಾಗುತ್ತದೆ’ ಎಂದಿದೆ.

ಬೆಂಗಳೂರಿನಲ್ಲಿ ವಿದ್ಯುತ್ ಸೋರಿಕೆ ತಡೆಗೆ ಬೆಸ್ಕಾಂ ಕ್ರಮ • ಸಿಗಲಿದೆ ಬಳಕೆ ಪ್ರಮಾಣದ ನಿಖರ ಲೆಕ್ಕ

ಡಿಜಿಟಲ್ ಮೀಟರ್: ಶೇ 95 ಪೂರ್ಣ

• ಖಲೀಲಅಹ್ಮದ ಶೇಖ

ಹಳೆಯ ವಿದ್ಯುತ್ ಮೀಟರ್ ಬದಲಿಸುವ ಕೆಲಸ ಮುಕ್ತಾಯದ ಹಂತದಲ್ಲಿದೆ. ಬಾಕಿ ಉಳಿದಿರುವ ಮೀಟರ್ ಅಳವಡಿಕೆ ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿದೆ
ಮಹಾಂತೇಶ್ ಬೀಳಗಿ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ಬೆಂಗಳೂರು: ರಾಜಧಾನಿಯ ವ್ಯಾಪ್ತಿಯಲ್ಲಿ ಹಳೆಯ ವಿದ್ಯುತ್ ಮೀಟರ್‌ಗಳನ್ನು ಬದಲಿಸಿ ಡಿಜಿಟಲ್ ಮೀಟರ್ ಅಳವಡಿಸುವ ಪ್ರಕ್ರಿಯೆ ಶೇಕಡ 95.92ರಷ್ಟು ಪೂರ್ಣಗೊಂಡಿದೆ. ಇನ್ನು ಕೆಲವೇ ದಿನಗಳಲ್ಲಿ ರಾಜಧಾನಿಯಲ್ಲಿ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಬಳಕೆಯನ್ನು ಡಿಜಿಟಲ್ ಮೀಟರ್ ಮೂಲಕವೇ ಅಳೆಯಲು ಸಾಧ್ಯವಾಗಲಿದೆ.

ಬೆಂಗಳೂರು ನಗರದಲ್ಲಿ ಒಟ್ಟು 58.77ಲಕ್ಷ ಕಡಿಮೆ ಸಾಮರ್ಥ್ಯದ (ಎಲ್‌ಟಿ) ವಿದ್ಯುತ್ ಮಾಪಕಗಳಿವೆ. ಸಮೀಕ್ಷೆಯ ಪ್ರಕಾರ ಇದರಲ್ಲಿ 17.23 ಲಕ್ಷ ‘ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್’ಗಳಿದ್ದವು. ಅವುಗಳನ್ನು ಡಿಜಿಟಲ್ ಮೀಟರ್‌ಗೆ ಬದಲಾವಣೆ ಮಾಡುವ ಪ್ರಕ್ರಿಯೆಗೆ 2022ರ ಜುಲೈನಲ್ಲಿ ಚಾಲನೆ ನೀಡಲಾಗಿತ್ತು. ಇದಕ್ಕಾಗಿ ಬೆಸ್ಕಾಂ ₹285.65 ಕೋಟಿ ವೆಚ್ಚದ ಯೋಜನೆ ಕೈಗೆತ್ತಿಕೊಂಡಿತ್ತು.

ಮುಂಚೂಣಿಯಲ್ಲಿ ಪಶ್ಚಿಮ ವಿಭಾಗ: ‘ನಗರದ ನಾಲ್ಕು ವಿಭಾಗಗಳಲ್ಲಿ ಬಾಕಿ ಇರುವ ಡಿಜಿಟಲ್ ಮೀಟರ್ ಅಳವಡಿಕೆ ಕಾಮಗಾರಿಯನ್ನು ಆಗಸ್ಟ್ ತಿಂಗಳೊಳಗೆ ಮುಕ್ತಾಯ ಮಾಡಲಾಗುವುದು. 17,90,882 ಮೀಟರ್‌ಗಳ ಪೈಕಿ ಈಗಾಗಲೇ 17,17,935 ಮೀಟರ್‌ಗಳನ್ನು ಅಳವಡಿಸಲಾಗಿದೆ. ಉಳಿದ 72,949 ಮೀಟರ್‌ಗಳು ಅಳವಡಿಸುವ ಕೆಲಸ ಮಾತ್ರ ಉಳಿದಿದೆ’ ಎಂದು ಬೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದರು.

‘ಡಿಜಿಟಲ್ ಮೀಟರ್ ಅಳವಡಿಕೆಯಲ್ಲಿ ಶೇಕಡ 99ರಷ್ಟು ಗುರಿ ಸಾಧನೆಯೊಂದಿಗೆ ಬೆಸ್ಕಾಂನ ಬೆಂಗಳೂರು ನಗರದ ಪಶ್ಚಿಮ ವಿಭಾಗ ಮುಂಚೂಣಿಯಲ್ಲಿದೆ. ಪೂರ್ವ ವಿಭಾಗದಲ್ಲಿ ಶೇ 98.28, ಉತ್ತರ ವಿಭಾಗದಲ್ಲಿ ಶೇ 95 ಹಾಗೂ ದಕ್ಷಿಣ ವಿಭಾಗದಲ್ಲಿ ಶೇ 93.11ರಷ್ಟು ಮೀಟರ್‌ಗಳನ್ನು ಅಳವಡಿಸುವ ಕೆಲಸ ಮುಗಿದಿದೆ’ ಎಂದು ತಿಳಿಸಿದರು.

ನಗರ ವ್ಯಾಪ್ತಿಯಲ್ಲಿ ಡಿಜಿಟಲ್ ಮೀಟರ್ ಅಳವಡಿಸುವ ಕಲಸದ ಗುತ್ತಿಗೆಯನ್ನು ಎರಡು ಕಂಪನಿಗಳಿಗೆ ನೀಡಲಾಗಿದೆ. ಡಿಜಿಟಲ್ ಮೀಟರ್‌ಗಳನ್ನು ಗ್ರಾಹಕರಿಗೆ ಉಚಿತವಾಗಿಯೇ ಅಳವಡಿಸಲಾಗುತ್ತಿದೆ. ಸಿಂಗಲ್ ಫೇಸ್ ಡಿಜಿಟಲ್ ಮೀಟರ್‌ಗೆ ₹934 ಹಾಗೂ ತ್ರಿ-ಫೇಸ್ ಮೀಟರ್‌ಗೆ ₹2,312 ವೆಚ್ಚವನ್ನು ಬೆಸ್ಕಾಂ ಭರಿಸುತ್ತಿದೆ.

ಡಿಜಿಟಲ್ ಮೀಟರ್ ಅಳವಡಿಕೆಯಲ್ಲಿ ಗುರಿ ಸಾಧನೆ

ಬೆಂಗಳೂರು ವೃತ್ತ	ಗುರಿ	ಪ್ರಸ್ತುತ ಅಳವಡಿಕೆ	ಬಾಕಿ
ಪೂರ್ವ	40,0708	39,3,828	6,880
ಪಶ್ಚಿಮ	33,9,005	33,5,635	3,370
ಉತ್ತರ	48,7,930	46,4,000	23,930
ದಕ್ಷಿಣ	56,3,239	52,4,472	38,767
ಒಟ್ಟು	17,90,882	17,17,935	72,949

ಸೋರಿಕೆ ತಡೆಗೆ ಸಹಕಾರಿ: ‘ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್’ಗಳಲ್ಲಿ ಸಂಪರ್ಕಿತ ಲೋಡ್, ಪವರ್ ಫ್ಯಾಕ್ಟರ್ ಮತ್ತು ವೋಲ್ಟೇಜ್ ದಾಖಲಿಸುವ ವ್ಯವಸ್ಥೆ ಇರಲಿಲ್ಲ. ಇದರಿಂದ, ಬೆಸ್ಕಾಂಗೆ ವಿದ್ಯುತ್ ಶುಲ್ಕ ಸಂಗ್ರಹಣೆಯಲ್ಲಿ ನಷ್ಟವಾಗುತ್ತಿತ್ತು. ಕೆಲವೊಮ್ಮೆ ‘ಮೀಟರ್ ರೀಡಿಂಗ್’ ಬಗ್ಗೆಯೂ ದೂರುಗಳು ಬರುತ್ತಿದ್ದವು. ಡಿಜಿಟಲ್ ಮೀಟರ್ ಅಳವಡಿಕೆಯಿಂದ ವಿದ್ಯುತ್ ಶುಲ್ಕ ಸಂಗ್ರಹದಲ್ಲಿ ಈ ಹಿಂದೆ ಉಂಟಾಗುತ್ತಿದ್ದ ಸಮಸ್ಯೆಗಳಿಗೆ ಮುಕ್ತಿ ಸಿಗಲಿದೆ. ಗ್ರಾಹಕರು ಬಳಸುವ ಸಣ್ಣ ಪ್ರಮಾಣದ ವಿದ್ಯುತ್‌ನ ಲೆಕ್ಕವೂ ಸಿಗಲಿದೆ.

ಡಿಜಿಟಲ್ ಮೀಟರ್‌ನಿಂದ ಎರಡು ವರ್ಷಗಳ ತನಕ ಬಳಸಿರುವ ವಿದ್ಯುತ್ ಪ್ರಮಾಣ ಹಾಗೂ ಪಾವತಿಸಿರುವ ಶುಲ್ಕದ ಮೊತ್ತದ ಮಾಹಿತಿ ಸಿಗಲಿದೆ. ಅಲ್ಲದೇ ರಾಜ್ಯ ಸರ್ಕಾರವು ಜಾರಿಗೆ ತರುತ್ತಿರುವ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ನೋಂದಣಿಯಲ್ಲಿ ಹಿಂದಿನ ಮೀಟರ್ ರೀಡಿಂಗ್ ಅಳೆಯುವ ಲೆಕ್ಕಾಚಾರಕ್ಕೂ ನೆರವಾಗಲಿದೆ.

‘ಬೆಂಗಳೂರಿನಲ್ಲಿ ಡಿಜಿಟಲ್ ಮೀಟರ್ ಅಳವಡಿಕೆ ಮುಕ್ತಾಯವಾದ ನಂತರ ಬೆಸ್ಕಾಂ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ಈ ಮೀಟರ್‌ಗಳನ್ನು ಅಳವಡಿಸುವ ಯೋಜನೆ ಆರಂಭವಾಗಲಿದೆ. ಟೆಂಡರ್ ಪ್ರಕ್ರಿಯೆ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದು ಅಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ಡೆಂಗಿ: ಮೂರು ತಿಂಗಳು ಮುನ್ನೆಚ್ಚರಿಕೆ ಅಗತ್ಯ- ದಿನೇಶ್

ಬೆಂಗಳೂರು: ‘ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಇಳಿಕೆ ಕಂಡರೂ ಅಕ್ಟೋಬರ್ ಅಂತ್ಯದವರೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ‘ಪ್ರಕರಣಗಳು ಕಡಿಮೆಯಾದ ಬಳಿಕ ಡೆಂಗಿ ಜ್ವರ ನಿಯಂತ್ರಣಕ್ಕೆ ಬಂದಿತು ಎನ್ನಲು ಸಾಧ್ಯವಿಲ್ಲ. ಬಿಸಿಲು-ಮಳೆಯ ವಾತಾವರಣದಿಂದ ಪ್ರಕರಣಗಳ ಏರಿಳಿತವಾಗುತ್ತದೆ’ ಎಂದರು.

ರಾಜ್ಯದಲ್ಲಿ 259 ಮಂದಿ ಹೊಸದಾಗಿ ಡೆಂಗಿ ಪೀಡಿತರಾಗಿರುವುದು ಮಂಗಳವಾರ ದೃಢಪಟ್ಟಿದ್ದು, ಈ ಜ್ವರ ಪೀಡಿತರಲ್ಲಿ 395 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಸಕ್ರಿಯ ಡೆಂಗಿ ಪ್ರಕರಣಗಳ ಸಂಖ್ಯೆ 2,085ಕ್ಕೆ ಇಳಿಕೆಯಾಗಿದೆ. ಡೆಂಗಿ ಪೀಡಿತರಲ್ಲಿ ಸದ್ಯ 1,827 ಮಂದಿ ಮನೆ ಆರೈಕೆಗೆ ಒಳಗಾದರೆ, ತೀವ್ರ ನಿಗಾ ಘಟಕದಲ್ಲಿರುವ ಆರು ಮಂದಿ ಸೇರಿ 258 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

24 ಗಂಟೆಗಳ ಅವಧಿಯಲ್ಲಿ 1,989 ಪರೀಕ್ಷೆಗಳನ್ನು ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 126 ಸೇರಿ 27 ಜಿಲ್ಲೆಗಳಲ್ಲಿ ಹೊಸದಾಗಿ ಡೆಂಗಿ ಪ್ರಕರಣಗಳು ಖಚಿತಪಟ್ಟಿವೆ. ಬೆಳಗಾವಿ (23) ಹಾಗೂ ತುಮಕೂರಿನಲ್ಲಿ (13) ಅಧಿಕ ಪ್ರಕರಣಗಳು ವರದಿಯಾಗಿವೆ.

ರಾಜ್ಯದಲ್ಲಿ ಡೆಂಗಿ ಪತ್ತೆಗೆ ಸಂಬಂಧಿಸಿದಂತೆ ಈವರೆಗೆ 1.38 ಲಕ್ಷ ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ. ಒಟ್ಟು ಪ್ರಕರಣಗಳ ಸಂಖ್ಯೆ 19,923ಕ್ಕೆ ಏರಿಕೆಯಾಗಿದೆ.

‘ಸಂಶೋಧನೆಗಳು ಅಭಿವೃದ್ಧಿಗೆ ಬುನಾದಿ’

ಬೆಂಗಳೂರು: ‘ಇಂದಿನ ಸಂಶೋಧನೆಗಳು ಭವಿಷ್ಯದ ಅಭಿವೃದ್ಧಿಗೆ ಬುನಾದಿಯಾಗಲಿವೆ. ಸಂಶೋಧಕರು ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚು ಆದ್ಯತೆ ನೀಡಬೇಕು’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಹೇಳಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಮಂಗಳವಾರ ನಡೆದ ‘ಸ್ನಾತಕೋತ್ತರ ವಿಜ್ಞಾನ ಸಪ್ತಾಹ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಸಂಶೋಧನೆಯ ಮೂಲಭೂತ ಹಾಗೂ ಅನ್ವಯಿಕ ಆಯಾಮಗಳೆರಡನ್ನೂ ಪರಿಚಯಿಸುವುದರ ಜೊತೆಗೆ ಪರಿಣಾಮಕಾರಿ ಸಂವಹ ಪ್ರಾವೀಣ್ಯತೆಯನ್ನು ಸಾಧಿಸಲು ವಿಜ್ಞಾನ ಸಪ್ತಾಹಗಳು ನೆರವಾಗುತ್ತವೆ. ಕೃಷಿಯು ವೈಜ್ಞಾನಿಕ ಜ್ಞಾನವನ್ನು ಸಂಯೋಜಿಸಿ ವರ್ಗಾಯಿಸುವಲ್ಲಿ ಸಹಾಯವಾಗುತ್ತದೆ’ ಎಂದರು.

ಲೇಖಕ ಕೆ.ಎನ್. ಗಣೇಶಯ್ಯ ಭಾಗವಹಿಸಿದ್ದರು.

ಮನೆ ಬದಲು: ಡಿ-ಲಿಂಕ್ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಬದಲಾಯಿಸಿರುವವರು ಗೃಹ ಜ್ಯೋತಿ ಪಡೆಯಲು ಹಳೆ ಮನೆಯ ಆರ್. ಆರ್. ಸಂಖ್ಯೆಯನ್ನು ಡಿ-ಲಿಂಕ್ ಮಾಡಿ, ಹೊಸ ಮನೆಯ ಸಂಖ್ಯೆಯನ್ನು ಲಿಂಕ್ ಮಾಡುವ ಸೌಲಭ್ಯವನ್ನು ಇಂಧನ ಇಲಾಖೆ ಕಲ್ಪಿಸಿದೆ.

ಬಾಡಿಗೆ ಮನೆಯಲ್ಲಿ ವಾಸಿಸುವವರು ಅಥವಾ ಸ್ವಂತ ಮನೆಗಳಲ್ಲಿ ವಾಸಿಸುತ್ತಿದ್ದು, ವಿವಿಧ ಕಾರಣಗಳಿಗಾಗಿ ಮನೆ ಬದಲಿಸಿದಾಗ ಗೃಹ ಜ್ಯೋತಿ ಸೌಲಭ್ಯ ಪಡೆಯಲು ಆರ್. ಆರ್. ಸಂಖ್ಯೆ ಬದಲಿಸಲು ಅವಕಾಶವಿರಲಿಲ್ಲ. ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳು ಆರ್.ಆರ್. ಸಂಖ್ಯೆಯನ್ನು ಡಿ-ಲಿಂಕ್ ಮಾಡಿ, ಹೊಸ ಸಂಖ್ಯೆಯನ್ನು ಲಿಂಕ್ ಮಾಡಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ಅವಕಾಶ ಒದಗಿಸಲಾಗಿದೆ.

ವಾರ್ಷಿಕ ವೆಚ್ಚ

1.67 ಕೋಟಿ
ಒಟ್ಟು ನೋಂದಣಿ

1.56 ಕೋಟಿ, ಒಟ್ಟು
ಫಲಾನುಭವಿಗಳು

₹ 8,239 ಕೋಟಿ,
ಬಿಡುಗಡೆಯಾಗಿರುವ ಸಹಾಯಧನ

ಡಿ-ಲಿಂಕ್ ಮಾಡುವುದು ಹೇಗೆ?: ಸೇವಾ ಸಿಂಧು ಪೋರ್ಟಲ್‌ನ https://sevasindhu.karnataka.gov.in/GruhaJyothi_Delink/

ಗೃಹ ಜ್ಯೋತಿ

GetAadhaarData.aspx ವೆಬ್‌ಸೈಟ್ ಪ್ರವೇಶಿಸಿ ಆರ್.ಆರ್. ಸಂಖ್ಯೆಯನ್ನು ಡಿ-ಲಿಂಕ್ ಮಾಡಬಹುದು. ಪೋರ್ಟಲ್ ಓಪನ್ ಆಗದೇ ಇದ್ದಲ್ಲಿ, Cache Memory Clear ಮಾಡಿ ನಂತರ ಪೋರ್ಟಲ್ ಲಿಂಕ್ ಕ್ಲಿಕ್ ಮಾಡಿ ಸೇವೆ ಪಡೆಯಬಹುದು ಎಂದು ಇಲಾಖೆ ತಿಳಿಸಿದೆ.

ಮನೆ ಬದಲಾಯಿಸಿದಾಗ ಹಿಂದೆ ಆ ಮನೆಯಲ್ಲಿ ವಾಸವಿದ್ದವರ ಆಧಾರ್ ಸಂಖ್ಯೆ ಜತೆ ಆರ್.ಆರ್. ನಂಬರ್ ಲಿಂಕ್ ಆಗಿದೆಯೇ ಅಥವಾ ಅವರು ಡಿ-ಲಿಂಕ್ ಮಾಡಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕು. ಆಗಿರದಿದ್ದರೆ ಡಿ-ಲಿಂಕ್ ಮಾಡಿ, ಹೊಸದಾಗಿ ಆರ್.ಆರ್ ನಂಬರ್‌ಗೆ ಆಧಾರ್ ಲಿಂಕ್ ಮಾಡಬೇಕು.

ಮದ್ರಾಸ್ ಐಐಟಿಗೆ ₹228 ಕೋಟಿ ದೇಣಿಗೆ ನೀಡಿದ ಹಳೆ ವಿದ್ಯಾರ್ಥಿ

ಚೆನ್ನೈ (ಪಿಟಿಐ): ಅಮೆರಿಕದ ಕೈಗಾರಿಕೋದ್ಯಮಿ ಡಾ. ಕೃಷ್ಣ ಚಿವುಕುಲಾ ಅವರು ಮದ್ರಾಸ್ ಐಐಟಿಗೆ ₹228 ಕೋಟಿ ದತ್ತಿ ನಿಧಿ ನೀಡಿದ್ದಾರೆ.

ಇದನ್ನು ಐಐಟಿ ಮದ್ರಾಸ್ ಈವರೆಗೆ ಸ್ವೀಕರಿಸಿರುವ ದತ್ತಿ ಹಣದಲ್ಲೇ ಏಕೈಕ ಅತಿದೊಡ್ಡ ದೇಣಿಗೆ ಎಂದು ಪರಿಗಣಿಸಲಾಗಿದೆ. ವಿವಿಧ ಉಪ ಕ್ರಮಗಳಿಗೆ ಈ ಹಣವನ್ನು ಬಳಸಲಾಗುತ್ತಿದೆ ಎಂದು ಸಂಸ್ಥೆಯ ನಿರ್ದೇಶಕ ವಿ. ಕಾಮಕೋಟಿ ತಿಳಿಸಿದರು.

‘ಸುಮಾರು 53 ವರ್ಷಗಳ ನಂತರ, ನಮ್ಮ ಸಂಸ್ಥೆಯ ಹಳೆಯ ವಿದ್ಯಾರ್ಥಿ ಡಾ. ಕೃಷ್ಣ ಚಿವುಕುಲ ಅವರು ಐಐಟಿ-ಮದ್ರಾಸ್‌ಗೆ ₹228 ಕೋಟಿ ದತ್ತಿ ನೀಡಲು ಬಂದಿದ್ದಾರೆ. 8ನೇ ತರಗತಿವರೆಗೆ ತೆಲುಗು ಮಾಧ್ಯಮದಲ್ಲಿ ಶಿಕ್ಷಣ ಪಡೆದಿದ್ದ ಅವರು 1970ರ ದಶಕದಲ್ಲಿ ನಮ್ಮ ಸಂಸ್ಥೆಯಲ್ಲಿ ಏರೋಸ್ಪೇಸ್ ಎಂಜಿನಿಯರಿಂಗ್‌ನಲ್ಲಿ ಎಂಟೆಕ್ ಓದಿದ್ದರು. ನಂತರ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಬಿಸಿನೆಸ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅವರು ಅಮೆರಿಕದಲ್ಲಿ ವಿಮಾನಗಳ ಬಿಡಿಭಾಗಗಳ ತಯಾರಿಕೆಯ ಕಂಪನಿಗಳನ್ನು ಸ್ಥಾಪಿಸಿದ್ದಾರೆ’ ಎಂದು ಕಾಮಕೋಟಿ ಸುದ್ದಿಗಾರರಿಗೆ ತಿಳಿಸಿದರು.

2023-24ರ ಅವಧಿಯಲ್ಲಿ ಸಂಸ್ಥೆಯು ₹513 ಕೋಟಿ ನಿಧಿಯನ್ನು ಸಂಗ್ರಹಿಸಿದೆ. ಹಿಂದಿನ ಹಣಕಾಸು ವರ್ಷಕ್ಕಿಂತ ಶೇ 135 ಹೆಚ್ಚು ನಿಧಿ ಸಂಗ್ರಹವಾಗಿದೆ. ಚಿವುಕುಲ ಅವರ ಕೊಡುಗೆಯನ್ನು ಗುರುತಿಸುವ ಭಾಗವಾಗಿ, ಅಡ್ಯಾರ್‌ನಲ್ಲಿರುವ ತನ್ನ ವಿಸ್ತಾರವಾದ ಕ್ಯಾಂಪಸ್‌ನಲ್ಲಿ ಕೃಷ್ಣ ಚಿವುಕುಲ ವಿಭಾಗವನ್ನು ಮದ್ರಾಸ್ ಐಐಟಿ ಸ್ಥಾಪಿಸಿದೆ ಎಂದಿದ್ದಾರೆ.

ಇತ್ತೀಚೆಗೆ ಅಂಜನಾಪುರದ ಸಾರಂಗದ ಸಿಲಿಕಾನ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ 8ನೇ ಹವ್ಯಕ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ಡಬಲ್ಸ್‌ನಲ್ಲಿ ಗೆದ್ದ ಅಭಿಶೇಕ್ ಮತ್ತು ಕಿರಣ್, ರನ್ನರ್ ಅಪ್ ಆದ ಗುರುರಾಜ್ ಹೆಗಡೆ ಮತ್ತು ಅಖಿಲ್ ಹೆಗಡೆ ಅಭಿನಂದಿಸಲಾಯಿತು. ಜಿಯೋ ಸ್ಟುಡಿಯೊದ ಬ್ಯುಸಿನೆಸ್ ಮುಖ್ಯಸ್ಥ ಪರಮೇಶ್ವರ ಗುಂಡ್ಕಲ್, ಜೈರಾಮ ಪೈ, ವಿಶ್ವನಾಥ ಹೆಗಡೆ, ಜಗದೀಶ್ ಮತ್ತು ಕಮಲಾಕರ ಭಟ್ ಭಾಗವಹಿಸಿದ್ದರು

ನನ್ನನ್ನು ಕಾಪಾಡಿ: ಅಂಗಲಾಚಿದ ಅಧಿಕಾರಿ

ಪೊಲೀಸ್ ಕಿರುಕುಳ: ಹೈಕೋರ್ಟ್‌ನಲ್ಲಿ ಸಾಗರ ತಾಲ್ಲೂಕಿನ ಕೆಪಿಟಿಸಿಎಲ್ ಎಂಜಿನಿಯರ್ ಅಳಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶಾಸಕ, ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿದ್ದಾರೆ: ಆರೋಪ
- ಎನ್‌ಕೌಂಟರ್ ಮಾಡುವ ಬೆದರಿಕೆ

ಬೆಂಗಳೂರು: ‘ನನಗೆ ಶಿವಮೊಗ್ಗ ಜಿಲ್ಲೆಯ ಸಾಗರದ ಡಿವೈಎಸ್‌ಪಿ (ಉಪ ಪೊಲೀಸ್ ವರಿಷ್ಠಾಧಿಕಾರಿ) ಕಿರುಕುಳ ನೀಡುತ್ತಿದ್ದಾರೆ. ನಾನು ಕೋರ್ಟ್ ಹಾಲ್‌ನಿಂದ ಹೊರಗೆ ಹೋಗುವುದಿಲ್ಲ. ನನ್ನನ್ನು ಕಾಪಾಡಿ’ ಎಂದು ಸಾಗರದ ಕೆಪಿಟಿಸಿಎಲ್‌ನ ಸಹಾಯಕ ಎಂಜಿನಿಯರ್; ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಕೈಮುಗಿದು ಅಂಗಲಾಚಿದ ಘಟನೆಗೆ ಹೈಕೋರ್ಟ್ ಮಂಗಳವಾರ ಸಾಕ್ಷಿಯಾಯಿತು.

ಬೆಳಗಿನ ಕಲಾಪ ಮುಗಿಸಿ ಮಧ್ಯಾಹ್ನದ ಊಟದ ವೇಳೆಗೆ ಪೀಠದಿಂದ ನಿರ್ಗಮಿಸಲು ಸಿದ್ಧರಾದ ನ್ಯಾಯಮೂರ್ತಿ ನಾಗಪ್ರಸನ್ನ ಅವರ ಮುಂದೆ ಕೈಮುಗಿದು ಹಾಜರಾದ ಸಾಗರ ತಾಲ್ಲೂಕಿನ ಆನಂದಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಂ.ಜಿ. ಶಾಂತಕುಮಾರ ಸ್ವಾಮಿ, ‘ಡಿವೈಎಸ್‌ಪಿ ಗೋಪಾಲ ನಾಯಕ್ ನನ್ನ ಮೇಲೆ ದೌರ್ಜನ್ಯ ಎಸಗಿದ್ದಾರೆ’ ಎಂದು ವಿವರಿಸಿ ರಕ್ಷಣೆ ಒದಗಿಸುವಂತೆ ಕೋರಿದರು.

ಶಾಂತಕುಮಾರ ಸ್ವಾಮಿ ಹೇಳಿದ್ದೇನು?: ‘ನನಗೆ ಮದುವೆ ನಿಶ್ಚಯಗೊಂಡು ರದ್ದಾಗಿತ್ತು. ತದನಂತರ ಸ್ಥಳೀಯ ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ಮತ್ತು ಪೊಲೀಸರು ನನ್ನ ಮೇಲೆ ಸುಳ್ಳು ಪ್ರಕರಣವೊಂದನ್ನು ದಾಖಲಿಸಿ, ನನ್ನಿಂದ ಹಣ ಕೀಳಲು ಪ್ರಯತ್ನಿಸಿದ್ದಾರಲ್ಲದೆ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಇದನ್ನು ರೆಕಾರ್ಡ್ ಮಾಡಿ, ನಾನು ಲೋಕಾಯುಕ್ತಕ್ಕೆ ದೂರು ನೀಡಿದ್ದೆ. ಇದರಿಂದ ಕುಪಿತಗೊಂಡ ಅವರು, ಲೋಕಾಯುಕ್ತಕ್ಕೆ ದೂರು ನೀಡಿದ್ದೀಯಾ ಎಂದು ನನ್ನನ್ನು ಸಾಗರದಲ್ಲಿ ಇರಗೊಡಲು ಬಿಡುತ್ತಿಲ್ಲ. ಅಲ್ಲಿಂದ ವರ್ಗಾವಣೆಗೆ ಕೋರುತ್ತಿದ್ದರೆ ಅದೂ ಸಾಧ್ಯವಾಗಿಲ್ಲ’ ಎಂದು ಎಂ.ಜಿ.ಶಾಂತಕುಮಾರ ಸ್ವಾಮಿ ತಮಗಾಗುತ್ತಿರುವ ನೋವನ್ನು ತೋಡಿಕೊಂಡರು.

‘ಸಾಗರದಲ್ಲಿ ನನ್ನ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ಜುಲೈ 22ರಂದು ತಮ್ಮ ಘನ ನ್ಯಾಯಪೀಠದ ಮುಂದೆಯೇ ನಡೆದಿತ್ತು. ನಾನು ಅಂದು ವಕೀಲರನ್ನು ನೇಮಿಸಿಕೊಳ್ಳುವುದಾಗಿ ತಿಳಿಸಿದ್ದರಿಂದ, ಹೊಸದಾಗಿ ಅರ್ಜಿ ಸಲ್ಲಿಸಲು ಸ್ವಾತಂತ್ರ್ಯ ಕಲ್ಪಿಸಿ ತಾವು ಅರ್ಜಿ ವಿಲೇವಾರಿ ಮಾಡಿದ್ದೀರಿ. ಈ ಪ್ರಕ್ರಿಯೆಯನ್ನು ವಿಡಿಯೊದಲ್ಲಿ ವೀಕ್ಷಿಸಿದ್ದ ಡಿವೈಎಸ್‌ಪಿ, ಹೈಕೋರ್ಟ್‌ನಲ್ಲಿ ಪೊಲೀಸರ ವಿರುದ್ಧ ದೂರು ಹೇಳುತ್ತೀಯ? ಎಂದು ನನ್ನನ್ನು ದಂಡಿಸಿದ್ದಾರೆ’ ಎಂದು ದೂರಿದರು.

‘ನನ್ನ ವಿರುದ್ಧ ಸುಳ್ಳು ಗಾಂಜಾ ಪ್ರಕರಣ ಸೇರಿದಂತೆ ಕೆಲವು ಗಂಭೀರ ಅಪರಾಧಿಕ ಕೃತ್ಯಗಳ ಕಲಂ ಅನ್ನೂ ಅನ್ವಯಿಸಿ ನನ್ನನ್ನು ಬಂಧಿಸಿ ಶಿವಮೊಗ್ಗ ಜೈಲಿಗೆ ಕಳಿಸಿದ್ದರು. ನನ್ನ ಮೊಬೈಲ್ ಮತ್ತು ಪರ್ಸ್ ಕಸಿದುಕೊಂಡಿದ್ದಾರೆ. ರೌಡಿ ಶೀಟರ್ ತೆರೆಯಲಾಗುವುದು ಎಂದಿದ್ದಾರೆ. ರಿವಾಲ್ವಾರ್ ಇಟ್ಟು ಎನ್‌ಕೌಂಟರ್ ಮಾಡಲಾಗುವುದು ಎಂದು ಬೆದರಿಕೆ ಒಡ್ಡಿದ್ದಾರೆ’ ಎಂದು ಕಣ್ಣೀರುಗರೆದರು.

ಶಾಂತಕುಮಾರ ಸ್ವಾಮಿ ಅವರ ಈ ವೃತ್ತಾಂತವನ್ನು ಸಮಾಧಾನ ಚಿತ್ತದಿಂದ ಆಲಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ನಿರ್ದೇಶನ ನೀಡಿ, ‘ಯಾವ ಪೊಲೀಸ್ ಅಧಿಕಾರಿ ಇವರಿಗೆ ಕಿರುಕುಳ ನೀಡುತ್ತಿದ್ದಾರೆ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಿ. ಒಂದು ವೇಳೆ ಇವರ ಆರೋಪ ನಿಜವಾಗಿದ್ದರೆ ಆ ಅಧಿಕಾರಿ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಖಡಕ್ ತಾಕೀತು ಮಾಡಿದರು. ಅಂತೆಯೇ, ‘ಒಂದು ವೇಳೆ ಆರೋಪ ಸುಳ್ಳಾಗಿದ್ದರೆ ಫಿರ್ಯಾದುದಾರರ ವಿರುದ್ಧವೂ ಕ್ರಮ ಜರುಗಿಸಲಾಗುವುದು’ ಎಂದು ಎಚ್ಚರಿಸಿ, ವಿಚಾರಣೆಯನ್ನು ಆ.7ಕ್ಕೆ ಮುಂದೂಡಿದರು.

‘ಭಾಷಾ ದೋಷಗಳು ಶಾಸನದ ಉದ್ದೇಶಕ್ಕೇ ಕೊಳ್ಳಿ ಇಡಬಲ್ಲವು’

ಬೆಂಗಳೂರು: ‘ಭಾಷಾ ದೋಷಗಳು ಶಾಸನದ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತವೆ’ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ‘ಶಾಸನ ರಚನಾ ಪ್ರಕ್ರಿಯೆಯನ್ನು ಸಾಕಷ್ಟು ಕಾಳಜಿ, ಎಚ್ಚರಿಕೆ ಹಾಗೂ ಪರಿಣತಿಯ ನೆಲೆಗಟ್ಟಿನಲ್ಲಿ ಕೈಗೊಳ್ಳಬೇಕು’ ಎಂದು ಹೇಳಿದೆ.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಜಮೀನು ಪರಭಾರೆ ನಿಷೇಧ) ಕಾಯ್ದೆ–1978ಕ್ಕೆ 2023ರ ಜುಲೈನಲ್ಲಿ ಮಾಡಲಾಗಿರುವ ತಿದ್ದುಪಡಿ ಕುರಿತಾದ ಪ್ರಕರಣವನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಜಮೀನಿನ ಸ್ವಾಮಿತ್ವ ನಿರಾಕರಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ದಾವಣಗೆರೆಯ ಗೌರಮ್ಮ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿರುವ ನ್ಯಾಯಪೀಠ, ‘ಕಾನೂನು ಭಾಷೆಯ ಮೂಲಕ ಮಾತನಾಡುತ್ತದೆ. ಭಾಷೆಯನ್ನು ಸರಿಯಾಗಿ ಬಳಕೆ ಮಾಡದೇ ಹೋದರೆ ಅದು ಯಾವ ಸಾರ್ಥಕತೆ ಈಡೇರಿಸಬೇಕೊ ಅದು ಆಗುವುದಿಲ್ಲ. ಭಾಷಾ ದೋಷವಾದರೆ ಶಾಸನದ ಮೂಲ ಉದ್ದೇಶಕ್ಕೇ ಸೋಲಾಗುತ್ತದೆ’ ಎಂದು ಹೇಳಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಎತ್ತಿಹಿಡಿದಿರುವ ವಿಭಾಗೀಯ ನ್ಯಾಯಪೀಠವು, ‘ಜಮೀನಿನ ಸ್ವಾಮಿತ್ವ ಕೋರಿಕೆಯ ಅರ್ಜಿಗಳ ಕುರಿತಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದ ಹೊರಬರಬೇಕು ಎನ್ನುವುದಾದರೆ ಶಾಸನದಲ್ಲಿ ಬೇರೆ ರೀತಿಯ ಪದಗಳನ್ನು ಬಳಕೆ ಮಾಡಬಹುದಿತ್ತು’ ಎಂಬ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಮಂಜೂರಾಗಿದ್ದ ಜಮೀನನ್ನು 1978ರ ಕಾಯ್ದೆ ಪ್ರಕಾರ ಪರಭಾರೆ ಮಾಡಿದ್ದರೂ ಕಾಲಮಿತಿ ಇಲ್ಲದೆ, ಸ್ವಾಮಿತ್ವ ಅರ್ಜಿ ಸಲ್ಲಿಸಬಹುದು. ಆದರೆ, ತಿದ್ದುಪಡಿ ಕಾಯ್ದೆಯನ್ನು ಪೂರ್ವಾನ್ವಯಗೊಳಿಸಲಾಗಿದೆ. ಸದ್ಯ ಈ ಕಾನೂನು ಚಾಲ್ತಿಯಲ್ಲಿ ಇದ್ದರೂ ಪುನಃ ಅದನ್ನು ಇನ್ನೊಂದು ಅಂಶವಾಗಿ ಸೇರ್ಪಡೆ ಮಾಡಿರುವುದು ಹಳೆಯದರ ಪ್ರತಿರೂಪದಂತಿದೆ ಅಷ್ಟೇ’ ಎಂದು ನ್ಯಾಯಪೀಠ ಹೇಳಿದೆ.

‘2023ನೇ ಸಾಲಿನ ತಿದ್ದುಪಡಿಯ ಸಿಂಧುತ್ವ ಪ್ರಶ್ನಿಸಲಾದ ಅರ್ಜಿಯ ವಿಚಾರಣೆ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಾಕಿ ಇರುವ ಹಿನ್ನೆಲೆಯಲ್ಲಿ, ತಿದ್ದುಪಡಿಯ ಸಿಂಧುತ್ವದ ಬಗ್ಗೆ ಯಾವುದೇ ಚರ್ಚೆ ಮಾಡಲಾಗದು’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ರೇಖಾ ಶರ್ಮಾ ಅವಧಿ ಕೊನೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ರೇಖಾ ಶರ್ಮಾ ಅವರ ಅಧಿಕಾರಾವಧಿ ಮಂಗಳವಾರ ಕೊನೆಗೊಂಡಿದೆ. 60 ವರ್ಷದ ಶರ್ಮಾ, 2018ರ ಆಗಸ್ಟ್ 7ರಂದು ಎನ್‌ಸಿಡಬ್ಲ್ಯು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು.

‘ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ನನ್ನ ಒಂಬತ್ತು ವರ್ಷಗಳ ಅಧಿಕಾರಾವಧಿ ಮಂಗಳವಾರ ಕೊನೆಗೊಂಡಿದೆ. ಈ ಒಂಬತ್ತು ವರ್ಷಗಳ ಅಧಿಕಾರಾವಧಿ ಭಾರಿ ಏರಿಳಿತಗಳಿಂದ ಕೂಡಿತ್ತು. ತುಂಬಾ ವಿನಮ್ರವಾದ ಹಿನ್ನೆಲೆಯಿಂದ ಬಂದು, ಮೂರು ಅವಧಿಯನ್ನು ಪೂರ್ಣಗೊಳಿಸಿದ್ದೇನೆ’ ಎಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ಇತ್ತೀಚಿನ ಮಣಿಪುರ ಹಿಂಸಾಚಾರದಲ್ಲೂ ಅವರು ಮಹಿಳೆಯರ ಪರ ಧ್ವನಿ ಎತ್ತಲಿಲ್ಲ ಎನ್ನುವ ಆರೋಪಗಳು ಸೇರಿದಂತೆ ಹಲವು ವಿವಾದಗಳಿಗೂ ಅವರು ಗುರಿಯಾಗಿದ್ದರು.

ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳಲ್ಲಿ ವರದಿಯಾಗುವ ಪ್ರಕರಣಗಳಲ್ಲಿ ಇವರು ಕ್ರಮ ಕೈಗೊಳ್ಳುತ್ತಿರಲಿಲ್ಲ ಎನ್ನುವ ಆಪಾದನೆ ರೇಖಾ ಅವರ ಮೇಲಿತ್ತು. ಆದರೆ, ಈ ಆರೋಪವನ್ನು ಅವರು ಬಲವಾಗಿ ತಳ್ಳಿಹಾಕಿದ್ದಾರೆ.

ಕನ್ನಡಿಗರಿಗೆ ಉದ್ಯೋಗ ಮೀಸಲು: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿನ ಕೈಗಾರಿಕೆಗಳು-ಕಾರ್ಖಾನೆಗಳು ಮತ್ತು ಇತರೆ ಉದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ನಗರದ ಬಿಳೇಕಹಳ್ಳಿಯ ಸೋಮೇಶ್ವರ ಲೇ-ಔಟ್‌ನ ಲೆಕ್ಕ ಪರಿಶೋಧಕಿ ಆರ್. ಅಮೃತಲಕ್ಷ್ಮಿ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಅರ್ಜಿದಾರರು ಆಕ್ಷೇಪಿಸಿರುವ ಮಸೂದೆ ಇನ್ನೂ ಕಾಯ್ದೆ ರೂಪದಲ್ಲಿ ಜಾರಿಗೆ ಬಂದಿಲ್ಲ. ಸದ್ಯ ಕರಡು ಸ್ವರೂಪದಲ್ಲಿದ್ದು ಇನ್ನೂ ಕಾನೂನಿನ ಮಾನ್ಯತೆ ಪಡೆದುಕೊಂಡಿಲ್ಲ’ ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿ ವಜಾಗೊಳಿಸಿ ಆದೇಶಿಸಿತು.

‘ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಮಸೂದೆಯು ಸಂವಿಧಾನದ 19 (1) (ಡಿ), 19 (1) (ಇ), 19 (1)(ಜಿ) ಮತ್ತು 14ನೇ ವಿಧಿಗಳಿಗೆ ವಿರುದ್ಧವಾಗಿದೆ. ಈ ಮಸೂದೆ ಅನುಷ್ಠಾನಗೊಂಡಲ್ಲಿ ಇದು ಸ್ವಾಭಾವಿಕ ನ್ಯಾಯತತ್ವಗಳ ಉಲ್ಲಂಘನೆಯಾಗುತ್ತದೆ. ಅಂತೆಯೇ, ಈ ಕಾಯ್ದೆಯನ್ನು ಜಾರಿಗೊಳಿಸುವ ಸಾಮರ್ಥ್ಯವನ್ನು ರಾಜ್ಯದ ಶಾಸಕಾಂಗ ಹೊಂದಿಲ್ಲ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ನಗರದಲ್ಲಿ ನಾಳೆ ನೀರಿನ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲ ಮಂಡಳಿಯ ವಿವಿಧ ಉಪ ವಿಭಾಗಗಳಲ್ಲಿ ಗುರುವಾರ ಬೆಳಿಗ್ಗೆ 9.30ರಿಂದ 11 ರವರೆಗೆ ನೀರಿನ ಅದಾಲತ್ ನಡೆಯಲಿದೆ.

ಅದಾಲತ್‌ನಲ್ಲಿ ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿ ಆಗುತ್ತಿರುವ ವಿಳಂಬ, ಗೃಹ ಬಳಕೆಯಿಂದ ವಾಣಿಜ್ಯ ಬಳಕೆಗೆ ಪರಿವರ್ತನೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.

ಸಾರ್ವಜನಿಕರು ಜಲಮಂಡಳಿಯ ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916 ಗೆ ಕರೆಮಾಡಿ ದೂರು ದಾಖಲಿಸಬಹುದು. ವಾಟ್ಸ್ ಆ್ಯಪ್ ಸಂಖ್ಯೆ– 8762228888ಗೆ ಸಂದೇಶದ ಮೂಲಕವೂ ದೂರು ಸಲ್ಲಿಸಬಹುದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

‘ಬೆಂಗಳೂರು ನ್ಯಾನೊ 2024’ ಸಮ್ಮೇಳನದ ಸಮಾರೋಪದಲ್ಲಿ ಪ್ರದಾನ

‘ಸ್ಮಾರ್ಟ್ ಗ್ಲಾಸ್ ಟೆಕ್ನಾಲಜಿ’ ಅಭಿವೃದ್ಧಿಗಾಗಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಮಾರ್ಟ್ ಗ್ಲಾಸ್ ಟೆಕ್ನಾಲಜಿ’ ಅಭಿವೃದ್ಧಿಪಡಿಸಿರುವ ಜೆಎನ್‌ಸಿಎಎಸ್‌ಆರ್- ಸಿಇಎನ್‌ಎಸ್-ಎಸ್‌ಜಿಆರ್‌ಐ ತಂಡಕ್ಕೆ ‘ಬೆಂಗಳೂರು ಇಂಡಿಯಾ ನ್ಯಾನೊ ಇನ್ನೋವೇಷನ್’ ಪ್ರಶಸ್ತಿ ಲಭಿಸಿದೆ.

‘ಬೆಂಗಳೂರು ನ್ಯಾನೊ 2024’ ಸಮ್ಮೇಳನದ ಸಮಾರೋಪದಲ್ಲಿ ತಂಡಕ್ಕೆ ಟ್ರೋಫಿ, ಪ್ರಮಾಣಪತ್ರ ಮತ್ತು ₹1 ಲಕ್ಷ ನಗದು ಬಹುಮಾನ ನೀಡಲಾಯಿತು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಆ್ಯಂಡ್ ರಿಸರ್ಚ್‌ನ (ಐಐಎಸ್‌ಇಆರ್) ಸುಮಿತಾ ಮುಖರ್ಜಿ, ಬೆಂಗಳೂರಿನ ಜೆಎನ್‌ಸಿಎಎಸ್‌ಆರ್‌ನ ಸೌಮಿ ಮೊಂಡಲ್, ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಮನಿಶಾ ಬುಂಗ್ಲಾ ಮತ್ತು ಬೆಂಗಳೂರಿನ ಜೆಎನ್‌ಸಿಎಎಸ್‌ಆರ್‌ನ ಸೌರವ್ ರುದ್ರಾ ಅವರಿಗೆ ‘ಕರ್ನಾಟಕ ಡಿಎಸ್‌ಟಿ ನ್ಯಾನೋಸೈನ್ಸ್ ಫೆಲೋಶಿಪ್ ಪ್ರಶಸ್ತಿ’, ತಲಾ ₹50 ಸಾವಿರ ನಗದು, ಪ್ರಮಾಣಪತ್ರ ನೀಡಿ ಗೌರವಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಅವರು ‘ಬೆಂಗಳೂರು ನ್ಯಾನೊ 2024’ ಸಮ್ಮೇಳನದ ಸಮಾರೋಪದಲ್ಲಿ ವಿವಿಧ ಪ್ರಶಸ್ತಿಗಳನ್ನು ವಿತರಿಸಿದರು

ರಾಷ್ಟ್ರೀಯ ಮಟ್ಟದ ‘ನ್ಯಾನೊಟೆಕ್ ರಸಪ್ರಶ್ನೆ ಸ್ಪರ್ಧೆ’ಯಲ್ಲಿ 22 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಿಂದ 437 ವಿದ್ಯಾರ್ಥಿಗಳು ಪ್ರಾದೇಶಿಕ ಸುತ್ತಿನಲ್ಲಿ ಪಾಲ್ಗೊಂಡಿದ್ದರು. ‘ಗ್ರ್ಯಾಂಡ್ ಫಿನಾಲೆ’ಯಲ್ಲಿ ಪೂರ್ವ ವಲಯದ ಮೆಸ್ರಾದ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿ ಅನಿಮೇಶ್ ಅವರು ರಾಷ್ಟ್ರೀಯ ವಿಜೇತರಾದರು. ಅವರಿಗೆ ₹50 ಸಾವಿರ ನಗದು ನೀಡಲಾಯಿತು. ಮೊದಲ ರನ್ನರ್ ಅಪ್‌ಗೆ ₹40 ಸಾವಿರ, ಎರಡನೇ ರನ್ನರ್ ಅಪ್‌ಗೆ ₹30 ಸಾವಿರ ನಗದು ಬಹುಮಾನ ನೀಡಲಾಯಿತು.

‘ನ್ಯಾನೊ ಸ್ಪಾರ್ಕ್ಸ್ ಸ್ಟಾರ್ಟಪ್ ಪಿಚ್’ ಸ್ಪರ್ಧೆಯಲ್ಲಿ 18 ನವೋದ್ಯಮಗಳು ಪಾಲ್ಗೊಂಡಿದ್ದವು. ನೀರ್ ಶಕ್ತಿ ಸಿಸ್ಟಮ್ಸ್, ಪ್ರಧಾನ್ ಇನ್ನೋವೇಷನ್ ಲ್ಯಾಬ್ಸ್, ವಿಮಾನೊ, ಟ್ರನ್ಯಾನೋ ಟೆಕ್ನಾಲಾಜಿ ಮತ್ತು ಶಿಲ್ಪ್ ಸೈನ್ಸಸ್ ಕಂಪನಿಗಳು ಫೈನಲ್‌ಗೆ ಅರ್ಹತೆ ಪಡೆದಿದ್ದವು. ವಿಮಾನೊ ಮತ್ತು ನೀರ್ ಶಕ್ತಿ ಸಿಸ್ಟಮ್ಸ್ ವಿಜೇತರಾಗಿ, ತಲಾ ₹50 ಸಾವಿರ ನಗದು ಬಹುಮಾನ ಗಳಿಸಿದವು.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ‘ನಾವು ಕರ್ನಾಟಕದಾದ್ಯಂತ ವಿಜ್ಞಾನ ಕೇಂದ್ರಗಳಲ್ಲಿ ಹೂಡಿಕೆ ಮಾಡುತ್ತಿದ್ದೇವೆ. ವೈಜ್ಞಾನಿಕ ಕ್ಷೇತ್ರದಲ್ಲಿನ ಬೆಳವಣಿಗೆ, ಆಕರ್ಷಣೆಯತ್ತ ಬೆಂಗಳೂರು ನಗರ ದಾಪುಗಾಲು ಇಟ್ಟಿದೆ. ಇದಕ್ಕೆ ಪೂರಕವಾಗಿ ನಮ್ಮ ಸರ್ಕಾರ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುತ್ತಿದೆ’ ಎಂದರು.

‘ಹವಾಮಾನ ಬದಲಾವಣೆ, ಆಹಾರ ಭದ್ರತೆ ಮತ್ತು ನೀರಿನ ಭದ್ರತೆಯಂತಹ ನಿರ್ಣಾಯಕ ಜಾಗತಿಕ ಸವಾಲುಗಳನ್ನು ಎದುರಿಸುವ ಗುರಿ ಹೊಂದಲಾಗಿದೆ. ಈ ಕ್ಷೇತ್ರದಲ್ಲಿ ತಂತ್ರಜ್ಞಾನಗಳ ಬಳಕೆ ಅಗತ್ಯ’ ಎಂದು ತಿಳಿಸಿದರು.

ನಾರಾಯಣ ಹೆಲ್ತ್ ಸಂಸ್ಥಾಪಕ ಡಾ. ದೇವಿಶೆಟ್ಟಿ ಮಾತನಾಡಿ, ‘ಪ್ರತಿ ಆಸ್ಪತ್ರೆಯೂ ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವೈದ್ಯಕೀಯ ದೋಷಗಳನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಿಕೊಳ್ಳಬೇಕು. ರೋಗಿಗಳಿಗೆ ಸೂಕ್ತವಾದ ಚಿಕಿತ್ಸೆಗಳ ಮೂಲಕ ಆರೋಗ್ಯ ಸುಧಾರಿಸುವುದು ನಮ್ಮ ಪ್ರಮುಖ ಉದ್ದೇಶ’ ಎಂದರು.

ಬಾಂಗ್ಲಾ: ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಯೂನಸ್ ನೇಮಕ

ಒಂದನೇ ಪುಟದಿಂದ...

ವಿವಿಧ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಮಧ್ಯಂತರ ಸರ್ಕಾರದಲ್ಲಿ ಯಾರೆಲ್ಲ ಇರಬೇಕೆಂಬುದನ್ನು ಅಂತಿಮಗೊಳಿಸಲಾಗುವುದು ಎಂದು ಪತ್ರಿಕಾ ಕಾರ್ಯದರ್ಶಿ ತಿಳಿಸಿದ್ದಾರೆ.

ಯೂನಸ್ ಅವರು ಸದ್ಯ ದೇಶದಿಂದ ಹೊರಗಿದ್ದಾರೆ. ಆದರೆ, ಶೇಖ್ ಹಸೀನಾ ಅವರ ಆಡಳಿತದ ಪದಚ್ಯುತಿಯನ್ನು ಯೂನಸ್ ಸ್ವಾಗತಿಸಿದ್ದಾರೆ. ದೇಶದಲ್ಲಿ ಈಗ ಆಗಿರುವ ಬೆಳವಣಿಗೆಯನ್ನು ಅವರು ದೇಶದ ‘ಎರಡನೇ ವಿಮೋಚನೆ’ ಎಂದು ಬಣ್ಣಿಸಿದರು.

ಯೂನಸ್ ಅವರನ್ನು ಮಧ್ಯಂತರ ಸರ್ಕಾರದ ಮುಖ್ಯಸ್ಥರನ್ನಾಗಿ ಮಾಡಬೇಕು ಎಂದು ‘ತಾರತಮ್ಯ ವಿರೋಧಿ ವಿದ್ಯಾರ್ಥಿಗಳ ಚಳವಳಿ’ ಸಂಘಟನೆ ಒತ್ತಾಯಿಸಿದಾಗ, ಯೂನಸ್ ಅದಕ್ಕೆ ಸಮ್ಮತಿಸಿದರು.

‘ಪ್ರತಿಭಟನೆ ನಡೆಸುತ್ತಿರುವವರು ನನ್ನಲ್ಲಿ ಇಟ್ಟಿರುವ ನಂಬಿಕೆ ನನಗೆ ಗೌರವ ತರುವ ವಿಚಾರ. ಮಧ್ಯಂತರ ಸರ್ಕಾರ ಆರಂಭ ಮಾತ್ರ. ಮುಕ್ತ ಚುನಾವಣೆಗಳಿಂದ ಮಾತ್ರ ಶಾಶ್ವತ ಶಾಂತಿ ನೆಲೆಸಲು ಸಾಧ್ಯ. ಚುನಾವಣೆಗಳಿಲ್ಲದೇ ಬದಲಾವಣೆ ಸಾಧ್ಯವಿಲ್ಲ’ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪದಚ್ಯುತ ಸಚಿವರ ಬಂಧನ: ಶೇಖ್ ಹಸೀನಾ ಅವರು ದೇಶ ತೊರೆದ ಬೆನ್ನಲ್ಲೇ, ದೇಶದಿಂದ ಪಲಾಯನ ಮಾಡಲು ಯತ್ನಿಸುತ್ತಿದ್ದ ಪದಚ್ಯುತ ವಿದೇಶಾಂಗ ಸಚಿವ ಹಸನ್ ಮಹಮೂದ್ ಮತ್ತು ಮಾಜಿ ರಾಜ್ಯ ಸಚಿವ ಜುನೈದ್ ಅಹ್ಮದ್ ಪಾಲಕ್ ಅವರನ್ನು ಮಂಗಳವಾರ ಢಾಕಾ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಯಿತು.

ಮಹಮೂದ್ ಅವರು ಢಾಕಾದ ಹಜರತ್ ಶಹಜಲಾಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದೆಹಲಿ ಮಾರ್ಗದ ವಿಮಾನವೇರಲು ತೆರಳಿದ್ದರು ಎಂದು ಏರ್‌ಪೋರ್ಟ್ ಏವಿಯೇಷನ್ ಸೆಕ್ಯುರಿಟಿ (ಎವಿಎಸ್‌ಇಸಿ) ಅಧಿಕಾರಿಯೊಬ್ಬರು ಹೇಳಿರುವುದಾಗಿ ಢಾಕಾ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ.

ಮಾಧ್ಯಮ ವರದಿಗಳ ಪ್ರಕಾರ, ಮಹಮೂದ್ ಈ ಹಿಂದೆ ಬಂದರಿನ ಮೂಲಕ ಭಾರತಕ್ಕೆ ಪಲಾಯನ ಮಾಡಲು ಪ್ರಯತ್ನಿಸಿದ್ದರು. ಆದರೆ ಗಡಿ ದಾಟಲು ಅವರಿಗೆ ಅವಕಾಶ ನೀಡಿರಲಿಲ್ಲ.

ಅಂಚೆ, ದೂರಸಂಪರ್ಕ ಮತ್ತು ಐಸಿಟಿಯ ಮಾಜಿ ರಾಜ್ಯ ಸಚಿವ ಜುನೈದ್ ಅಹ್ಮದ್ ಪಾಲಕ್ ಅವರ ಮೇಲೆ ದೇಶ ತೊರೆಯದಂತೆ ನಿರ್ಬಂಧ ಹೇರಿದ ಕೆಲವು ತಾಸುಗಳಲ್ಲಿ ಅವರನ್ನು ವಿಮಾನ ನಿಲ್ದಾಣದ ಅಧಿಕಾರಿಗಳು ಬಂಧಿಸಿದ್ದಾರೆ.

ಕೃತ್ಯ ಎಸಗಿ ತಮಿಳುನಾಡಿನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳು

ರೌಡಿಶೀಟರ್ ಹತ್ಯೆ: 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೇ ದ್ವೇಷದ ಕಾರಣಕ್ಕೆ ರೌಡಿಶೀಟರ್ ಅಜಿತ್ ಕುಮಾರ್(25) ಎಂಬಾತನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ಶೇಷಾದ್ರಿಪುರ ಠಾಣೆ ಪೊಲೀಸರು ಆರು ಆರೋಪಿಗಳನ್ನು ಬಂಧಿಸಿದ್ದಾರೆ.

ಚಾಮರಾಜೇಂದ್ರ ನಗರದ ನಿವಾಸಿಗಳಾದ ಅರುಣ್, ಸಿಂಗಮಲ್ಲೆ, ನರಸಿಂಹ, ಅಜಯ್, ದುರ್ಗಾದೇವಿ, ಕೃಪಾದೇವಿ ಬಂಧಿತರು.

‘ಕೃತ್ಯದಲ್ಲಿ 15 ಆರೋಪಿಗಳು ಭಾಗಿಯಾಗಿದ್ದರು. ಎಲ್ಲರೂ ತಮಿಳುನಾಡಿಗೆ ತೆರಳಿ ವಿವಿಧ ಸ್ಥಳಗಳಲ್ಲಿ ತಲೆಮರೆಸಿಕೊಂಡಿದ್ದರು. ಅದರಲ್ಲಿ ಆರು ಮಂದಿಯನ್ನು ಬಂಧಿಸಿದ್ದು, ಉಳಿದವರ ಪತ್ತೆಗೆ ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ರಿಸಲ್ದಾರ್ ಸ್ಟ್ರೀಟ್‌ನಲ್ಲಿ ಆಗಸ್ಟ್ 1ರಂದು ಕೊಲೆ ನಡೆದಿತ್ತು. ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು.

‘ಬಂಧಿತರು ಹಾಗೂ ಕೊಲೆಯಾದ ವ್ಯಕ್ತಿ ಒಂದೇ ಬಡಾವಣೆಯ ನಿವಾಸಿಗಳು. 2020ರಲ್ಲಿ ಹಾಲು ವಿತರಣೆಯ ವಿಚಾರಕ್ಕೆ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದಿತ್ತು. ಈ ಘಟನೆ ನಡೆದ ಮೇಲೆ ಎರಡು ಗುಂಪುಗಳ ಮಧ್ಯೆ ದ್ವೇಷ ಬೆಳೆದಿತ್ತು. 2022ರಲ್ಲಿ ಮತ್ತೆ ಗಲಾಟೆ ನಡೆದು ವ್ಯಕ್ತಿಯೊಬ್ಬರನ್ನು ಕೊಲೆ ಮಾಡಲಾಗಿತ್ತು. ಆ ಪ್ರಕರಣದಲ್ಲಿ ಅಜಿತ್ ಬಂಧನಕ್ಕೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ. ನಂತರ, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ’ ಎಂದು ಮೂಲಗಳು ಹೇಳಿವೆ.

‘ಆಗಸ್ಟ್ 1ರಂದು ಮನೆಯಲ್ಲೇ ಇದ್ದ ಅಜಿತ್, ಊಟ ಮುಗಿಸಿ ಸಂಜೆ ಮನೆಯಿಂದ ಹೊರಬಂದು, ರಿಸಲ್ದಾರ್ ಸ್ಟ್ರೀಟ್‌ನಲ್ಲಿ ನಡೆದು ತೆರಳುತ್ತಿದ್ದ. ಆಗ ಅಡ್ಡ ಬಂದ ಆರೋಪಿಗಳು, ಹಳೇ ದ್ವೇಷದಿಂದ ಕೊಲೆ ಮಾಡಿ ಪರಾರಿಯಾಗಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರು ಅಕ್ಕಪಕ್ಕದ ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ಆರೋಪಿಗಳ ಸುಳಿವು ಲಭಿಸಿತ್ತು. ತಮಿಳುನಾಡಿಗೆ ತೆರಳಿದ್ದ ಪೊಲೀಸ್ ತಂಡ ಅಲ್ಲಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆ ತಂದಿದೆ’ ಎಂದು ಪೊಲೀಸರು ಹೇಳಿದರು.

19 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ರಸ್ತೆ ಬದಿ ಹಾಗೂ ಮನೆಯ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬೈಯಪ್ಪನಹಳ್ಳಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಬಾಣಸವಾಡಿ ನಿವಾಸಿಗಳಾದ ಆನಂದ್, ರಜನಿ ಹಾಗೂ ಪುಷ್ಪರಾಜ್ ಬಂಧಿತರು.

ಆನಂದ ವಿರುದ್ಧ ಈ ಹಿಂದೆ ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ ಕಳ್ಳತನ ಪ್ರಕರಣ ದಾಖಲಾಗಿತ್ತು ಎಂದು ಪೊಲೀಸರು ಹೇಳಿದರು. ಬಂಧಿತರಿಂದ ₹24.85 ಲಕ್ಷ ಮೌಲ್ಯದ 19 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಜೂನ್ 12ರಂದು ನಾಗವಾರಪಾಳ್ಯದ ಮುಖ್ಯರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ಬೈಕ್‌ವೊಂದನ್ನು ಆರೋಪಿಗಳು ಕಳವು ಮಾಡಿದ್ದರು. ಬೈಕ್ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಬೆನ್ನಿಗಾನಹಳ್ಳಿಯಲ್ಲಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

ಕದ್ದ ದ್ವಿಚಕ್ರ ವಾಹನಗಳನ್ನು ತಮಿಳುನಾಡಿನ ತಿರಪತ್ತೂರು ಹಾಗೂ ಅರಕ್ಕೋಣಂನಲ್ಲಿ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಅಪರಿಚಿತ ಮಹಿಳೆ ಆತ್ಮಹತ್ಯೆ

ಬೆಂಗಳೂರು: ಮಲ್ಲೇಶ್ವರದ ಸಾಯಿ ರೆಸಿಡೆನ್ಸಿಯ ಬಾಲ್ಕನಿಯಲ್ಲಿ ಮಂಗಳವಾರ ಸುಮಾರು 45 ವರ್ಷದ ಮಹಿಳೆಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತ ಮಹಿಳೆ ಅಪಾರ್ಟ್‌ಮೆಂಟ್ ನಿವಾಸಿ ಅಲ್ಲ. ಮಹಿಳೆ ಧರಿಸಿದ್ದ ವಸ್ತ್ರದ ಜೇಬಿನಲ್ಲಿ ಬಸ್ ಮತ್ತು ಸಿನಿಮಾ ಟಿಕೆಟ್ ಮಾತ್ರ ಪತ್ತೆಯಾಗಿದೆ. ಅವರ ಗುರುತಿನ ಚೀಟಿ ಸಿಕ್ಕಿಲ್ಲ.

ಭಾನುವಾರ ನವರಂಗ್ ಥಿಯೇಟರ್‌ನಲ್ಲಿ ಮಹಿಳೆ ಸಿನಿಮಾ ನೋಡಿದ್ದಾರೆ. ಬಿಎಂಟಿಸಿ ಬಸ್‌ನಲ್ಲಿ ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಕ್ಕೆ ಬಂದ ಮಹಿಳೆ, ಬೆಳಿಗ್ಗೆ 7.30ಕ್ಕೆ ಅಪಾರ್ಟ್‌ಮೆಂಟ್ ಪ್ರವೇಶಿಸಿದ್ದಾರೆ. ಯಾರೂ ಇಲ್ಲದನ್ನು ನೋಡಿ ತಾನು ತಂದಿದ್ದ ಹೊಸ ಹಗ್ಗದಿಂದ ನಾಲ್ಕನೇ ಮಹಡಿಯ ಬಾಲ್ಕನಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

‘ಸುತ್ತಮುತ್ತ ಯಾರೂ ಇಲ್ಲದನ್ನು ಗಮನಿಸಿ ಮಹಿಳೆ ಅಪಾರ್ಟ್‌ಮೆಂಟ್ ಪ್ರವೇಶಿಸಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅವರ ಬ್ಯಾಗ್ ಪರಿಶೀಲಿಸಲಾಗಿದ್ದು, ಮಾಹಿತಿ ಲಭ್ಯವಾಗಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಆರೋಪದಡಿ ಯುವಕನನ್ನು ಡಿ.ಜೆ.ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ. ಹಳ್ಳಿಯ ನಿವಾಸಿ ಸಾದ್ ಮುಸೈಬ್ ಬಂಧಿತ ಆರೋಪಿ. ಆರೋಪಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದೆ.

‘ಕೃತ್ಯವು ಕೆ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ನಡೆದಿದ್ದು ಆ ಠಾಣೆಗೆ ಪ್ರಕರಣ ವರ್ಗಾವಣೆ ಮಾಡಲಾಗಿದೆ. ಆ ಠಾಣೆ ಪೊಲೀಸರು ತನಿಖೆ ಮುಂದುವರೆಸಲಿದ್ದಾರೆ. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘15 ವರ್ಷದ ಬಾಲಕಿಯನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ, ಪ್ರೀತಿಸುವ ನಾಟಕವಾಡಿದ್ದ. ಅಲ್ಲದೇ ಮದುವೆ ಆಗುವುದಾಗಿಯೂ ನಂಬಿಸಿ ಮನೆಗೆ ಕರೆದೊಯ್ದು, ಪೋಷಕರಿಗೆ ಪರಿಚಯ ಮಾಡಿಕೊಟ್ಟಿದ್ದ. ಅದಾದ ಮೇಲೆ ಪೋಷಕರು ಮನೆಯಲ್ಲಿ ಇಲ್ಲದ ವೇಳೆ ಬಾಲಕಿಯನ್ನು ಮನೆಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಪೋಷಕರಿಗೆ ಮಾಹಿತಿ ನೀಡಿದರೆ ಕೊಲೆ ಮಾಡುವುದಾಗಿಯೂ ಬೆದರಿಕೆಯೊಡ್ಡಿದ್ದ’ ಎಂದು ಪೊಲೀಸರು ಹೇಳಿದರು.

‘ಹೊಟ್ಟೆ ನೋವಿನಿಂದ ಬಳುತ್ತಿದ್ದ ಬಾಲಕಿಯನ್ನು ಪೋಷಕರು ಆಸ್ಪತ್ರೆಗೆ ಕರೆದೊಯ್ದು ಪರೀಕ್ಷೆಗೆ ಒಳಪಡಿಸಿದ್ದರು. ಆಗ ಬಾಲಕಿ ಗರ್ಭಿಣಿ ಆಗಿರುವುದು ಗೊತ್ತಾಗಿತ್ತು. ನಂತರ, ಬಾಲಕಿಯನ್ನು ವಿಚಾರಣೆ ನಡೆಸಿದಾಗ ಆರೋಪಿ ದೌರ್ಜನ್ಯ ಎಸಗಿದ್ದನ್ನು ಹೇಳಿಕೊಂಡಿದ್ದಳು. ಪೋಷಕರು ನೀಡಿದ ದೂರು ಆಧರಿಸಿ ಆರೋಪಿ ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಆರೋಪಿ ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯನಾಗಿದ್ದ. ಡ್ಯಾಗರ್ ಹಿಡಿದು ಸಿನಿಮಾ ಹೀರೊ ರೀತಿ ಫೋಟೊ ತೆಗೆಸಿಕೊಂಡು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕುತ್ತಿದ್ದ’ ಎಂದು ಪೊಲೀಸರು ಹೇಳಿದರು.

ಆತ್ಮಹತ್ಯೆ: ವರದಕ್ಷಿಣೆ ಕಿರುಕುಳದ ಆರೋಪ

ಬೆಂಗಳೂರು: ಆಡುಗೋಡಿ ನಿವಾಸಿ ತನಿಷಾ ಚೌಧರಿ (23) ಎಂಬುವವರು ಮಂಗಳವಾರ ತಮ್ಮ ನಿವಾಸದ ಮಲಗುವ ಕೋಣೆಯಲ್ಲಿ ಫ್ಯಾನಿಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗಂಡ ಹಾಗೂ ಅವರ ಪೋಷಕರು ವರದಕ್ಷಿಣೆ ಕಿರುಕುಳ ನೀಡಿ ಮಗಳನ್ನು ಕೊಲೆ ಮಾಡಿದ್ದಾರೆ ಎಂದು ಮೃತಳ ಪೋಷಕರು ಆರೋಪಿಸಿದ್ದಾರೆ. ತರುಣ್ ಸೇರಿದಂತೆ ಏಳು ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಡುಗೋಡಿಯಲ್ಲಿ ಚಿನ್ನದ ಅಂಗಡಿ ಇಟ್ಟುಕೊಂಡಿರುವ ರಾಜಸ್ಥಾನದ ತರುಣ್ ಚೌಧರಿ (25) 2022ರಲ್ಲಿ ತನಿಷಾ ಅವರನ್ನು ವಿವಾಹವಾಗಿದ್ದರು. ವರದಕ್ಷಿಣೆಯಾಗಿ ಕಾರನ್ನು ನೀಡಲಾಗಿತ್ತು. ಹೀಗಿದ್ದರೂ ತವರಿನಿಂದ ಹಣ ತರುವಂತೆ ತರುಣ್ ಕಿರುಕುಳ ನೀಡುತ್ತಿದ್ದರು ಎಂದು ಪೋಷಕರು ದೂರಿದ್ದಾರೆ.

ತನಿಷಾ ಪೋಷಕರಿಗೆ ಸೋಮವಾರ ಕರೆ ಮಾಡಿದ್ದ ತರುಣ್, ‘ನಿಮ್ಮ ಮಗಳು ಮೆಟ್ಟಿಲಿನಿಂದ ಜಾರಿ ಬಿದ್ದು ಗಾಯಗೊಂಡಿದ್ದಾಳೆ. ಬೆಂಗಳೂರಿಗೆ ಬನ್ನಿ ಎಂದು ಹೇಳಿದ್ದ. ಹೈದರಾಬಾದ್‌ನಲ್ಲಿ ನೆಲೆಸಿರುವ ತನಿಷಾ ಕುಟುಂಬದವರು ಬೆಂಗಳೂರಿಗೆ ಬಂದ ಬಳಿಕ ಆತ್ಮಹತ್ಯೆಯ ವಿಚಾರ ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ಯಾರೇಜ್‌ನಲ್ಲಿ ರಿಪೇರಿ ಮಾಡುವಾಗ ನಡೆದ ಅವಘಡ

ಬಸ್ ಚಲಿಸಿ ಮೆಕ್ಯಾನಿಕ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಗ್ಯಾರೇಜ್‌ವೊಂದರಲ್ಲಿ ರಿಪೇರಿ ಮಾಡುತ್ತಿದ್ದ ವೇಳೆ ಬಸ್ ಚಲಿಸಿದ ಪರಿಣಾಮ ಮೆಕ್ಯಾನಿಕ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವರ್ತೂರು ನಿವಾಸಿ ವಿಜಯ್ (35) ಮೃತ ಮೆಕ್ಯಾನಿಕ್. ಮತ್ತೊಬ್ಬ ಯುವಕನಿಗೆ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಶಾಲೆಯೊಂದರ ಬಸ್ ಕೆಟ್ಟಿತ್ತು. ಬಸ್ ಅನ್ನು ರಿಪೇರಿಗಾಗಿ ಗ್ಯಾರೇಜ್‌ಗೆ ಬಿಡಲಾಗಿತ್ತು. ಮಂಗಳವಾರ ಸಂಜೆ ವಿಜಯ್ ಮತ್ತು ಅವರ ಸಹಾಯಕ ರಿಪೇರಿ ಮಾಡುತ್ತಿದ್ದರು. ಬಸ್ ಕೆಳಭಾಗದಲ್ಲಿ ವಿಜಯ್ ರಿಪೇರಿ ಮಾಡುತ್ತಿದ್ದರು. ಈ ವೇಳೆ ತನ್ನ ಸಹಾಯಕನಿಗೆ ಬಸ್ ಸ್ಟಾರ್ಟ್ ಮಾಡುವಂತೆ ಸೂಚಿಸಿದ್ದರು. ಬಸ್ ಸ್ಟಾರ್ಟ್ ಮಾಡುತ್ತಿದ್ದಂತೆಯೇ ಏಕಾಏಕಿ ಚಲಿಸಿದ್ದರಿಂದ ವಿಜಯ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

ಬಸ್‌ನಲ್ಲಿ ಮೊಬೈಲ್ ಕಳ್ಳತನ: ಸೆರೆ

ಚೇತನ್

ಬೆಂಗಳೂರು: ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರ ಮೊಬೈಲ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಮಾರತ್‌ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಾರತ್‌ಹಳ್ಳಿಯ ಚೇತನ್ ಬಂಧಿತ.

ಆರೋಪಿಯಿಂದ ₹2 ಲಕ್ಷ ಮೌಲ್ಯದ ಎಂಟು ಮೊಬೈಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಟಿಕೆಟ್ ಪಡೆದು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಆರೋಪಿ, ಬಸ್‌ನಲ್ಲಿ ನಿದ್ರಿಸುವ ಪ್ರಯಾಣಿಕರನ್ನೇ ಗುರಿಯಾಗಿಸಿ ಮೊಬೈಲ್ ಕಳವು ಮಾಡುತ್ತಿದ್ದ. ಈ ರೀತಿ ಕಳ್ಳತವನ್ನೇ ಹವ್ಯಾಸ ಮಾಡಿಕೊಂಡಿದ್ದ. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಮಾರತ್‌ಹಳ್ಳಿಯ ಹೊರವರ್ತುಲ ರಸ್ತೆಯಲ್ಲಿ ಆರೋಪಿ ಬಂಧಿಸಲಾಯಿತು. ವಿಚಾರಣೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಎಟಿಎಂನಲ್ಲಿ ಹಣ ಡ್ರಾ: ಸಹಾಯದ ನೆಪದಲ್ಲಿ ಹಲವರಿಗೆ ವಂಚನೆ

32 ಎಟಿಎಂ ಕಾರ್ಡ್ ಹೊಂದಿದ್ದ ಆರೋಪಿ!

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎಟಿಎಂ ಯಂತ್ರಗಳಲ್ಲಿ ಹಣ ಡ್ರಾ ಮಾಡಲು ಬರುವವರಿಗೆ ಸಹಾಯ ಮಾಡುವ ನೆಪದಲ್ಲಿ ವಂಚಿಸುತ್ತಿದ್ದ ಆರೋಪಿಯನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಸಾಗರ್ ಅಲಿಯಾಸ್ ದಿಲೀಪ್(32) ಬಂಧಿತ ಆರೋಪಿ.

‘ಬಂಧಿತನಿಂದ 32 ಎಟಿಎಂ ಕಾರ್ಡ್ ಹಾಗೂ ₹4 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಾಲೂರಿನ ಭಂಟನಹಳ್ಳಿಯ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದರು.

‘ಜುಲೈ 31ರಂದು ಬೇಗೂರು ಮುಖ್ಯ ರಸ್ತೆಯಲ್ಲಿರುವ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಎಟಿಎಂ ಕೇಂದ್ರಕ್ಕೆ ದೂರು ನೀಡಿದ್ದ ವ್ಯಕ್ತಿ ಹಣ ಡ್ರಾ ಮಾಡಲು ತೆರಳುತ್ತಿದ್ದರು. ಆಗ ಅವರಿಗೆ ಹಣ ಮಾಡಲು ಸಾಧ್ಯವಾಗಿರಲಿಲ್ಲ. ಎಟಿಎಂ ಎದುರೇ ಕಾದಿದ್ದ ಆರೋಪಿ ಸಹಾಯ ಮಾಡುವುದಾಗಿ ಹೇಳಿದ್ದ. ಅದನ್ನೇ ನಂಬಿದ ಅವರು ಆರೋಪಿಗೆ ಕಾರ್ಡ್ ನೀಡಿ ಪಿನ್‌ನ ಮಾಹಿತಿ ಕೊಟ್ಟಿದ್ದರು. ಅವರಿಗೆ ತಿಳಿಯದಂತೆ ಆರೋಪಿ ಕಾರ್ಡ್ ಬದಲಾವಣೆ ಮಾಡಿದ್ದ. ಹಣ ಡ್ರಾ ಮಾಡಲು ಸಾಧ್ಯವಿಲ್ಲ ಎಂದು ಹೇಳಿ ತನ್ನ ಬಳಿಯಿದ್ದ ಮತ್ತೊಂದು ಕಾರ್ಡ್ ನೀಡಿದ್ದ. ಅವರು ಅಲ್ಲಿಂದ ತೆರಳಿದ ಮೇಲೆ ₹61,500 ಡ್ರಾ ಮಾಡಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಪ್ಯಾಂಟ್, ಶರ್ಟ್ ಜೇಬಿನಲ್ಲಿ ವಿವಿಧ ಬ್ಯಾಂಕ್‌ಗಳ ಎಟಿಎಂ ಕಾರ್ಡ್‌ಗಳನ್ನು ಇಟ್ಟುಕೊಳ್ಳುತ್ತಿದ್ದ. ಬೇರೆ ಬೇರೆ ಬ್ಯಾಂಕ್‌ನ ಶಾಖೆಗಳ ಎಟಿಎಂ ಕೇಂದ್ರದ ಬಳಿ ಕಾದು ನಿಲ್ಲುತ್ತಿದ್ದ. ಅಲ್ಲಿಗೆ ಬಂದವರಿಗೆ ಸಹಾಯ ಮಾಡುವುದಾಗಿ ಹೇಳಿ, ಕಾರ್ಡ್ ಹಾಗೂ ಪಿನ್ ಪಡೆದುಕೊಳ್ಳುತ್ತಿದ್ದ. ತನ್ನ ಜೇಬಿನಲ್ಲಿದ್ದ ಅದೇ ಬ್ಯಾಂಕ್‌ನ ಕಾರ್ಡ್ ಅನ್ನು ಕ್ಷಣಾರ್ಧದಲ್ಲಿ ಬದಲಾವಣೆ ಮಾಡುತ್ತಿದ್ದ. ಅವರ ಎದುರೇ ಹಣ ಡ್ರಾ ಮಾಡುವಂತೆ ನಟನೆ ಮಾಡಿ, ಹಣ ಬರುತ್ತಿಲ್ಲ ಎಂದು ಹೇಳಿ ಕಳುಹಿಸುತ್ತಿದ್ದ. ಖಾತೆದಾರರು ಅಲ್ಲಿಂದ ತೆರಳಿದ ಮೇಲೆ ಅಸಲಿ ಕಾರ್ಡ್‌ನಲ್ಲಿ ಹಣ ಡ್ರಾ ಮಾಡಿಕೊಂಡು ಪರಾರಿ ಆಗುತ್ತಿದ್ದ’ ಎಂದು ವಿವರ ನೀಡಿದರು.

‘ಆರೋಪಿಯ ವಿರುದ್ಧ ಚಂದ್ರಾಲೇಔಟ್ ಹಾಗೂ ಉಪ್ಪಾರಪೇಟೆ ಪೊಲೀಸ್ ಠಾಣೆಗಳಲ್ಲೂ ಪ್ರಕರಣ ದಾಖಲಾಗಿವೆ. ಆರೋಪಿಯಿಂದ ನಿಷ್ಕ್ರಿಯಗೊಂಡ ಎಟಿಎಂ ಕಾರ್ಡ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಮಾನವ ಹಕ್ಕು ಆಯೋಗದ ಹೆಸರಲ್ಲಿ ಬ್ಲ್ಯಾಕ್ ಮೇಲ್

ಸೈಯದ್ ಸರ್ಫರಾಜ್ ಅಹಮದ್

ಬೆಂಗಳೂರು: ಠಾಣೆಯಲ್ಲಿರುವ ಆರೋಪಿಗಳ ಪರ ಮಾನವ ಹಕ್ಕುಗಳ ಆಯೋಗಕ್ಕೆ ನೀಡಿರುವ ದೂರು ವಾಪಸ್ ಪಡೆಯಲು ಹಣಕ್ಕಾಗಿ ಪೊಲೀಸರಿಗೆ ಬ್ಲ್ಯಾಕ್ ಮೇಲ್ ಮಾಡುತ್ತಿದ್ದ ಆರೋಪಿ ಸೈಯದ್ ಸರ್ಫರಾಜ್ ಅಹಮದ್ (34) ಎಂಬಾತನನ್ನು ಶಿವಾಜಿ ನಗರ ಪೊಲೀಸರು ಬಂಧಿಸಿದ್ದಾರೆ.

‘ಖಾಸಗಿ ಕಂಪನಿಯಲ್ಲಿ ವಾಹನ ಜಪ್ತಿ ವಿಭಾಗದಲ್ಲಿ ಕೆಲಸ ಮಾಡಿಕೊಂಡಿದ್ದ ಭಾರತಿ ನಗರ ನಿವಾಸಿ ಸೈಯದ್‌ಗೆ ಪೊಲೀಸರ ಪರಿಚಯವಿತ್ತು. ಇದೇ ನೆಪದಲ್ಲಿ ಠಾಣೆಗೆ ಭೇಟಿ ನೀಡಿ, ಲಾಕ್‌ಅಪ್‌ನಲ್ಲಿದ್ದ ಆರೋಪಿಗಳನ್ನು ಮಾತನಾಡಿಸಿ ಪರಿಚಯ ಮಾಡಿಕೊಂಡು, ಅವರ ಪ್ರಕರಣದ ಬಗ್ಗೆ ತಿಳಿದು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಕೊಡುತ್ತಿದ್ದ. ಬಳಿಕ ದೂರು ವಾಪಸ್ ಪಡೆಯಲು ಪೊಲೀಸರಿಂದ ಹಣ ವಸೂಲು ಮಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೆಲ ದಿನಗಳ ಹಿಂದೆ ಠಾಣಾ ವ್ಯಾಪ್ತಿಯ ಹೋಟೆಲ್‌ವೊಂದರಲ್ಲಿ ಟೀ ಕುಡಿದು ಹಣ ಪಾವತಿಸದೆ ದಾಂದಲೆ ಮಾಡಿದ್ದ ವ್ಯಕ್ತಿಯನ್ನು ರಾತ್ರಿ 2.30ಕ್ಕೆ ಠಾಣೆಗೆ ಕರೆತರಲಾಯಿತು. ಈ ವಿಚಾರ ತಿಳಿದ ಸೈಯದ್, ಮಾನವ ಹಕ್ಕು ಆಯೋಗಕ್ಕೆ ದೂರು ನೀಡಿದ್ದಾನೆ. ಅದೇ ದಿನ ಆಯೋಗದ ಸದಸ್ಯರು ಠಾಣೆಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದಿರುವುದಕ್ಕೆ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಆರೋಪಿಯನ್ನು ಠಾಣೆಗೆ ಕರೆತಂದ ಸಮಯ ಹಾಗೂ ಸಿಸಿಟಿವಿ ಕ್ಯಾಮೆರಾದ ದೃಶ್ಯಗಳನ್ನು ಆಯೋಗಕ್ಕೆ ನೀಡಲಾಯಿತು’ ಎಂದು ಅವರು ಹೇಳಿದ್ದಾರೆ.

‘ಹಣ ನೀಡಿದರೆ ಆಯೋಗಕ್ಕೆ ನೀಡಿರುವ ದೂರು ವಾಪಸ್ ಪಡೆಯುವುದಾಗಿ ಆರೋಪಿ ಬ್ಲ್ಯಾಕ್ ಮೇಲ್ ಮಾಡತೊಡಗಿದ. ₹ 50 ಸಾವಿರಕ್ಕೆ ಬೇಡಿಕೆ ಇರಿಸಿದ. ಜುಲೈ 29ರಂದು ₹ 25 ಸಾವಿರ ಪಡೆಯುವ ವೇಳೆ ಆತನನ್ನು ಬಂಧಿಸಲು ಮುಂದಾದ ವೇಳೆ ಪರಾರಿಯಾಗಿದ್ದ. ಬಳಿಕ ಆತನನ್ನು ಪತ್ತೆಹಚ್ಚಿ ಬಂಧಿಸಲಾಯಿತು. ಇದೆಲ್ಲಾ ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲಾಗಿದೆ. ಆರೋಪಿ ಇದೇ ರೀತಿ ಆರ್.ಟಿ. ನಗರ ಹಾಗೂ ಭಾರತಿ ನಗರದಲ್ಲೂ ಪೊಲೀಸರಿಗೆ ಬ್ಲ್ಯಾಕ್ ಮೇಲ್ ಮಾಡಿದ್ದ’ ಎಂದು ಮಾಹಿತಿ ನೀಡಿದ್ದಾರೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸೋಮವಾರ ನಡೆದ ಜೈವಿಕ ಇಂಧನ ಮತ್ತು ಟೆಕ್ಸ್ ಎಕ್ಸ್‌ಪೊ ಪೂರ್ವ ಸಿದ್ಧತಾ ಸಭೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಚಾಲನೆ ನೀಡಿದರು. ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ, ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ನಾರಾಯಣ ಗೌಡ, ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ವೈ.ಬಿ.ರಾಮಕೃಷ್ಣ ಉಪಸ್ಥಿತರಿದ್ದರು

‘ತುಳು ಭಾಷಿಕರ ಭಾವನೆ ಬಗ್ಗೆ ಅರಿವಿದೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ತುಳು ಮತ್ತು ಇತರ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸುವ ವಿಷಯದಲ್ಲಿ ಜನರ ಭಾವನೆಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅರಿವಿದೆ ಎಂದು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್ ಮಂಗಳವಾರ ಲೋಕಸಭೆಯಲ್ಲಿ ಹೇಳಿದರು.

ದಕ್ಷಿಣ ಕನ್ನಡದ ಸಂಸದ ಬ್ರಿಜೇಶ್ ಚೌಟ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಜನರ ಭಾವನೆಗಳು ಮತ್ತು ಇತರ ಮಾನದಂಡಗಳ ಆಧಾರದ ಮೇಲೆಯೇ ಇಂಥ ಮನವಿಗಳನ್ನು ಪರಿಗಣಿಸಲಾಗುವುದು’ ಎಂದು ತಿಳಿಸಿದರು.

‘ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಒಟ್ಟು 22 ಭಾಷೆಗಳನ್ನು ಸೇರಿಸಲಾಗಿದೆ. ತುಳು ಸೇರಿದಂತೆ ಇತರ ಭಾಷೆಗಳನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸುವ ಸಂಬಂಧ ಕಾಲದಿಂದ ಕಾಲಕ್ಕೆ ಮನವಿ ಬರುತ್ತಿವೆ’ ಎಂದು ಹೇಳಿದರು.

‘ಭಾಷೆಗಳನ್ನು 8ನೇ ಪರಿಚ್ಛೇದಕ್ಕೆ ಸೇರಿಸಲು ನಿರ್ದಿಷ್ಟ ಮಾನದಂಡಗಳಿಲ್ಲ. ಭಾಷೆ, ಉಪಭಾಷೆಗಳ ಬೆಳವಣಿಗೆಯು ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಗಳಿಂದ ಪ್ರೇರಿತವಾಗಿರುತ್ತದೆ. ಹೀಗಾಗಿ ಭಾಷೆಗಳನ್ನು 8ನೇ ಪರಿಚ್ಛೇದಕ್ಕೆ ಸೇರಿಸಲು ಮಾನದಂಡಗಳನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ. ಈ ಹಿಂದೆ ಇದಕ್ಕಾಗಿ ಪಾಹ್ವಾ (1996) ಮತ್ತು ಸೀತಾಕಾಂತ ಮೊಹಾಪಾತ್ರ (2003) ಸಮಿತಿಗಳನ್ನು ನೇಮಿಸಲಾಗಿತ್ತಾದರೂ, ಒಂದು ನಿರ್ಣಯಕ್ಕೆ ಬರಲು ಅವುಗಳಿಂದ ಸಾಧ್ಯವಾಗಲಿಲ್ಲ’ ಎಂದರು.

ಮೈಸೂರು ರೇಸ್

ಓ ಹನ್ಸಿನಿ ಗೆಲ್ಲುವ ನಿರೀಕ್ಷೆ

ರಾಣಿಬೆನ್ನೂರ್ ಪ್ಲೇಟ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಓ ಹನ್ಸಿನಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕೂರ್ಗ್ ಜನರಲ್ 3, ಗೋಲ್ಡನ್ ಬರ್ಡ್ 5, ಪೋಲಾರ್ ವಿಂಡ್ 7
2ನೇ ರೇಸ್: ಸ್ಪಾರ್ಕ್ಲಿಂಗ್ ನೈಟ್ 2, ಅಥುಲ್ಯ 5, ಕೊಯೆಟೆ ಗರ್ಲ್ 9
3ನೇ ರೇಸ್: ಇನ್‌ಎಫೆಬಲ್ 3, ಮೇಬರಿ 2, ಸ್ಪಿರಿಚ್ಯುಯಲ್ ಫೋರ್ಸ್ 6
4ನೇ ರೇಸ್: ಬ್ರೈಟೆಸ್ಟ್ ಸ್ಟಾರ್ 3, ಸಿಯೊಲ್ 6, ನ್ಯಾಚುರಲ್ ಹಂಟರ್ 10
5ನೇ ರೇಸ್: ಸಿಯೊಲ್‌ಫಾರ್ ಬುಲ್ಲೆಟ್ 3, ಎಮಿರಾಲ್ಡ್ ಕ್ವೀನ್ 8, ಟ್ವಿಲೈಟ್ ಫೇಮ್ 7
6ನೇ ರೇಸ್: ಶೆರೌಕ್ 9, ಪರ್ಫೆಕ್ಟ್ ಹಾರ್ಟ್ 8, ಕ್ಯಾಲಿಪ್ಸೊ ಕಿಂಗ್ 1
7ನೇ ರೇಸ್: ಓ ಹನ್ಸಿನಿ 2, ಸಂಥಿಂಗ್ ರಾಯಲ್ 4, ಗೋಲ್ಡ್ ಕೈಟ್ 8
8ನೇ ರೇಸ್: ಸ್ಮಾರ್ಟ್ ಕ್ಯಾಡಿಲಾಕ್ 2, ಎಡ್ಡಿ ದಿ ಈಗಲ್ 4, ರಿಯಲ್ ಶೋ 10

ಉತ್ತಮ ಬೆಟ್: ಬ್ರೈಟೆಸ್ಟ್ ಸ್ಟಾರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	1ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

'ಶ್ರಮ ಸಂಸ್ಕೃತಿ' ನಾಟಕೋತ್ಸವದಲ್ಲಿ ನಟ ಪ್ರಕಾಶ್ ರಾಜ್

ಹೋರಾಟಗಾರರಿಗೆ ಸ್ಫೂರ್ತಿಯಾಗಿದ್ದ ಸೂರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬದುಕು ಅರ್ಥಪೂರ್ಣವಾಗುವುದು ಇನ್ನೊಂದಿಷ್ಟು ಬದುಕುಗಳನ್ನು ಪ್ರೇರೇಪಿಸುವುದರಿಂದ. ಹಾಗೆ, ಸಾವಿರಾರು ಹೋರಾಟಗಾರರಿಗೆ ಸ್ಫೂರ್ತಿಯಾದವರು ಕಾಮ್ರೇಡ್ ಸೂರ್ಯನಾರಾಯಣ ರಾವ್” ಎಂದು ನಟ ಪ್ರಕಾಶ್ ರಾಜ್ ಬಣ್ಣಿಸಿದರು.

ಮಂಗಳವಾರ ಸಿಐಟಿಯು ಸಂಸ್ಥಾಪಕ ಕಾಮ್ರೇಡ್ ಸೂರ್ಯನಾರಾಯಣ ರಾವ್ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಆಯೋಜಿಸಿದ್ದ ‘ಶ್ರಮ ಸಂಸ್ಕೃತಿ’ ನಾಟಕೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ರಂಗಭೂಮಿ ಕೆಲಸ ಕೂಡ, ಮತ್ತೊಬ್ಬರನ್ನು ಪ್ರೇರೇಪಿಸುವುದಾಗಿದೆ’ ಎಂದರು.

‘ನಾನು ಸೂರಿ ಅವರನ್ನು ಭೇಟಿಯಾಗಿಲ್ಲ. ಆದರೆ, ಅವರು ಬೆಳೆಸಿದ ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ಕಾರ್ಯಕರ್ತೆಯರ ಪರ ಹೋರಾಟಗಾರರ ಮೂಲಕ ಅವರು ನನಗೆ ಅರ್ಥವಾಗಿದ್ದಾರೆ’ ಎಂದು ಹೇಳಿದರು.

ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ‘1965ರಿಂದ 1991ರವರೆಗೆ ಸೂರಿ ಅವರು ನಡೆಸಿದ ಕಾರ್ಮಿಕ ಚಳವಳಿಗಳು, ಹೋರಾಟಗಳು ಐತಿಹಾಸಿಕವಾದುವು. ಕಾರ್ಮಿಕ ಹೋರಾಟಗಳ ಸ್ವರೂಪ ಮತ್ತು ನಾಯಕರು ಹೇಗಿರಬೇಕು ಎಂಬುದಕ್ಕೆ ಸೂರಿ ಮಾದರಿಯಾಗಿದ್ದರು’ ಎಂದು ಸ್ಮರಿಸಿದರು.

‘1992ರ ನಂತರ ಭಾರತ ಜಾಗತೀಕರಣಕ್ಕೆ ತೆರೆದುಕೊಂಡ ಮೇಲೆ ಕಾರ್ಮಿಕರು, ಹೋರಾಟ, ರಾಷ್ಟ್ರೀಯತೆಯಂತಹ ಕಲ್ಪನೆ ಬದಲಾಗಿದ್ದು, ಹೋರಾಟದ ಸ್ವರೂಪವೂ ಬದಲಾಗಬೇಕಿದೆ’ ಎಂದರು.

ರಂಗ ನಿರ್ದೇಶಕರಾದ ಮಹಾಂತೇಶ ಬಡಿಗೇರ, ಸುಮತಿ ಕೆ.ಆರ್., ಮೈಕೋ ಶಿವಶಂಕರ್, ಹು.ದಾ. ಮುತ್ತುರಾಜ್, ಅಚ್ಯುತ ಕೆ.ಜಿ.ಎಫ್. ಹಾಗೂ ರಂಗ ಸಂಘಟಕ ಸೋಮಶೇಖರ್ ಅವರಿಗೆ ರಂಗಗೌರವ ಸಲ್ಲಿಸಲಾಯಿತು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್ ಮಾತನಾಡಿದರು. ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ ವರಲಕ್ಷ್ಮಿ, ಉಪಾಧ್ಯಕ್ಷ ವಿ.ಜೆ.ಕೆ. ನಾಯರ್, ಸೂರ್ಯನಾರಾಯಣ ಅವರ ಪುತ್ರಿ ರೇಖಾ, ನಿವೃತ್ತ ಪ್ರಾಧ್ಯಾಪಕ ರಾಜಪ್ಪ ದಳವಾಯಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಭಾ ಕಾರ್ಯಕ್ರಮದ ನಂತರ 'ಜಲಗಾರ', 'ನ್ಯಾಯ ಕೇಳಿದ ನಿಂಗವ್ವ', 'ಕಾಮ್ರೇಡರ ಸೂರಿ' ನಾಟಕಗಳನ್ನು ಪ್ರದರ್ಶಿಸಲಾಯಿತು.

ಕಾಂ.ಸೂರ್ಯನಾರಾಯಣ ರಾವ್ ಜನ್ಮ ಶತಮಾನೋತ್ಸವ ಆಚರಣಾ ಸಮಿತಿ ಆಯೋಜಿಸಿದ್ದ ‘ಶ್ರಮ ಸಂಸ್ಕೃತಿ‘ ನಾಟಕೋತ್ಸವದಲ್ಲಿ ಸೂರ್ಯನಾರಾಯಣ್ ರಾವ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಜನ್ಮಶತಮಾನೋತ್ಸವ ಆಚರಣಾ ಸಮಿತಿ ಅಧ್ಯಕ್ಷೆ ಎಸ್.ವರಲಕ್ಷ್ಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಸೂರ್ಯನಾರಾಯಣ ರಾವ್ ಪುತ್ರಿ ರೇಖಾ, ಸಮಿತಿಯ ಗೌರವ ಅಧ್ಯಕ್ಷ ವಿ.ಜೆ.ಕೆ ನಾಯರ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್, ಆಚರಣಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್. ಮೀನಾಕ್ಷಿ ಸುಂದರಂ ಮತ್ತು ನಟ ಪ್ರಕಾಶ್ ರಾಜ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

‘ಹೋರಾಟದ ಹಾದಿ ತಪ್ಪಿಸುತ್ತಿರುವ ಡಿಕೆಶಿ ಎಚ್‌ಡಿಕೆ ವಾಗ್ಯುದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ನಡುವಿನ ವೈಯಕ್ತಿಕ ಟೀಕೆ– ಟಿಪ್ಪಣಿಗಳು ಮುಡಾ ಹೋರಾಟದ ಹಾದಿ ತಪ್ಪಿಸುತ್ತಿವೆ’ ಎಂದು ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಇಬ್ಬರ ಮಧ್ಯದ ಪರಸ್ಪರ ಟೀಕೆಗಳಿಂದ ಕಾರ್ಯಕರ್ತರ ಹುಮ್ಮಸ್ಸು ಕಡಿಮೆ ಆಗುತ್ತಿದೆ. ಇವರ ವಾಗ್ಯುದ್ಧಕ್ಕೆ ಬೇರೆಯದೇ ವೇದಿಕೆ ಕಲ್ಪಿಸಿಕೊಡುವುದು ಸೂಕ್ತ. ಮುಖ್ಯಮಂತ್ರಿ ವಿರುದ್ಧದ ಹೋರಾಟ ಮರೆತ ಹಾಗಿದೆ. ನಮ್ಮ ಗುರಿ ಮುಖ್ಯಮಂತ್ರಿ ರಾಜೀನಾಮೆ. ಅದಕ್ಕೆ ನಾವು ಹೆಚ್ಚಿನ ಆದ್ಯತೆ ನೀಡಬೇಕು’ ಎಂದು ಹೇಳಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ವಿಶ್ವನಾಥ್, ‘ವರಿಷ್ಠರು ಅವರ ಮಾತನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ಈ ಹಿಂದೆ ಮುಖ್ಯಮಂತ್ರಿ ಆಗಿದ್ದವರನ್ನೇ ಉಚ್ಚಾಟನೆ ಮಾಡಿದ ಉದಾಹರಣೆಗಳಿವೆ. ಅವರಿಗೆ ನೋವಾಗಿದ್ದರೆ ವರಿಷ್ಠರ ಮುಂದೆ ಹೇಳಿಕೊಳ್ಳಬಹುದು’ ಎಂದರು.

ನಗರದಲ್ಲಿ ಇಂದು

ಹೆಲ್ಮೆಟ್–ಥಾನ್: ಆಯೋಜನೆ ಮತ್ತು ಸ್ಥಳ: ಬೆಂಗಳೂರು ಮೆಡಿಕಲ್ ಕಾಲೇಜ್ ಆ್ಯಂಡ್ ಇನ್‌ಸ್ಟಿಟ್ಯೂಟ್, ಬೆಳಿಗ್ಗೆ 8.30

‘ಶಿವಬಾಲಯೋಗಿ ಮಹಾರಾಜರ 63ನೇ ವಾರ್ಷಿಕೋತ್ಸವ’: ಬೆಳಿಗ್ಗೆ 9ಕ್ಕೆ ಸ್ವಾಮೀಜಿ ಅವರ ಸಮಾಧಿ ಪೂಜೆ, ಬೆಳಿಗ್ಗೆ 10ಕ್ಕೆ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಆಶೀರ್ವಚನ: ಶಿವರುದ್ರ ಬಾಲಯೋಗಿ ಸ್ವಾಮೀಜಿ, 1ಕ್ಕೆ ಅಭಿಷೇಕ, 1.30ಕ್ಕೆ ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಆಶ್ರಮ ರಸ್ತೆ ಜೆ.ಪಿ.ನಗರ 3ನೇ ಹಂತ

ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಅತಿಥಿಗಳು: ಶೋಭಾ ಜಿ., ವಿಷ್ಣುಭರತ್ ಆಲಂಪಳ್ಳಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ ಬೆಳಿಗ್ಗೆ 10

ಪ್ರೊ.ಬಿ. ಕೃಷ್ಣಪ್ಪ ಅವರು ಸ್ಥಾಪಿಸಿದ ಕರ್ನಾಟಕ ದಲಿತ ಚಳವಳಿಗೆ 50ನೇ ವರ್ಷದ ಸಂಭ್ರಮೋತ್ಸವ: ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11.30

ವಿದ್ಯಾರ್ಥಿ ಸಂಘದ ಉದ್ಘಾಟನೆ, ಅಭಿನಂದನಾ ಸಮಾರಂಭ: ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಅತಿಥಿಗಳು: ಎ. ಆನಂದರಾಜ್, ಎಂ.ಆರ್. ಶ್ರೀಹರ್ಷ, ಪಿ. ದಯಾನಂದ ಪೈ, ಅವಿರಾಮ್ ಶರ್ಮಾ, ರವಿ ವೆಂಕಟೇಸಮ್, ಆಯೋಜನೆ: ಬಿಎಂಎಸ್ ಹೆಣ್ಣುಮಕ್ಕಳ ಪಿಯು ಕಾಲೇಜು, ಸ್ಥಳ: ಕ್ರೀಡಾ ಸಂಕೀರ್ಣದ ಸಭಾಂಗಣ, ಬಿಎಂಎಸ್‌ಸಿಇ, ಬಸವನಗುಡಿ, ಮಧ್ಯಾಹ್ನ 12.30

ಮೊಬೈಲ್ ಬ್ಯಾಂಕಿಂಗ್ ಮತ್ತು ಯುಪಿಐ ಸೇವೆಗಳ ಉದ್ಘಾಟನೆ: ವೀರಪ್ಪ ಬಿ., ಅತಿಥಿಗಳು: ಸೋಮಶೇಖರ್ ಕೆ., ಶಿವಶಂಕರೇಗೌಡ ಟಿ.ಜಿ., ಉಪಸ್ಥಿತಿ: ವಿವೇಕ್ ಸುಬ್ಬಾರೆಡ್ಡಿ, ಶಂಕರ್ ಟಿ.ಎನ್., ಅಧ್ಯಕ್ಷತೆ: ಸೊಣ್ಣೇಗೌಡ ಎನ್.ಎಂ., ಆಯೋಜನೆ: ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಸ್ಥಳ: ಸಿಟಿ ಸಿವಿಲ್ ಕೋರ್ಟ್ ಶಾಖೆಯ ಆವರಣ, ಕೆ.ಜಿ. ರಸ್ತೆ, ಮಧ್ಯಾಹ್ನ 1.30

‘ಕಾಡುವ ಕಿರಂ’ ಅಹೋರಾತ್ರಿ: ಉದ್ಘಾಟನೆ: ಮೂಡ್ನಾಕೂಡು ಚಿನ್ನಸ್ವಾಮಿ, ಪುಸ್ತಕ ಬಿಡುಗಡೆ: ಎಸ್.ಜಿ ಸಿದ್ಧರಾಮಯ್ಯ, ಅತಿಥಿಗಳು: ಎಲ್.ಎನ್. ಮುಕುಂದರಾಜ್, ಪ.ಸ. ಕುಮಾರ್, ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ‘ಕಾಡುವ ಕಿರಂ’ ಅವರ ಬಗ್ಗೆ ಪ್ರಸ್ತಾವನೆ: ಪ್ರದೀಪ್ ಮಾಲ್ಗುಡಿ, ಕಿರಂ ಪುರಸ್ಕಾರ ಪುರಸ್ಕೃತರು: ಎಚ್.ಆರ್. ಸ್ವಾಮಿ, ಎಂ.ಜೆ. ಕಮಲಾಕ್ಷಿ, ಕೆ.ಆರ್. ಸಂಧ್ಯಾ ರೆಡ್ಡಿ, ರಾಮದೇವ್ ರಾಕೆ, ಬಂಜಗೆರೆ ಜಯಪ್ರಕಾಶ್, ಕಾ.ತ. ಚಿಕ್ಕಣ್ಣ, ಕವಿಗೋಷ್ಠಿ: ಆರ್.ಚಲಪತಿ, ರಾಜಪ್ಪ ದಳವಾಯಿ, ರವಿಕುಮಾರ್ ನೀಹಾ, ದಿಲಾವರ್ ರಾಮದುರ್ಗ, ಕುಪ್ಪನಹಳ್ಳಿ ಎಂ. ಭೈರಪ್ಪ ಸಮಾರೋಪ: ಟಿ. ಯಲ್ಲಪ್ಪ, ಸುಭಾಷ್ ಕಮ್ಮಾರ್, ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ, ಆಯೋಜನೆ: ಜನಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಆರ್ಟ್ ಫೌಂಡೇಷನ್ ಕಿರಂ ಪ್ರಕಾಶನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಪ್ರಥಮ ಪದವಿ ತರಗತಿಗಳ ಉದ್ಘಾಟನೆ, ದತ್ತಿ ಪ್ರತಿಭಾ ಪುರಸ್ಕಾರ ಸಮಾರಂಭ–2024–25: ಅತಿಥಿಗಳು: ಎಸ್. ಷಡಕ್ಷರಿ, ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎನ್.ಆರ್. ಪಂಡಿತ ಆರಾಧ್ಯ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಸೆಪ್ಟೆಂಬರ್‌ನಲ್ಲಿ ಬೌರಿಂಗ್ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ: ಸಚಿವ

3ಂಗಳಲ್ಲಿ ಚರಕ ಆಸ್ಪತ್ರೆ ಉದ್ಘಾಟನೆ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರದಲ್ಲಿರುವ ಬೌರಿಂಗ್ ಮತ್ತು ಚರಕ ಆಸ್ಪತ್ರೆಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಅವರು ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೌರಿಂಗ್ ಆಸ್ಪತ್ರೆಯ ಡೆಂಗಿ ವಾರ್ಡ್‌ಗಳಿಗೆ ಭೇಟಿ ನೀಡಿ, ರೋಗಿಗಳ ಆರೋಗ್ಯ, ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ವಿಚಾರಿಸಿದರು. ಆಸ್ಪತ್ರೆಯಲ್ಲಿ ವೈದ್ಯರು ಸೂಕ್ತ ಚಿಕಿತ್ಸೆ ನೀಡುತ್ತಿದ್ದಾರೆಯೆ? ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಸಮಯಕ್ಕೆ ಸರಿಯಾಗಿ ನೀಡುತ್ತಿದ್ದಾರೆಯೆ? ಎಂದು ರೋಗಿಗಳಿಂದ ಮಾಹಿತಿ ಪಡೆದುಕೊಂಡರು.

ಬಳಿಕ ಅಲ್ಲಿಂದ ಶಿವಾಜಿನಗರದ ಚರಕ ಆಸ್ಪತ್ರೆಗೆ ಕಾಲ್ನಡಿಗೆಯಲ್ಲಿ ತೆರಳಿ, ಪರಿಶೀಲನೆ ನಡೆಸಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಶರಣ ಪ್ರಕಾಶ ಪಾಟೀಲ, ‘ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಉತ್ತಮ ವೈದ್ಯಕೀಯ ಚಿಕಿತ್ಸೆ ನೀಡುವ ಸದುದ್ದೇಶದಿಂದ ಬೌರಿಂಗ್ ಆಸ್ಪತ್ರೆಯ ಪಾರಂಪರಿಕ ಕಟ್ಟಡ ಮಾತ್ರ ಉಳಿಸಿಕೊಂಡು ಹಳೆಯ ಕಟ್ಟಡವನ್ನು ನೆಲಸಮಗೊಳಿಸಲಾಗಿದೆ. 500 ಹಾಸಿಗೆ ಸಾಮರ್ಥ್ಯದ ಹತ್ತು ಅಂತಸ್ತಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲಾಗುವುದು’ ಎಂದು ಹೇಳಿದರು.

‘₹287 ಕೋಟಿ ವೆಚ್ಚದ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಸೆಪ್ಟೆಂಬರ್‌ನಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುವುದು. ಎರಡು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಗಡುವು ನೀಡಲಾಗಿದೆ’ ಎಂದರು.

ಚರಕ ಆಸ್ಪತ್ರೆ ಶೀಘ್ರ ಉದ್ಘಾಟನೆ: ‘ಚರಕ ಆಸ್ಪತ್ರೆಯನ್ನು ಶೀಘ್ರದಲ್ಲೇ ಉದ್ಘಾಟಿಸಲಾಗುವುದು. ಬಿಬಿಎಂಪಿ ಈ ಕಟ್ಟಡ ನಿರ್ಮಿಸಿದೆ. ಇನ್ಫೊಸಿಸ್ ಮೂಲಸೌಲಭ್ಯ ಒದಗಿಸಿದೆ. ಹೃದಯ ಸಂಬಂಧಿ, ನರರೋಗ, ನೆಫ್ರಾಲಜಿ ಸೇರಿದಂತೆ ಎಲ್ಲ ಚಿಕಿತ್ಸೆ ನೀಡಲಾಗುವುದು. ಬಿಪಿಎಲ್ ಪಡಿತರ ಚೀಟಿ ಹೊಂದಿರುವವರಿಗೆ ಉಚಿತ ಚಿಕಿತ್ಸೆ ಸಿಗಲಿದೆ’ ಎಂದು ಸಚಿವರು ಮಾಹಿತಿ ನೀಡಿದರು.

ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಶಿವಾಜಿನಗರದಲ್ಲಿರುವ ಬೌರಿಂಗ್ ಆಸ್ಪತ್ರೆಗೆ ಸೋಮವಾರ ಭೇಟಿನೀಡಿದ ಸಚಿವ ಡಾ.ಶರಣ ಪ್ರಕಾಶ ಪಾಟೀಲ ರೋಗಿಗಳ ಆರೋಗ್ಯವನ್ನು ವಿಚಾರಿಸಿದರು. ಶಾಸಕ ರಿಜ್ವಾನ್ ಅರ್ಷದ್ ಜತೆಗಿದ್ದರು ಪ್ರಜಾವಾಣಿ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ವಿದ್ಯೆಯೊಂದಿಗೆ ಆದರ್ಶ ಗುಣಗಳು ನಿನ್ನಲ್ಲಿ ಬಾರದಿದ್ದರೆ ನೀನು ಓದುವುದು ವ್ಯರ್ಥ.

-ಪ್ರೇಮ್‌ಚಂದ್

ಬಾಂಗ್ಲಾದಲ್ಲಿ ರಾಜಕೀಯ ಬಿಕ್ಕಟ್ಟು ಭಾರತಕ್ಕೆ ಭಾರಿ ಕಳವಳಕಾರಿ

ನಮ್ಮ ನೆರೆಯ ಬಾಂಗ್ಲಾದೇಶದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಬಿಕ್ಕಟ್ಟು ಉಂಟಾಗಿರುವುದು ಕಳವಳಕಾರಿ ವಿದ್ಯಮಾನ. ಅವಾಮಿ ಲೀಗ್ ಮುಖ್ಯಸ್ಥೆ ಶೇಖ್ ಹಸೀನಾ ನೇತೃತ್ವದ ಸರ್ಕಾರ ಪತನಗೊಂಡಿದೆ ಮತ್ತು ಹಸೀನಾ ಅವರು ಸದ್ಯ ಭಾರತದಲ್ಲಿ ಇದ್ದಾರೆ. 1971ರ ಬಾಂಗ್ಲಾ ವಿಮೋಚನೆ ಸಂಘರ್ಷದಲ್ಲಿ ಭಾಗಿಯಾದ ಸೈನಿಕರ ಸಂಬಂಧಿಕರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇ 30ರಷ್ಟು ಮೀಸಲಾತಿ ನೀಡುವುದರ ವಿರುದ್ಧ ನಡೆದ ಪ್ರತಿಭಟನೆಯು ದೇಶದಾದ್ಯಂತ ಪಸರಿಸಿ ಚಳವಳಿಯ ರೂಪ ಪಡೆದುಕೊಂಡಿತು. ವಿದ್ಯಾರ್ಥಿಗಳು ಮತ್ತು ಯುವಸಮೂಹದ ಈ ಪ್ರತಿಭಟನೆಗೆ ವಿವಿಧ ರಾಜಕೀಯ ಪಕ್ಷಗಳು, ಗಣ್ಯರು ಬೆಂಬಲ ನೀಡಿದರು. ಪರಿಣಾಮವಾಗಿ ಮೀಸಲಾತಿ ವಿರುದ್ಧ ಆರಂಭಗೊಂಡ ಪ್ರತಿಭಟನೆಯು ಹಸೀನಾ ನೇತೃತ್ವದ ಸರ್ಕಾರವನ್ನು ಪತನಗೊಳಿಸುವ ಹೋರಾಟವಾಯಿತು. ದೇಶದಾದ್ಯಂತ ವಿಧಿಸಲಾಗಿದ್ದ ಕರ್ಫ್ಯೂವನ್ನು ಲೆಕ್ಕಿಸದೆ ಪ್ರತಿಭಟನಕಾರರು ಢಾಕಾದತ್ತ ನುಗ್ಗಿದರು. ಪ್ರತಿಭಟನೆಯ ಸಂದರ್ಭದಲ್ಲಿ 440ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಭಾನುವಾರ ಒಂದೇ ದಿನ ಸುಮಾರು ನೂರು ಮಂದಿ ಬಲಿಯಾದರು. ಪ್ರತಿಭಟನಕಾರರು ಪ್ರಧಾನಿಯ ಅರಮನೆಗೆ ನುಗ್ಗುವುದಕ್ಕೆ ಸ್ವಲ್ಪ ಹೊತ್ತಿಗೆ ಮೊದಲು ಸೇನೆಯ ಸಲಹೆಯಂತೆ ಹಸೀನಾ ಅವರು ಸೇನೆಯ ವಿಮಾನದಲ್ಲಿ ಭಾರತಕ್ಕೆ ಬಂದಿದ್ದಾರೆ. ಇದರೊಂದಿಗೆ ಅವರ ಸತತ 15 ವರ್ಷಗಳ ಆಧಿಪತ್ಯ ಕೊನೆಗೊಂಡಿದೆ. 1975ರಲ್ಲಿ ತಮ್ಮ ತಂದೆ ಮುಜೀಬುರ್ ರೆಹಮಾನ್ ಮತ್ತು ಕುಟುಂಬದ ಇತರರ ಹತ್ಯೆಯಾದ ಬಳಿಕ ದೇಶ-ಭ್ರಷ್ಟರಾಗಿ ಭಾರತದಲ್ಲಿ ಆಶ್ರಯ ಪಡೆದಿದ್ದ ಹಸೀನಾ ಅವರು, 1981ರಲ್ಲಿ ಸ್ವದೇಶಕ್ಕೆ ಮರಳಿದ್ದರು. ಇತರ ಪಕ್ಷಗಳ ಜೊತೆಗೆ ಸೇರಿ ಪ್ರಜಾಪ್ರಭುತ್ವ ಸ್ಥಾಪನೆಗೆ ಹೋರಾಡಿದ್ದರು. ಈ ಹೋರಾಟವು ಅವರಿಗೆ ದೇಶದಲ್ಲಿ ಅಪಾರ ಜನಪ್ರಿಯತೆ ಗಳಿಸಿಕೊಟ್ಟಿತ್ತು. 1996ರಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದು ದೇಶದ ಪ್ರಧಾನಿಯೂ ಆದರು. ಬಳಿಕ ಸೋತರು. ಆದರೆ, 2008ರ ಚುನಾವಣೆಯಲ್ಲಿ ಗೆದ್ದು ಮರಳಿ ಅಧಿಕಾರಕ್ಕೆ ಬಂದ ಅವರು ದೇಶದ ಮೇಲೆ ಬಿಗಿಹಿಡಿತ ಸಾಧಿಸಿದ್ದರು. ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದ್ದ ಅವರ ಆಳ್ವಿಕೆಯು ನಿರಂಕುಶವಾಗಿತ್ತು ಎಂಬ ಆರೋಪಗಳು ಇವೆ. ತಮ್ಮ ವಿರುದ್ಧದ ಟೀಕೆಗಳನ್ನು ಅವರು ಸಹಿಸುತ್ತಿರಲಿಲ್ಲ, ಟೀಕಾಕಾರರು, ವಿರೋಧಿಗಳನ್ನು ದಮನ ಮಾಡುತ್ತಿದ್ದರು ಎಂದೂ ಹೇಳಲಾಗುತ್ತಿದೆ. ಆದರೆ ಈ ಎಲ್ಲ ಆರೋಪಗಳನ್ನು ಹಸೀನಾ ನಿರಾಕರಿಸಿದ್ದಾರೆ. ಆದರೆ, ಜನರು ಈಗ ಪ್ರದರ್ಶಿಸಿರುವ ಆಕ್ರೋಶವನ್ನು ಗಮನಿಸಿದರೆ ಈ ಆರೋಪಗಳಲ್ಲಿ ಹುರುಳಿಲ್ಲ ಎಂದು ಹೇಳಲಾಗದು.

ಬಾಂಗ್ಲಾ ಸೇನೆಯು ಅಧಿಕಾರದ ಮೋಹಕ್ಕೆ ಬೀಳದೆ, ದೇಶದಲ್ಲಿ ನಿಷ್ಪಕ್ಷಪಾತ ಮತ್ತು ನ್ಯಾಯಯುತ ಚುನಾವಣೆ ನಡೆದು ಪ್ರಜಾಪ್ರಭುತ್ವ ಇನ್ನಷ್ಟು ಗಟ್ಟಿಗೊಳ್ಳುವಂತೆ ನೋಡಿಕೊಳ್ಳಬೇಕು

ಬಾಂಗ್ಲಾದೇಶದಲ್ಲಿ ಉಂಟಾಗಿರುವ ರಾಜಕೀಯ ಅಸ್ಥಿರತೆಯ ಹಿಂದೆ ಪಾಕಿಸ್ತಾನದ ಗೂಢಚರ್ಯೆ ಸಂಸ್ಥೆ ಐಎಸ್‌ಐ ಮತ್ತು ಚೀನಾದ ಪಿತೂರಿ ಇದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದು ನಿಜವೇ ಆಗಿದ್ದರೆ ಖಂಡನೀಯ. ಒಂದು ದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸಿ ದೇಶವನ್ನು ಅಸ್ಥಿರಗೊಳಿಸುವುದು ಅಕ್ಷಮ್ಯ. ನಾಲ್ಕು ಸಾವಿರಕ್ಕೂ ಹೆಚ್ಚು ಕಿಲೊಮೀಟರ್ ಉದ್ದದ ಗಡಿಯನ್ನು ಭಾರತದ ಜೊತೆಗೆ ಹಂಚಿಕೊಂಡಿರುವ ಬಾಂಗ್ಲಾದೇಶದಲ್ಲಿನ ಬಿಕ್ಕಟ್ಟನ್ನು ಭಾರತವು ಲಘುವಾಗಿ ತೆಗೆದುಕೊಳ್ಳುವಂತಿಲ್ಲ. ಜೊತೆಗೆ ಈಗಿನ ಬಿಕ್ಕಟ್ಟಿನ ಹಿಂದೆ ಐಎಸ್‌ಐ ಮತ್ತು ಚೀನಾದ ಕೈವಾಡ ಇದೆ ಎಂದಾದರೆ, ಅದು ಭಾರತಕ್ಕೆ ಅಪಾಯದ ಕರೆಗಂಟೆ ಎಂದೇ ಅರ್ಥ. ಹಸೀನಾ ತಮ್ಮ ಆಳ್ವಿಕೆಯ ಅವಧಿಯಲ್ಲಿ ಬಾಂಗ್ಲಾವು ಭಾರತ ವಿರೋಧಿ ಚಟುವಟಿಕೆಗಳಿಗೆ ಬಳಕೆ ಆಗದಂತೆ ನೋಡಿಕೊಂಡಿದ್ದರು. ಇನ್ನು ಮುಂದೆ ಅಂತಹ ಭರವಸೆ ಇಲ್ಲ. ಬಾಂಗ್ಲಾದೇಶವು ದಕ್ಷಿಣ ಏಷ್ಯಾದಲ್ಲಿ ಭಾರತದ ಅತಿ ದೊಡ್ಡ ವ್ಯಾಪಾರ ಪಾಲುದಾರ. ರಾಜಕೀಯ ಅಸ್ಥಿರತೆಯು ದ್ವಿಪಕ್ಷೀಯ ವ್ಯಾಪಾರಕ್ಕೂ ಧಕ್ಕೆ ಉಂಟುಮಾಡಬಹುದು. ಬಾಂಗ್ಲಾದೇಶದ ಈಗಿನ ಬಿಕ್ಕಟ್ಟಿಗೆ ಒಂದು ರೀತಿಯಲ್ಲಿ ಹಸೀನಾ ಅವರೂ ಕಾರಣರಾಗಿದ್ದಾರೆ. ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದ್ದ ಅವರು ಸರ್ವಾಧಿಕಾರಿಯಂತೆ ವರ್ತಿಸಬಾರದಿತ್ತು. ಸರ್ಕಾರಿ ಉದ್ಯೋಗಗಳೇ ಕಡಿಮೆ ಇರುವ ದೇಶದಲ್ಲಿ ಶೇ 30ರಷ್ಟು ಹುದ್ದೆಗಳನ್ನು ವಿಮೋಚನೆ ಹೋರಾಟದಲ್ಲಿ ಭಾಗಿಯಾಗಿದ್ದವರ ಬಂಧುಗಳಿಗೆ ಮೀಸಲಿರಿಸಿದರೆ ಪರಿಣಾಮ ಏನಾಗಬಹುದು ಎಂಬುದನ್ನು ಅವರು ಅಂದಾಜಿಸಬೇಕಿತ್ತು. ಪ್ರತಿಭಟನಕಾರರ ಬೇಡಿಕೆಗಳಿಗೆ ಸಹಾನುಭೂತಿ ತೋರದೆ, ಅವರನ್ನು ಭಯೋತ್ಪಾದಕರು ಎಂದು ಕರೆದು, ಉರಿಯುವ ಬೆಂಕಿಗೆ ತುಪ್ಪ ಸುರಿದರು. ಪ್ರತಿಭಟನಕಾರರ ಬೇಡಿಕೆ ಈಡೇರಿದೆ. ಸರ್ಕಾರ ಪತನಗೊಂಡಿದೆ. ಆದರೆ, ಹಿಂಸಾಚಾರದಿಂದ ಏನನ್ನು ಬೇಕಿದ್ದರೂ ಸಾಧಿಸಬಹುದು ಎಂದು ಅವರು ಭಾವಿಸಬಾರದು. ಪಾಕಿಸ್ತಾನ ಪರ ಒಲವು ಹೊಂದಿರುವ, ಮೂಲಭೂತವಾದಿಯಾಗಿರುವ ಹಲವು ಗುಂಪುಗಳು ಬಾಂಗ್ಲಾದೇಶದಲ್ಲಿ ಇವೆ. ಹಿಂಸಾಚಾರವು ದೇಶವನ್ನು ಪ್ರಪಾತಕ್ಕೆ ತಳ್ಳಬಹುದು. ಪ್ರತಿಭಟನಕಾರರು ತಕ್ಷಣಕ್ಕೆ ಹಿಂಸೆ ನಿಲ್ಲಿಸದಿದ್ದರೆ ಸೇನಾ ಆಡಳಿತ ಕಾಯಂಗೊಳ್ಳುವ ಅಪಾಯ ಇದ್ದೇ ಇದೆ. ಇದನ್ನು ಪ್ರತಿಭಟನಕಾರರು ಅರ್ಥ ಮಾಡಿಕೊಳ್ಳಬೇಕು. ಪ್ರಭಾವಿಯಾಗಿರುವ ಸೇನೆಯು ಅಧಿಕಾರದ ಮೋಹಕ್ಕೆ ಬೀಳದೆ, ದೇಶದಲ್ಲಿ ನಿಷ್ಪಕ್ಷಪಾತ ಮತ್ತು ನ್ಯಾಯಯುತ ಚುನಾವಣೆ ನಡೆದು ಪ್ರಜಾಪ್ರಭುತ್ವ ಇನ್ನಷ್ಟು ಗಟ್ಟಿಗೊಳ್ಳುವಂತೆ ನೋಡಿಕೊಳ್ಳಬೇಕು.

ದಿನದ ಟ್ವೀಟ್

ಕನ್ನಡದಲ್ಲೂ ಇರಲಿ

ಪ್ರಿಯ ಜಿಯೊ ಸಿನಿಮಾ, ಪ್ಯಾರಿಸ್ ಒಲಿಂಪಿಕ್ಸ್ ವೀಕ್ಷಕ ವಿವರಣೆ ಕನ್ನಡದಲ್ಲಿ ಇಲ್ಲದಿರುವುದು ನಿರಾಶಾದಾಯಕ. ಕನ್ನಡ ಮಾತನಾಡುವ 6 ಕೋಟಿ ಮಂದಿ ಇರುವಾಗ, ನಮ್ಮ ಭಾಷೆಯನ್ನು ಒಳಗೊಳ್ಳಬೇಕಾದುದು ಅತಿ ಮುಖ್ಯ. ಹೆಚ್ಚಿನ ವೀಕ್ಷಣಾನುಭವ ಪಡೆಯುವುದಕ್ಕಾಗಿ ದಯಮಾಡಿ ಕನ್ನಡದಲ್ಲಿ ವೀಕ್ಷಕ ವಿವರಣೆ ನೀಡಿ.

ಗಿರೀಶ್ ಕಾರ್ಗದ್ದೆ, ಎಂಜಿನಿಯರ್

ಕಿಡಿನುಡಿ

ಬಾಂಗ್ಲಾದೇಶದ ಸಂಸ್ಥಾಪಕ ಶೇಖ್ ಮುಜೀಬುರ್ ರೆಹಮಾನ್ ಅವರ ಪುತ್ಥಳಿಯ ಮೇಲೆ ಪ್ರತಿಭಟನಕಾರನೊಬ್ಬ ಮೂತ್ರ ವಿಸರ್ಜಿಸುತ್ತಾನೆ. ಇದು ಅಸಹ್ಯಕರ ಮನಃಸ್ಥಿತಿ.
#BangladeshViolence

ಗೌತಮ್ ಅಗರವಾಲ್, ಉದ್ಯಮಿ

25 ವರ್ಷಗಳ ಹಿಂದೆ

ಶನಿವಾರ, 7-8-1999

- **ಸೇನೆಯ ಶಿಬಿರಕ್ಕೆ ದಾಳಿ: ಮೇಜರ್ ಸೇರಿ ಐವರ ಹತ್ಯೆ– 6 ಉಗ್ರರ ಬಲಿ**

ಶ್ರೀನಗರ, ಆ. 6 (ಯುಎನ್‌ಐ, ಪಿಟಿಐ)– ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ವ್ಯಾಪ್ತಿಯ ನಟ್ನುಷಾ ಗ್ರಾಮದಲ್ಲಿರುವ ಸೇನಾ ಶಿಬಿರದ ಮೇಲೆ ರಾತ್ರಿ ದಾಳಿ ನಡೆಸಿರುವ ಉಗ್ರಗಾಮಿಗಳು, ಕನಿಷ್ಠ ಐವರು ಸೇನಾ ಸಿಬ್ಬಂದಿಯನ್ನು ಹತ್ಯೆ ಮಾಡಿದ್ದಾರೆ. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಆರು ಮಂದಿ ಉಗ್ರರು ಸಹ ಸತ್ತಿದ್ದಾರೆ.

ಸತ್ತವರಲ್ಲಿ ಒಬ್ಬರು ಮೇಜರ್, ಇಬ್ಬರು ಕಿರಿಯ ಸೇನಾಧಿಕಾರಿಗಳು ಹಾಗೂ ಇಬ್ಬರು ಸೈನಿಕರು ಸೇರಿದ್ದಾರೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

- **ಬೊಮ್ಮಾಯಿ, ಗೌಡರ ದಳಪ್ರೇಮ ಹೆಗಡೆ ಲೇವಡಿ**

ಬೆಂಗಳೂರು, ಆ. 6– ಜನತಾದಳವನ್ನು ಹುಟ್ಟುಹಾಕಲು ಹಿಂದೆ ವಿರೋಧ ವ್ಯಕ್ತಪಡಿಸಿದ್ದ ಎಚ್.ಡಿ.ದೇವೇಗೌಡ ಮತ್ತು ಎಸ್.ಆರ್.ಬೊಮ್ಮಾಯಿ ಅವರಂಥವರು ಈಗ ತಮ್ಮ ಬಣವೇ ನಿಜವಾದ ದಳ ಎಂದು ವಾದಿಸುತ್ತಿರುವುದು ಹಾಸ್ಯಾಸ್ಪದ ಎಂದು ಲೋಕಶಕ್ತಿಯ ರಾಷ್ಟ್ರೀಯ ಅಧ್ಯಕ್ಷ ರಾಮಕೃಷ್ಣ ಹೆಗಡೆ ಟೀಕಿಸಿದರು.

ನಗರದ ಹೊರವಲಯದ ವಿಹಾರಧಾಮವೊಂದರಲ್ಲಿ ಇಂದು ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಜಯಪ್ರಕಾಶ್ ನಾರಾಯಣ್ ಅವರ ತತ್ವದ ಮೇಲೆ ದಳವನ್ನು ಕಟ್ಟಲು ಹೊರಟಾಗ ದೇವೇಗೌಡರು ಗೂಂಡಾಗಳೊಂದಿಗೆ ಸೇರಿಕೊಂಡು ಅಸಹಕಾರ ತೋರಿದರು. ಬೊಮ್ಮಾಯಿ ಇಬ್ಬಂದಿತನ ಪ್ರದರ್ಶಿಸಿದರು. ಈಗ ಇವರು ಒಂದು ಸಣ್ಣ ಬಣದಲ್ಲಿದ್ದರೂ ತಾವೇ ದಳದ ಮೂಲಪುರುಷರು ಎಂಬಂತೆ ಮಾತನಾಡುತ್ತಿದ್ದಾರೆ ಎಂದು ವ್ಯಂಗ್ಯ ಮಾಡಿದರು.

50 ವರ್ಷಗಳ ಹಿಂದೆ

ಬುಧವಾರ, 7-8-1974

- **ಪೆನ್ಷನ್‌ಗೆ ಪರದಾಟ ತಪ್ಪಿಸಲು ಕ್ರಮ**

ಬೆಂಗಳೂರು, ಆ. 6– ಮೂವತ್ತು ವರ್ಷಗಳ ಕಾಲ ದೀರ್ಘಸೇವೆ ಸಲ್ಲಿಸಿದ ನಂತರ ವಿಶ್ರಾಂತಿ ವೇತನಕ್ಕಾಗಿ ಕಂಬ ಕಂಬಕ್ಕೂ ವರ್ಷಗಟ್ಟಲೆ ಅಲೆಯಬೇಕಾಗಿರುವ ಸರ್ಕಾರದ ಹಿರಿಯ ಹಾಗೂ ಕಿರಿಯ ಅಧಿಕಾರಿಗಳ ಬವಣೆ ತಪ್ಪಿಸಲು, ಸೇವೆಗೆ ಸೇರಿದ ದಿನ ಹಾಗೂ ನಿವೃತ್ತಿಯ ದಿನಾಂಕ ಪರಿಗಣಿಸಿ ನಿವೃತ್ತಿಯ ಹದಿನೆಂಟು ತಿಂಗಳ ಮೊದಲೇ ಸಂಬಂಧಪಟ್ಟ ಕಾಗದಪತ್ರಗಳನ್ನು ತಯಾರಿಸುವ ವ್ಯವಸ್ಥೆ ಮಾಡಲು ಸರ್ಕಾರ ಯೋಚಿಸಿದೆ.

ಕರ್ನಾಟಕ ಸರ್ಕಾರಿ ನೌಕರರ ಸೇವಾ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಿ, ನಿವೃತ್ತಿಯ ಹನ್ನೆರಡು ತಿಂಗಳ ಮೊದಲೇ ಕಾಗದಪತ್ರಗಳು ಅಕೌಂಟೆಂಟ್ ಜನರಲ್ ಅವರ ಕಚೇರಿಗೆ ತಲುಪುವಂತೆ ಮಾಡಬೇಕೆಂಬುದೇ ಅದರ ಉದ್ದೇಶ.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಿಂದ ಶರಾವತಿ ನದಿಗೆ ಮಾತ್ರವಲ್ಲ ಅಭಯಾರಣ್ಯಕ್ಕೂ ಕುತ್ತು

ಅತಿರೇಕದ ಅಭಿವೃದ್ಧಿ: ಅನಾಹುತಕ್ಕೆ ಬುನಾದಿ

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಕರ್ನಾಟಕದ ಕೆಲವು ಜಿಲ್ಲೆಗಳು, ಅದರಲ್ಲೂ ಪಶ್ಚಿಮಘಟ್ಟ ವ್ಯಾಪ್ತಿಯ ಜಿಲ್ಲೆಗಳು ಸರಾಸರಿ ಮಳೆಗಿಂತ ಹೆಚ್ಚು ಮಳೆಯನ್ನು ಕಾಣುತ್ತಿದ್ದರೆ, ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಕೆಲವು ಪ್ರದೇಶಗಳು ಮಳೆ ಕೊರತೆಯಿಂದ ನರಳುತ್ತಿವೆ. ಮಲೆನಾಡಿನಲ್ಲಿ ಗುಡ್ಡ ಕುಸಿತ ಸಾಮಾನ್ಯವಾಗುತ್ತಿದೆ. ಕೇರಳ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ 2018ರಲ್ಲಿ 7,000 ಪ್ರದೇಶಗಳಲ್ಲಿ ಗುಡ್ಡ ಕುಸಿತವಾಗಿದೆ ಎಂದು ಅಂಕಿ-ಅಂಶಗಳು ಹೇಳುತ್ತವೆ.

ಹವಾಗುಣ ಬದಲಾವಣೆಯ ವಿದ್ಯಮಾನದಿಂದಾಗಿ, ತಿಂಗಳಲ್ಲಿ ಸುರಿಯುವ ಮಳೆ ವಾರದಲ್ಲೇ ಸುರಿಯುತ್ತಿದೆ. ಇಂತಹ ವಿಪರೀತದ ವಿದ್ಯಮಾನವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಣ್ಣು ತೆರೆಸಿದಂತೆ ತೋರುತ್ತದೆ. ಪಶ್ಚಿಮ ಘಟ್ಟಗಳ 56 ಸಾವಿರ ಚದರ ಕಿ.ಮೀ. ಪ್ರದೇಶವನ್ನು ಕೇಂದ್ರವು ಸೂಕ್ಷ್ಮ ಎಂದು ಗುರುತಿಸಿ, ಆರನೇ ಬಾರಿಗೆ ಕರಡು ಅಧಿಸೂಚನೆ ಹೊರಡಿಸಿದೆ. ರಾಜ್ಯ ಅರಣ್ಯ ಸಚಿವರು, 2015ರ ನಂತರದಲ್ಲಿ ಆದ ಅರಣ್ಯ ಒತ್ತುವರಿಯನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಲಾಗುವುದು ಎಂದು ಹೇಳಿದ್ದು ವರದಿಯಾಗಿದೆ.

ಕೇಂದ್ರ ಹಾಗೂ ರಾಜ್ಯದ ಈಗಿನ ಸರ್ಕಾರಗಳ ಧೋರಣೆಗಳು ಮೇಲ್ನೋಟಕ್ಕೆ ಪರಿಸರಸ್ನೇಹಿಯಾಗಿ ತೋರುತ್ತವೆಯಾದರೂ ಅಭಿವೃದ್ಧಿ ಯೋಜನೆಗಳ ಪಟ್ಟಿ ನೋಡಿದರೆ, ಪರಿಸರ ನಾಶಕ್ಕೆ ಕಾರಣವಾಗುವ ಯೋಜನೆಗಳೇ ಮುನ್ನೆಲೆಗೆ ಬಂದಿರುವುದು ತಿಳಿಯುತ್ತದೆ. ಇದಕ್ಕೆ ಒಂದು ತಾಜಾ ಉದಾಹರಣೆಯೆಂದರೆ, ಶರಾವತಿ ಅಭಯಾರಣ್ಯದ ಸೂಕ್ಷ್ಮ ಪ್ರದೇಶದಲ್ಲಿ ಜಾರಿಗೊಳಿಸಲು ಉದ್ದೇಶಿಸಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ.

ಅರಣ್ಯ ಸಂರಕ್ಷಣಾ ಕಾಯ್ದೆ– 1980ರ ಅಡಿ, ಹಿಂದಿನ ಹದಿನೈದು ವರ್ಷಗಳಲ್ಲಿ 3 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಚಟುವಟಿಕೆಗಳಿಗೆ ಬಳಸಲಾಗಿದೆ ಎಂದು ಕೇಂದ್ರ ಅರಣ್ಯ ಸಚಿವರು ಲೋಕಸಭೆಯಲ್ಲಿ ಲಿಖಿತ ಹೇಳಿಕೆಯನ್ನೇ ನೀಡಿದ್ದಾರೆ. ಗಣಿಗಾರಿಕೆ, ಹೆದ್ದಾರಿ ವಿಸ್ತರಣೆ, ನೀರಾವರಿ, ವಿದ್ಯುತ್ ಪ್ರಸರಣಾ ಮಾರ್ಗ, ಭದ್ರತೆ, ಜಲವಿದ್ಯುತ್ ಯೋಜನೆ, ರೈಲು ಮಾರ್ಗ, ಅಣುವಿದ್ಯುತ್ ಸ್ಥಾವರ ಹಾಗೂ ಪವನ ವಿದ್ಯುತ್ ಉತ್ಪಾದನಾ ಯಂತ್ರ ಅಳವಡಿಕೆಗಾಗಿ ಈ ಪ್ರದೇಶ ಬಳಕೆಯಾಗಿದೆ ಎಂಬುದು ಅಂಕಿ-ಅಂಶಗಳಿಂದ ಗೊತ್ತಾಗುತ್ತದೆ.

ಕರ್ನಾಟಕದ ವಿದ್ಯುತ್ ಕೊರತೆಯನ್ನು ನೀಗಿಸಲು ಸುಮಾರು ₹8 ಸಾವಿರ ಕೋಟಿ ಅಂದಾಜುವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಅನುಷ್ಠಾನಗೊಳಿಸುವ ಉದ್ದೇಶದಿಂದ, ವಿಸ್ತೃತ ಯೋಜನಾ ವರದಿಗೆ ಕೇಂದ್ರ ವಿದ್ಯುತ್ ಪ್ರಾಧಿಕಾರವು ದಾಖಲೆ ಅವಧಿಯಲ್ಲಿ ಅನುಮೋದನೆ ನೀಡಿದೆ. ಸುಮಾರು 500ಕ್ಕೂ ಹೆಚ್ಚು ಸಸ್ಯಪ್ರಭೇದಗಳು ಹಾಗೂ 330ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳನ್ನು ಹೊಂದಿರುವ ಹಾಗೂ 930 ಚದರ ಕಿ.ಮೀ. ವ್ಯಾಪ್ತಿಯ ಶರಾವತಿ ಸಿಂಗಳೀಕ ಅಭಯಾರಣ್ಯದ ಅತಿಸೂಕ್ಷ್ಮ ಹಾಗೂ ಪ್ರಪಂಚದಲ್ಲೇ ಅತ್ಯಪರೂಪದ ಸಿಂಗಳೀಕ, ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್ ಪಕ್ಷಿಗಳ ಆವಾಸಸ್ಥಾನವನ್ನು ಯೋಜನೆಗೆ ಬಳಸಿಕೊಳ್ಳಲು ಕೆಪಿಸಿಎಲ್ ಮುಂದಾಗಿದೆ.

ಜೋಗ ಸಮೀಪದ ತಲಕಳಲೆ ಅಣೆಕಟ್ಟೆಯಿಂದ ಒಂದು ಬಾರಿ ವಿದ್ಯುತ್ ಉತ್ಪಾದನೆಯಾದ ನಂತರ ಆ ನೀರು ಆರು ಕಿ.ಮೀ. ದೂರದಲ್ಲಿರುವ ಹಾಗೂ 550 ಮೀಟರ್ ಆಳದಲ್ಲಿರುವ ಗೇರುಸೊಪ್ಪ ಅಣೆಕಟ್ಟೆಯಲ್ಲಿ ಸಂಗ್ರಹವಾಗುತ್ತದೆ. ಆ ನೀರಿನಿಂದ ಮತ್ತೆ 240 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಿದ ನೀರು ಮುಂದೆ ನದಿಯಲ್ಲಿ ಹರಿದು ಹೊನ್ನಾವರದಲ್ಲಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಗೇರುಸೊಪ್ಪ ಅಣೆಕಟ್ಟಿನಲ್ಲಿ ಸಂಗ್ರಹವಾಗುವ ನೀರನ್ನು ಮತ್ತೆ 550 ಮೀಟರ್ ಮೇಲೆತ್ತಿ ತಲಕಳಲೆ ಅಣೆಕಟ್ಟೆಗೆ ತರುವುದು, ಆ ನೀರಿನಿಂದ ಮತ್ತೆ 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

ಗುರುತ್ವಾಕರ್ಷಣೆಗೆ ವಿರುದ್ಧವಾಗಿ ಗೇರುಸೊಪ್ಪ ಅಣೆಕಟ್ಟೆಯಿಂದ ತಲಕಳಲೆ ಅಣೆಕಟ್ಟೆಗೆ ನೀರನ್ನು ಎತ್ತಿ ತರಲು 2,500 ಮೆಗಾವಾಟ್ ವಿದ್ಯುತ್ ಬೇಕಾಗುತ್ತದೆ. ರಾಜ್ಯದಲ್ಲಿ ವಿದ್ಯುತ್‌ಗೆ ಬೇಡಿಕೆ ಕಡಿಮೆ ಇರುವ ಸಮಯದಲ್ಲಿ (ರಾತ್ರಿ ಹತ್ತು ಗಂಟೆಯ ನಂತರ), ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಬಳಸಿಕೊಂಡು ನೀರನ್ನು ಮೇಲೆ ಎತ್ತಿ ತರಲಾಗುವುದು, ವಿದ್ಯುತ್ ಉತ್ಪಾದಿಸಿ, ಅಧಿಕವಾಗಿ ವಿದ್ಯುತ್ ಬೇಡಿಕೆ ಇರುವ ಬೆಳಗಿನ ಹಾಗೂ ಸಂಜೆಯ ಸಮಯದಲ್ಲಿ ಗ್ರಾಹಕರಿಗೆ ನೀಡಲಾಗುವುದು ಎಂದು ಕೆಪಿಸಿಎಲ್ ಹೇಳುತ್ತದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ– 1972ರ ಅಡಿಯಲ್ಲಿ, ಸಿಂಗಳೀಕಗಳಿಗೆ ಅತಿಹೆಚ್ಚು ಭದ್ರತೆ ನೀಡಲಾಗಿದೆ. ಶರಾವತಿ ಸಿಂಗಳೀಕ ಅಭಯಾರಣ್ಯ ಎಂದು ಘೋಷಣೆಯಾದ ಹನ್ನೊಂದು ತಿಂಗಳಲ್ಲೇ ಅಂದರೆ, 2020ರ ಮೇ ತಿಂಗಳಲ್ಲಿ ರಾಜ್ಯ ವನ್ಯಜೀವಿ ಮಂಡಳಿ ಮತ್ತು ಕೇಂದ್ರ ವನ್ಯಜೀವಿ ಮಂಡಳಿಯು ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪೂರ್ವಭಾವಿ ಪರೀಕ್ಷೆ ನಡೆಸಲು, ಸೂಕ್ಷ್ಮ ಪ್ರದೇಶದಲ್ಲಿ ಹನ್ನೆರಡು ಬೋರ್‌ಹೋಲ್ ಕೊರೆಯಲು ಅನುಮತಿ ನೀಡಿದ್ದನ್ನು ಇಲ್ಲಿ ಸ್ಮರಿಸಬೇಕು. ಇಡೀ ಪ್ರಪಂಚದಲ್ಲಿ ವಯಸ್ಕ ಸಿಂಗಳೀಕಗಳ ಸಂಖ್ಯೆ ಬರೀ 2,500. ಅಂದರೆ, ಭಾರತದ ಒಂದು ಗ್ರಾಮದಲ್ಲಿರುವ ಸರಾಸರಿ ಜನಸಂಖ್ಯೆಗೆ ಇದು ಸಮ. ಸುಮಾರು 6.40 ಲಕ್ಷ ಗ್ರಾಮಗಳಿರುವ ಹಾಗೂ ಪ್ರತಿ ಚದರ ಕಿ.ಮೀ. ವ್ಯಾಪ್ತಿಯಲ್ಲಿ 400ಕ್ಕೂ ಹೆಚ್ಚು ಜನಸಂಖ್ಯೆ ಇರುವ ನಮ್ಮ ದೇಶದಲ್ಲಿ ಅಳಿವಿನಂಚಿನ ಪ್ರಾಣಿ, ಪಕ್ಷಿಗಳಿಗೆ ಉಳಿಗಾಲ ಇಲ್ಲ ಎಂದು ದೂರದೃಷ್ಟಿ ಕೊರತೆಯ ಈ ಯೋಜನೆ ಎತ್ತಿ ತೋರಿಸುತ್ತಿದೆ.



2017ರಲ್ಲಿ ಮುನ್ನೆಲೆಗೆ ಬಂದಾಗ ಈ ಯೋಜನೆಯ ಅಂದಾಜುವೆಚ್ಚ ₹4,862 ಕೋಟಿ ಆಗಿತ್ತು. ಯೋಜನೆಯ ಈಗಿನ ಅಂದಾಜುವೆಚ್ಚ ₹8,000 ಕೋಟಿ. ಅಭಯಾರಣ್ಯದ ಸೂಕ್ಷ್ಮ ಪ್ರದೇಶದ 877 ಎಕರೆ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಪ್ರಸ್ತಾವ ಸಲ್ಲಿಸಲಾಗಿತ್ತು. ಅದರಲ್ಲಿ 153 ಹೆಕ್ಟೇರ್ ಪ್ರದೇಶದಲ್ಲಿ ಹೊಸ ಸುರಂಗಗಳು ಮತ್ತು ವಿದ್ಯುತ್ ಸ್ಥಾವರಗಳನ್ನು ನಿರ್ಮಿಸಲಾಗುವುದು ಎಂದು ಹೇಳಲಾಗಿತ್ತು. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಲ್ಲಿ ಉತ್ಪಾದನೆಯಾಗುವ ವಿದ್ಯುತ್ ಸಾಗಣೆಗಾಗಿ ಎಷ್ಟು ಮರಗಳನ್ನು ತೆರವುಗೊಳಿಸಬೇಕು ಅಥವಾ ಎಷ್ಟು ಅರಣ್ಯ ಪ್ರದೇಶ ನಾಶವಾಗಲಿದೆ ಎಂಬುದು ಯೋಜನಾಪೂರ್ವ ವರದಿಯಲ್ಲಿ ಉಲ್ಲೇಖವಾಗಿಲ್ಲ. ಯೋಜನೆಯ ಇನ್ನೊಂದು ದೊಡ್ಡ ಅಪಾಯವೆಂದರೆ, ಗುಡ್ಡಗಳನ್ನು ಯಂತ್ರಗಳ ಮೂಲಕ ಕೊರೆದು ನೆಲದಾಳದಲ್ಲಿ ಸ್ಥಾಪಿಸಲಾಗುವ ಯೋಜನೆಯಿಂದಾಗಿ ಆ ಪ್ರದೇಶದಲ್ಲಿ ಗುಡ್ಡ ಕುಸಿಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಗುಡ್ಡ ಕುಸಿತವಾದಲ್ಲಿ, ಹೂಳು ಗೇರುಸೊಪ್ಪ ಅಣೆಕಟ್ಟು ಸೇರುತ್ತದೆ.

ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದು ನಿಜವಾದರೂ ಬೇರೆ ಬೇರೆ ಕಾರಣಗಳಿಂದಾಗಿ ಈ ಯೋಜನೆ ಜಾರಿ ಸಾಧುವಲ್ಲ ಎಂಬುದು ವಿದ್ಯುತ್ ಕ್ಷೇತ್ರದ ಪರಿಣತರ ಅಭಿಪ್ರಾಯ. ಆರ್ಥಿಕವಾಗಿಯೂ ಯೋಜನೆ ಲಾಭದಾಯಕವಲ್ಲ. ಶರಾವತಿ ನದಿಯನ್ನೇ ನಂಬಿಕೊಂಡಿರುವ ಸಾವಿರಾರು ಬೆಸ್ತರ ಕುಟುಂಬಗಳು ನದಿ ಹರಿವಿನ ಕೊರತೆಯಿಂದ ತೊಂದರೆಗೆ ಒಳಗಾಗಲಿವೆ. ಶರಾವತಿ ನದಿ ಅಳಿವೆಯಲ್ಲಿ ಸಂತಾನೋತ್ಪತ್ತಿ ಮಾಡುವ ಜಲಚರಗಳ ಬದುಕಿಗೂ ಈ ಯೋಜನೆ ಅಡ್ಡಿಯಾಗಲಿದೆ.

ಬರೀ 132 ಕಿ.ಮೀ. ಉದ್ದವಿರುವ ಶರಾವತಿ ನದಿಯು ಅಣೆಕಟ್ಟು ಮತ್ತು ವಿದ್ಯುತ್ ಉತ್ಪಾದನೆಗಾಗಿ ಅತಿಹೆಚ್ಚು ಶೋಷಣೆಗೊಳಗಾದ ನದಿಯಾಗಿದೆ. ದೂರದೃಷ್ಟಿಯಿಲ್ಲದ ಈ ರೀತಿಯ ಅತಿರೇಕದ ಅಭಿವೃದ್ಧಿ ಯೋಜನೆಗಳ ಬಗ್ಗೆ ಹವಾಗುಣ ತುರ್ತು ಪರಿಸ್ಥಿತಿಯ ಈ ಸಂದರ್ಭದಲ್ಲಿ ಮುಂದಡಿ ಇಡುವುದು ವಿವೇಕಯುತ ಎಂದು ಅನ್ನಿಸಿಕೊಳ್ಳುವುದಿಲ್ಲ.

ದಿನೇ ದಿನೇ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಸರಿದೂಗಿಸುವುದು ಅಗತ್ಯ. ಆದರೆ ಅದಕ್ಕೆ ಪರ್ಯಾಯ ಮಾರ್ಗಗಳು ಬೇಕಾದಷ್ಟು ಇವೆ. ಆ ದಿಸೆಯಲ್ಲಿ ಸರ್ಕಾರ ಯೋಚಿಸಬೇಕು. ತಜ್ಞರ ಜೊತೆ ಸಮಾಲೋಚಿಸಬೇಕು. ಪರಿಸರಕ್ಕೆ ಬಾಧಕ ಆಗದಂತಹ ಮಾರ್ಗೋಪಾಯಗಳನ್ನು ಶೋಧಿಸಬೇಕು. ಕೆಪಿಸಿಎಲ್ ಇನ್ನೂ ಹೆಚ್ಚು ಹೆಚ್ಚು ಪರಿಸರಸ್ನೇಹಿಯಾಗಿ ಬದಲಾಗಬೇಕಾದ ಕಾಲ ಬಂದಿದೆ. ಕೆಪಿಸಿಎಲ್‌ಗೆ ಸೇರಿದ ಸಾವಿರಾರು ಎಕರೆ ಪ್ರದೇಶವು ಶರಾವತಿ ಹಿನ್ನೀರಿನ ಪಕ್ಕದಲ್ಲೇ ಇದೆ. ಈ ಪ್ರದೇಶದಲ್ಲಿ ಸೌರ ವಿದ್ಯುತ್ ಉತ್ಪಾದನೆಗೆ ಇರುವ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಬಹುದು. ಈ ಬಗ್ಗೆ ಸರ್ಕಾರ ಚಿಂತಿಸಲಿ.

ಚುರುಮುರಿ

ನಡಿಗೆ ಯಾತ್ರೆ

• ಮಣ್ಣೆ ರಾಜು

‘ಹಲೋ... ರೀ, ಪಾದಯಾತ್ರೆ ಪ್ರಯಾಣ ಸುಖಕರವಾಗಿ ಸಾಗ್ತಿದೆಯಾ?’ ಯಾತ್ರೆಯಲ್ಲಿರುವ ಶಾಸಕರಿಗೆ ಪತ್ನಿ ಫೋನ್ ಮಾಡಿದರು.

‘ಮೈಸೂರು ತಲುಪಿಬಿಟ್ಟರೆ ಸಾಕಪ್ಪಾ ಅನಿಸಿಬಿಟ್ಟಿದೆ’ ಶಾಸಕರು ಏದುಸಿರುಬಿಟ್ಟರು.

‘ಹುಯ್ಯೋ ಮಳೆಯಲ್ಲಿ ಪಾದಯಾತ್ರೆ ಹೊರಟಿದ್ದೀರಿ. ರೇನ್ ಕೋಟ್ ಬಿಚ್ಚಬೇಡಿ, ಛತ್ರಿ ಮುಚ್ಚಬೇಡಿ, ಮಳೆಯಲ್ಲಿ ನೆನೆದು ಶೀತ, ನೆಗಡಿಯಾಗಿ ಜ್ವರ ಬಂದು ಮಲಗಿಬಿಟ್ಟರೆ ಆಡಳಿತ ಪಕ್ಷದವರು ಆಡಿಕೊಂಡು ನಗ್ತಾರೆ’.

‘ಹಾಗೇನೂ ಆಗೋದಿಲ್ಲ. ಡಾಕ್ಟರ್, ಆಂಬುಲೆನ್ಸ್, ಮೊಬೈಲ್ ಆಸ್ಪತ್ರೆ ನಮ್ಮ ಜೊತೆಗಿವೆ’.

‘ಬೆಳಿಗ್ಗೆ ಏನು ತಿಂಡಿ ತಿಂದ್ರಿ? ಎಣ್ಣೆ ಐಟಂ ತಿಂದು ಆರೋಗ್ಯ ಕೆಡಿಸಿಕೊಳ್ಳಬೇಡಿ. ಜೇಬಿನಲ್ಲಿ ಡ್ರೈಫ್ರೂಟ್ಸ್ ಇಟ್ಟುಕೊಂಡು ದಾರಿಯುದ್ದಕ್ಕೂ ಬಾಯಿಗೆ ಎಸೆದುಕೊಂಡು ನೀರು ಕುಡಿಯಿರಿ’.

‘ಸರಿ’.

‘ಪಾದಯಾತ್ರೆಗೆ ಪೊಲೀಸರು ಅಡ್ಡಿ ಮಾಡ್ತಿಲ್ವಾ?’

‘ಇಲ್ಲ, ಅವರೂ ನಮ್ಮ ಜೊತೆ ನಡೆದು ಬರ್ತಿದ್ದಾರೆ’.

‘ಹೋಗ್ಲಿಬಿಡಿ, ಪಾದಯಾತ್ರೆ ಪುಣ್ಯದಿಂದ ಆ ಪೊಲೀಸರಿಗೆ ಪ್ರಮೋಷನ್ ಭಾಗ್ಯ ಸಿಗಲಿ. ರೀ, ಪಾದಯಾತ್ರೆ ನಿರ್ವಿಘ್ನವಾಗಿ ಸಾಗಲಿ ಅಂತ ನಿಮ್ಮ ಬೆಂಬಲಿಗರು ವಿಶೇಷ ಪೂಜೆ ಮಾಡಿಸಿ ಪ್ರಸಾದ ತಂದುಕೊಟ್ಟರು’. ಶಾಸಕರು ಖುಷಿಯಾದರು.

‘ನೀವು ಕ್ಷೇತ್ರದ ಕಡೆ ತಲೆ ಹಾಕಿ ತಿಂಗಳುಗಳಾಗಿವೆಯಂತೆ. ಮಳೆ ಸುರಿದು ರಸ್ತೆ, ಸೇತುವೆ ಹಾಳಾಗಿದ್ದರೂ ರಿಪೇರಿ ಮಾಡಿಸಿಲ್ಲ, ಸಂತ್ರಸ್ತರ ಸಂಕಷ್ಟ ಕೇಳಲಿಲ್ಲ ಅಂತ ಜನ ನಿಮ್ಮ ಮೇಲೆ ಸಿಟ್ಟಾಗಿದ್ದಾರಂತೆ. ಹೀಗಾದ್ರೆ ಮುಂದೆ ಎಲೆಕ್ಷನ್ ಗೆಲ್ಲೋದು ಕಷ್ಟ ಆಗುವುದಂತೆ’. ಶಾಸಕರಿಗೆ ಆತಂಕ.

‘ಮೈಸೂರು ಯಾತ್ರೆ ಮುಗಿಸಿಬಂದು ಕಾಲುನೋವು, ಮಂಡಿನೋವು ಅಂತ ರೆಸ್ಟ್ ಮಾಡಬೇಡಿ’.

‘ಮತ್ತೇನು ಮಾಡಲಿ?’

‘ಕ್ಷೇತ್ರದಲ್ಲಿ ನಡಿಗೆ ಯಾತ್ರೆ ಆರಂಭಿಸಿ ಜನರ ಸಿಟ್ಟು ಶಮನಗೊಳಿಸಿ. ಈ ಯಾತ್ರೆಯಿಂದ ಆರೋಗ್ಯ ವೃದ್ಧಿ, ಅಧಿಕಾರ ಸಿದ್ಧಿ ಪ್ರಾಪ್ತಿಯಾಗುತ್ತವೆ...’ ಎಂದು ಹೇಳಿ ಪತ್ನಿ ಫೋನ್ ಕಟ್ ಮಾಡಿದರು.

ಸಂಗತ

ರೀಲ್ಸ್ ಕಿರಿಕಿರಿ: ಹೊಸ ಸವಾಲು

ಸಾರ್ವಜನಿಕ ಸ್ಥಳಗಳಲ್ಲಿ ಜೋರು ದನಿಯಿಟ್ಟು ರೀಲ್ಸ್ ವೀಕ್ಷಿಸುತ್ತಾ ಸುತ್ತಮುತ್ತಲಿನವರಿಗೆ ಕಿರಿಕಿರಿ ಉಂಟು ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಇಂತಹ ಕೃತ್ಯಕ್ಕೆ ಅವಶ್ಯವಾಗಿ ಲಗಾಮು ಹಾಕಬೇಕಾಗಿದೆ

• ಸದಾಶಿವ್ ಸೊರಟೂರು

ಬಹುಶಃ ಇದು ನಿಮ್ಮ ಗಮನಕ್ಕೆ ಬಂದಿರಬಹುದು. ನೀವು ಬಸ್ಸಿನಲ್ಲಿ ಕೂತಿರುತ್ತೀರಿ. ನಿಮ್ಮ ಹಿಂದಿನ ಸೀಟಿನಲ್ಲೊ ಪಕ್ಕದ ಸೀಟಿನಲ್ಲೊ ಯಾರೋ ಒಬ್ಬ ತನ್ನ ಮೊಬೈಲ್ ಫೋನ್‌ನಲ್ಲಿ ಜೋರು ದನಿ ಇಟ್ಟುಕೊಂಡು ತುಣುಕು ಹಾಡೊ, ಕುಹಕ ನಗುವೊ, ವಿಚಿತ್ರ ಮಾತುಗಳನ್ನೊ ಕೇಳಿಸಿಕೊಳ್ಳುತ್ತಿರುತ್ತಾನೆ. ಅದನ್ನು ಕೇಳಿಸಿಕೊಳ್ಳಲು ನಿಮಗೆ ಹಿಂಸೆಯೆನಿಸಬಹುದು. ಮನಸ್ಸಿಗೆ ಕಿರಿಕಿರಿ ಆಗಬಹುದು. ‘ಆಫ್ ಮಾಡಿ’ ಅಂತ ಜೋರು ಮಾಡುತ್ತೀರಿ... ಬೆಳಿಗ್ಗೆ ಕೆಲಸಕ್ಕೆ ಹೊರಟ ನಿಮಗೆ ದಿನಪೂರ್ತಿ ನಿರುತ್ಸಾಹ.

ಬಸ್ ನಿಲ್ದಾಣ, ಹೋಟೆಲ್, ಉದ್ಯಾನ, ಯಾವುದೋ ಕಚೇರಿಯ ಆವರಣ, ಸರ್ಕಾರಿ ಆಸ್ಪತ್ರೆಯಲ್ಲಿ ಕಾದು ಕೂರುವ ಜಾಗ... ಹೀಗೆ ಎಲ್ಲೆಂದರಲ್ಲಿ ಇತ್ತೀಚೆಗೆ ಒಂದೆರಡು ಕ್ಷಣ ನಾವು ನಮ್ಮಷ್ಟಕ್ಕೆ ಕೂರಲು ಸಾಧ್ಯವಾಗುತ್ತಿಲ್ಲ. ಈ ಹುಚ್ಚು ರೀಲ್ಸ್ ಕಾಟ. ಅದು ಕೂಡ ಜೋರು ದನಿಯಲ್ಲಿ. ಇತ್ತ ಅವರೊಂದಿಗೆ ಜಗಳ ಮಾಡಲಾಗದೆ, ಅತ್ತ ಅದನ್ನು ಕೇಳಿಸಿಕೊಳ್ಳಲಾಗದೆ ಅಸಹನೆಯಿಂದ ಒದ್ದಾಡುವಂತಹ ಸ್ಥಿತಿ.

ನಾವು ಕೇಳುವ ಹಾಡಿನ ತುಣುಕು, ಜೋಕು, ಹರಟೆ... ಇವೆಲ್ಲ ನಮ್ಮ ಖಾಸಗಿ ಸಂಗತಿಗಳು. ಅವು ನಮಗೆ ಮಾತ್ರ ಬೇಕಾದಂತಹವು, ಇಡೀ ಲೋಕಕ್ಕೆ ಅಲ್ಲ. ಅವು ನಮಗೆ ಮಾತ್ರ ಕೇಳಿಸಿದರೆ ಸಾಕು. ಆ ಹಾಡನ್ನೋ ಹರಟೆಯನ್ನೋ ಪಕ್ಕದವರು ಏಕೆ ಕೇಳಿಸಿಕೊಳ್ಳಬೇಕು? ಅದರಿಂದ ಅವರಿಗೆ ಕಿರಿಕಿರಿಯಾಗುವುದಾದರೆ ಅವರು ನಮ್ಮ ಬಗ್ಗೆ ಏನಂದುಕೊಂಡಾರು? ಇಂತಹ ಸಣ್ಣಪುಟ್ಟ ಸೂಕ್ಷ್ಮಗಳನ್ನೂ ರೂಢಿಸಿಕೊಳ್ಳದಿದ್ದರೆ ಹೇಗೆ?

ಇತ್ತೀಚೆಗಂತೂ ಇದು ಅತಿಯಾಗುತ್ತಿದೆ. ಬಸ್ಸುಗಳಲ್ಲಿ ಈ ಬಗ್ಗೆ ಸೂಚನಾಫಲಕ ಹಾಕಿದರೂ ಅದನ್ನು ಪಾಲಿಸುವುದಿಲ್ಲ. ಕೆಲವೊಮ್ಮೆ ಬಸ್ ಕಂಡಕ್ಟರ್ ಕೂಡ ಜೋರಾಗಿ ರೀಲ್ಸ್ ನೋಡುತ್ತಾ ಕೂತಿರುವುದುಂಟು. ಗರಿಗರಿ ದಿರಿಸು ಧರಿಸಿ ಸುಶಿಕ್ಷಿತರಂತೆ, ಸಭ್ಯರಂತೆ ಕಾಣುವವರು ಕೂಡ ಸಾರ್ವಜನಿಕ ಸ್ಥಳಗಳಲ್ಲಿ ಜೋರಾಗಿ ರೀಲ್ಸ್ ನೋಡುತ್ತಾ ಮೈಮರೆತಿರುತ್ತಾರೆ. ಯಾವ ಸಂದರ್ಭದಲ್ಲಿ, ಯಾವ ಸ್ಥಳದಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಅರಿತು, ಅದರಂತೆ ವರ್ತಿಸುವುದು ನಾಗರಿಕತೆಯ ಮೊದಲ ಪಾಠ. ಅದನ್ನು ಎಲ್ಲರೂ ಕಲಿಯಬೇಕು.

ಮೊಬೈಲ್ ಫೋನ್ ಅವರದಾಗಿರಬಹುದು. ಸಮಯ ಮತ್ತು ಮೊಬೈಲ್ ಫೋನ್‌ನ ಡೇಟಾ ಕೂಡ ಅವರದೇ ಆಗಿರಬಹುದು. ಆದರೆ ಅವರು ಕೂತಿರುವ ಜಾಗ ಅವರ ಖಾಸಗಿ ಸ್ವತ್ತಲ್ಲ. ಸಾರ್ವಜನಿಕ ಸ್ಥಳ. ಅಲ್ಲಿ ಅವರಂತಹ ನೂರಾರು ಜನರಿರುತ್ತಾರೆ. ಬೇರೊಬ್ಬರ ನೆಮ್ಮದಿಗೆ ಭಂಗ ತರುವ ಹಕ್ಕು ಯಾರಿಗೂ ಇಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಒಬ್ಬರು ಇನ್ನೊಬ್ಬರ ನೆಮ್ಮದಿಗೆ ಭಂಗ ತರಬಾರದು.

ಕೆಲವು ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಪಯಣ ಹಿತಕರವಾಗಿರಲಿ ಎಂದು ಹಾಡು ಹಾಕುತ್ತಾರೆ. ಕೆಲವೊಮ್ಮೆ ನಿರ್ದಿಷ್ಟ ಹಾಡೊಂದು ನಿಮಗೆ ಇಷ್ಟವಿಲ್ಲದಿದ್ದರೂ ತುಂಬ ಕಿರಿಕಿರಿ ಅನ್ನಿಸುವುದಿಲ್ಲ. ಸಹ ಪ್ರಯಾಣಿಕರ ಸಲುವಾಗಿ ಅದನ್ನು ಸಹಿಸಿಕೊಳ್ಳಬಹುದು. ನಿಲ್ದಾಣಗಳಲ್ಲಿ ವಾಹನಗಳ ಬರುವಿಕೆ, ಹೊರಡುವ ವೇಳೆಯ ಬಗ್ಗೆ ಕೊಡುವ ಮಾಹಿತಿ ಎಲ್ಲರಿಗೂ ಉಪಯುಕ್ತ. ಆದರೆ ಪಕ್ಕದಲ್ಲೇ ಕೂತು ಬೇಡವೆನ್ನಿಸಿದರೂ ಕೇಳಿಸಿಕೊಳ್ಳಬೇಕಾದ ರೀಲ್ಸ್ ಸದ್ದು ಕರ್ಕಶವೆನಿಸುತ್ತದೆ.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಹಿರಿಯರೊಬ್ಬರು, ‘ಈ ರೀಲ್ಸ್ ಸದ್ದಿನ ಕಿರಿಕಿರಿಯಿಂದ ನನಗೆ ಈ ನಡುವೆ ಉದ್ವೇಗ ಉಂಟಾಗುತ್ತಿದೆ. ವಿನಾಕಾರಣ ಕಚೇರಿಯಲ್ಲಿ ಕೋಪ ಬರುತ್ತದೆ. ಈ ಕಿರಿಕಿರಿಯಿಂದ ಮೆದುಳು ನರಳುತ್ತದೆ’ ಎಂದು ಹೇಳುತ್ತಿದ್ದರು.

ಬೇರೆ ಬೇರೆ ಬಗೆಯ ಚಟಗಳಂತೆ ರೀಲ್ಸ್ ಕೂಡ ಈಗ ಚಟವಾಗಿದೆ. ಸಾರ್ವಜನಿಕ ಸ್ಥಳಗಳಿಂದ ಧೂಮಪಾನವನ್ನು ಆಚೆಗಿಡಲು ಎಷ್ಟೋ ವರ್ಷಗಳು ಬೇಕಾದವು. ಈಗ ರೀಲ್ಸ್ ರೂಪದಲ್ಲಿ ಹೊಸ ಸವಾಲು ಎದುರಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಜೋರು ದನಿಯ ರೀಲ್ಸ್ ಸಹಿಸಿಕೊಳ್ಳುವುದು ಧೂಮಪಾನ ಸಹಿಸಿಕೊಳ್ಳುವಷ್ಟೇ ಕಿರಿಕಿರಿ ಉಂಟುಮಾಡುತ್ತದೆ. ಅದಕ್ಕೆ ಸಾರ್ವಜನಿಕ ಸ್ಥಳಗಳಲ್ಲಿ ಲಗಾಮು ಹಾಕಲು ಇನ್ನೆಷ್ಟು ದಿನಗಳು ಬೇಕೋ?

ಹೊತ್ತು ಕಳೆಯಲು ಆಗುತ್ತಿಲ್ಲ, ಬಸ್ ಇನ್ನೂ ಬಂದಿಲ್ಲ, ಬರಬೇಕಾದವರು ಬರುವುದು ತಡವಾಗುತ್ತಿದೆ, ಊರು ದೂರ... ಇಂತಹ ಸಂದರ್ಭಗಳಲ್ಲಿ ಸಮಯವೂ ಸಾಗಬೇಕು, ಮನರಂಜನೆಯೂ ಸಿಗಬೇಕು ಎಂದಿದ್ದಾಗ ರೀಲ್ಸ್ ನೋಡುತ್ತೀರಿ. ನಿಮ್ಮ ಉದ್ದೇಶ ಸರಿ ಇದೆ. ಆದರೆ, ಬೇರೆಯವರಿಗೆ ತೊಂದರೆಯಾಗದಂತೆ, ನಿಮ್ಮಷ್ಟಕ್ಕೆ ನೀವು ಕೇಳಿಸಿಕೊಳ್ಳಲು ಅನೇಕ ಸಾಧನಗಳಿವೆ. ಅವುಗಳನ್ನು ಬಳಸಿಕೊಂಡು ಕೇಳಿದರೆ ನಿಮಗೂ ನೆಮ್ಮದಿ, ಬೇರೆಯವರಿಗೂ ನೆಮ್ಮದಿ.

ಇಂತಹದೊಂದು ಸೂಕ್ಷ್ಮವನ್ನು ನಮ್ಮ ಪರಿಸರ, ಹಿರಿಯರು, ಶಿಕ್ಷಣ ಹೇಳಿಕೊಡಬೇಕಿತ್ತು. ಅವು ಯಾವಾಗಲೋ ಅಂತಹ ಪ್ರಯತ್ನವನ್ನು ಕೈಬಿಟ್ಟಿವೆ. ಕೆಲವರಿಂದ ಹೆಚ್ಚು ಜನರಿಗೆ ತೊಂದರೆ ಆಗುತ್ತಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ರವಷ್ಟು ಮೌನವೂ ದುಬಾರಿಯಾಗಬಹುದು. ಬರೀ ಸದ್ದೇ ಮೇಲುಗೈ ಸಾಧಿಸಬಹುದು. ಇನ್ನು ಮುಂದೆ, ರೀಲ್ಸ್ ಹಾವಳಿಗೆ ಕಡಿವಾಣ ಹಾಕಲು ದಂಡದ ಪ್ರಯೋಗ ಮಾಡಬೇಕಾದ ಕಾಲವೂ ಬರಬಹುದು! ಎಚ್ಚೆತ್ತುಕೊಳ್ಳಲು ಇನ್ನೂ ಕಾಲ ಮಿಂಚಿಲ್ಲ. ಈ ದಿಸೆಯಲ್ಲಿ ಪ್ರಯತ್ನ ಆಗಲಿ.

ವಾಚಕರ ವಾಣಿ

ಕಲಾವಿದರಿಗೆ ಅಗೌರವ ತರವೇ?

ಹಬ್ಬ, ಜಾತ್ರೆ, ರಥೋತ್ಸವದಂತಹ ಧಾರ್ಮಿಕ ಉತ್ಸವಗಳಲ್ಲಿ ಜಾನಪದ ಕಲಾವಿದರು ಕಲಾ ಪ್ರದರ್ಶನ ಮಾಡುವುದು ನಮ್ಮ ಸಂಪ್ರದಾಯ. ಆದರೆ ಇತ್ತೀಚಿನ ದಿನಗಳಲ್ಲಿ ರಾಜಕೀಯ ನಾಯಕರ ಬರುವಿಕೆಗೆ ಅಥವಾ ಸತ್ಯಾಗ್ರಹ, ಧರಣಿಗಳಿಗೆ ಜಾನಪದ ಕಲಾವಿದರನ್ನು ಕರೆದು ಅವರ ಕಲೆಯನ್ನು ಅವಮಾನಿಸುವಂತಹ ಪ್ರವೃತ್ತಿ ಹೆಚ್ಚುತ್ತಿದೆ. ಇದರ ಅವಶ್ಯಕತೆಯಾದರೂ ಏನಿದೆ? ಜಾನಪದ ಕಲಾವಿದರು ಸಹ ತಾವು ಹೋಗುತ್ತಿರುವಂತಹ ವೇದಿಕೆ ಯಾವುದು, ಅಲ್ಲಿ ಕಲೆಗೆ ಗೌರವ ಸಿಗುತ್ತದೆಯೇ ಇಲ್ಲವೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಸಚಿವರು ಬರುವವರೆಗೂ ಕಲಾವಿದರು ತಮಟೆ, ಡೊಳ್ಳು, ಕಂಸಾಳೆಯಂತಹ ಕಲಾಪ್ರದರ್ಶನಗಳನ್ನು ನೀಡುತ್ತಾ ಇರುತ್ತಾರೆ. ಸಚಿವರು ಬಂದ ತಕ್ಷಣ ಈ ಕಲಾವಿದರನ್ನು ವೇದಿಕೆಯಿಂದ ಅಥವಾ ಸಭಾಂಗಣದಿಂದ ಹೀನಾಯವಾಗಿ ಹೊರಗೆ ಕಳಿಸಲಾಗುತ್ತದೆ. ಇಂತಹ ಅಗೌರವವನ್ನು ನಾವು ನಮ್ಮ ಶಾಸ್ತ್ರೀಯ ಸಂಗೀತ ಅಥವಾ ನೃತ್ಯಕ್ಕೆ ಸಂಬಂಧಿಸಿದಂತೆ ಮಾಡುತ್ತೇವೆಯೇ? ಇಲ್ಲ ಅಲ್ಲವೇ? ಕಲಾವಿದರ ಗೌರವಕ್ಕೆ ಚ್ಯುತಿ ಬಾರದೆ, ಎಲ್ಲ ಕಲಾವಿದರಿಗೂ ಸಮಾನವಾದಂಥ ಗೌರವ ಸಿಗುವಂತೆ ಆಗಬೇಕು. ಈ ದಿಸೆಯಲ್ಲಿ ಸರ್ಕಾರ ಕೆಲವು ನೀತಿ ನಿಯಮಗಳನ್ನು ರೂಪಿಸಬೇಕು. ಜಾನಪದ ಅಕಾಡೆಮಿ, ಜಾನಪದ ಪರಿಷತ್ತು ಅಥವಾ ಜಾನಪದ ವಿಶ್ವವಿದ್ಯಾಲಯದ ಅಧಿಕಾರಿಗಳು ಇತ್ತ ಗಮನಹರಿಸಬೇಕು.

ಗಿರಿಜಾ ವೀರಪ್ಪ, ಬೆಂಗಳೂರು

ಹೀಗಿದೆ ಪ್ರಬುದ್ಧ ಪ್ರಜಾಪ್ರಭುತ್ವ!

ಭ್ರಷ್ಟಾಚಾರದಲ್ಲಿ ಸಮಾನತೆ ಸಾಧಿಸಿರುವ ಆಡಳಿತ ಹಾಗೂ ವಿರೋಧಪಕ್ಷಗಳೆಂಬ ಸಮಾನ ಭ್ರಷ್ಟರ ‘ಚಲೋ’ ಗಲಾಟ, ವೋಟು ಹಾಕಿ ಆರಿಸಿದ ಜನತೆಗೆ ತಂದಿದೆ ಪ್ರಾಣಸಂಕಟ. ಜನತೆಯ ಅಭಿವೃದ್ಧಿಗೆ ಬಂತು ಮತ್ತೆ ಕಂಟಕ, ರಸ್ತೆಯಲಿ ಓಡಾಡುವುದಕ್ಕೂ ಟ್ರಾಫಿಕ್ ಜಾಮ್‌ನ ಮಹಾಸಂಕಟ. ಇದೇ ನಮ್ಮ ಪ್ರಬುದ್ಧ ಪ್ರಜಾಪ್ರಭುತ್ವ!

ನಿರಂಜನಾರಾಧ್ಯ ವಿ.ಪಿ., ಬೆಂಗಳೂರು

ನಾಯಕತ್ವದ ಸಮರಕ್ಕೆ ವೇದಿಕೆ?!

ಮೈಸೂರಿನ ಮುಡಾ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣಗಳನ್ನು ಸಾರ್ವಜನಿಕರ ಮುಂದೆ ತೆಗೆದುಕೊಂಡು ಹೋಗಲು ಬೆಂಗಳೂರಿನಿಂದ ಮೈಸೂರಿಗೆ ಜೆಡಿಎಸ್ ಹಾಗೂ ಬಿಜೆಪಿ ಪಾದಯಾತ್ರೆ ನಡೆಸುತ್ತಿವೆ. ಆದರೆ ಈಗ ಈ ಪಾದಯಾತ್ರೆಯು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಡುವಿನ ಮಾತಿನ ಸಮರಕ್ಕೆ ವೇದಿಕೆಯಾದಂತಿದೆ.

ಇವೆಲ್ಲವನ್ನೂ ಸಾರ್ವಜನಿಕರು ಗಮನಿಸುತ್ತಿದ್ದಾರೆ. ಇವೆಲ್ಲವೂ ನಡೆಯುತ್ತಿರುವುದು ಒಕ್ಕಲಿಗ ಸಮುದಾಯದ ನಾಯಕತ್ವಕ್ಕಾಗಿ ಎಂಬುದು ಸಾರ್ವಜನಿಕರಿಗೆ ತಿಳಿದಿದೆ. ಈಗ ಇತರ ಸಮುದಾಯದವರು ಇವರಿಬ್ಬರ ಜಗಳ ನೋಡಿ ಅಣಕಿಸುವಂತಾಗಿದೆ. ಈ ನಾಯಕರಿಗೆ ಸಮುದಾಯದ ಮುಖಂಡರು ಸ್ವಲ್ಪ ಬುದ್ಧಿ ಹೇಳಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಹೌದು, ಇವರೂ ಅವರ ಕೈಗೊಂಬೆಯೇ...

‘ನಮ್ಮ ರಾಜ್ಯಪಾಲರೂ ಕೇಂದ್ರದ ಕೈಗೊಂಬೆಯೇ?’ ಎಂಬ ಪ್ರಶ್ನೆಯನ್ನು ಎಚ್.ಆನಂದರಾಮ ಶಾಸ್ತ್ರೀ ಅವರು ಎತ್ತಿದ್ದಾರೆ. ಅವಕಾಶಗಳನ್ನು ಬೆಂಬತ್ತುವ ಕಲಾಗಾರಿಕೆಯೇ ರಾಜಕೀಯ ಎಂಬುದನ್ನು ಒಪ್ಪಿಕೊಂಡಿರುವ ನಮಗೆ, ಇದು ಅಚ್ಚರಿಯ ಪ್ರಶ್ನೆ ಎನಿಸುವುದೇ ಇಲ್ಲ! ಮೊದಲ ದೋಷವೆಂದರೆ, ರಾಜ್ಯಪಾಲರು, ರಾಷ್ಟ್ರಪತಿಯವರ ವೈಯಕ್ತಿಕ ಅಭಿವ್ಯಕ್ತಿ ಸ್ವಾತಂತ್ರ್ಯಹರಣ! ಅವರು ವಿಧಾನಮಂಡಲ ಮತ್ತು ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡುವ ಭಾಷಣಗಳಲ್ಲಿ, ಆಯಾ ಸಂದರ್ಭ, ಸನ್ನಿವೇಶಗಳ ಕುರಿತಂತೆ ಅವರದೇ ನೈಜ ಪರಿವೀಕ್ಷಣೆ, ಸಾಧನೆ ಮತ್ತು ಮುಂಗಾಣ್ಕೆಯ ನಿರ್ದೇಶನ ನೀಡುವುದಕ್ಕೆ ಅವಕಾಶವಾದರೂ ಎಲ್ಲಿರುತ್ತದೆ? ಅಂದಮೇಲೆ, ಕಾರ್ಯಾಂಗ ಮತ್ತು ಶಾಸಕಾಂಗದ ಮುಂದಿನ ನಡಾವಳಿಯ ಬಗ್ಗೆ ವಿಮರ್ಶಿಸಬೇಕಾದ ಪ್ರಸಂಗ ಒದಗಿಬಂದಲ್ಲಿ, ಅವರ ಪ್ರಕ್ರಿಯೆಯು ಈ ಭಾಷಣದ ಆಶಯಕ್ಕೆ ವಿಪರೀತವೂ ವ್ಯತಿರಿಕ್ತವೂ ಆಗಿರುವ ವಿಪರ್ಯಾಸವೇ ಹೆಚ್ಚಾಗಿರುತ್ತದೆ ಅಲ್ಲವೇ?

ರಾಜ್ಯಪಾಲರ ವರದಿಗಳೂ ಶಿಫಾರಸುಗಳೂ ನೇರವಾಗಿ ಮತ್ತು ಸಾರ್ವಜನಿಕವಾಗಿ ರಾಷ್ಟ್ರಪತಿಯವರನ್ನು ಮುಟ್ಟುವ ಸಾಧ್ಯತೆಯೂ ಇರುವುದಿಲ್ಲ. ಸಕ್ರಿಯ ರಾಜಕೀಯದಲ್ಲಿರುವ ಅವರು ಸಹಜವಾಗಿಯೇ ಮೇಲಧಿಕಾರದ ಮುಲಾಜಿನಲ್ಲೇ ಇರಬೇಕಾಗುತ್ತದೆ. ಮುಂದೊಮ್ಮೆ ಅವರಿಗೆ ಮಂತ್ರಿ, ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ ಆಗುವ ಅವಕಾಶ ತೆರೆದುಕೊಂಡೇ ಇರುತ್ತದಲ್ಲವೇ?!

ಆರ್.ಕೆ.ದಿವಾಕರ, ಬೆಂಗಳೂರು

ಗಾಜಾ: ವಿಕೃತ ದಾಳಿ ನಿಲ್ಲಲಿ

ಪ್ಯಾಲೆಸ್ಟೀನಿನ ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ದಾಳಿಗಳು, ಯುದ್ಧದ ಸಂದರ್ಭದಲ್ಲಿ ನಡೆದುಕೊಳ್ಳಬೇಕಾದ ಕನಿಷ್ಠ ನೀತಿ ನಿಯಮಗಳನ್ನೂ ಗಾಳಿಗೆ ತೂರಿದ ವಿಕೃತಿಗಳಾಗಿವೆ. ಸಾಮಾನ್ಯ ನಾಗರಿಕರು ಯುದ್ಧದಿಂದ ಪಾರಾಗಲು ಆಶ್ರಯ ಪಡೆದ ಶಾಲೆಗಳ ಮೇಲೆ, ದಾಳಿಯಿಂದ ಗಾಯಗೊಂಡು ಚಿಕಿತ್ಸೆ ಪಡೆಯಲು ಸೇರಿದ ಆಸ್ಪತ್ರೆಗಳ ಮೇಲೆ ಇಸ್ರೇಲ್ ದಾಳಿ ನಡೆಸುತ್ತಿದೆ. ಈ ಸಂದರ್ಭದಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ ಹಲವರು ಸಾವನ್ನಪ್ಪಿದ್ದಾರೆ. ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ, ನಿರಾಶ್ರಿತರ ತಾಣಗಳು ಹಾಗೂ ಆಸ್ಪತ್ರೆಗಳ ಮೇಲೆ ದಾಳಿ ಮಾಡುವುದು ಕಾನೂನುಬಾಹಿರ. ಆದರೆ ಇದನ್ನು ಪ್ರಶ್ನಿಸುವವರು ಯಾರು?

ತಾವು ಜಾಗತಿಕ ನಾಯಕರೆಂದು ಬಿಂಬಿಸಿಕೊಳ್ಳುವ ವಿಶ್ವದ ನಾಯಕರೆಲ್ಲ ಈ ಕುರಿತು ಗಮನಹರಿಸಬೇಕಾಗಿದೆ. ಈ ಬಗೆಯ ದಾಳಿಗಳನ್ನು ಕೂಡಲೇ ನಿಲ್ಲಿಸುವಂತೆ ಇಸ್ರೇಲ್‌ನ ಮೇಲೆ ಒತ್ತಡ ಹೇರಿ, ಅಲ್ಲಿನ ನಾಗರಿಕರನ್ನು ರಕ್ಷಿಸಬೇಕಾಗಿದೆ.

ಸರ್ಜಾಶಂಕರ ಹರಳಿಮಠ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಾಂಗ್ಲಾ: ಮಗ್ಗುಲ ಮುಳ್ಳು?



ಬಾಂಗ್ಲಾದ ತಲಾ ಆದಾಯವನ್ನು ಮೂರು ಪಟ್ಟು ಹೆಚ್ಚುವಂತೆ ಮಾಡಿದ, ದೇಶವನ್ನು ಹಲವು ಕ್ಷೇತ್ರಗಳಲ್ಲಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಸಿದ್ದ ಹಸೀನಾ, ವಿದ್ಯಾರ್ಥಿ ದಂಗೆಯಿಂದ ಅಧಿಕಾರ ಕಳೆದುಕೊಂಡಿದ್ದಾರೆ. ಅವರು ತಮ್ಮ 'ಮಿತ್ರ' ರಾಷ್ಟ್ರ ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ಭಾರತ ಕೂಡ ನೆರೆ ರಾಷ್ಟ್ರದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಬಾಂಗ್ಲಾದಲ್ಲಿನ ಪರಿಸ್ಥಿತಿ ಭಾರತದ ಮಟ್ಟಿಗೆ ಆಶಾದಾಯಕವಾಗಿಯೇನೂ ಇಲ್ಲ. ಪಾಕಿಸ್ತಾನದಂತೆಯೇ ಬಾಂಗ್ಲಾ ಕೂಡ ಉಗ್ರರ ಅಡಗು ತಾಣವಾಗಬಹುದು ಎನ್ನುವ ಸಾಧ್ಯತೆಯ ಜತೆಗೆ ಈಶಾನ್ಯ ರಾಜ್ಯಗಳಿಗೆ ಒಳನುಸುಳುವಿಕೆ ಸಮಸ್ಯೆ ಎದುರಾಗಬಹುದು ಎನ್ನುವ ಆತಂಕ ಹುಟ್ಟಿಕೊಂಡಿದೆ

ಬಾಂಗ್ಲಾದೇಶದ ವಿದ್ಯಾರ್ಥಿಗಳ ಚಳವಳಿ ಮತ್ತು ಶೇಖ್ ಹಸೀನಾ ರಾಜೀನಾಮೆ ವಿದ್ಯಮಾನ ಭಾರತದ ಮೇಲೆ ಎಂತಹ ಪರಿಣಾಮ ಬೀರಬಹುದು ಎನ್ನುವ ಬಗ್ಗೆ ಚರ್ಚೆ, ವಿಶ್ಲೇಷಣೆಗಳು ನಡೆಯುತ್ತಿವೆ; ದೇಶದ ಭದ್ರತೆಗೆ ಆತಂಕ ತಂದೊಡ್ಡಲಿದೆಯೇ ಎನ್ನುವ ಪ್ರಶ್ನೆಯೂ ಉದ್ಭವವಾಗಿದೆ.

ಪಾಕಿಸ್ತಾನದಿಂದ ಪ್ರತ್ಯೇಕಗೊಂಡಾಗಿನಿಂದಲೂ ಬಾಂಗ್ಲಾ, ಭಾರತದ ಜತೆ ಉತ್ತಮ ಸಂಬಂಧವನ್ನೇ ಹೊಂದಿದೆ. ಈ ಬಗ್ಗೆ ಶೇಖ್ ಹಸೀನಾ ಹಲವು ಬಾರಿ ಮುಕ್ತವಾಗಿ ಹೇಳಿಕೊಂಡಿದ್ದರು. 'ಭಾರತೀಯರು ನಮ್ಮ ಅತ್ಯುತ್ತಮ ಮಿತ್ರರು. ಅವರು 1971 ಮತ್ತು 1975ರಲ್ಲಿ ನಮ್ಮನ್ನು ಬೆಂಬಲಿಸಿದ್ದರು. ಅವರು ನನಗೆ, ನನ್ನ ತಂಗಿ ಮತ್ತು ಕುಟುಂಬದ ಇತರ ಸದಸ್ಯರಿಗೆ ಆಶ್ರಯ ನೀಡಿದ್ದರು. ಬಾಂಗ್ಲಾದೇಶವು ಭಾರತದೊಂದಿಗೆ ಅನೇಕ ಸಮಸ್ಯೆಗಳನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿಕೊಂಡಿದೆ' ಎಂದು ಜನವರಿಯಲ್ಲಿ ಸತತ ನಾಲ್ಕನೇ ಬಾರಿ ಪ್ರಧಾನಿ ಪಟ್ಟಕ್ಕೇರಿದಾಗ ಅವರು ನುಡಿದಿದ್ದರು.

ಹಸೀನಾ ಅವರು ಅಧಿಕಾರದಿಂದ ಕೆಳಗಿಳಿದಿರುವುದರಿಂದಾಗಿ ಅಲ್ಲಿ ಜಮಾತ್-ಎ-ಇಸ್ಲಾಮಿಯಂಥ ಮೂಲಭೂತವಾದಿ ಸಂಘಟನೆಗಳ ಕೈ ಮೇಲಾಗಲಿದೆ. ಅಲ್ಲಿನ ಜನರಲ್ಲಿ ಭಾರತ ವಿರೋಧಿ ಭಾವನೆ ಈಗಾಗಲೇ ಬೆಳೆಯುತ್ತಿದ್ದು, ಸದ್ಯದ ಬೆಳವಣಿಗೆಗಳಿಂದ ಮತ್ತು ಜಮಾತ್-ಎ-ಇಸ್ಲಾಮಿಯಂಥ ಸಂಘಟನೆಗಳಿಂದ ಅದು ಮತ್ತಷ್ಟು ಹೆಚ್ಚಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಜತೆಗೆ ಪಾಕಿಸ್ತಾನದಂತೆ ಬಾಂಗ್ಲಾ ಕೂಡ ಭಾರತ ವಿರೋಧಿ ಉಗ್ರಗಾಮಿ ಗುಂಪುಗಳಿಗೆ ನೆರವು ನೀಡುವ ಸಾಧ್ಯತೆ ಇದೆ; ಆಗ ಬಾಂಗ್ಲಾವನ್ನು ಉಗ್ರರು ತಮ್ಮ ನೆಲೆ ಮಾಡಿಕೊಂಡು ಭಾರತವನ್ನು ಗುರಿಯಾಗಿಸಿಕೊಳ್ಳಬಹುದು ಎನ್ನುವ ಆತಂಕ ಹುಟ್ಟಿಕೊಂಡಿದೆ.

ಬಾಂಗ್ಲಾದ ಬೆಳವಣಿಗೆಗಳಿಂದ ಭಾರತಕ್ಕೆ ಎದುರಾಗಿರುವ ಮತ್ತೊಂದು ಆತಂಕ ಒಳನುಸುಳಿವಿಕೆಯದ್ದು. ಬಾಂಗ್ಲಾ ಭಾರತದ ಪಶ್ಚಿಮ ಬಂಗಾಳ, ತ್ರಿಪುರಾ, ಮೇಘಾಲಯ, ಮಿಜೋರಾಂ ಮತ್ತು ಅಸ್ಸಾಂನೊಂದಿಗೆ 4,096 ಕಿ.ಮೀ.ಯಷ್ಟು ಗಡಿ ಹಂಚಿಕೊಂಡಿದೆ. 1971ರಲ್ಲಿ ಬಾಂಗ್ಲಾದೇಶವು ಪಾಕಿಸ್ತಾನದಿಂದ ಪ್ರತ್ಯೇಕಗೊಂಡಾಗ, ಅಲ್ಲಿಂದ ದೊಡ್ಡ ಮಟ್ಟದಲ್ಲಿ ಜನ ಈಶಾನ್ಯ ರಾಜ್ಯಗಳಿಗೆ– ಮುಖ್ಯವಾಗಿ ಅಸ್ಸಾಂ ಮತ್ತು ತ್ರಿಪುರಾಕ್ಕೆ– ನುಸುಳಿದ್ದರು. ಈಗಲೂ ಅದೇ ರೀತಿ ನುಸುಳುಕೋರರು ತ್ರಿಪುರಾ, ಪಶ್ಚಿಮ ಬಂಗಾಳ, ಮೇಘಾಲಯ ಮತ್ತು ಅಸ್ಸಾಂ ರಾಜ್ಯಗಳಿಗೆ ನುಗ್ಗಬಹುದು ಎನ್ನುವ ಆತಂಕ ವ್ಯಕ್ತವಾಗಿದೆ. ಹಿಂದೆ ತ್ರಿಪುರಾಕ್ಕೆ ಬಾಂಗ್ಲಾದವರು ನುಗ್ಗಿದ್ದರಿಂದ ಸ್ಥಳೀಯರು ಅಲ್ಪಸಂಖ್ಯಾತರಾದರು ಎನ್ನುವ ವಾದ ಇದೆ.

ಮ್ಯಾನ್ಮಾರ್‌ನಲ್ಲಿ ಆಂಗ್ ಸಾನ್ ಸೂಕಿ ಅವರ ಸರ್ಕಾರವನ್ನು ಸೇನೆ ಪದಚ್ಯುತಗೊಳಿಸಿದ ನಂತರ, ಅಲ್ಲಿನ ಸುಮಾರು 35,000ಕ್ಕೂ ಹೆಚ್ಚು ನಿರಾಶ್ರಿತರು ಮತ್ತು ಪ್ರಜಾಪ್ರಭುತ್ವವಾದಿ ಹೋರಾಟಗಾರರು ಭಾರತದ ಮಿಜೋರಾಂ, ಮಣಿಪುರ, ನಾಗಾಲ್ಯಾಂಡ್‌ಗೆ ನುಸುಳಿ ಬಂದಿದ್ದರು. ಮ್ಯಾನ್ಮಾರ್‌ನ ಅನೇಕ ಸಂಸದರು, ಸಚಿವರು ಈಗಲೂ ಮಿಜೋರಾಂನಲ್ಲಿ ಆಶ್ರಯ ಪಡೆದಿದ್ದಾರೆ ಎನ್ನಲಾಗುತ್ತಿದೆ. ಮಣಿಪುರ ಕೂಡ ನುಸುಳುಕೋರರ ಸಮಸ್ಯೆಯನ್ನು ಎದುರಿಸುತ್ತಿದೆ.

ಅಸ್ಸಾಂನದ್ದು ಭಿನ್ನ ರೀತಿಯ ಸಮಸ್ಯೆ. ಬಾಂಗ್ಲಾ ಮತ್ತು ಅಸ್ಸಾಂ ರಾಜ್ಯದ ಗಡಿಯಲ್ಲಿ ಅನೇಕ ಕಡೆ ಬೇಲಿಯೇ ಇಲ್ಲ. ಗಡಿಯಲ್ಲಿ ಬೇಲಿ ಅಳವಡಿಸಬೇಕು ಎನ್ನುವುದು ಜನರ ಬಹುಕಾಲದ ಬೇಡಿಕೆ. ಬಾಂಗ್ಲಾದಿಂದ ಒಳನುಸುಳಿವಿಕೆ ಹೆಚ್ಚಾಗಬಹುದು ಎನ್ನುವ ಆತಂಕವನ್ನು ಅಲ್ಲಿನ ಜನ ವ್ಯಕ್ತಪಡಿಸಿದ್ದಾರೆ.

ಹೆಚ್ಚಾಗಲಿದೆಯೇ ಚೀನಾ ಪ್ರಭಾವ?

ಹಸೀನಾ ಸರ್ಕಾರ ಪತನಕ್ಕೆ ಕಾರಣವಾದ ಪ್ರತಿಭಟನೆ, ಹಿಂಸಾಚಾರದಲ್ಲಿ ಪಾಕಿಸ್ತಾನ, ಚೀನಾ ಪರ ಒಲವು ಉಳ್ಳವರೇ ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿದ್ದರು ಎಂದು ಹೇಳಲಾಗುತ್ತಿದೆ. ಹಾಗಾಗಿ, ಪಾಕಿಸ್ತಾನ ಮತ್ತು ಚೀನಾ ಈ ದಂಗೆಯ ಹಿಂದೆ ಇರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಬಾಂಗ್ಲಾದಲ್ಲಿ ಅವಾಮಿ ಲೀಗ್ ಬಿಟ್ಟು ಇತರ ಪಕ್ಷಗಳು ಭಾರತದ ಪರ ನಿಲುವು ಹೊಂದಿಲ್ಲ. ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ), ಜಮಾತ್-ಇ-ಇಸ್ಲಾಮಿ ಪಾಕಿಸ್ತಾನದ ಪರ ಒಲವು ಹೊಂದಿವೆ. ಪಾಕಿಸ್ತಾನ ಮತ್ತು ಚೀನಾ ಸಂಬಂಧ ಅತ್ಯುತ್ತಮವಾಗಿರುವುದರಿಂದ ಬಾಂಗ್ಲಾದೇಶದ ಆಡಳಿತದ ಮೇಲೆ ಎರಡೂ ರಾಷ್ಟ್ರಗಳು ಪ್ರಭಾವ ಬೀರುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ.

ಬಾಂಗ್ಲಾದಲ್ಲಿ ಮುಂದೆ ಅಸ್ತಿತ್ವಕ್ಕೆ ಬರುವ ಸರ್ಕಾರ ಭಾರತ ವಿರೋಧಿ ನಿಲುವು ಹೊಂದಿದ್ದೇ ಆದಲ್ಲಿ, ಭಾರತ ಮತ್ತೊಂದು ಮಿತ್ರರಾಷ್ಟ್ರವನ್ನು ಕಳೆದುಕೊಳ್ಳುವುದು ಖಚಿತ.

ದೇಶದ ಭದ್ರತೆಯ ದೃಷ್ಟಿಯಿಂದ ನೆರೆ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧ ಹೊಂದಿರುವುದು ಬಹಳ ಮುಖ್ಯ. ಆದರೆ, ಇತ್ತೀಚಿನ ವರ್ಷಗಳಲ್ಲಿ ಭಾರತವು ಅಕ್ಕಪಕ್ಕದ ರಾಷ್ಟ್ರಗಳ ಗೆಳೆತನವನ್ನು ಕಳೆದುಕೊಳ್ಳುತ್ತಿದೆ.

ಅರಬ್ಬಿ ಸಮುದ್ರ, ಹಿಂದೂ ಮಹಾಸಾಗರ, ಬಂಗಾಳಕೊಲ್ಲಿ ವ್ಯಾಪ್ತಿಯಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ಇನ್ನಿಲ್ಲದ ಕಸರತ್ತು ನಡೆಸುತ್ತಿರುವ ಚೀನಾ, ಭಾರತದ ನೆರೆಯ ರಾಷ್ಟ್ರಗಳಿಗೆ ಸಾಲ, ಮೂಲಸೌಕರ್ಯಕ್ಕೆ ನೆರವು, ಬಂದರು ನಿರ್ಮಾಣಕ್ಕೆ ಸಹಕಾರ ನೀಡುವಂತಹ ಕಾರ್ಯಕ್ರಮಗಳಿಂದ ಆ ರಾಷ್ಟ್ರಗಳಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸುತ್ತಿದೆ. ಆ ರಾಷ್ಟ್ರಗಳ ವಿದೇಶಾಂಗ ನೀತಿಯ ಮೇಲೂ ಪ್ರಭಾವ ಬೀರುತ್ತಿದೆ.

ಅರಬ್ಬಿ ಸಮುದ್ರ, ಹಿಂದೂ ಮಹಾಸಾಗರ ಮತ್ತು ಬಂಗಾಳಕೊಲ್ಲಿ ವ್ಯಾಪ್ತಿಯ ರಾಷ್ಟ್ರಗಳಲ್ಲಿ ಬಂದರುಗಳನ್ನು ನಿರ್ಮಿಸಿ, ಅಲ್ಲಿ ತನ್ನ ಸೇನಾ ನೆಲೆ ಸ್ಥಾಪಿಸಿ 'ಮುತ್ತಿನ ಮಾಲೆ' (ಸ್ಟ್ರಿಂಗ್ ಆಫ್ ಪರ್ಲ್ಸ್) ಹೆಣೆಯುವ ಕಾರ್ಯತಂತ್ರವನ್ನು ಚೀನಾ ಅನುಷ್ಠಾನಗೊಳಿಸುತ್ತಿದೆ.

ಪಾಕಿಸ್ತಾನದೊಂದಿಗೆ ಭಾರತದ ಸಂಬಂಧ ಆರಂಭದಿಂದಲೂ ಉತ್ತಮವಾಗಿಲ್ಲ. ಕೆಲವು ವರ್ಷಗಳಿಂದ ಶ್ರೀಲಂಕಾದೊಂದಿಗೆ ಭಾರತದ ಬಾಂಧವ್ಯ ಅಷ್ಟಕ್ಕಷ್ಟೇ ಇದೆ. ಮಾಲ್ದೀವ್ಸ್‌ನೊಂದಿಗಿನ ಸಂಬಂಧವೂ ಹಳಸಿದೆ. ನೇಪಾಳದೊಂದಿಗೂ ಮೊದಲಿದ್ದಂತಹ ಉತ್ತಮ ಸಂಬಂಧ ಇಲ್ಲ. ಭೂತಾನ್‌ನೊಂದಿಗೆ ತಕ್ಕಮಟ್ಟಿಗೆ ಚೆನ್ನಾಗಿದೆ. ಮೂರು ವರ್ಷಗಳ ಹಿಂದೆ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಅಧಿಕಾರಕ್ಕೆ ಬರುವುದರೊಂದಿಗೆ ಅದರೊಂದಿಗಿನ ಬಾಂಧವ್ಯಕ್ಕೂ ಹಿನ್ನಡೆಯಾಗಿದೆ.

ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿದ್ದ ರಾಷ್ಟ್ರಗಳೆಲ್ಲ ಈಗ ಚೀನಾಕ್ಕೆ ಹತ್ತಿರವಾಗಿವೆ. ಭಾರತದಿಂದ ದೂರ ಸರಿಯುತ್ತಿವೆ. ಬಾಂಗ್ಲಾದ ಮೇಲೂ ಚೀನಾ ಪ್ರಭಾವ ಬೀರಲು ಯತ್ನಿಸುತ್ತಿದ್ದರೂ, ಶೇಖ್ ಹಸೀನಾ ಆಡಳಿತದಲ್ಲಿ ಭಾರತದೊಂದಿಗೆ ಅದರ ಸಂಬಂಧ ಉತ್ತಮವಾಗಿತ್ತು. ಈಗ ಅಲ್ಲಿ ನಡೆದಿರುವ ಬೆಳವಣಿಗೆ ಎರಡೂ ರಾಷ್ಟ್ರಗಳ ಬಾಂಧವ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಹೇಳಲಾಗುತ್ತಿದೆ.

ಭಾರತದ ಸುತ್ತ ಚೀನಾದ 'ಸ್ಟ್ರಿಂಗ್ ಆಫ್ ಪರ್ಲ್ಸ್'



ಪಶ್ಚಿಮ ಬಂಗಾಳದ ಪೆಟ್ರೊಪೋಲ್ ಭಾರತ–ಬಾಂಗ್ಲಾ ಗಡಿ ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರತ ಬಿಎಸ್‌ಎಫ್ ಯೋಧರು. ಹಿನ್ನಲೆಯಲ್ಲಿ ಬಾಂಗ್ಲಾದೇಶದ ಮೊದಲ ಪ್ರಧಾನಿ, ರಾಷ್ಟ್ರಪಿತ ಶೇಖ್ ಮುಜಿಬೀರ್ ರಹಮಾನ್ ಅವರ ಭಾವಚಿತ್ರ ಕಾಣಬಹುದು
–ಎಎಫ್‌ಪಿ ಚಿತ್ರ

ವ್ಯಾಪಾರಕ್ಕೂ ಕುತ್ತು?

ಹಸೀನಾ ರಾಜೀನಾಮೆಯಿಂದ ಎರಡೂ ರಾಷ್ಟ್ರಗಳ ನಡುವಿನ ವ್ಯಾಪಾರ ಸಂಬಂಧಕ್ಕೂ ಹೊಡೆತ ಬೀಳಬಹುದು ಎನ್ನುವುದು ಮತ್ತೊಂದು ಆತಂಕ. ಮೊದಲಿನಿಂದಲೂ, ಬಾಂಗ್ಲಾ ಭಾರತದೊಂದಿಗೆ ಉತ್ತಮ ವ್ಯವಹಾರ ಸಂಬಂಧವನ್ನೂ ಹೊಂದಿದೆ.

ದಕ್ಷಿಣ ಏಷ್ಯಾದಲ್ಲಿ ಭಾರತಕ್ಕೆ ಬಾಂಗ್ಲಾ ಅತಿ ದೊಡ್ಡ ವ್ಯಾಪಾರ ಪಾಲುದಾರ ಆಗಿದೆ. ಅದೇ ರೀತಿ ಬಾಂಗ್ಲಾಕ್ಕೆ ಭಾರತವು ಏಷ್ಯಾದಲ್ಲಿ ಎರಡನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ. ಇತ್ತೀಚೆಗೆ ಭಾರತದೊಂದಿಗಿನ ಬಾಂಗ್ಲಾದ ವ್ಯಾಪಾರದಲ್ಲಿ ಅಲ್ಪಕುಸಿತ ಕಂಡಿದ್ದರೂ, ಎರಡು ದೇಶಗಳ ನಡುವಿನ ಸಂಬಂಧಕ್ಕೆ ಧಕ್ಕೆಯೇನೂ ಆಗಿರಲಿಲ್ಲ.

ಭಾರತದಿಂದ ಬಾಂಗ್ಲಾಗೆ ರಫ್ತು ಪ್ರಮಾಣ

ರಫ್ತಾಗುವ ಉತ್ಪನ್ನಗಳು
ಇಂಜಿನಿಯರಿಂಗ್ ಪರಿಕರಗಳು, ತರಕಾರಿ, ಕಾಫಿ, ಟೀ, ಮಸಾಲೆ ಪದಾರ್ಥ, ಸಕ್ಕರೆ, ಸಿಹಿ ತಿನಿಸು, ಸಂಸ್ಕರಿತ ಪೆಟ್ರೋಲಿಯಂ ಇಂಧನ, ರಾಸಾಯನಿಕಗಳು, ಹತ್ತಿ, ಕಬ್ಬಿಣ, ಉಕ್ಕು ಮತ್ತು ವಾಹನಗಳು

ಭಾರತಕ್ಕೆ ಬಾಂಗ್ಲಾದಿಂದ ಆಮದು ಪ್ರಮಾಣ (ಕೋಟಿಗಳಲ್ಲಿ)



ಆಮದು ಉತ್ಪನ್ನಗಳು
ಬಟ್ಟೆ, ಮೀನು, ಪ್ಲಾಸ್ಟಿಕ್, ಚರ್ಮ

ಆಧಾರ: ಪಿಟಿಐ

ಧರ್ಮ ಕೀರ್ತಿರಾಜ್ ಈಗ 'ಟೆನೆಂಟ್'

ಧರ್ಮ ಕೀರ್ತಿರಾಜ್

ಧರ್ಮ ಕೀರ್ತಿರಾಜ್, ತಿಲಕ್ ರಾಜ್ ಅಭಿನಯದ 'ಟೆನೆಂಟ್' ಚಿತ್ರದ ಫಸ್ಟ್‌ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿಎಫ್‌ಎಕ್ಸ್ ತಂತ್ರಜ್ಞರಾಗಿರುವ ಶ್ರೀಧರ್ ಶಾಸ್ತ್ರೀ ಈ ಚಿತ್ರಕ್ಕೆ ಕಥೆ ಬರೆದು, ಆ್ಯಕ್ಷನ್ ಕಟ್ ಹೇಳಿದ್ದಾರೆ. ಮಾಸ್ಟರ್ ಚಾಯ್ಸ್ ಕ್ರಿಯೇಷನ್ ಅಡಿಯಲ್ಲಿ ನಾಗರಾಜ್ ಟಿ ಬಂಡವಾಳ ಹೂಡಿದ್ದಾರೆ.

'ಕ್ರೈಂ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಈಗಾಗಲೇ ಸಿನಿಮಾದ ಶೂಟಿಂಗ್ ಮುಕ್ತಾಯಗೊಂಡಿದೆ. ಬೆಂಗಳೂರಿನ ಮನೆಯೊಂದರಲ್ಲಿ ಇಡೀ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಸದ್ಯದಲ್ಲಿಯೇ ಟೀಸರ್ ಬಿಡುಗಡೆ ಮಾಡುತ್ತೇವೆ' ಎಂದಿದ್ದಾರೆ ಚಿತ್ರದ ನಿರ್ದೇಶಕರು.

ಸೋನುಗೌಡ, ರಾಕೇಶ್ ಮಯ್ಯ ಹಾಗೂ ಉಗ್ರಂ ಮಂಜು ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿದ್ದಾರೆ. ಗಿರೀಶ್ ಹೋತೂರ್ ಸಂಗೀತ, ಉಜ್ವಲ್ ಚಂದ್ರ ಸಂಕಲನ, ಮನೋಹರ್ ಜೋಷಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

'ಗೌರಿ' ಚಿತ್ರದ ಟ್ರೇಲರ್ ಬಿಡುಗಡೆ

ಇಂದ್ರಜಿತ್ ಲಂಕೇಶ್ ತಮ್ಮ ಪುತ್ರನಿಗಾಗಿ ಆ್ಯಕ್ಷನ್–ಕಟ್ ಹೇಳಿರುವ 'ಗೌರಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಕಿಚ್ಚ ಸುದೀಪ್, ನಟಿ ಪ್ರಿಯಾಂಕಾ ಉಪೇಂದ್ರ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಸಮರ್ಜಿತ್ ಲಂಕೇಶ್ ನಾಯಕನಾಗಿ ನಟಿಸಿದ್ದು, ಮಂಡ್ಯ ಶೈಲಿಯಲ್ಲಿ ಖಡಕ್ ಡೈಲಾಗ್ ಹೇಳಿದ್ದಾರೆ. ಸಾನ್ಯ ಅಯ್ಯರ್ ಜೋಡಿಯಾಗಿದ್ದಾರೆ. ಪ್ರೇಮಕಥೆಯ ಎಳೆ ಹೊಂದಿರುವ ಚಿತ್ರದಲ್ಲಿ ಹಾಡು, ಫೈಟ್‌ಗಳು ಹೇರಳವಾಗಿವೆ.

ಸಾನ್ಯ ಅಯ್ಯರ್

'ಪ್ರತಿಯೊಬ್ಬರ ಮನೆಯಲ್ಲೂ ನಡೆಯುವ ಕಥೆಯನ್ನು ಪ್ರತಿನಿಧಿಸುವ ಸಿನಿಮಾವಿದು. ಈಗಿನ ಯುವಜನತೆಗೆ ಸ್ಫೂರ್ತಿ ಸಂದೇಶವನ್ನು ಇದರಲ್ಲಿ ನಿರೀಕ್ಷೆ ಮಾಡಬಹುದು. ಚಿತ್ರದಲ್ಲಿ ಒಟ್ಟು ಏಳು ಹಾಡುಗಳಿದ್ದು, ಐದು ಜನ ಸಂಗೀತ ನಿರ್ದೇಶಕರು ಸಂಗೀತ ನೀಡಿದ್ದಾರೆ. ದೇಶದ ಜನಪ್ರಿಯ ಗಾಯಕರು ಹಾಡಿದ್ದಾರೆ' ಎಂದರು ನಿರ್ದೇಶಕ ಇಂದ್ರಜಿತ್ ಲಂಕೇಶ್. ಎ.ಜೆ. ಶೆಟ್ಟಿ ಅವರ ಛಾಯಾಗ್ರಹಣವಿದ್ದು, ಮಾಸ್ತಿ ಮಂಜು ಮತ್ತು ಬಿ.ಎ. ಮಧು ಸಂಭಾಷಣೆಯಿದೆ. ಪ್ರಿಯಾಂಕಾ ಉಪೇಂದ್ರ, ಸಿಹಿಕಹಿ ಚಂದ್ರು, ಮುಖ್ಯಮಂತ್ರಿ ಚಂದ್ರು, ಮಾನಸಿ ಸುಧೀರ್, ಸಂಪತ್ ಮೈತ್ರೇಯ, ಲೂಸ್‌ಮಾದ ಯೋಗಿ, ಅಕುಲ್ ಬಾಲಾಜಿ ಮುಂತಾದವರು ತಾರಾಗಣದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

❌ **ಸಾಮಾಜಿಕ** ಜಾಲತಾಣದಲ್ಲಿ ಕೆಲವರು ಗಾಸಿಗೊಳಿಸುವಂಥ ವಿಡಿಯೊಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಮಧ್ಯವಯಸ್ಕರೊಬ್ಬರನ್ನು ಬೀದಿಯಲ್ಲಿ ನೇಣು ಹಾಕಿರುವುದನ್ನು, ರಸ್ತೆ ಮೇಲೆ ಮೃತದೇಹವೊಂದು ಬಿದ್ದಿರುವುದನ್ನು ವಿಡಿಯೊಗಳಲ್ಲಿ ತೋರಿಸಲಾಗಿದೆ. ಇವು ಗುಂಪು ಹಲ್ಲೆಗೆ ಸಂಬಂಧಿಸಿದ ವಿಡಿಯೊಗಳು ಎಂದು ಕೆಲವು ಸಾಮಾಜಿಕ ಜಾಲತಾಣ ಬಳಕೆದಾರರು ಉಲ್ಲೇಖಿಸುತ್ತಿದ್ದು, ಶೇಖ್ ಹಸೀನಾ ಅವರು ಪ್ರಧಾನಿ ಸ್ಥಾನದಿಂದ ಕೆಳಗಿಳಿದ ನಂತರ ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲೆ ಮುಸ್ಲಿಮರು ಗುಂಪು ಹಲ್ಲೆ ಆರಂಭಿಸಿದ್ದಾರೆ ಎಂದು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✅ **ವಿಡಿಯೊಗಳ ಬಗ್ಗೆ** ಒಂದಷ್ಟು ಹುಡುಕಾಟ ನಡೆಸಿದಾಗ ಅವಾಮಿ ಲೀಗ್‌ನ ಕಾರ್ಯಕರ್ತರ ಮೇಲೆ ಬಾಂಗ್ಲಾದೇಶದ ಚಾಂದ್‌ಪುರದಲ್ಲಿ ನಡೆದಿರುವ ಹಲ್ಲೆ ಬಗ್ಗೆ ಉಲ್ಲೇಖ ಕಂಡುಬಂತು. ಹಸೀನಾ ಅಧಿಕಾರದಿಂದ ಕೆಳಗಿಳಿದ ನಂತರ ಬಾಂಗ್ಲಾದ ಚಿತ್ತಗಾಂಗ್ ಜಿಲ್ಲೆಯಲ್ಲಿ ಗುಂಪೊಂದು ಸಲೀಂ ಖಾನ್ ಮತ್ತು ಅವರ ಮಗ ಶಾಂತೊ ಖಾನ್ ಮೇಲೆ ಹಲ್ಲೆ ನಡೆಸಿತ್ತು. ಗುಂಪು ಸಲೀಂ ಖಾನ್ ಅವರನ್ನು ಹತ್ಯೆ ಮಾಡಿತ್ತು. ಬೀದಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿರುವ ವ್ಯಕ್ತಿ, ಇಸ್ಲಾಂ ಹಿರೋನ್. ಅವರು ಕೂಡ ಅವಾಮಿ ಲೀಗ್ ಮುಖಂಡರಾಗಿದ್ದು, ಹಸೀನಾ ವಿರೋಧಿಗಳಿಂದ ಹತ್ಯೆ ಆದವರು. ಎರಡು ಪ್ರಕರಣಗಳ ಬಗ್ಗೆ ಅಲ್ಲಿನ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿವೆ. ಈ ಎರಡು ವಿಡಿಯೊಗಳಿಗೆ ಧಾರ್ಮಿಕ ಆಯಾಮ ನೀಡಿ, ಸುಳ್ಳು ಪ್ರತಿಪಾದನೆ ಮಾಡಲು ಬಳಸಿಕೊಳ್ಳಲಾಗುತ್ತಿದೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಇವರು ಕೂಡ ಬದಲಾದರು

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ತನ್ನ ಮಾತು ಮತ್ತು ನಡತೆಯಿಂದ ಬುದ್ಧ ಸಾವಿರಾರು ಶಿಷ್ಯರನ್ನು ಸಂಪಾದಿಸಿದ್ದ. ಆದರೆ, ಬುದ್ಧನ ಪ್ರಗತಿ ಕಂಡು ಸಹಿಸಲಾಗದೆ ಅಸೂಯೆ ಪಡುವ ಜನರೂ ಒಳಗಿದ್ದರು. ಇವರಲ್ಲಿ ದೇವದತ್ತ ಕೂಡ ಒಬ್ಬ. ಬಾಲ್ಯದಿಂದ ಬುದ್ಧನ ಜೊತೆ ಬೆಳೆದ ಈತ ಸಂಬಂಧಿಕ. ಜೊತೆಗೆ ಈಗ ಶಿಷ್ಯ ಕೂಡ ಹೌದು. ಇವನೊಳಗಿನ ದ್ವೇಷ, ಸಿಟ್ಟು, ಹೊಟ್ಟೆಕಿಚ್ಚು ದಿನದಿನವೂ ಉಲ್ಬಣ ಆಗತೊಡಗಿತ್ತು. ಕೊನೆಗೆ ಬುದ್ಧನ ಸರಿಸಿ ತಾನೇ ಸಂಘಕ್ಕೆ ಅಧಿಪತಿಯಾಗಬೇಕೆಂದು ಹಪಾಹಪಿಸತೊಡಗಿದ.

ಒಂದು ದಿನ ಸಭೆಯಲ್ಲಿ ಎದ್ದು ನಿಂತು 'ದೇವ ತಮಗೆ ವಯಸ್ಸಾಗುತ್ತಿದೆ. ತಾವು ವಿಶ್ರಾಂತಿಗೆ ಸರಿದು ನನಗೆ ತಮ್ಮ ಸ್ಥಾನವನ್ನು ಕೊಡಿ' ಎಂದು ಆಗ್ರಹಿಸಿದ. ದೇವದತ್ತನಿಗೆ ತನ್ನ ಸ್ಥಾನವನ್ನು ಅರ್ಪಿಸಿದರೆ ಸಂಘವು ನಾಶವಾಗುತ್ತದೆ ಎಂಬುದು ಬುದ್ಧನಿಗೆ ತಿಳಿದಿತ್ತು. ಹೀಗಾಗಿ ಅವನು ನಯವಾಗಿ ತಿರಸ್ಕರಿಸಿದ. ಇದರಿಂದ ರೊಚ್ಚಿಗೆದ್ದ ದೇವದತ್ತ ಬುದ್ಧನ ಕೊಲ್ಲುವ ಉಪಾಯ ಹೂಡಿದ. ಬಿಂಬಸಾರನ ಮಗ ಅಜಾತಶತ್ರುವನನ್ನು ಕಂಡು 'ನೀನು ನಿನ್ನ ತಂದೆಯನ್ನು ಕೊಂದು ರಾಜನಾಗು. ನಾನು ಬುದ್ಧನನ್ನು ಮುಗಿಸಿ ನಾನೇ ಬುದ್ಧನಾಗುತ್ತೇನೆಂದು' ಪಿತೂರಿ ಹೆಣೆದ. ಅಜಾತಶತ್ರು ಈ ಮಾತನ್ನು ಒಪ್ಪಿ ತನ್ನ ತಂದೆಯನ್ನು ಸೆರೆಯಲ್ಲಿಟ್ಟು ಕೊಂದು ಹಾಕಿ ತಾನೇ ರಾಜನಾದ. ಅಜಾತಶತ್ರುವಿನ ಸಹಾಯ ಪಡೆದು ಬುದ್ಧನ ಕೊಲ್ಲಲು ದೇವದತ್ತ ಹದಿನಾರು ಜನ ನುರಿತ ಕೊಲೆಗಡುಗರನ್ನು ಕಳಿಸಿದ. ಆದರೆ ಆ ಕಟುಕರು ಬುದ್ಧನ ಪ್ರೇಮದ ಭೋದನೆಗಳನ್ನು ಕೇಳಿ ಬದಲಾಗಿ ಹೋದರು.

ಮತ್ತೊಮ್ಮೆ ದೇವದತ್ತ ಮದವೇರಿದ ನಾಲಾಗಿರಿ ಎಂಬ ಆನೆಗೆ ಹೆಂಡ ಕುಡಿಸಿ, ಅದಕ್ಕೆ ಬಡಿದು ಹಿಂಸಿಸಿ ಬುದ್ಧನ ಮೇಲೆ ನುಗ್ಗಿಸಿದ. ಆಗಲೂ ಭಿಕ್ಷುಗಳ ಸಹಾಯದಿಂದ ಬುದ್ಧ ಉಳಿದುಬಿಟ್ಟ. ನಂತರ ದೇವದತ್ತ ಸಂಘದ ಒಳಗಿದ್ದು ಅನೇಕ ಭಿಕ್ಷುಗಳಿಗೆ ದುರ್ಬುದ್ಧಿ ಬೋಧಿಸಿ ಐನೂರು ಭಿಕ್ಷುಗಳನ್ನು ಎತ್ತಿಕಟ್ಟಿದ. ಅವರೆಲ್ಲಾ ದೇವದತ್ತನ ಅನುಯಾಯಿಗಳಾದರು. ಸಂಘವು ಒಡೆದು ಇಬ್ಭಾಗವಾಯಿತು.

ಬುದ್ಧ ಧೃತಿಗೆಡಲಿಲ್ಲ. ಅವರೆಲ್ಲಾ ಹೊರಗೆ ಹೋಗಿ ತಮ್ಮದೇ ಪ್ರತ್ಯೇಕ ಗುಂಪು ರಚಿಸಿಕೊಂಡರು. ನಂತರದ ದಿನಗಳಲ್ಲಿ ಅವರಿಗೆಲ್ಲಾ ತಮ್ಮ ತಪ್ಪಿನ ಅರಿವಾಗಿ ದೇವದತ್ತನ ಸಖ್ಯ ತೊರೆದು ಹಿಂತಿರುಗಿ ಬಂದರು. ಬುದ್ಧ ಮತ್ತೆ ಅವರನ್ನೆಲ್ಲಾ ಮನ್ನಿಸಿ ವಾಪಸ್ ಕರೆದುಕೊಂಡ. ದೇವದತ್ತನನ್ನೂ ಕ್ಷಮಿಸಿ ಆಶೀರ್ವದಿಸಿದ.

ಒಂದು ದಿನ ಅಜಾತಶತ್ರುವಿನ ಪುಟ್ಟ ಮಗುವಿನ ಕೈ ಬೆರಳಿಗೆ ಹುಣ್ಣಾಗಿತ್ತು. ಮಗು ನೋವಿನಿಂದ ಅಳುತ್ತಿತ್ತು. ಅಜಾತಶತ್ರು ಮೃದು ಮಾತುಗಳಿಂದ ಮಗುವನ್ನು ಸಂತೈಸುತ್ತಿದ್ದ. ಈ ದೃಶ್ಯ ಕಂಡ ಅಜಾತಶತ್ರುವಿನ ತಾಯಿ 'ಮಗು. ನಿನ್ನ ತಂದೆ ಕೂಡ ಚಿಕ್ಕಂದಿನಲ್ಲಿ ನಿನ್ನ ಹೀಗೆ ಮುದ್ದಿಸುತ್ತಿದ್ದ' ಎಂದಳು. ಈ ಮಾತು ಕೇಳಿ ಅಜಾತಶತ್ರುವಿನ ಮನಸ್ಸು ಬೆಂದು ಹೋಯಿತು. ಪಶ್ಚಾತ್ತಾಪದಿಂದ ಕಣ್ಣೀರು ಉಕ್ಕಿ ಬಂತು. ನೆಮ್ಮದಿಗೆ ನೇರ ಬುದ್ಧನ ಬಳಿ ಬಂದ. ಆಗ ಬುದ್ಧ 'ಮಾಡಿದ ತಪ್ಪು ಒಪ್ಪಿಕೊಳ್ಳುವುದೇ ನಿಜವಾದ ಪ್ರಾಯಶ್ಚಿತ್ತ. ನಿನ್ನ ಮನಸ್ಸನ್ನು ಸ್ತಿಮಿತದಲ್ಲಿ ಇಟ್ಟುಕೊಂಡರೆ ನೀನು ಮತ್ತೆಂದೂ ಪಾಪದ ಕೆಲಸಗಳನ್ನು ಮಾಡುವುದಿಲ್ಲ. ಸಕಲರಿಗೂ ಒಳಿತಾಗುವ ಕೆಲಸಗಳನ್ನು ಹುಡುಕಿ ಮಾಡುತ್ತಾ ಹೋಗು. ಅವರೆಲ್ಲರ ಕೃತಜ್ಞತೆಯ ನಗುವಲ್ಲಿ ನಿನ್ನ ಶಾಂತಿ ಅಡಗಿರುತ್ತದೆ' ಎಂದು ಶಾಂತ ಸ್ವರದಲ್ಲಿ ಉತ್ತರಿಸಿದ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಆಗಸ್ಟ್ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ತೃತೀಯ ಗಂ.22-06 ನಕ್ಷತ್ರ: ಪೂರ್ವಫಲ್ಗುನಿ ಗಂ. 20-31 ಯೋಗ: ಪರಿಘ ಗಂ. 11-41 ಕರಣ: ತೈತಿಲ ಗಂ. 8-57, ಕರ್ಕಾಟಕ ಮಾಸದ 21 ನೇ ದಿನ, ಮಳೆನಕ್ಷತ್ರ: ಆಶ್ಲೇಷ 2.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-20 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 27 ಮೊಹರಮ್
ಅದೃಷ್ಟ ಸಂಖ್ಯೆ : 2, 5

ಮೇಷ: ಮಾರ್ಗದರ್ಶಕರ ಸಲಹೆ ಪಡೆದು ಆರಂಭಿಸಿದ ಯೋಜನಾಬದ್ಧ ಕೆಲಸಗಳಲ್ಲಿ ಅನುಕೂಲ ಉಂಟಾಗಲಿದೆ. ನಿರುದ್ಯೋಗಿಗಳಿಗೆ ನಿರೀಕ್ಷೆಗೂ ಮೀರಿದ ಕೆಲಸ ಸಿಗುವ ಸಾಧ್ಯತೆ ಇದೆ.

ವೃಷಭ: ಶಿಕ್ಷಕ ವೃತ್ತಿಯವರಿಗೆ ಅಸಾಮಾನ್ಯ ಬುದ್ಧಿವಂತಿಕೆಯಿಂದ ತರಬೇತಿಯ ಅಗತ್ಯ ಕಾಣುವುದು. ಅಡಿಕೆ ಬೆಳೆಗಾರರು ದಾಸ್ತಾನು ಬೆಳೆಯಿಂದ ಲಾಭ ಹೊಂದುವಿರಿ. ಎಂಥ ಜವಾಬ್ದಾರಿಗಳನ್ನೂ ನಿಭಾಯಿಸಲು ಸರ್ವಸಿದ್ಧರಾಗಿ.

ಮಿಥುನ: ಸಂಘದಲ್ಲಿ ನಾಯಕತ್ವ ವಹಿಸುತ್ತಿರುವುದರಿಂದ ತಪ್ಪುಗಳಿಗೆ ನೇರವಾಗಿ ಅಲ್ಲದಿದ್ದರೂ ಹೊಣೆ ಮಾಡಲಾಗುತ್ತದೆ. ಭೂ ವ್ಯವಹಾರದ ಬಂಡವಾಳದಲ್ಲಿ ಮೋಸಹೋಗುವ ಸ್ಥಿತಿ ಬರಬಹುದು.

ಕರ್ಕಾಟಕ: ಹಿರಿಯರು ಮೊದಲಿನಿಂದ ಕುಟುಂಬದಲ್ಲಿ ನಡೆಸಿಕೊಂಡು ಬಂದ ಧಾರ್ಮಿಕ ವಿಧಿವಿಧಾನವನ್ನು ಆಚರಿಸುವ ಬಗ್ಗೆ ತೀರ್ಮಾನಿಸಿ. ಕೃಷಿಯನ್ನು ಮಾಡುವವರು ಸಂಬಂಧಪಟ್ಟ ಇಲಾಖೆಯವರಿಂದ ಸಹಾಯ ಪಡೆದುಕೊಳ್ಳಿರಿ.

ಸಿಂಹ: ಹೆತ್ತವರೊಂದಿಗೆ ವಾಗ್ವಾದಕ್ಕಿಳಿಯುವುದು ಅಶ್ರೇಯಸ್ಸಿಗೆ ಕಾರಣವಾಗುತ್ತದೆ. ಸಮಾರಂಭಗಳಲ್ಲಿ ಭಾಗವಹಿಸುವುದರ ಜತೆಯಲ್ಲಿ ಜವಾಬ್ದಾರಿಯನ್ನು ಹೊರಬೇಕಾಗುವುದು. ಕೆಲಸಗಳಲ್ಲಿ ಆಸಕ್ತಿ ವೃದ್ಧಿಯಾಗುವುದು.

ಕನ್ಯಾ: ಉದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿದೆ. ಕೆಲಸದ ಲಾಭ ನಷ್ಟಗಳ ಬಗ್ಗೆ ಬಹಳವಾಗಿ ಕಾಡಬಹುದು. ವರ್ತಕ ವರ್ಗಕ್ಕೆ ಸ್ವಲ್ಪ ಬಿಡುವು ಸಿಕ್ಕೀತು.

ತುಲಾ: ನಿಮಗೆ ಯಾವುದೇ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಕಷ್ಟವಾಗುವುದಿಲ್ಲ. ಜೀವನದ ಶೈಲಿಯಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭಿಸುತ್ತದೆ. ದುಡ್ಡಿನ ವಿಷಯದಲ್ಲಿ ಮೋಸ ಹೋಗುವ ಸಂಭವವಿದೆ.

ವೃಶ್ಚಿಕ: ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಹೆಚ್ಚಾಗಿ ಸ್ನೇಹಿತರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ಸತ್ಕಾರ್ಯಗಳಲ್ಲಿ ಆದಾಯ ಮೀರಿ ಖರ್ಚುಗಳಿದ್ದರೂ ಚಿಂತಿಸುವ ಅಗತ್ಯವಿಲ್ಲ. ವೃತ್ತಿರಂಗದಲ್ಲಿ ಪ್ರತಿ ಹೆಜ್ಜೆಗೂ ಎಚ್ಚರವಿರಿ.

ಧನು: ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದೆ ಹಾಗೂ ಅವರಿಂದ ಸಿಗುವ ಸಹಕಾರ ಜೀವನ ಪರ್ಯಂತ ನೆನಪಿನಲ್ಲಿ ಇಟ್ಟುಕೊಳ್ಳುವಂತೆ ಇರುವುದು. ತಾಯಿಯವರ ಆರೋಗ್ಯ ಸುಧಾರಿಸಲಿದೆ.

ಮಕರ: ನಾಟಕ ಹಾಗೂ ಸಿನಿಮಾ ರಂಗದಲ್ಲಿ ಕೆಲಸ ನಿರ್ವಹಿಸುವವರಿಗೆ ಯಶಸ್ಸು ಇದ್ದು, ಪ್ರೋತ್ಸಾಹ ದೊರೆತು ಸಮಾಜದಲ್ಲಿ ಸ್ಥಾನಮಾನಗಳಿಂದ ಉನ್ನತ ಸ್ಥಿತಿಗೆ ಬರುವಿರಿ. ಆರೋಗ್ಯದ ವಿಚಾರದಲ್ಲಿ ಅಸಡ್ಡೆ ತೋರದಿರಿ.

ಕುಂಭ: ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸದ ಸಮಯ ಅಥವಾ ವಿಸ್ತೀರ್ಣ ಹೆಚ್ಚುವುದು. ಬುದ್ಧಿವಂತಿಕೆಯ ಬಲದಿಂದ ಶತ್ರುಗಳ ಬಾಧೆಯನ್ನು ಉಪಶಮನಗೊಳಿಸಿಕೊಳ್ಳುವ ಮಾರ್ಗವನ್ನು ಹುಡುಕಿರಿ.

ಮೀನ: ಪ್ರೀತಿಸುವವರ ಮಾರ್ಗದರ್ಶನದಿಂದ ಜೀವನದಲ್ಲಿನ ನಿರುತ್ಸಾಹವು ದೂರಾಗಲಿದೆ. ಮಹಾಗಣಪತಿಯನ್ನು ಭಾವ ಪೂರ್ವಕವಾಗಿ ಪೂಜಿಸಿ ಪುಣ್ಯ ಸಂಪಾದನೆ ಮಾಡಿ. ಮುಖ್ಯ ಕೆಲಸಗಳಿಗೆ ಆಪ್ತರ ಸಲಹೆ ಅಗತ್ಯ.

ಪದಬಂಧ 5765

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಪ್ರಾಣವಾಯು ಇಲ್ಲಿದೆ (5)
4.ಅತ್ಯಂತ ಸೂಕ್ಷ್ಮವಾದುದು (4)
7.ಮರ ಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡಿರುವ ಕಟ್ಟೆ ಉಲ್ಟಾ ಕಾಣುತ್ತಿದೆ (2)
9.ಗುಣಿಯೆಲ್ಲಿರುವ ಥಾಲು (3)
10.ಕಬ್ಬಿಣದಲ್ಲಿರುವ ಅತ್ಯಂತಚಿಕ್ಕ ಚೂರು ಕಾಣುತ್ತಿದೆಯೇ (2)
11.ಗಗನವನ್ನು ಮುಟ್ಟುವಂಥದ್ದು (5)
12.ಸೂರ್ಯನ ಇನ್ನೊಂದು ಹೆಸರು (2)
13.ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ (3)
14.ಹತ್ತಿರದಲ್ಲಿರುವ ಅರಳೆಯಿಲ್ಲಿ ತಿರುವುಮುರುವಾಗಿದೆ (2)
16.ಕಾಮನಬಿಲ್ಲನ್ನು ಹೀಗೂ ಕರೆವರು (4)
18.ರುಚಿಕಟ್ಟಾದ ಭೋಜನ (5)

ಮೇಲಿಂದ ಕೆಳಕ್ಕೆ
1.ಸುರಾಸುರರ ಹತ್ತಿರವಿರುವ ಜಾನುವಾರು! (2)
3.ಮೆಟ್ಟಿಲುಗಳಿರುವ ಕೊಳ (3)
5ಲವ ಹಿಡಿದುಕೊಂಡಿರುವ ಉಪ್ಪು (3)
6.ಅತ್ತಿತ್ತ ನೋಡುವಾಗ ಕಾಣಿಸಿದ ಗುಂಪು (2)
8.ಅತ್ತಿಗೆ ಹಿಡಿದಿರುವ ಚಿಟ್ಟೆ (5)
9.ಮುಳ್ಳುಗಳ ನಡುವೆ ಅರಳುವ ಸುಂದರ ಹೂ (3)
11.ನೀರಿನಲ್ಲಿ ಹುಟ್ಟಿದ ಕಮಲ (3)
12.ಚಮರೀ ಮೃಗದ ಕೂದಲುಗಳಿಂದ ಮಾಡಿದ ಬೀಸಣಿಗೆ ಉಲ್ಟಾ ಆಗಿದೆ (3)
13.ಕರದಲ್ಲಿರುವ ಉತ್ತುತ್ತಿ ಹಣ್ಣು (3)
15.ಹರಸುವಾಗ ಆಕಳು ಕಾಣಿಸಿತಲ್ಲಾ! (2)
17.ಕೈವಲ್ಯ ಅಥವಾ ಮೋಕ್ಷ (2)



5764ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದರಂಭರಣ 3.ರಂಪ 5.ಮಭೌರ್ವನಾ 7.ಆಗಮ 9.ಬಿಸಿಲ್ದುರೆ 11.ಮಡದಿ 12.ನವರಂಗ 15.ರಿಕ್ತ 16.ತನಿಖಾಧಿಕಾರಿ

ಮೇಲಿಂದ ಕೆಳಕ್ಕೆ:
1.ಉಗಮ 2.ರಫ್ತು 4.ಪರಮಹಂಸ 6.ಸಾಹಸಿ 7.ಅಸರೆ 8.ಗುಲಾಮಗಿರಿ 9.ಬಿಡದಿ 10.ದುಮ್ಮಾನ 13.ಗಡಾರಿ 14.ಬಾನಿ

ಸುಡೊಕು 6150

6		4		7	1			3
						6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6149 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಪ್ರತಿಭಟನಕಾರರು ಬೆಂಕಿ ಹಚ್ಚಿದ್ದರಿಂದ ಹಾನಿಗೆ ಒಳಗಾಗಿರುವ ಢಾಕಾದ ಜತರಾಬಾರಿ ಪೊಲೀಸ್ ಠಾಣೆ ನೋಡಲು ಜನರು ಮಂಗಳವಾರ ಜಮಾಯಿಸಿದ್ದರು (ಎಡಚಿತ್ರ) ಢಾಕಾದಲ್ಲಿರುವ ಅವಾಮಿ ಲೀಗ್ ಕಚೇರಿಗೆ ನುಗ್ಗಿದ ಪ್ರತಿಭಟನಕಾರರು ಅಲ್ಲಿದ್ದ ಕಾರುಗಳಿಗೆ ಬೆಂಕಿ ಹಚ್ಚಿದರು –ಎಎಫ್‌ಪಿ ಚಿತ್ರ

ಬಾಂಗ್ಲಾ ವಿಚಾರವಾಗಿ ಕೇಂದ್ರ ಸರ್ಕಾರಕ್ಕೆ ಪೂರ್ಣ ಸಹಕಾರ: ರಾಹುಲ್ ಗಾಂಧಿ ಭರವಸೆ

ಹಸೀನಾಗೆ ಭಾರತದ ನೆರವು: ಕೇಂದ್ರ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರಿಗೆ ಸಹಾಯ ಮಾಡುವ ಭರವಸೆಯನ್ನು ಕೇಂದ್ರ ಸರ್ಕಾರ ನೀಡಿದೆ, ಮುಂದಿನ ನಡೆ ಏನಿರಬೇಕು ಎಂಬುದನ್ನು ತೀರ್ಮಾನಿಸಲು ಸಮಯಾವಕಾಶ ನೀಡಲಾಗಿದೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಸರ್ವಪಕ್ಷ ಸಭೆಯಲ್ಲಿ ತಿಳಿಸಿದ್ದಾರೆ.

ಹಸೀನಾ ಅವರು ಸೋಮವಾರ ಸಂಜೆ ಭಾರತಕ್ಕೆ ಬಂದಿದ್ದಾರೆ. ಸಂಸತ್ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ರಾಜಕೀಯ ಪಕ್ಷಗಳ ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಜೈಶಂಕರ್ ಅವರು, 'ಬಾಂಗ್ಲಾದೇಶದ ಸೇನಾ ಮುಖ್ಯಸ್ಥರ ಜೊತೆ ಕೇಂದ್ರ ಸರ್ಕಾರ ಮಾತನಾಡಿದೆ, ಆ ದೇಶದಲ್ಲಿ ಇರುವ ಭಾರತೀಯ ವಿದ್ಯಾರ್ಥಿಗಳಿಗೆ ಭದ್ರತೆಯನ್ನು ಖಾತರಿಪಡಿಸುವಂತೆ ಹೇಳಲಾಗಿದೆ' ಎಂಬ ಮಾಹಿತಿ ನೀಡಿದರು ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಪಾಲ್ಗೊಂಡಿದ್ದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವು ನಾಯಕರು ಸರ್ಕಾರಕ್ಕೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಜೈಶಂಕರ್, ಬಾಂಗ್ಲಾದೇಶದಲ್ಲಿ ಉಂಟಾಗಿರುವ ಅಶಾಂತಿಯ ಹಿಂದೆ ವಿದೇಶಿ ಸರ್ಕಾರಗಳ ಕೈವಾಡವನ್ನು ಅಲ್ಲಗಳೆಯಲಿಲ್ಲ. ಅಲ್ಲಿನ ಪರಿಸ್ಥಿತಿ ತೀರಾ ಅನಿಶ್ಚಿತವಾಗಿದೆ, ಪರಿಸ್ಥಿತಿಯ ಮೇಲೆ ಕೇಂದ್ರ ಸರ್ಕಾರ ಕಣ್ಣಿಟ್ಟಿದೆ ಎಂಬ ಮಾಹಿತಿ ನೀಡಿದರು ಎಂದು ಗೊತ್ತಾಗಿದೆ.

ಅಲ್ಲಿ ಬಿಕ್ಕಟ್ಟು ಸೃಷ್ಟಿಸುವಲ್ಲಿ ವಿದೇಶಿ ಸರ್ಕಾರಗಳ, ಅದರಲ್ಲೂ ಮುಖ್ಯವಾಗಿ ಪಾಕಿಸ್ತಾನದ, ಪಾತ್ರ ಇದ್ದಿರಬಹುದೇ ಎಂಬ ಪ್ರಶ್ನೆಯನ್ನು ರಾಹುಲ್ ಅವರು ಸಭೆಯಲ್ಲಿ ಕೇಳಿದ್ದರು. ಅಲ್ಲದೆ, ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತ ಸಮುದಾಯದವರ ಬಗ್ಗೆ ರಾಹುಲ್ ಕಳವಳ ವ್ಯಕ್ತಪಡಿಸಿದ್ದರು.

ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮನೆಗಳು ಹಾಗೂ ಆಸ್ತಿಗಳನ್ನು ಪ್ರತಿಭಟನಕಾರರು ಗುರಿಯಾಗಿಸಿಕೊಂಡಿದ್ದಾರೆ ಎಂದು ಜೈಶಂಕರ್ ವಿವರಿಸಿದ್ದಾರೆ.

ಹಸೀನಾ ಅವರು ಭಾರತಕ್ಕೆ ಬಂದು 24 ಗಂಟೆಗಳೂ ಕಳೆದಿಲ್ಲ. ಅವರು ಆಘಾತಕ್ಕೆ ಒಳಗಾಗಿದ್ದಾರೆ. ಅವರಿಗೆ ಚೇತರಿಸಿಕೊಳ್ಳಲು ಸರ್ಕಾರ ಸಮಯ ನೀಡಿದೆ. ಅದಾದ ನಂತರ, ಅವರ ಮುಂದಿನ ಆಲೋಚನೆ ಸೇರಿದಂತೆ ಬೇರೆ ಬೇರೆ ವಿಷಯಗಳ ಬಗ್ಗೆ ಮಾತನಾಡಲಾಗುವುದು ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಬಾಂಗ್ಲಾ ವಿಚಾರವಾಗಿ ಕೇಂದ್ರ ಸರ್ಕಾರಕ್ಕೆ ಪೂರ್ಣ ಪ್ರಮಾಣದಲ್ಲಿ ಸಹಕಾರ ನೀಡುವುದಾಗಿ ರಾಹುಲ್ ಸೇರಿದಂತೆ ಹಲವು ನಾಯಕರು ಭರವಸೆ ಇತ್ತಿದ್ದಾರೆ.

'ಬಾಂಗ್ಲಾದೇಶದಲ್ಲಿನ ಬೆಳವಣಿಗೆಗಳ ಬಗ್ಗೆ ಸರ್ವಪಕ್ಷ ಸಭೆಗೆ ಮಾಹಿತಿ ನೀಡಿದ್ದೇನೆ. ಅಲ್ಲಿ ದೊರೆತ ಒಕ್ಕೊರಲ ಬೆಂಬಲವನ್ನು ಮೆಚ್ಚುತ್ತೇನೆ' ಎಂದು ಜೈಶಂಕರ್ ಅವರು 'ಎಕ್ಸ್' ಮೂಲಕ ತಿಳಿಸಿದ್ದಾರೆ.

'ಅಲ್ಪಸಂಖ್ಯಾತರ ಹಿತ, ಕೇಂದ್ರದ ಅವಲೋಕನ'

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಅಲ್ಪ ಸಂಖ್ಯಾತರ ವಿಚಾರವಾಗಿ ಅಲ್ಲಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಬಾಂಗ್ಲಾದಲ್ಲಿ ಇರುವ ಭಾರತೀಯ ಸಮುದಾಯದವರ ಜೊತೆ ದೂತಾವಾಸ ಕಚೇರಿಗಳ ಮೂಲಕ ನಿರಂತರ ಸಂಪರ್ಕ ಇರಿಸಿಕೊಳ್ಳಲಾಗಿದೆ ಎಂದು ಕೇಂದ್ರ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಸಂಸತ್ತಿಗೆ ಮಂಗಳವಾರ ತಿಳಿಸಿದ್ದಾರೆ.

ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿ ಹೇಳಿಕೆಯೊಂದನ್ನು ಓದಿದ ಜೈಶಂಕರ್ ಅವರು, 'ನೆರೆಯ ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಹಜ ಸ್ಥಿತಿಗೆ ಬಂದಿದೆ ಎಂದು ಅನ್ನಿಸುವವರೆಗೂ ಭಾರತದ ಕಳವಳ ಮುಂದುವರಿಯುತ್ತದೆ' ಎಂದಿದ್ದಾರೆ.

ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು 'ತತ್ಕಾಲದ ಮಟ್ಟಿಗೆ' ಭಾರತಕ್ಕೆ ಬರುವುದಾಗಿ ಹೇಳಿದ ನಂತರ 'ಹೆಚ್ಚು ಕಾಲಾವಕಾಶ ಇರಲಿಲ್ಲ' ಎಂದು ಕೂಡ ಜೈಶಂಕರ್ ಅವರು ಸಂಸದರಿಗೆ ತಿಳಿಸಿದ್ದಾರೆ.

ನೆರೆ ದೇಶದಲ್ಲಿ ಪರಿಸ್ಥಿತಿಯು ಬಹಳ ಸಂಕೀರ್ಣವಾಗಿರುವ ಕಾರಣ, ಗಡಿ ಭದ್ರತಾ ಪಡೆಗಳು ತೀರಾ ಎಚ್ಚರಿಕೆ ವಹಿಸಬೇಕು ಎಂಬ ಸೂಚನೆ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. 'ಬಾಂಗ್ಲಾದಲ್ಲಿ ಇರುವ ಭಾರತೀಯ ಪ್ರಜೆಗಳ ಸಂಖ್ಯೆ ಅಂದಾಜು 19 ಸಾವಿರ. ಈ ಪೈಕಿ ಒಂಬತ್ತು ಸಾವಿರ ಮಂದಿ ವಿದ್ಯಾರ್ಥಿಗಳು. ಆದರೆ, ವಿದ್ಯಾರ್ಥಿಗಳ ಪೈಕಿ ಹೆಚ್ಚಿನವರು ಜುಲೈ ತಿಂಗಳಿನಲ್ಲಿಯೇ ದೇಶಕ್ಕೆ ಮರಳಿದ್ದಾರೆ' ಎಂದು ಸಚಿವರು ಹೇಳಿದ್ದಾರೆ.

'ತತ್ಕಾಲಕ್ಕೆ ಭಾರತಕ್ಕೆ ಬರುವುದಕ್ಕೆ ಹಸೀನಾ ಅವರು ಬಹಳ ಕಡಿಮೆ ಸಮಯ ಇದ್ದಾಗ ಅನುಮತಿ ಕೋರಿದರು. ಅದೇ ಹೊತ್ತಿಗೆ ವಿಮಾನವೊಂದು ಬರುವುದಕ್ಕೆ ಅನುಮತಿ ಬೇಕು ಎಂಬ ಮನವಿಯು ಬಾಂಗ್ಲಾದೇಶದ ಅಧಿಕಾರಿಗಳಿಂದ ಬಂತು. ಹಸೀನಾ ಅವರು ಸೋಮವಾರ ಸಂಜೆ ದೆಹಲಿಗೆ ಬಂದರು. ಬಾಂಗ್ಲಾದಲ್ಲಿ ಪರಿಸ್ಥಿತಿ ಬದಲಾಗುತ್ತಲೇ ಇದೆ' ಎಂದು ಜೈಶಂಕರ್ ಹೇಳಿದ್ದಾರೆ.

ಪ್ರಜಾತಂತ್ರ ಕೊನೆಗೊಳಿಸಿ, ಸರ್ವಾಧಿಕಾರವನ್ನು ತರಲು ಯತ್ನಿಸುವ ದೇಶಗಳಲ್ಲಿ ಇಂಥದ್ದೇ ಪರಿಸ್ಥಿತಿ ನಿರ್ಮಾಣವಾಗುತ್ತದೆ
ವೀರೇಂದ್ರ ಸಿಂಗ್, ಎಸ್‌ಪಿ ನಾಯಕ

ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಅವರು ಇಡೀ ಬೆಳವಣಿಗೆ ಮೇಲೆ ಕಣ್ಣಿಟ್ಟಿದ್ದಾರೆ. ಪರಿಸ್ಥಿತಿಯನ್ನು ನಿಭಾಯಿಸಲು ನಮ್ಮ ದೇಶ ಸಮರ್ಥವಾಗಿದೆ
ಲಹರ್ ಸಿಂಗ್ ಸಿರೋಯಾ
ಬಿಜೆಪಿ ಸಂಸದ

ಪ್ರಜಾತಂತ್ರಕ್ಕೆ ಅಪಾಯ ಎದುರಾದಾಗ, ಅಧಿಕಾರಸ್ಥರು ಸರ್ವಾಧಿಕಾರಿಗಳಾದಾಗ, ದೇಶದ ಜನ ಕೆಲವು ಕಾಲ ಸಹಿಸುತ್ತಾರೆ. ನಂತರ ಅರಾಜಕತೆ ಉಂಟಾಗುತ್ತದೆ.
ಸಂಜಯ್ ರಾವುತ್, ಶಿವಸೇನಾ (ಯುಬಿಟಿ) ನಾಯಕ

ಲಂಡನ್‌ಗೆ ತೆರಳಲು ಅಡ್ಡಿ

ನವದೆಹಲಿ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಲಂಡನ್‌ಗೆ ತೆರಳಲು ಕೆಲವು 'ಅನಿಶ್ಚಿತತೆಗಳ' ಕಾರಣದಿಂದಾಗಿ ಅಡ್ಡಿ ಎದುರಾಗಿದೆ. ಹೀಗಾಗಿ ಹಸೀನಾ ಅವರು ಇನ್ನೂ ಒಂದೆರಡು ದಿನಗಳವರೆಗೆ ಭಾರತದಲ್ಲಿಯೇ ಇರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಶೇಖ್ ಹಸೀನಾ –ಪಿಟಿಐ ಚಿತ್ರ

ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಕೆಲವು ಗಂಟೆಗಳ ನಂತರ, ಸೇನೆಯ 'ಸಿ–130ಜೆ' ಸರಕು ಸಾರಿಗೆ ವಿಮಾನದಲ್ಲಿ ಹಿಂಡನ್ ವಾಯುನೆಲೆ ತಲುಪಿದ ಹಸೀನಾ ಅವರು ಅಜ್ಞಾತ ಸ್ಥಳವೊಂದರಲ್ಲಿ ಇದ್ದಾರೆ. ಅವರಿಗೆ ಬಿಗಿ ಭದ್ರತೆ ಕಲ್ಪಿಸಲಾಗಿದೆ.

ಹಸೀನಾ ಅವರು ತಮ್ಮ ಸಹೋದರಿ ಶೇಖ್ ರೆಹಾನಾ ಅವರೊಂದಿಗೆ ಭಾರತಕ್ಕೆ ಬಂದಿದ್ದಾರೆ. ಅವರು ಭಾರತದಿಂದ ಲಂಡನ್‌ಗೆ ತೆರಳಿ, ಅಲ್ಲಿ ತಾತ್ಕಾಲಿಕ ಆಶ್ರಯ ಕೋರುವ ಆಲೋಚನೆ ಹೊಂದಿದ್ದರು. ಆದರೆ, ಈ ಆಯ್ಕೆಯನ್ನು ಅವರು ಈಗ ಇರಿಸಿಕೊಂಡಿಲ್ಲ ಎಂದು ಗೊತ್ತಾಗಿದೆ.

ಬಾಂಗ್ಲಾದೇಶದಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಗಳ ವಿಚಾರವಾಗಿ ತನಿಖೆ ನಡೆದಲ್ಲಿ, ಹಸೀನಾ ಅವರಿಗೆ ಕಾನೂನಿನ ರಕ್ಷಣೆ ಸಿಗಲಿಕ್ಕಿಲ್ಲ ಎಂಬ ಸೂಚನೆಯನ್ನು ಬ್ರಿಟನ್ ಸರ್ಕಾರ ನೀಡಿದ ನಂತರದಲ್ಲಿ ಅವರ ಯೋಜನೆ ಬದಲಾಗಿದೆ ಎನ್ನಲಾಗಿದೆ.

ಭಾರತದ ಮೂಲಕ ಲಂಡನ್ನಿಗೆ ತೆರಳಲು ಹಸೀನಾ ಆಲೋಚಿಸಿದ್ದರು. ಹಸೀನಾ ಅವರು ಹಿಂಡನ್ ವಾಯುನೆಲೆ ತಲುಪುವ ಮೊದಲೇ ಈ ಬಗ್ಗೆ ಭಾರತದ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು ಎಂದು ಮೂಲಗಳು ವಿವರಿಸಿವೆ.

ರೆಹಾನಾ ಅವರ ಮಗಳು ಟ್ಯುಲಿಪ್ ಸಿದ್ದಿಕ್ ಅವರು ಬ್ರಿಟನ್‌ನಲ್ಲಿ ಸಂಸದೆಯಾಗಿದ್ದಾರೆ. ಲಂಡನ್‌ನಲ್ಲಿ ಸೋಮವಾರ ಹೇಳಿಕೆಯೊಂದನ್ನು ನೀಡಿದ್ದ ಬ್ರಿಟನ್ ವಿದೇಶಾಂಗ ಸಚಿವ ಡೇವಿಡ್ ಲ್ಯಾಮ್ಮಿ, 'ಬಾಂಗ್ಲಾದೇಶದಲ್ಲಿ ಹಿಂದೆಂದೂ ಕಾಣದಂತಹ ಹಿಂಸಾಚಾರ, ಜೀವಹಾನಿ ಆಗಿದೆ, ಘಟನೆಗಳ ಬಗ್ಗೆ ವಿಶ್ವಸಂಸ್ಥೆಯ ನೇತೃತ್ವದಲ್ಲಿ ಸ್ವತಂತ್ರವಾದ ತನಿಖೆಯೊಂದು ಆಗಬೇಕು' ಎಂದಿದ್ದಾರೆ.

ಹಸೀನಾ ಅವರು ತಮ್ಮ ಮುಂದಿನ ನಡೆಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ ಎಂದು ಗೊತ್ತಾಗಿದೆ. ಹಸೀನಾ ಅವರ ಕುಟುಂಬದ ಕೆಲವು ಸದಸ್ಯರು ಫಿನ್ಲೆಂಡ್‌ನಲ್ಲಿ ಇರುವ ಕಾರಣಕ್ಕೆ, ಅವರು ಫಿನ್ಲೆಂಡಿಗೆ ತೆರಳುವ ಆಲೋಚನೆಯಲ್ಲಿಯೂ ಇದ್ದಾರೆ.

ಪರಿಸ್ಥಿತಿಯು ಬದಲಾಗುತ್ತಲೇ ಇರುವ ಕಾರಣ, ಮುಂದಿನ ನಡೆಯು ಇನ್ನೂ ಸ್ಪಷ್ಟವಾಗಿಲ್ಲ ಎಂದು ಮೂಲಗಳು ವಿವರಿಸಿವೆ.

'ಅಗತ್ಯ ಇರುವವರಿಗೆ ರಕ್ಷಣೆ ನೀಡಿದ ಹೆಮ್ಮೆಯ ಇತಿಹಾಸವನ್ನು ಬ್ರಿಟನ್ ಹೊಂದಿದೆ. ಆದರೆ, ತಾತ್ಕಾಲಿಕ ಆಶ್ರಯ ಕೋರುವ ಉದ್ದೇಶದಿಂದ ಬ್ರಿಟನ್ನಿಗೆ ಪ್ರಯಾಣ ಬೆಳೆಸುವ ಅವಕಾಶ ನೀಡಲು ನಮ್ಮ ವಲಸೆ ನಿಯಮಗಳಲ್ಲಿ ಅವಕಾಶ ಇಲ್ಲ' ಎಂದು ಆಶ್ರಯ ನೀಡುವ ವಿಚಾರದಲ್ಲಿ ಬ್ರಿಟನ್ನಿನ ನೀತಿಯ ಬಗ್ಗೆ ಮಾಹಿತಿ ಹೊಂದಿರುವ ತಜ್ಞರೊಬ್ಬರು ತಿಳಿಸಿದರು.

'ಅಂತರರಾಷ್ಟ್ರೀಯ ರಕ್ಷಣೆ ಬಯಸುವವರು ತಾವು ತಲುಪುವ ಮೊದಲ ಸುರಕ್ಷಿತ ದೇಶದಲ್ಲಿ ಆಶ್ರಯ ಕೋರಬೇಕು. ಸುರಕ್ಷಿತವಾಗಿರಲು ಅದೇ ಅತ್ಯಂತ ತ್ವರಿತವಾದ ಮಾರ್ಗ' ಎಂದು ಅವರು ಹೇಳಿದರು.

'ಕಿರುಸಾಲ' ಯೋಜನೆ ಹರಿಕಾರ

ಯೂನಸ್ ನಾಯಕತ್ವಕ್ಕೆ ಒಲವು

ಢಾಕಾ (ಎಎಫ್‌ಪಿ): ಮೊಹಮ್ಮದ್ ಯೂನಸ್ ಅವರು, 'ಕಿರುಸಾಲ' ಯೋಜನೆಯ ಹರಿಕಾರ. ಅವರು ಬಡವರಿ ಗಾಗಿ ಜಾರಿಗೆ ತಂದಿದ್ದ 'ಗ್ರಾಮೀಣ ಬ್ಯಾಂಕ್' ಚಳವಳಿ ಭಾರಿ ಯಶಸ್ಸು ಕಂಡಿತ್ತು. ಇದಕ್ಕಾಗಿ ಅವರಿಗೆ 2006ರಲ್ಲಿ ನೊಬೆಲ್ ಪುರಸ್ಕಾರ ಸಂದಿತ್ತು.

2008ರಲ್ಲಿ ಶೇಖ್ ಹಸೀನಾ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ, ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ ಯೂನಸ್ ವಿರುದ್ಧ ವಿಚಾರಣೆ ನಡೆಸಲಾಯಿತು.

'ಬಡವರ ರಕ್ತ ಹೀರುವಾತ' ಎಂದು ಯೂನಸ್ ಅವರನ್ನು ನಿಂದಿಸುತ್ತಿದ್ದ ಹಸೀನಾ, ಸಾರ್ವಜನಿಕ ವೇದಿಕೆಗಳಲ್ಲಿ ನಿರಂತರವಾಗಿ ಅವರ ವಿರುದ್ಧ ಟೀಕಾಪ್ರಹಾರ ನಡೆಸುತ್ತಿದ್ದರು. ಅವರ ವಿರುದ್ಧ 100ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿತ್ತು.

ಅವರ ಪರಿಕಲ್ಪನೆ ಫಲವಾಗಿ ಸ್ಥಾಪನೆಗೊಂಡಿದ್ದ 'ಗ್ರಾಮೀಣ ಬ್ಯಾಂಕ್'ಗಳ ಕಾರ್ಯನಿರ್ವಹಣೆ ಕುರಿತು 2011ರಲ್ಲಿ ಸರ್ಕಾರ ಪರಾಮರ್ಶೆ ಆರಂಭಿಸಿತು. ನಿವೃತ್ತಿ ನಿಯಮ ಉಲ್ಲಂಘಿಸಿದ ಆರೋಪದಡಿ ಅವರನ್ನು 'ಗ್ರಾಮೀಣ ಬ್ಯಾಂಕ್'ನ ಸಂಸ್ಥಾಪಕ ವ್ಯವಸ್ಥಾಪಕ ನಿರ್ದೇಶಕ ಸ್ಥಾನದಿಂದ ವಜಾಗೊಳಿಸಿತು.ನಂತರ, ಕಾರ್ಮಿಕ ಕಾನೂನು ಉಲ್ಲಂಘಿಸಿದ್ದಕ್ಕಾಗಿ ನ್ಯಾಯಾಲಯವೊಂದು ಜನವರಿಯಲ್ಲಿ ಅವರಿಗೆ 6 ತಿಂಗಳ ಜೈಲು ಶಿಕ್ಷೆ ವಿಧಿಸಿತ್ತು. ನಂತರ, ಅವರಿಗೆ ಜಾಮೀನು ನೀಡಲಾಗಿತ್ತು.

ಬಾಂಗ್ಲಾದೇಶದಲ್ಲಿನ, ಎದುರಾಳಿಗಳನ್ನು ದಮನಿಸುವ ರಾಜಕೀಯ ಸಂಸ್ಕೃತಿಯನ್ನು ಕೊನೆಗಾಣಿಸಲು ಪಣ ತೊಟ್ಟ ಯೂನಸ್, 2007ರಲ್ಲಿ 'ಸಿಟಿಜನ್ ಪವರ್' ಎಂಬ ಪಕ್ಷವನ್ನು ಸ್ಥಾಪಿಸಿದ್ದರು. ಕೆಲವೇ ತಿಂಗಳಲ್ಲಿ, ತಮ್ಮ ಮಹತ್ವಾಕಾಂಕ್ಷೆಗಳನ್ನು ತೊರೆದ ಅವರು, ಪಕ್ಷದ ಚಟುವಟಿಕೆಗಳಿಂದ ದೂರವಾದರು. ಆದರೆ, ಆಡಳಿತಾರೂಢ ಪಕ್ಷವನ್ನು ಎದುರು ಹಾಕಿಕೊಂಡಿದ್ದರು.

ಮಂಗಳವಾರ ನಡೆದಿದ್ದೇನು..?

- ಬಾಂಗ್ಲಾದೇಶಕ್ಕೆ ಪ್ರಯಾಣ ಕೈಗೊಳ್ಳದಂತೆ ಅಮೆರಿಕ ತನ್ನ ಪ್ರಜೆಗಳಿಗೆ ಸಲಹೆ
- ರಾಜಧಾನಿ ಢಾಕಾದಲ್ಲಿನ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ನೌಕರರ ಹಾಜರಾತಿ ಕಡಿಮೆ ಇತ್ತು.
- ಪ್ರತಿಯೊಬ್ಬ ಪೊಲೀಸನ ಸುರಕ್ಷತೆಯನ್ನು ಖಾತ್ರಿಪಡಿಸುವವರೆಗೆ ಮುಷ್ಕರ ನಡೆಸಲಾಗುವುದು ಎಂದು ಬಾಂಗ್ಲಾದೇಶ ಪೊಲೀಸ್ ಅಸೋಸಿಯೇಶನ್ (ಬಿಪಿಎ) ಹೇಳಿದೆ
- ಬಾಂಗ್ಲಾದೇಶದಲ್ಲಿ ಅತಂತ್ರರಾಗಿರುವ ಮಹಾರಾಷ್ಟ್ರದ 20 ವಿದ್ಯಾರ್ಥಿಗಳನ್ನು ತ್ವರಿತವಾಗಿ ಕರೆತರಲು ವಿಶೇಷ ತಂಡ ರಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ
- ಅಸ್ಸಾಂ ಗಡಿಯಲ್ಲಿ ಕಟ್ಟೆಚ್ಚರ
- ಕೋಲ್ಕತ್ತದಿಂದ ತಾಯ್ನಾಡಿಗೆ ತೆರಳುತ್ತಿದ್ದ 45 ಬಾಂಗ್ಲಾದೇಶಿ ಪ್ರಜೆಗಳು ಪ್ರಯಾಣ ಮೊಟಕುಗೊಳಿಸಿ, ಭಾರತ ಗಡಿಯ ಪೆತ್ರಾಪೋಲ್ ಠಾಣದಲ್ಲಿಯೇ ಉಳಿಯಬೇಕಾಯಿತು.
- ಏರ್ ಇಂಡಿಯಾ ಮಂಗಳವಾರ ಸಂಜೆಯಿಂದಲೇ ದೆಹಲಿಯಿಂದ ಢಾಕಾಕ್ಕೆ ತನ್ನ ನಿಗದಿತ ವಿಮಾನಯಾನವನ್ನು ಪುನರಾರಂಭಿಸಿತು. ವಿಸ್ತಾರಾ ಕೂಡ ತನ್ನ ನಿಗದಿತ ವಿಮಾನ ಸೇವೆಗಳನ್ನು ಆಗಸ್ಟ್ 7 ರಿಂದ ಪುನರಾರಂಭಿಸಲಿದೆ.

ಬಾಂಗ್ಲಾ: ಹಿಂದೂಗಳ ಗುರಿಯಾಗಿಸಿ ಹಲ್ಲೆ, ದಾಂದಲೆ

ಢಾಕಾ (ಪಿಟಿಐ): ಅರಾಜಕತೆ ಮೂಡಿರುವ ಬಾಂಗ್ಲಾದೇಶದಲ್ಲಿ ಈಗ ಅಲ್ಪಸಂಖ್ಯಾತ ಹಿಂದೂಗಳ ಮನೆ, ಉದ್ಯಮ ಹಾಗೂ ದೇವಸ್ಥಾನಗಳನ್ನು ಗುರಿಯಾಗಿಸಿ ದಾಳಿ, ದಾಂದಲೆ ನಡೆಸುತ್ತಿರುವ ಕೃತ್ಯಗಳು ಹೆಚ್ಚುತ್ತಿವೆ.

ಹಿಂದೂ ಮಹಿಳೆಯರನ್ನೂ ಗುರಿಯಾಗಿಸಿ ಹಲ್ಲೆ ನಡೆಯುತ್ತಿದೆ. ಹಿಂಸಾಚಾರದಲ್ಲಿ ಅವಾಮಿ ಲೀಗ್ ಪಕ್ಷದ ಇಬ್ಬರು ಹಿಂದೂ ನಾಯಕರು ಹತರಾಗಿದ್ದಾರೆ ಸಮುದಾಯದ ನಾಯಕರು ತಿಳಿಸಿದ್ದಾರೆ.

ದೇಶದ ವಿವಿಧೆಡೆ ಇಂತಹ ಕೃತ್ಯಗಳು ನಡೆದಿವೆ. ಅಲ್ಪಸಂಖ್ಯಾತ ಹಿಂದೂ ಸಮುದಾಯದಲ್ಲಿ ಆತಂಕ ಮೂಡಿದೆ ಎಂದು ಬಾಂಗ್ಲಾದೇಶ ಹಿಂದೂ –ಬೌದ್ಧ– ಕ್ರೈಸರ ಯೂನಿಟಿ ಕೌನ್ಸಿಲ್‌ನ ನಾಯಕ ಕಾಜೋಲ್ ದೇಬನಾಥ್ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಲಭ್ಯ ಮಾಹಿತಿಗಳ ಪ್ರಕಾರ, ಅವಾಮಿ ಲೀಗ್ ಪಕ್ಷದಲ್ಲಿದ್ದ ಇಬ್ಬರು ಹಿಂದೂ ನಾಯಕರು ಹತರಾಗಿದ್ದಾರೆ. ಹಲ್ಲೆ, ದಾಂದಲೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳನ್ನು ಕ್ರೋಢಿಕರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೌನ್ಸಿಲ್‌ನ ನಾಯಕರ ಪ್ರಕಾರ, ಬಾಂಗ್ಲಾದೇಶದ ಪಂಚಾಗರ್, ದಿನಜ್‌ಪುರ್, ರಂಗ್‌ಪುರ್, ಬೊಗುರಾ, ಸಿರಜ್‌ಗಂಜ್, ಪತುಅಖಾಲಿ, ಸತ್ಖಿರಾ, ಕೇಂದ್ರ ನರ್‌ಸಿಂಗ್ಡಿ ಸೇರಿ ಹಲವು ಜಿಲ್ಲೆಗಳಲ್ಲಿ ಹಲ್ಲೆಗಳು ನಡೆದಿವೆ.

ಪರಿಸ್ಥಿತಿಯು ಗಂಭೀರವಾಗಿದೆ. ಹಿಂದೂಗಳ ಮೇಲೆ ನಿರಂತರವಾಗಿ ಹಲ್ಲೆಗಳು ನಡೆಯುತ್ತಿವೆ ಎಂದು ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿ ರಾಣಾ ದಾಸ್‌ಗುಪ್ತಾ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಮುದಾಯದವರಿಗೆ ರಕ್ಷಣೆ ನೀಡಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದೂ ಸೇನೆಯನ್ನು ಒತ್ತಾಯಿಸಿದ್ದಾರೆ. ಸೋಮವಾರ ಎರಡು ದೇವಸ್ಥಾನಗಳಲ್ಲಿ ದಾಂದಲೆ ನಡೆದಿತ್ತು.

ಖಲೀದಾ ಜಿಯಾ ಬಿಡುಗಡೆ

ಢಾಕಾ(ಎಎಫ್‌ಪಿ): ಗೃಹ ಬಂಧನಕ್ಕೆ ಒಳಗಾಗಿದ್ದ, ಪ್ರಮುಖ ಪ್ರತಿಪಕ್ಷ ಬಿಎನ್‌ಪಿ (ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಾರ್ಟಿ) ಮುಖ್ಯಸ್ಥೆ ಹಾಗೂ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ.

ಖಲೀದಾ ಜಿಯಾ

ಜಿಯಾ ಅವರಿಗೆ ಭ್ರಷ್ಟಾಚಾರ ಪ್ರಕರಣದಲ್ಲಿ 2018ರಲ್ಲಿ 17 ವರ್ಷ ಜೈಲು ಶಿಕ್ಷೆ ವಿಧಿಸಲಾಗಿತ್ತು.

ಶೇಖ್ ಹಸೀನಾ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿ, ದೇಶ ತೊರೆದ ಬೆನ್ನಲ್ಲೇ ಜಿಯಾ ಅವರನ್ನು ಜೈಲಿನಿಂದ ಬಿಡುಗಡೆ ಮಾಡುವ ಕುರಿತ ಆದೇಶ ಹೊರಬಿದ್ದಿದೆ.

ಪ್ರತಿಭಟನೆ ಸಂದರ್ಭದಲ್ಲಿ ಬಂಧಿಸಿದ್ದವರನ್ನು ಬಿಡುಗಡೆ ಮಾಡುವ ಪ್ರಕ್ರಿಯೆಗೂ ಚಾಲನೆ ದೊರೆತಿದೆ.

ಅವಶೇಷಗಳಡಿ ಮನೆಯ ಕುರುಹು ಹುಡುಕಿ ಕಣ್ಣೀರು ಹಾಕುತ್ತಿರುವ 'ಹಳೆಯ' ನಿವಾಸಿಗಳು

ಅಳಿದ ಊರಲ್ಲಿ ಉಳಿದ ವಸ್ತುಗಳ ಹೆಕ್ಕುತ್ತ...

● ವಿಕ್ರಂ ಕಾಂತಿಕೆರೆ

ಕಲ್ಪೆಟ್ಟ (ವಯನಾಡ್ ಜಿಲ್ಲೆ): ಸರಿಯಾಗಿ ಒಂದು ವಾರದ ಹಿಂದೆ, ಊರಿಡೀ ಉರುಳಿ ಬಿದ್ದಂತಹ ಮಹಾ ಸದ್ದಿಗೆ ಬೆದರಿ ಪ್ರಾಣ ಉಳಿದರೆ ಸಾಕು ಎಂದು ಕಾಡು–ಗುಡ್ಡದತ್ತ ಓಡಿದವರು ತಮ್ಮೂರು ನೋಡಲು ಮಂಗಳವಾರ ಬಂದರು. ಅಳಿದುಳಿದ ಊರು ಸೊಗಸು ಕಳೆದುಕೊಂಡು ಮೈಚಾಚಿ ಬಿದ್ದಿರುವುದನ್ನು ಕಂಡು ಅವರೆಲ್ಲರೂ ಕಣ್ಣೀರಾದರು.

ಜುಲೈ 29ರಂದು ತಡರಾತ್ರಿ ಚೂರಲ್‌ಮಲ, ಮುಂಡಕ್ಕೈ ಮತ್ತು ಪುಂಜಿರಿಮಟ್ಟಂ ಭಾಗಗಳಲ್ಲಿ ಸಂಭವಿಸಿದ ಭೂಕುಸಿತದ ಸಂದರ್ಭದಲ್ಲಿ ಪ್ರಾಣ ಉಳಿಸಿಕೊಂಡು ವಿವಿಧ ಕಾಳಜಿ ಕೇಂದ್ರಗಳಲ್ಲಿ ಕಳೆಯುತ್ತಿರುವವರ ಪೈಕಿ ಕೆಲವರಿಗೆ ತಾವಿದ್ದ ಮನೆಗಳತ್ತ ತೆರಳಲು ಅವಕಾಶ ಲಭಿಸಿತ್ತು. ಆದರೆ ಬಂದವರ ಪೈಕಿ ಬಹುತೇಕರ ಮನೆಯ ಕುರುಹು ಕೂಡ ಅಲ್ಲಿರಲಿಲ್ಲ. ಓಡಾಡಿದ ದಾರಿ ಇರಲಿಲ್ಲ, ಸಂಜೆ ವೇಳೆ ಕುಳಿತು ಸುಖ–ದುಃಖ ಹಂಚಿಕೊಂಡ ಕಟ್ಟೆ ಇರಲಿಲ್ಲ. ಮುದ ನೀಡಿದ ನದಿ, ಸಾಮಗ್ರಿ ತಂದ ಅಂಗಡಿ ಯಾವುದೂ ಇರಲಿಲ್ಲ.

ಮೇಪ್ಪಾಡಿ ಶಾಲೆಯಲ್ಲಿ ತೆರೆದಿರುವ ಕಾಳಜಿ ಕೇಂದ್ರದಿಂದ ಜಯೇಶ್, ಯಶೋದಾ ಮತ್ತು ಮಕ್ಕಳು ಅಪರ್ಣಾ ಹಾಗೂ ಅಕ್ಷಯಾ, ಚೂರಲ್‌ಮಲ ಶಾಲೆಯ ಬಳಿ ತಮ್ಮ ಮನೆ ಇದ್ದ ಜಾಗ ಹುಡುಕಲು ಪರದಾಡಿದರು. ಕೊನೆಗೆ ಹೇಗೋ ಅಲ್ಲಿಗೆ ತಲುಪಿ ನೋಡಿದಾಗ ಮುರಿದು ಬಿದ್ದ ಮನೆಯ ಒಳಗೆ ಕಂಡದ್ದು ಪ್ರಶಸ್ತಿಗಳು ಮತ್ತು ಹಿರಿಯರ ಭಾವಚಿತ್ರ ಮಾತ್ರ.

ಅಪರ್ಣಾ ಅವರ ಸ್ನಾತಕೋತ್ತರ ಪದವಿ ಮತ್ತು ಅಕ್ಷಯಾ ಅವರ ಪದವಿ ಮುಗಿದಿದೆ. ಕಾಲೇಜು ದಿನಗಳಲ್ಲಿ ಅಕ್ಷಯಾ ಗೆದ್ದ ಬಹುಮಾನಗಳಲ್ಲಿ ಕೆಲವು ಮನೆ ಇದ್ದ ಜಾಗದಲ್ಲಿ ಬಿದ್ದಿದ್ದವು. ಅವುಗಳನ್ನು ಹೆಕ್ಕಿ ಎದೆಗವುಚಿಕೊಂಡು ಗಳಗಳನೆ ಅತ್ತರು. ಅಜ್ಜಿಯ ಭಾವಚಿತ್ರ ಎತ್ತಿಕೊಂಡ ಅಪರ್ಣಾ ಅವರಿಗೂ ಬೇಸರ ತಡೆಯಲಾಗಲಿಲ್ಲ. ಅಷ್ಟು ಹೊತ್ತು ತಡೆದು ನಿಲ್ಲಿಸಿದ್ದ ಜಯೇಶ್ ಮತ್ತು ಯಶೋದಾ ಅವರ ದುಃಖದ ಕಟ್ಟೆಯೂ ಒಡೆಯಿತು.

ಭೂಕುಸಿತ ನಡೆದ ಚೂರಲ್‌ಮಲದಲ್ಲಿ ಮೃತದೇಹಗಳಿಗಾಗಿ ಮಂಗಳವಾರವೂ ಹುಡುಕಾಟ ನಡೆಯಿತು –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ದುರಂತದ ನೆಲದಿಂದ

ತುಂಬ ಸೌಹಾರ್ದದ ವಾತಾವರಣ ಇದ್ದ ಊರು ಇದು. ಧರ್ಮಗಳ ಗೋಡೆ ಇಲ್ಲಿರಲಿಲ್ಲ. ಎಲ್ಲರೂ ಜೊತೆಯಾಗಿ ದಿನ ಕಳೆಯುತ್ತಿದ್ದೆವು. ಈಗ ಅವರು ಯಾರೂ ಇಲ್ಲ
ಮಹಮ್ಮದ್ ಕುಟ್ಟಿ, ಚೂರಲ್‌ಮಲ ಶಾಲೆ ಬಳಿಯ ನಿವಾಸಿ

ನಿಮಿಷಾರ್ಧದಲ್ಲಿ ವಾತಾವರಣವಿಡೀ ಶೋಕಮಯವಾಯಿತು.

ಹ್ಯಾರಿಸನ್ಸ್ ಮಲಯಾಳಂ ಚಹಾ ಎಸ್ಟೇಟ್‌ನಲ್ಲಿ ಕೆಲಸ ಮಾಡಿ ಸಂಪಾದಿಸಿದ ಹಣದಲ್ಲಿ ಮೂರು ದಶಕಗಳ ಹಿಂದೆ ಜಯೇಶ್ ಮನೆ ಕಟ್ಟಿದ್ದರು. 'ಈಗ ಎಲ್ಲವೂ ಹೋಯಿತು, ಸುತ್ತಮುತ್ತ ಇದ್ದವರೆಲ್ಲರೂ ಹೋದರು. ಈ ದುರಂತದ ಛಾಯೆ ಮನಸ್ಸಿನಿಂದ ಮಾಸಿ ಹೋಗಲು ಇನ್ನೆಷ್ಟು ಕಾಲ ಬೇಕಾದೀತೋ...' ಎಂದು ಕಣ್ಣೀರು ಒರೆಸುತ್ತಲೇ ಹೇಳಿದರು ಜಯೇಶ್.

'ಮೊದಲ ಕುಸಿತ ಆದ ಕೂಡಲೇ ಮನೆಯ ಬಳಿ ಕೆಸರು ಮಿಶ್ರಿತ ನೀರು ಬಂದಿತ್ತು. ಅಪಾಯದ ಸೂಚನೆ ಅರಿತು ಎಲ್ಲರೂ ಓಡಿದೆವು. ಸ್ಟ್ರೋಕ್ ಆಗಿ ಚಿಕಿತ್ಸೆ ಪಡೆದು ಬಂದಿದ್ದ ಅಪ್ಪನನ್ನು ಎತ್ತಿಕೊಂಡು ಪತಿ ಗುಡ್ಡದ ಕಡೆಗೆ ಹೆಜ್ಜೆ ಹಾಕಿದರು. ಜೀವ ಉಳಿಸುವ ಪ್ರಯತ್ನದಲ್ಲಿ ಎಲ್ಲರವನ್ನೂ ಬಿಟ್ಟು ಹೊರಟಿದ್ದೆವು. ದಾಖಲೆಗಳು ಹಾಗೂ ಮಕ್ಕಳ ಪ್ರಮಾಣಪತ್ರಗಳೆಲ್ಲವೂ ನಾಶವಾಗಿವೆ. ಇನ್ನೊಮ್ಮೆ ಬದುಕು ಕಟ್ಟಿಕೊಳ್ಳುವುದು ಬಹಳ ಕಠಿಣ' ಎಂದು ಯಶೋದಾ ಹೇಳಿದರು.

ಭೂಕುಸಿತದಿಂದ ನಲುಗಿದ ಚೂರಲ್‌ಮಲ ಶಾಲೆಯ ಎದುರಿನ ಪ್ರದೇಶದಲ್ಲಿ ಮನೆ ಇದ್ದ ಜಾಗದ ಹುಡುಕಾಟ – ಪ್ರಜಾವಾಣಿ ಚಿತ್ರ

ತಂಗಿ ಕುಟುಂಬದ ಕುರುಹು ಹುಡುಕಾಟ: ಕಲ್ಪೆಟ್ಟದಿಂದ ಬಂದಿದ್ದ ಅನಸ್, ತಂಗಿಯ ಮನೆ ಇದ್ದ ಜಾಗವನ್ನು ಹುಡುಕುತ್ತ ಮರಣಭೂಮಿಯಲ್ಲಿ ಹೆಜ್ಜೆ ಹಾಕುತ್ತಿದ್ದರು. ಪತಿ ಮತ್ತು ಇಬ್ಬರು ಮಕ್ಕಳ ಜೊತೆ ಪ್ರಾಣ ಕಳೆದುಕೊಂಡ ಮೂರು ತಿಂಗಳ ಗರ್ಭಿಣಿ ತಂಗಿಯನ್ನು ನೆನೆದು ಅತ್ತು ಅತ್ತು ಅವರ ಕಣ್ಣಿನಲ್ಲಿ ನೀರೇ ಬತ್ತಿಹೋಗಿದೆ.

ಜಿವಿಎಚ್‌ಎಸ್ ಶಾಲೆಯ ಹಿಂದೆ ಎತ್ತರ ಪ್ರದೇಶದಲ್ಲಿ ವಾಸವಾಗಿದ್ದ ಮಹಮ್ಮದ್ ಕುಟ್ಟಿ ಮೊಮ್ಮಗ ಹೃಸ್ವಾನ್ ಜೊತೆ ಬಂದಿದ್ದರು. ದುರಂತ ನಡೆದಂದು ಅವರು ಮನೆ ಎದುರಿನ ಕಾಂಪೌಂಡ್ ಒಡೆದು ನೀರು ಒಳನುಗ್ಗಿದ್ದನ್ನು ಕಂಡು ಕುಟುಂಬದವರನ್ನು ಕರೆದುಕೊಂಡು ಹಿಂಬಾಗಿಲಿನಿಂದ ಓಡಿದ್ದರು. ಮಂಗಳವಾರ ಬಂದು ನೋಡಿದಾಗ ಮನೆಯ ಎದುರು ಭಾರಿ ಗಾತ್ರದ ಮರಗಳು ಬಂದು ಬಿದ್ದಿದ್ದವು.

'ಮನೆಯ ಮುಂದೆ ನಿಂತು ನೋಡಿದರೆ ಎಲ್ಲರ ನಲಿವು ಕಾಣುತ್ತಿತ್ತು. ದೂರದಲ್ಲಿ ಹರಿಯುತ್ತಿದ್ದ ನದಿ ಖುಷಿ ನೀಡುತ್ತಿತ್ತು. ಸುತ್ತ ಚಹಾತೋಟ ನೋಡುತ್ತ ಚಹಾ ಸೇವಿಸುವುದರಲ್ಲಿ ಸುಖವಿತ್ತು. ಎತ್ತರದ ಮುಂಡಕ್ಕೈಯತ್ತ ಕಣ್ಣು ಹಾಯಿಸಿದರೆ ಮಂಜು ಮುಸುಕಿದ ಪುಂಜಿರಿಮಟ್ಟಂ ಆಹ್ಲಾದಕರ ವಾತಾವರಣ ಸೃಷ್ಟಿಸುತ್ತಿತ್ತು. ಅದೇ ಗುಡ್ಡ ಕುಸಿದು ಬಂದು ಇಡೀ ಊರನ್ನೇ ಎಳೆದುಕೊಂಡು ಹೋಗಿದೆ. ಇದಕ್ಕೆ ಏನೆನ್ನಲಿ' ಎಂದು ಹೇಳಿ ಮಹಮ್ಮದ್ ಕುಟ್ಟಿ ತಲೆಯ ಮೇಲೆ ಕೈಹೊತ್ತುಕೊಂಡರು.

ಗೆಳೆಯರ ನೆನೆದು ಕರಗಿದ ಟ್ಯಾಕ್ಸಿ ಚಾಲಕ: ಮುಂಡಕ್ಕೈ ಗುಡ್ಡದ ಮೇಲಿದ್ದ ರೆಸಾರ್ಟ್‌ಗಳಿಗೆ ಪ್ರವಾಸಿಗರನ್ನು ಗೆಳೆಯರ ಜೊತೆ ಜೀಪ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದ ಸೈನುದ್ದೀನ್ ದುರಂತ ಆದ ನಂತರ ಇದೇ ಮೊದಲು ಚೂರಲ್‌ಮಲಕ್ಕೆ ಬಂದಿದ್ದರು. ಅಲ್ಲಿ ನಿತ್ಯವೂ ಗೆಳೆಯರ ಜೊತೆ ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ಬಿದ್ದಿರುವ ಬಂಡೆಗಳ ಬಳಿ ನಿಂತು ಗಳಗಳನೆ ಅತ್ತರು.

ಮನೆ ಸೇರಿದ ಮಣಿಕಂಠನ್ ಕುಟುಂಬ

ಚೂರಲ್‌ಮಲದಿಂದ ಒಂದೂವರೆ ಕಿಲೊಮೀಟರ್ ದೂರದ ನೀಲಿಕಾಪ್ ಗ್ರಾಮದ ಗುಡ್ಡದ ಆಚೆ ವಾಸವಾಗಿದ್ದ ಮಣಿಕಂಠನ್ ಮತ್ತು ಕುಟುಂಬದವರು ಮನೆ ಎದುರಿನ ನದಿಯಲ್ಲಿ ನೀರು ಹೆಚ್ಚಾದದ್ದನ್ನು ಕಂಡು ಕಾಡಿನೊಳಗೆ ಓಡಿಹೋಗಿದ್ದರು. ಕಾಳಜಿ ಕೇಂದ್ರದಲ್ಲಿದ್ದ ಅವರಿಗೆ ಮಂಗಳವಾರದಿಂದ ಸ್ವಂತ ಮನೆಯಲ್ಲಿ ವಾಸ.

ಮಲಯಾಳಂ ಮತ್ತು ತಮಿಳು ಮಿಶ್ರಿತ ಕನ್ನಡದಲ್ಲಿ ಮಾತನಾಡುವ ಅವರು ಪುತ್ತುಮಲ ಬಳಿ ಬಸ್ ಇಳಿದು ಸಾಮಗ್ರಿಗಳನ್ನು ಖರೀದಿಸಿ ಕುಟುಂಬ ಸಮೇತರಾಗಿ ಮನೆಯತ್ತ ಸರಸರನೆ ಹೆಜ್ಜೆ ಹಾಕಿದರು.

'ಒಂದು ವಾರದಿಂದ ಮನೆಯತ್ತ ಸುಳಿಯಲಿಲ್ಲ. ಎಲ್ಲವನ್ನೂ ಸರಿಪಡಿಸಿ ಮತ್ತೊಮ್ಮೆ ಹೊಸ ಜೀವನ ಆರಂಭಿಸಬೇಕಾಗಿದೆ' ಎಂದು ಮಣಿಕಂಠನ್ ಅವರ ತಾಯಿ ಕೃಷ್ಣಮ್ಮ ಹೇಳಿದರು.

ಸನ್‌ರೈಸ್ ವ್ಯಾಲಿಯಲ್ಲಿ ಸಾಹಸ

ಸೂಜಿಪ್ಪಾರ ಜಲಪಾತ ಮತ್ತು ಚಾಲಿಯಾರ್ ನದಿ ನಡುವಿನ ಅತ್ಯಂತ ದುರ್ಗಮ ಪ್ರದೇಶವಾದ ಸನ್‌ರೈಸ್ ವ್ಯಾಲಿಗೆ ಹೆಲಿಕ್ಯಾಪ್ಟರ್ ಮೂಲಕ ಸಾಗಿ ಮಂಗಳವಾರ ಸಾಹಸಮಯ ಹುಡುಕಾಟ ನಡೆಸಲಾಯಿತು.

ಕಲ್ಪೆಟ್ಟದ ಎಸ್‌ಜೆಕೆಎಂ ಶಾಲಾ ಮೈದಾನದಿಂದ ಸೇನಾಪಡೆಯ ಸಿಬ್ಬಂದಿ ಸೇರಿದಂತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡವರನ್ನು ಬೆಳಿಗ್ಗೆ ಏರ್‌ಲಿಫ್ಟ್ ಮಾಡಲಾಯಿತು. ಲ್ಯಾಂಡಿಂಗ್ ಮಾಡಲು ಸಾಧ್ಯವಾಗದ ಜಾಗದಲ್ಲಿ ಜನರನ್ನು ಇಳಿಸುವ ಮತ್ತು ಏರ್‌ಲಿಫ್ಟ್ ಮಾಡುವ ಸಾಮರ್ಥ್ಯ ಇರುವ ಅಡ್ವಾನ್ಸ್‌ಡ್ ಲೈಟ್ ಹೆಲಿಕಾಪ್ಟರ್ ಇದಕ್ಕಾಗಿ ಬಳಸಲಾಗಿತ್ತು.

ಆರು ಮಂದಿ ಸೈನಿಕರು ಮತ್ತು ಪೊಲೀಸ್ ಸ್ಪೆಷಲ್ ಆ್ಯಕ್ಷನ್ ಗ್ರೂಪ್‌ನ ನಾಲ್ವರು, ಅರಣ್ಯ ಇಲಾಖೆಯ ಇಬ್ಬರು ವಾಚರ್ ಇದ್ದ ತಂಡವನ್ನು ಹಗ್ಗ ಮತ್ತು ಬ್ಯಾಸ್ಕೆಟ್ ಬಳಸಿ ಕೆಳಗೆ ಇಳಿಸಲಾಯಿತು. ಒಂದು ಪ್ರದೇಶದಲ್ಲಿ ಹುಡುಕಾಟ ಮುಗಿದ ನಂತರ ಏರ್‌ಲಿಫ್ಟ್ ಮಾಡಿ ಮತ್ತೊಂದು ಪ್ರದೇಶಕ್ಕೆ ಕರೆದುಕೊಂಡು ಹೋಗಲಾಯಿತು. ಅರುಣ ಹೊಳೆ ಚಾಲಿಯಾರ್ ನದಿಯನ್ನು ಸೇರುವ ವರೆಗಿನ ಪ್ರದೇಶದಲ್ಲಿ ಹುಡುಕಾಟ ನಡೆಯಿತು.

ಬಾಂಗ್ಲಾ: ಸಂಸತ್ ವಿಸರ್ಜನೆ

ಢಾಕಾ:(ಪಿಟಿಐ): ಬಾಂಗ್ಲಾದೇಶ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಸಂಸತ್ತನ್ನು ಮಂಗಳವಾರ ವಿಸರ್ಜಿಸಿದ್ದಾರೆ.

ಮೊಹಮ್ಮದ್ ಶಹಾಬುದ್ದೀನ್

ಅಧ್ಯಕ್ಷರ ಈ ನಿರ್ಧಾರದಿಂದ, ಹೊಸದಾಗಿ ಚುನಾವಣೆಗಳನ್ನು ನಡೆಸಲು ದಾರಿ ಸುಗಮವಾದಂತಾಗಿದೆ. ಪೂರ್ಣ ಪ್ರಮಾಣದ ಮಧ್ಯಂತರ ಸರ್ಕಾರ ರಚನೆ ಕುರಿತು ಶೀಘ್ರವೇ ಘೋಷಣೆ ಹೊರಬೀಳಲಿದೆ ಎಂದು 'ವಂಗಭವನ' (ರಾಷ್ಟ್ರಪತಿ ಭವನ) ಅಧಿಕಾರಿಗಳು ಹೇಳಿದ್ದಾರೆ.

ಮೂರು ಸಶಸ್ತ್ರ ಪಡೆಗಳ ಮುಖ್ಯಸ್ಥರು, ವಿವಿಧ ರಾಜಕೀಯ ಪಕ್ಷಗಳ ನಾಯಕರು, ನಾಗರಿಕ ಸಂಘಟನೆಗಳು ಹಾಗೂ ತಾರತಮ್ಯ ವಿರೋಧಿ ವಿದ್ಯಾರ್ಥಿ ಚಳವಳಿ (ಎಡಿಎಸ್‌ಎಂ) ಮುಖಂಡರ ಜೊತೆಗೆ ಚರ್ಚಿಸಿದ ನಂತರ ಅಧ್ಯಕ್ಷ ಶಹಾಬುದ್ದೀನ್ ಅವರು ಸಂಸತ್ ವಿಸರ್ಜಿಸುವ ನಿರ್ಧಾರ ಕೈಗೊಂಡರು' ಎಂದು ಅಧ್ಯಕ್ಷರ ಕಚೇರಿ ಪ್ರಕಟಣೆ ಉಲ್ಲೇಖಿಸಿ ಡೈಲಿ ಸ್ಟಾರ್ ಪತ್ರಿಕೆ ವರದಿ ಮಾಡಿದೆ.

ಬಾಂಗ್ಲಾ: ಹಿಂಸೆಗಿಲ್ಲ ಅಂಕುಶ

ಒಂದನೇ ಪುಟದಿಂದ...

ರಾಜಧಾನಿ ಢಾಕಾದಲ್ಲಿ ಹಿಂಸಾಚಾರ ಮತ್ತು ದಾಳಿಯಿಂದಾಗಿ 119 ಮಂದಿ ಮೃತಪಟ್ಟಿದ್ದರೆ, ದೇಶದ ಇತರ ಭಾಗಗಳಲ್ಲಿ ಸಂಭವಿಸಿದ ಘರ್ಷಣೆಗಳಲ್ಲಿ 109 ಮಂದಿ ಮೃತಪಟ್ಟಿದ್ದಾರೆ.

ಉದ್ಯೋಗದಲ್ಲಿ ಮೀಸಲಾತಿ ನೀತಿ ವಿರೋಧಿಸಿ ಜುಲೈ ಮೊದಲ ವಾರ ಪ್ರತಿಭಟನೆ ಆರಂಭಗೊಂಡಿತು. ಅಂದಿನಿಂದ ಸೋಮವಾರದವರೆಗಿನ 21 ದಿನಗಳಲ್ಲಿ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 440ಕ್ಕೆ ಏರಿದಂತಾಗಿದೆ' ಎಂದು ಮಾಧ್ಯಮಗಳು ವರದಿ ಮಾಡಿವೆ.

ಎಲ್ಲಿದ್ದೆ ಇಲ್ಲೀತನಕ..

ಮತ್ತೆ ಒಂದುಗೂಡಿದ ಗೆಳೆಯರು

ವಯನಾಡ್ (ಪಿಟಿಐ): ಅದೊಂದು ಹೃದಯಸ್ಪರ್ಶಿ ಕ್ಷಣ. ನೂರಾರು ಜನರನ್ನು ಸಮಾಧಿಯಾಗಿಸಿದ ಭೂಕುಸಿತ ಅವಘಢದ ಸಂದರ್ಭದಲ್ಲಿ ಬೇರೆಯಾಗಿದ್ದ ಗೆಳೆಯರಿಬ್ಬರು ಮತ್ತೆ ಮುಖಾಮುಖಿಯಾದ ಸುಸಂದರ್ಭ....

ಭೂಕುಸಿತ ಅವಘಡದ ನಂತರ ಪರಸ್ಪರರ ಸ್ಥಿತಿ ಏನಾಗಿದೆ ಎಂದೇ ತಿಳಿದಿರಲಿಲ್ಲ. ಎಂಟು ದಿನಗಳ ಬಳಿಕ ಮಂಗಳವಾರ ಎದುರಾದಾಗ ಇಬ್ಬರ ಕಣ್ಣಾಲಿಗಳೂ ತುಂಬಿದ್ದವು. ಇಬ್ಬರಲ್ಲೂ ಖುಷಿ ಮನೆಮಾಡಿತ್ತು.

'ಅವನು ಇದ್ದಾನೋ, ಇಲ್ಲವೋ ಎಂದೇ ನನಗೆ ಗೊತ್ತಿರಲಿಲ್ಲ. ನಾನು ಬದುಕಿದ್ದೇನೆ ಎಂದು ಅವನಿಗೂ ಗೊತ್ತಿರಲಿಲ್ಲ' ಎಂದು ತಮ್ಮನ್ನು ಭೇಟಿಯಾದ ಸುದ್ದಿಗಾರರಿಗೆ ಮುಜೀಬ್ ಪ್ರತಿಕ್ರಿಯಿಸಿದರು.

'ನಾನು, ಗೆಳೆಯ ಇಂದು ಪರಸ್ಪರ ಮುಖಾಮುಖಿ ಆದಂತೆ, ನನ್ನ ಎಲ್ಲ ನೆರೆಹೊರೆಯವರು ಮತ್ತೆ ಎದುರಾಗಲಿ, ಒಂದುಗೂಡಲಿ ಎಂದು ನಾನು ಪ್ರಾರ್ಥಿಸುತ್ತೇನೆ' ಎಂದದ್ದು ಆತನ ಗೆಳೆಯ ಜಯೇಶ್.

ಇಬ್ಬರೂ ಆನಂದಬಾಷ್ಪದೊಂದಿಗೆ ಪರಸ್ಪರ ಅಪ್ಪಿಕೊಂಡರು. ಸಂಕಷ್ಟದ ಸಂದರ್ಭವನ್ನು ಮೆಲುಕು ಹಾಕಿದರು. 'ನೋಡ ನೋಡುತ್ತಿದ್ದಂತೆಯೇ ನೆರೆಯ ಹಲವರು ಭೂಕುಸಿತ, ಕುಸಿದ ಮನೆಗಳ ಅವಶೇಷಗಳು, ಮಣ್ಣಿನಡಿ ಹೂತುಹೋದರು' ಎಂಬ ನೋವು ಹಂಚಿಕೊಂಡರು.

'ಇಲ್ಲಿ ಸುಮಾರು 200 ಕುಟುಂಬಗಳಿದ್ದವು. ಹಿಂದೂ, ಮುಸ್ಲಿಂ ಧರ್ಮ ಎಂದಿಗೂ ತೊಡಕಾಗಿರಲಿಲ್ಲ' ಎಂದ ಜಯೇಶ್, 'ನಮ್ಮ ಗ್ರಾಮದಲ್ಲಿ ಪರಸ್ಪರರ ನಡುವೆ ಒಂದು ಭಾವನಾತ್ಮಕ ಸಂಬಂಧವಿತ್ತು' ಎಂದರು.

'ಇಲ್ಲಿದ್ದ ಜನರನ್ನು ಈಗ ಬೇರೆಡೆಗೆ ಸ್ಥಳಾಂತರಿಸಬಹುದು. ಆದರೆ, ಗ್ರಾಮಗಳಲ್ಲಿದ್ದ ಪರಸ್ಪರ ಬಾಂಧವ್ಯ ಬಹುಶಃ ಅಲ್ಲಿ ಬರಲಾರದು. ನಾವು ನೆರೆಹೊರೆಯವರು ಹಾಗೇ ಇದ್ದೆವು' ಎಂದು ಜಯೇಶ್ ಹೇಳಿದರು.

ಹಿಂದಿನ ಸರ್ಕಾರಗಳ ಅವಧಿಯಲ್ಲಿ ಅನುದಾನ ಹಂಚಿಕೆಯಲ್ಲಿ ತಾರತಮ್ಯ, ಅಕ್ರಮ ಪಾವತಿ

ದೇವಾಲಯಗಳಿಗೆ ಅನ್ಯಾಯ: ಸಿಎಜಿ

● ಜಯಸಿಂಹ ಆರ್.

ಬೆಂಗಳೂರು: 'ರಾಜ್ಯ ಸರ್ಕಾರವು ದೇವಾಲಯಗಳಿಗೆ ಅನುದಾನ ನೀಡುವಾಗ ಖಾಸಗಿ ದೇವಾಲಯಗಳಿಗೆ ಮಣೆ ಹಾಕಿದ್ದು, ಮುಜರಾಯಿ ದೇವಾಲಯಗಳಿಗೆ ಅನ್ಯಾಯವಾಗಿದೆ. ಅನುದಾನ ನೀಡುವಲ್ಲಿ ಅಕ್ರಮವೂ ನಡೆದಿದೆ' ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

2017–18ರಿಂದ 2021–22ರವರೆಗಿನ ಐದು ಆರ್ಥಿಕ ವರ್ಷಗಳಲ್ಲಿ ದೇವಾಲಯಗಳಿಗೆ ಅನುದಾನ ಮಂಜೂರು ಮತ್ತು ಬಳಕೆಯ ಲೆಕ್ಕಪರಿಶೋಧನೆ ನಡೆಸಿರುವ ಸಿಎಜಿ, ಅನುದಾನ ಮಂಜೂರಾತಿಯಲ್ಲಿ ಏಕರೂಪತೆ ಇಲ್ಲ ಮತ್ತು ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದು ಅಭಿಪ್ರಾಯ ಪಟ್ಟಿದೆ. ಸಿಎಜಿ ಈಚೆಗೆ ಬಿಡುಗಡೆ ಮಾಡಿರುವ 'ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನಾ ವರದಿ'ಯಲ್ಲಿ ಈ ಮಾಹಿತಿ ಇದೆ.

ಈ ಅವಧಿಯಲ್ಲಿ ಕಾಂಗ್ರೆಸ್, ಜೆಡಿಎಸ್– ಕಾಂಗ್ರೆಸ್ ಮೈತ್ರಿ ಕೂಟ ಹಾಗೂ ಬಿಜೆಪಿ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಧಿಕಾರ ನಡೆಸಿತ್ತು.

'ಒಟ್ಟು ಅನುದಾನದಲ್ಲಿ ಶೇ 50 ರಷ್ಟನ್ನು ಮುಜರಾಯಿ ದೇವಾಲಯಗಳಿಗೆ ಹಂಚಿಕೆ ಮಾಡಬೇಕು ಎನ್ನುತ್ತದೆ ನಿಯಮ. ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಿಕೊಂಡ 11 ಜಿಲ್ಲೆಗಳಿಗೆ ಈ ಅವಧಿಯಲ್ಲಿ ಒಟ್ಟು ₹232.29 ಕೋಟಿ ಮಂಜೂರು ಮಾಡಲಾಗಿದೆ. ಇದರಲ್ಲಿ ಖಾಸಗಿ ದೇವಾಲಯಗಳಿಗೆ ₹187.81 ಕೋಟಿ (ಶೇ 81ರಷ್ಟು) ಅನುದಾನ ಹೋಗಿದೆ. ಮುಜರಾಯಿ ದೇವಾಲಯಗಳಿಗೆ ಸಿಕ್ಕಿದ್ದು ₹44.48 ಕೋಟಿ (ಶೇ 19ರಷ್ಟು) ಮಾತ್ರ. ಇದರಿಂದ ಮುಜರಾಯಿ ದೇವಸ್ಥಾನಗಳಿಗೆ ಅನ್ಯಾಯವಾಗಿದೆ' ಎಂದಿದೆ ವರದಿ.

ಉಚ್ಚಿಲ ಮಹಾಲಕ್ಷ್ಮಿಗೆ ₹12.75 ಕೋಟಿ

'ಮುಜರಾಯಿ ದೇವಾಲಯಗಳಿಗೆ ಗರಿಷ್ಠ ₹10 ಲಕ್ಷ ಮತ್ತು ಖಾಸಗಿ ದೇವಾಲಯಗಳಿಗೆ ಗರಿಷ್ಠ ₹25 ಲಕ್ಷ ಅನುದಾನ ಒದಗಿಸಬಹುದು ಎಂದು 2010ರಲ್ಲಿ ಸರ್ಕಾರ ನಿಯಮ ರೂಪಿಸಿದೆ. ಆದರೆ, ಉಡುಪಿಯ ಉಚ್ಚಿಲ ಮಹಾಲಕ್ಷ್ಮಿ ದೇವಸ್ಥಾನಕ್ಕೆ 2019–20ರಿಂದ 2021–22ರ ನಡುವೆ ಒಟ್ಟು ₹12.75 ಕೋಟಿಯಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ತನ್ನದೇ ನಿಯಮವನ್ನು ಮುಜರಾಯಿ ಇಲಾಖೆ ಉಲ್ಲಂಘಿಸಿದೆ' ಎಂದು ಸಿಎಜಿ ಹೇಳಿದೆ.

'ಕೋಲಾರದ ಶ್ರೀನಿವಾಸಪುರ ಶನಿಮಹಾತ್ಮ ದೇವಾಲಯಕ್ಕೂ ಈ ನಿಯಮ ಉಲ್ಲಂಘಿಸಿ ₹1.20 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ರೀತಿ ಒಟ್ಟು 79 ದೇವಾಲಯಗಳಿಗೆ ನಿಗದಿಗಿಂತ ಹಲವು ಪಟ್ಟು ಹೆಚ್ಚು ಅನುದಾನ ನೀಡಲಾಗಿದೆ. ಪರಿಣಾಮವಾಗಿ, ದೇವಾಲಯಗಳ ಆರ್ಥಿಕ ಸಂಕಷ್ಟ ನಿವಾರಿಸುವ ಸರ್ಕಾರದ ಉದ್ದೇಶಕ್ಕೆ ಧಕ್ಕೆಯಾಗಿದೆ' ಎಂದಿದೆ ವರದಿ.

₹203 ಕೋಟಿ ಬಳಕೆಗೆ ಪ್ರಮಾಣಪತ್ರವಿಲ್ಲ

'ವಿವಿಧ ಯೋಜನೆಗಳ ಅಡಿಯಲ್ಲಿ 11 ಜಿಲ್ಲೆಗಳಿಗೆ ಮಂಜೂರಾಗಿದ್ದ ಅನುದಾನದಲ್ಲಿ, ₹226.53 ಕೋಟಿ ಬಿಡುಗಡೆಯಾಗಿದೆ. ಈ ಅನುದಾನವನ್ನು ಬಳಕೆ ಮಾಡಿಕೊಂಡದ್ದರ ಬಗ್ಗೆ ಸರ್ಕಾರಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕಿತ್ತು. ಆದರೆ ₹203.33 ಕೋಟಿಯಷ್ಟು ಅನುದಾನಕ್ಕೆ ಸಂಬಂಧಿಸಿದಂತೆ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸಿಯೇ ಇಲ್ಲ' ಎನ್ನುತ್ತದೆ ಸಿಎಜಿ.

'ಅನುದಾನವನ್ನು ಉದ್ದೇಶಿತ ಕಾರ್ಯಕ್ಕೇ ಬಳಸಿಕೊಳ್ಳಲಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಂಡು, ಬಳಕೆ ಪ್ರಮಾಣಪತ್ರವನ್ನು ಪಡೆದುಕೊಂಡು ಅನುದಾನದ ಮುಂದಿನ ಕಂತನ್ನು ಬಿಡುಗಡೆ ಮಾಡಬೇಕು. ಆದರೆ ಈ ಎಲ್ಲ ನಿಯಮಗಳನ್ನು ಕಡೆಗಣಿಸಿ ಅನುದಾನದ ದುರ್ಬಳಕೆಗೆ ಅವಕಾಶ ಮಾಡಿಕೊಟ್ಟಂತಾಗಿದೆ' ಎಂದು ಸಿಎಜಿ ಹೇಳಿದೆ.

ಕ್ರಮಕ್ಕೆ ಶಿಫಾರಸು

- ನಿಯಮಬಾಹಿರವಾಗಿ ಅನುದಾನ ಮಂಜೂರು ಮಾಡಿದ ಅಧಿಕಾರಿ ವಿರುದ್ಧ
- ಹೆಚ್ಚುವರಿ ಅನುದಾನ ಮಂಜೂರು ಮಾಡಿದ ಅಧಿಕಾರಿಗಳ ವಿರುದ್ಧ
- ಅನುದಾನ ಮಂಜೂರಿಗೆ ಏಕರೂಪತೆ ತನ್ನಿ

ಕೇಳದಿದ್ದರೂ ಅನುದಾನ: 'ಶಿಥಿಲಾವಸ್ಥೆಯಲ್ಲಿದ್ದು, ಜೀರ್ಣೋದ್ಧಾರಕ್ಕೆ ಅನುದಾನದ ಅಗತ್ಯವಿದೆ ಎಂದು ಕೋಲಾರದ ಎರಡು ತಾಲ್ಲೂಕಿನಿಂದಲೇ 29 ಮುಜರಾಯಿ ದೇವಾಲಯಗಳಿಂದ ಪ್ರಸ್ತಾವ ಸಲ್ಲಿಕೆಯಾಗಿದೆ. ಅವುಗಳಿಗೆ ಅನುದಾನ ಮಂಜೂರು ಮಾಡಿಲ್ಲ. ಆದರೆ ಈ ಅವಧಿಯಲ್ಲಿ ಪ್ರಸ್ತಾವ ಸಲ್ಲಿಸದೇ ಇದ್ದ 2,836 ದೇವಾಲಯಗಳಿಗೆ ಅನುದಾನ ನೀಡಲಾಗಿದೆ. ಈ ಪೈಕಿ 2,264 ಖಾಸಗಿ ದೇವಾಲಯಗಳೂ ಇವೆ. ಅಗತ್ಯವಿದ್ದ ದೇವಾಲಯಗಳಿಗೆ ಅನುದಾನ ನೀಡದೆ, ತಾರತಮ್ಯ ಮಾಡಲಾಗಿದೆ' ಎನ್ನುತ್ತದೆ ವರದಿ.

ಅಲೋಕ್ ಕುಮಾರ್ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣದ ವಿಚಾರಣೆಯೊಂದನ್ನು ಹೈಕೋರ್ಟ್ ರದ್ದುಪಡಿಸಿದೆ.

ಫಿರ್ಯಾದುದಾರರಾದ ಮಮತಾ ಸಿಂಗ್ (ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದ ಸಂತ್ರಸ್ತ ಬಾಲಕಿಯ ತಾಯಿ) ಸಲ್ಲಿಸಿದ್ದ ಖಾಸಗಿ ದೂರನ್ನು ಗಂಭೀರ ಅಪರಾಧ ಎಂದು ಪರಿಗಣಿಸಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಅಲೋಕ್ ಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಕ್ರಮವನ್ನು ಪ್ರಶ್ನಿಸಿ ಅಲೋಕ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ಅಲೋಕ್ ಕುಮಾರ್ ವಿರುದ್ಧ ನಗರದ 39ನೇ ಹೆಚ್ಚುವರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆಯನ್ನು ವಜಾಗೊಳಿಸಿದೆ.

ಅಲೋಕ್ ಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರು, 'ವಿಚಾರಣಾ ನ್ಯಾಯಾಲಯವು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಇಲ್ಲದೇ ಪ್ರಾಸಿಕ್ಯೂಷನ್‌ಗೆ ಒಳಪಡಿಸುವ ದಿಸೆಯಲ್ಲಿ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿದ್ದಾರೆ. ದಂಡ ಪ್ರಕ್ರಿಯಾ ಸಂಹಿತೆ–1973ರ ಕಲಂ 195ರ ಅಡಿ ಇಂತಹ ಕ್ರಮಕ್ಕೆ ಅವಕಾಶವಿಲ್ಲ. ಅಂತೆಯೇ, ಫಿರ್ಯಾದುದಾರರಾದ ಮಮತಾ ಸಿಂಗ್ ಈಗಾಗಲೇ ತೀರಿಕೊಂಡಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅಲೋಕ್ ಪ್ರಕರಣ ರದ್ದುಗೊಳಿಸಿ ಆದೇಶಿಸಿತು. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

ಗಾಣಿಗ ಸಮುದಾಯದ ಅಭಿವೃದ್ಧಿಗೆ ಸಹಕಾರ: ಡಿಕೆಶಿ

'ಬೇಡಿಕೆ ಈಡೇರಿಕೆ ಶೀಘ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಳಿತಕ್ಕೆ ಒಳಗಾಗಿರುವ ಗಾಣಿಗ ಸಮುದಾಯದ ಅಭಿವೃದ್ಧಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು. ಸಚಿವ ರಾಮಲಿಂಗಾರೆಡ್ಡಿ ಅವರ ಜತೆ ಚರ್ಚಿಸಿ, ಸಮುದಾಯದ ಬೇಡಿಕೆಗಳನ್ನು ಶೀಘ್ರವೇ ಈಡೇರಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಧರ್ಮಸಂಸ್ಥೆ ಮಂಗಳವಾರ ಆಯೋಜಿಸಿದ್ದ ಯಜಮಾನ್ ಜನೋಪಕಾರಿ ದೊಡ್ಡಣ್ಣ ಶೆಟ್ಟರ 103ನೇ ವಾರ್ಷಿಕ ಆರಾಧನಾ ಮಹೋತ್ಸವ ಉದ್ಘಾಟಿಸಿ ಮಾತನಾಡಿದರು.

'ಗಾಣಿಗ ಅಭಿವೃದ್ಧಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ರಾಜಶೇಖರ್ ಹಾಗೂ ಲಕ್ಷ್ಮೀ ನರಸಿಂಹಸ್ವಾಮಿ ಧರ್ಮಸಂಸ್ಥೆ ಅಧ್ಯಕ್ಷ ಎಸ್.ಸುರೇಶ್ ಅವರು ಪ್ರತ್ಯೇಕವಾಗಿ ಮನವಿ ಸಲ್ಲಿಸಿದ್ದಾರೆ. ಇಬ್ಬರನ್ನು ಕರೆಸಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು' ಎಂದರು.

'ದೀಪ ಉರಿಯುವಾಗ ಎಣ್ಣೆ, ಬತ್ತಿ ಏನೂ ಕಾಣುವುದಿಲ್ಲ. ಕಾಣುವುದು ಬೆಳಕು ಮಾತ್ರ. ಗಾಣಿಗ ಸಮುದಾಯ ತಯಾರಿಸುವ ಎಣ್ಣೆ, ದೀಪ ಹಾಗೂ ಮನುಷ್ಯನನ್ನು ತಂಪಾಗಿಸಲು ತಲೆಗೂ ಬೇಕು. ಸಮುದಾಯ ಶ್ರಮದ ಮೂಲಕ ಬದುಕು ಕಟ್ಟಿಕೊಂಡಿದೆ' ಎಂದರು.

'ಯಾವುದೇ ಮನುಷ್ಯ ಇದೇ ಜಾತಿ, ಧರ್ಮದಲ್ಲಿ ಹುಟ್ಟಬೇಕು ಎಂದು ಹರಕೆ ಹೊತ್ತಿರುವುದಿಲ್ಲ. ಹುಟ್ಟಿದ ನಂತರ ಜಾತ್ಯತೀತವಾಗಿ ಬದುಕಬೇಕು. ವೃತ್ತಿ, ಸಮುದಾಯ ಉಳಿಸಿಕೊಳ್ಳಲು ಸಂಘಟಿತರಾಗಿ. ದೊಡ್ಡಣ್ಣ ಶೆಟ್ಟರು ಬ್ರಿಟಿಷರ ಆಡಳಿತ ಅವಧಿಯಲ್ಲಿಯೇ ನಗರದ ಹೃದಯ ಭಾಗದಲ್ಲಿ ಧರ್ಮಾರ್ಥ ಸಂಸ್ಥೆ ಕಟ್ಟಿ ಸಮಾಜದ ಎಲ್ಲ ಸಮುದಾಯಗಳ ನೆರವಿಗೆ ನಿಂತ ಮಹಾನುಭಾವ. ದೇವರು ಯಾರಿಗೆ ವರ, ಶಾಪ ಏನನ್ನೂ ಕೊಡುವುದಿಲ್ಲ. ಸಿಗುವ ಅವಕಾಶದಲ್ಲಿ ಉಪಕಾರ ಮಾಡಿ' ಎಂದು ತಿಳಿಸಿದರು.

ಇದೇ ವೇಳೆ ಸಮುದಾಯದ ನಾಯಕ ವಿ.ಆರ್.ಸುದರ್ಶನ್ ಅವರು ಲಕ್ಷ್ಮೀನರಸಿಂಹಸ್ವಾಮಿ ಧರ್ಮಸಂಸ್ಥೆಗೆ ₹ 10 ಕೋಟಿ ಅನುದಾನ ನೀಡಬೇಕು ಎಂದು ಉಪಮುಖ್ಯಮಂತ್ರಿಗೆ ಮನವಿ ಮಾಡಿದರು.

ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಉದಯ ಸಿ. ಗರುಡಾಚಾರ್, ಮುಖಂಡರಾದ ನಿರಂಜನ್ ಗಾಣಿಗ, ಜಿ.ಎ.ಉಮಾದೇವಿ, ಶ್ರೀಧರ್ ಪಾಲ್ಗೊಂಡಿದ್ದರು. ಇದಕ್ಕೂ ಮುನ್ನ, ದೊಡ್ಡಣ್ಣ ಶೆಟ್ಟರ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ನಗರದಲ್ಲಿ ಮಂಗಳವಾರ ನಡೆದ ಯಜಮಾನ್ ಜನೋಪಕಾರಿ ದೊಡ್ಡಣ್ಣ ಶೆಟ್ಟರ 103ನೇ ವಾರ್ಷಿಕ ಆರಾಧನಾ ಮಹೋತ್ಸವದಲ್ಲಿ ಅಖಿಲ ಕರ್ನಾಟಕ ಗಾಣಿಗ ಸಂಘದ ಅಧ್ಯಕ್ಷ ರಾಜಶೇಖರ್ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಸಮುದಾಯದ ಮುಖಂಡ ವಿ.ಆರ್ ಸುದರ್ಶನ್, ಲಕ್ಷ್ಮಿ ನರಸಿಂಹಸ್ವಾಮಿ ಧರ್ಮಸಂಸ್ಥೆ ಅಧ್ಯಕ್ಷ ಎಸ್.ಸುರೇಶ್ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

ಕೆಎಎಸ್ ಪರೀಕ್ಷೆಗೆ ಅವಸರ ಸಲ್ಲ: ಮುಂದೂಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಎಎಸ್ 40 ಹುದ್ದೆಗಳೂ ಸೇರಿ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ಕೆಲಸದ ದಿನವಾದ ಆಗಸ್ಟ್ 27ರಂದು ಪೂರ್ವಭಾವಿ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿರುವುದು ಸಮಂಜಸವಲ್ಲ. ಈ ಪರೀಕ್ಷೆಯನ್ನು ಕನಿಷ್ಠ ಒಂದು ತಿಂಗಳು ಮುಂದೂಡಬೇಕು. ಅಲ್ಲದೆ, ಭಾನುವಾರದಂದೇ ಪರೀಕ್ಷೆ ನಡೆಸಬೇಕು' ಎಂದು ಆಗ್ರಹಿಸಿ ಮುಖ್ಯ ಕಾರ್ಯದರ್ಶಿಗೆ ಮಾಜಿ ಶಾಸಕ ವೈ.ಎಸ್.ವಿ. ದತ್ತ ಪತ್ರ ಬರೆದಿದ್ದಾರೆ.

'ನೇಮಕಾತಿ ಪ್ರಕ್ರಿಯೆಗಳಲ್ಲಿ ವಿಳಂಬ ಧೋರಣೆ ಅನುಸರಿಸುವ ಕೆಪಿಎಸ್‌ಸಿ, ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯನ್ನು ನಡೆಸಲು ತೋರಿಸುತ್ತಿರುವ ಅವಸರ ಅನುಮಾನಗಳಿಗೆ ಎಡೆ ಮಾಡಿಕೊಡುವಂತಿದೆ. ಪರೀಕ್ಷೆ ಪಾರದರ್ಶಕವಾಗಿ ನಡೆಯಬೇಕು ಎನ್ನುವುದು ಎಲ್ಲ ಅಭ್ಯರ್ಥಿಗಳ ಅಪೇಕ್ಷೆ. ಈ ಪೂರ್ವಭಾವಿ ಪರೀಕ್ಷೆಯು ಅನೇಕ ನಿರುದ್ಯೋಗಿಗಳ ಜೀವನ್ಮರಣದ ಪ್ರಶ್ನೆ. ಹೀಗಾಗಿ, ಕಾಲಾವಕಾಶ ನೀಡಬೇಕಿರುವುದು ಸಹಜ ನ್ಯಾಯ' ಎಂದೂ ಪತ್ರದಲ್ಲಿ ಅವರು ಪ್ರತಿಪಾದಿಸಿದ್ದಾರೆ.

ಕೆಪಿಎಸ್‌ಸಿ ಸದಸ್ಯರ ಹಿತ ಕಾಪಾಡಲು ಪರೀಕ್ಷೆ– ಆರೋಪ: 'ಕೆಲಸ ದಿನದಂದು ಪೂರ್ವಭಾವಿ ಪರೀಕ್ಷೆ ನಿಗದಿಪಡಿಸಿ, ಪರೀಕ್ಷೆ ನಡೆಯುವ ಕೇಂದ್ರಗಳು ಮತ್ತು ಪರೀಕ್ಷೆ ಬರೆಯಲಿರುವ ಸರ್ಕಾರಿ ಸೇವಾನಿರತರಿಗೆ ಸಾಂದರ್ಭಿಕ ರಜೆ ನೀಡುವಂತೆ ಡಿಪಿಎಆರ್‌ಗೆ ಕೆಪಿಎಸ್‌ಸಿ ಮನವಿ ಮಾಡಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಕೇಂದ್ರ, ರಾಜ್ಯ ಸರ್ಕಾರ ಮತ್ತು ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿಗೆ ಇದರಿಂದ ಅನ್ಯಾಯವಾಗಲಿದೆ. ಕೆಪಿಎಸ್‌ಸಿಯ ಕೆಲವು ಸದಸ್ಯರು ವರ್ಷದೊಳಗೆ ನಿವೃತ್ತರಾಗಲಿದ್ದು, ಆ ಸದಸ್ಯರ ಹಿತಾಸಕ್ತಿ ಕಾಪಾಡಲು ಮತ್ತು ಭ್ರಷ್ಟಾಚಾರದ ಮೂಲಕ ಸ್ವಲಾಭ ಮಾಡಿಕೊಡುವ ಉದ್ದೇಶದಿಂದ ತರಾತುರಿಯಲ್ಲಿ ಪರೀಕ್ಷೆ ನಡೆಸಲು ಮುಂದಾಗಿದೆ' ಎಂದು ಆರೋಪಿಸಿರುವ ಕೆಲವು ಅಭ್ಯರ್ಥಿಗಳು, ಪರೀಕ್ಷೆ ಮುಂದೂಡಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಕ್ಷೌರ ಮಾಡಿದ ಶಿಕ್ಷಕ ಅಮಾನತು

ಗದಗ: 'ಕ್ಷೌರ ಮಾಡಿಸಿಲ್ಲ' ಎಂದು ಕೂದಲು ಕತ್ತರಿಸಲು ಮುಂದಾಗಿ, ವಿದ್ಯಾರ್ಥಿಯ ಹಣೆಗೆ ಗಾಯ ಮಾಡಿದ ಶಿಕ್ಷಕನಿಗೆ ಪೋಷಕರು ಹೊಡೆದ ಘಟನೆ ಬೆಟಗೇರಿ ಸೇಂಟ್ ಮೇರಿಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ನಡೆದಿದೆ.

'ಶಾಲೆಯ ಶಿಕ್ಷಕ ಬೆನೊಯ್ ಎಂಬುವರು ಶಾಲೆಯ ಆರು ವಿದ್ಯಾರ್ಥಿಗಳಿಗೆ ಸೋಮವಾರ ಕ್ಷೌರ ಮಾಡಿದ್ದಾರೆ. ಆಗ ಏಳನೇ ತರಗತಿ ವಿದ್ಯಾರ್ಥಿಯೊಬ್ಬರಿಗೆ ಹಣೆಗೆ ಗಾಯವಾಗಿದೆ. ಮಂಗಳವಾರ ಶಾಲೆಗೆ ಬಂದ ಪೋಷಕರು, ಬೆನೊಯ್ ವರ್ತನೆ ಖಂಡಿಸಿದರು' ಎಂದು ಮೂಲಗಳು ತಿಳಿಸಿವೆ. 'ಶಿಕ್ಷಕನನ್ನು ಅಮಾನತು ಮಾಡಲಾಗಿದೆ' ಎಂದು ಬಿಇಒ ಆರ್.ಎಸ್.ಬುರಡಿ ತಿಳಿಸಿದ್ದಾರೆ.

'ಪ್ರಕರಣದ ಕುರಿತು ಸ್ವಯಂ ಪ್ರೇರಿತ ದೂರು ದಾಖಲಿಸಿ, ಮುಂದಿನ ಕ್ರಮವಹಿಸಲಾಗುವುದು' ಎಂದು ಬೆಟಗೇರಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸೆ.5ರಿಂದ ಕೆಲಸ ಸ್ಥಗಿತ ಪಾಲಿಕೆಗಳ ನೌಕರರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ 10 ಮಹಾನಗರ ಪಾಲಿಕೆಗಳ ನೌಕರರ ಬೇಡಿಕೆ ಈಡೇರಿಸದಿದ್ದರೆ ಸೆಪ್ಟೆಂಬರ್ 5ರಿಂದ ಕೆಲಸ ಸ್ಥಗಿತಗೊಳಿಸಲು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ತೀರ್ಮಾನಿಸಿದೆ.

ಮಂಗಳವಾರ ನಡೆದ ಸಂಘದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಬೇಡಿಕೆಗಳ ಈಡೇರಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಮಾಡಲಾಗಿದೆ. ಐದು ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಸೆಪ್ಟೆಂಬರ್ 4ರವರೆಗೆ ಗಡುವು ನೀಡಲಾಗಿದೆ. ಅಲ್ಲಿಯವರೆಗೆ ಬೇಡಿಕೆ ಈಡೇರದಿದ್ದರೆ ಕೆಲಸ ಸ್ಥಗಿತ, ಪ್ರತಿಭಟನೆ ಮಾಡಲು ನಿರ್ಧರಿಸಲಾಯಿತು ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ, ಪಾಲಿಕೆ ನೌಕರರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ವಿ.ವೆಂಕಟರಾಮ್, ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಸಿ.ಬಸವರಾಜಯ್ಯ, ಸಂಚಾಲಕ ಪ್ರಹ್ಲಾದ್ ಕುಲಕರ್ಣಿ ನೇತೃತ್ವದಲ್ಲಿ ಸಭೆ ನಡೆಯಿತು.

ಬೇಡಿಕೆಗಳೇನು?

ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಮತ್ತು ಪಾಲಿಕೆ ಅಧಿಕಾರಿ/ ನೌಕರರಿಗೂ ಸಹ ಕೆ.ಜಿ.ಐ.ಡಿ. ಮತ್ತು ಜಿ.ಪಿ.ಎಫ್ ಸೌಲಭ್ಯ ನೀಡಬೇಕು. ಎರವಲು ಸೇವೆ ಅಧಿಕಾರಿ ಮತ್ತು ನೌಕರರನ್ನು ಮಾತೃ ಇಲಾಖೆಗೆ ಹಿಂತಿರುಗಿಸಿ ಮತ್ತು ಖಾಲಿ ಇರುವ ಎಲ್ಲಾ ವೃಂದದ ಮುಂಬಡ್ತಿ ನೀಡಬೇಕು.

ಪ್ರಶ್ನೆಪತ್ರಿಕೆ ಜತೆಗೆ ಉತ್ತರವೂ ಮುದ್ರಣ!

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಾವಣಗೆರೆ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಅಂತಿಮ ವರ್ಷದ 'ಇ-ಕಾಮರ್ಸ್' ವಿಷಯದ ಪ್ರಶ್ನೆಪತ್ರಿಕೆ ಜತೆಗೆ ಉತ್ತರ ಮುದ್ರಿಸಿದ ಪ್ರತಿಯನ್ನು ಪರೀಕ್ಷಾರ್ಥಿಗಳಿಗೆ ವಿತರಿಸಿದ ಪ್ರಸಂಗ ಮಂಗಳವಾರ ನಡೆದಿದೆ. ತಪ್ಪಿನ ಅರಿವಾಗುತ್ತಿದ್ದಂತೆಯೇ ಪರೀಕ್ಷೆ ರದ್ದುಪಡಿಸಿ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ವಾಣಿಜ್ಯ ವಿಭಾಗದ ಮುಕ್ತ ಆಯ್ಕೆ (ಓಪನ್ ಎಲೆಕ್ಟಿವ್) 'ಇ-ಕಾಮರ್ಸ್' ವಿಷಯದ ಪರೀಕ್ಷೆ ಮಂಗಳವಾರ ನಿಗದಿಯಾಗಿತ್ತು. 60 ಅಂಕದ ಪ್ರಶ್ನೆಪತ್ರಿಕೆಯನ್ನು ವಿತರಿಸಲಾಯಿತು. ಪ್ರಶ್ನೆಗಳೊಂದಿಗೆ ಉತ್ತರವೂ ಮುದ್ರಣವಾಗಿರುವುದು ಪರೀಕ್ಷಾ ಮೇಲ್ವಿಚಾರಕರ ಗಮನಕ್ಕೆ ಬಂದಿದೆ.

'ತಾಂತ್ರಿಕ ಕಾರಣಕ್ಕೆ ಪರೀಕ್ಷೆಯಲ್ಲಿ ಲೋಪ ಉಂಟಾಗಿದೆ. ಪರೀಕ್ಷೆಯನ್ನು ಮುಂದೂಡಲಾಗಿದ್ದು, ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆಗೆ ವಿಷಾದ ವ್ಯಕ್ತಪಡಿಸುತ್ತೇವೆ' ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ಸಿ.ಕೆ. ರಮೇಶ್ ತಿಳಿಸಿದ್ದಾರೆ.

ಎಲ್ಲ 39 ಆರೋಪಿಗಳು ಖುಲಾಸೆ

ಒಂದನೇ ಪುಟದಿಂದ...

ವಿಳಂಬ: ಈ ಪ್ರಕರಣ ನಡೆದಿದ್ದು 2012ರಲ್ಲಿ. ಆದರೆ, ನ್ಯಾಯಾಲಯದಲ್ಲಿ ವಿಚಾರಣೆ ಆರಂಭವಾಗಿದ್ದು 2020ರಲ್ಲಿ. 47 ಮಂದಿ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿದ್ದರು. ಪೊಲೀಸರು ವಿಚಾರಣೆ ವೇಳೆ 96 ದಾಖಲೆಗಳನ್ನು ಹಾಗೂ 13 ಸಾಕ್ಷ್ಯ ಸಾಮಗ್ರಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

'ಈ ಪ್ರಕರಣದಲ್ಲಿ ಆರೋಪಿಗಳ ಗುರುತು ಪತ್ತೆ ಪರೇಡ್ ನಡೆದಿರಲಿಲ್ಲ. ಪ್ರಕರಣದ ತನಿಖೆಯಲ್ಲಿ ಇದು ದೊಡ್ಡ ಲೋಪ. 13 ಸಾಕ್ಷಿಗಳಲ್ಲಿ 11 ಮಂದಿ ವಿಚಾರಣೆ ವೇಳೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರು' ಎಂದು ವಕೀಲರಾದ ಪ್ರಸಾದ್ ಪಾಲನ್ ಹಾಗೂ ಕಿಶೋರ್ ಕುಮಾರ್ ತಿಳಿಸಿದರು.

'ಪ್ರಾಸಿಕ್ಯೂಷನ್‌ನ ಹೇಳಿಕೆಗೂ ಮಹಜರಿನ ಅಂಶಗಳಿಗೂ ತಾಳೆಯಾಗಿರಲಿಲ್ಲ' ಎಂದು ಪ್ರಸಾದ್ ತಿಳಿಸಿದರು.

ನ್ಯಾಯಾಧೀಶರು ತೀರ್ಪನ್ನು ಪ್ರಕಟಿಸುವಾಗ ಪ್ರಮುಖ ಆರೋಪಿಗಳಾದ ಸುಭಾಷ್ ಡಿ.ಪಡೀಲ್, ಗಣೇಶ್ ಸೇರಿದಂತೆ ಹೆಚ್ಚಿನವರು ಕೋರ್ಟ್ ಸಭಾಂಗಣದಲ್ಲಿ ಹಾಜರಿದ್ದರು.

ಪ್ರಕರಣದಲ್ಲಿ ಖುಲಾಸೆಯಾದ ಬಳಿಕ ಆರೋಪಿಗಳು ನ್ಯಾಯಾಲಯದ ಹೊರಗೆ ಪರಸ್ಪರ ಆಲಂಗಿಸಿ ಶುಭಾಶಯ ಹಂಚಿಕೊಂಡರು.

ಆರೋಪಿಗಳಲ್ಲಿ ಒಬ್ಬರಾಗಿದ್ದ ಆಟೊಚಾಲಕ ವೇಣುಗೋಪಾಲ್. 'ನನಗೂ ಈ ಪ್ರಕರಣಕ್ಕೂ ಸಂಬಂಧವೇ ಇರಲಿಲ್ಲ. ನಾನು ಏನು ಘಟನೆ ಸಂಭವಿಸಿದೆ ಎಂದು ನೋಡಲು ಹೋಗಿದ್ದೆ. ಅದಕ್ಕಾಗಿ ಕೆಲಸ ಬಿಟ್ಟು 12 ವರ್ಷ ನ್ಯಾಯಾಲಯಕ್ಕೆ ಅಲೆಯಬೇಕಾಯಿತು' ಎಂದರು.

ಕೃತ್ಯದ ಬಗ್ಗೆ ವರದಿ ಮಾಡಲು ತೆರಳಿದ್ದ ಸುದ್ದಿ ವಾಹಿನಿಯೊಂದರ ವರದಿಗಾರ ನವೀನ್ ಸೂರಿಂಜೆ ಅವರನ್ನೂ ಪೊಲೀಸರು ಬಂಧಿಸಿದ್ದರು. ಬಳಿಕ ಸರ್ಕಾರ ಅವರ ಮೇಲಿನ ಮೊಕದ್ದಮೆಯನ್ನ ಹಿಂಪಡೆದಿತ್ತು.

ಘಟನೆಯ ಮುಖ್ಯಾಂಶಗಳು

- 2012 ಜುಲೈ 28: 43 ಮಂದಿ ಪಡೀಲ್ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇಗೆ ದಾಳಿ ನಡೆಸಿ, ಐವರು ಯುವತಿಯರು ಸಹಿತ 14 ಮಂದಿ ಮೇಲೆ ಹಲ್ಲೆ
- ಈ ಪ್ರಕರಣದ ವಿಚಾರಣೆ ಆರಂಭವಾಗುವ ಮುನ್ನ ಪ್ರಕರಣದಲ್ಲಿ ಭಾಗಿಯಾಗಿದ್ದ ಒಬ್ಬ ಬಾಲಕನನ್ನು ಬಾಲನ್ಯಾಯ ಮಂಡಳಿಗೆ ಹಸ್ತಾಂತರಿಸಲಾಗಿತ್ತು
- 2012ರ ಸೆ. 22 ರಂದು 42 ಆರೋಪಿಗಳ ವಿರುದ್ಧ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಕೆಯಾಗಿತ್ತು
- 42 ಆರೋಪಿಗಳಿಗೆ ವರ್ಷದವರೆಗೆ ಜಾಮೀನು ಸಿಕ್ಕಿರಲಿಲ್ಲ
- 42 ಆರೋಪಿಗಳಲ್ಲಿ ನಿತಿನ್ ಪೂಜಾರಿ (22), ಪ್ರಕಾಶ್ (33) ಹಾಗೂ ಮಹೇಶ್ ವಿಚಾರಣೆ ಪೂರ್ಣಗೊಳ್ಳುವ ಮುನ್ನವೇ ಮೃತಪಟ್ಟಿದ್ದಾರೆ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ
ನಿರ್ದೇಶಕರ ಕಛೇರಿ, ಕರ್ನಾಟಕ ರಾಜ್ಯ ಪತ್ರಾಗಾರ,
ವಿಕಾಸಸೌಧ, ಬೆಂಗಳೂರು.

ಟೆಂಡರ್ ಪ್ರಕಟಣೆ ಸಂ: KSAD/2024-25/SE0003 ದಿನಾಂಕ: 06.08.2024

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ 2024–25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಲ್ಲಿರುವ ಐತಿಹಾಸಿಕ ಮಹತ್ವವುಳ್ಳ ದಾಖಲೆಗಳನ್ನು ಸ್ಕ್ಯಾನಿಂಗ್, ಇಂಡೆಕ್ಸಿಂಗ್ ಹಾಗೂ (COM) ಕಾರ್ಯ ಮಾಡಬೇಕಾಗಿದ್ದು, ಈ ಬಗ್ಗೆ ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಸಂಸ್ಥೆಗಳಿಂದ ಇ–ಟೆಂಡರನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

1.	ಟೆಂಡರ್ ಪ್ರಾರಂಭ ದಿನಾಂಕ	06.08.2024, 12.30 p.m.
2.	ಪ್ರೀಬಿಡ್ ಮೀಟಿಂಗ್ ದಿನಾಂಕ	13.08.2024, 12.30 p.m.
3.	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	20.08.2024, 05.30 p.m.
4.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	22.08.2024, 12.30 p.m.
5.	ಆರ್ಥಿಕ ಬಿಡ್ ತೆರೆಯುವ ದಿನಾಂಕ	23.08.2024, 03.00 p.m.

ಟೆಂಡರ್‌ನಲ್ಲಿ ಭಾಗವಹಿಸಲಿಚ್ಛಿಸುವ ಟೆಂಡರ್‌ದಾರರು, ಅರ್ಹತೆ ಮತ್ತು ಷರತ್ತುಗಳ ವಿವರ ಇತ್ಯಾದಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ Help desk ನ್ನು ದೂರವಾಣಿ ಸಂಖ್ಯೆ: +91–8046010000, +91–8068948777 ರ ಮೂಲಕ ಸಂಪರ್ಕಿಸಬಹುದು.

ಸಹಿ/–
ನಿರ್ದೇಶಕರು

ವಾಸಾಸಂಇ/ವಾ.ಪ್ರ/ಎಂಎಎ/2024–25

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002.
ದೂರವಾಣಿ: 080–22213530/22214379 ಫ್ಯಾಕ್ಸ್: 080–22214379
ಇ–ಮೇಲ್: kanbhavblr@gmail.com

ಸಂಖ್ಯೆ: ಡಿಕೆಸಿ/48/113/2024–25 ದಿನಾಂಕ: 06.08.2024

ಟೆಂಡರ್ ಆಹ್ವಾನಿಸುವ ಸೂಚನೆ

ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ/ಯೋಜನೆಗಳನ್ನು ಸಾಹಿತಿ/ಕಲಾವಿದರಿಗೆ ತಲುಪಿಸುವ ದೂರದೃಷ್ಟಿಯ ಪ್ರತೀಕವಾಗಿ ರೂಪಿಸಿರುವ ಕಲಾವಿದರ ದತ್ತಾಂಶ ಯೋಜನೆಯಡಿ 2024–25ನೇ ಸಾಲಿನಲ್ಲಿ ಅಂದಾಜು 30000 ಕಲಾವಿದರಿಗೆ ಗುರುತಿನ ಚೀಟಿ ವಿತರಿಸಲಾಗುತ್ತದೆ. ಈ ಸಂಬಂಧ ಉತ್ತಮ ಗುಣಮಟ್ಟದ ಗ್ರಾಫಿಕ್ PVC ಗುರುತಿನ ಚೀಟಿಗಳನ್ನು ಮುದ್ರಣ ಮಾಡಿ ಸರಬರಾಜು ಮಾಡಲು ಪ್ರಕಟಣೆ ಹೊರಡಿಸಲಾಗಿದೆ.

ಟೆಂಡರ್ ವೇಳಾ ಪಟ್ಟಿ: 1. ಟೆಂಡರ್ ಮೊತ್ತ: **ರೂ. 30.00 ಲಕ್ಷ**. 2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್/ದಿನಾಂಕ: https://kppp.karnataka.gov.in **ದಿನಾಂಕ: 07.08.2024**. 3) ಇ.ಎಂ.ಡಿ ಮೊತ್ತ: **ರೂ. 50,000/–**. 4) ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ: **17.08.2024 ಸಂಜೆ 4:00 ಗಂಟೆಯವರೆಗೆ**. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **22.08.2024 ಸಂಜೆ 4:00 ಗಂಟೆಯವರೆಗೆ**. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **26.08.2024 ಬೆಳಿಗ್ಗೆ 11:00 ಗಂಟೆಗೆ**.

ಯಾವುದೇ ವಿಚಾರಣೆ ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002. ದೂ: 080–22213530.

ಸಹಿ/–
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವಾಸಾಸಂಇ/ವಾಪ್ರ/1331/ಎಂಎಎ/24–25

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.-21102023-249597
CG-DL-E-21102023-249597
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 4424] नई दिल्ली, शुक्रवार, अक्तूबर 20, 2023 / आश्विन 28, 1945
No. 4424] NEW DELHI, FRIDAY, OCTOBER 20, 2023 / ASVINA 28, 1945

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
ಬಾಣಾವರ–ಹುಳಿಯಾರ್ ಸೆಕ್ಷನ್ (ರಾ.ಹೆ. 234)
ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ವೃತ್ತ, ಪಿ.ಡಬ್ಲ್ಯೂಡಿ. ಆವರಣ, ಬೆಂಗಳೂರು–560001.

ಸಾರ್ವಜನಿಕ ಪ್ರಕಟಣೆ
(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜಿ) ರಂತೆ)

ಎಸ್.ಓ. ನಂ. 4598(ಇ) – ಅಧಿಸೂಚನೆ ಸಂಖ್ಯೆ : ಎಸ್.ಓ. ನಂ. 1945(ಇ) ದಿನಾಂಕ: 27.04.2023ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997 ರ ಸೆಕ್ಷನ್ 3 (ಡಿ) (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು **ಕರ್ನಾಟಕ ರಾಜ್ಯದಲ್ಲಿರುವ ತುಮಕೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವರ–ಹುಳಿಯಾರ್ ಸೆಕ್ಷನ್)** ರವರೆಗೆ ಎರಡು/ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ ಮಾಡುವ ಸಲುವಾಗಿ **ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು** ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಕಾಯ್ದೆಯ ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **"ಪ್ರಜಾವಾಣಿ"** ಮತ್ತು **"ಡೆಕ್ಕನ್ ಹೆರಾಲ್ಡ್"** ದಿನಪತ್ರಿಕೆಗಳಲ್ಲಿ ದಿನಾಂಕ **27.05.2023 ರ** ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) (1) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ. ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3(ಜಿ)(1), 3(ಜಿ)(2), 3(ಜಿ)(3) ಮತ್ತು 3(ಜಿ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮದ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯ	ಭೂಮಾಲೀಕರು/ ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ಚಿಕ್ಕನಾಯಕನಹಳ್ಳಿ ತಾಲ್ಲೂಕು: ದೊಡ್ಡಹುಳ್ಳೇನಹಳ್ಳಿ, ಬೊಮ್ಮೇನಹಳ್ಳಿ, ಹಾಲುಮಲ್ಲೆದೇವರಕಾವಲ್, ಚಿಕ್ಕಯ್ಯಣ್ಣೆಗೆರೆ, ನಡುವನಹಳ್ಳಿ	27.08.2024 ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ	ಪ್ರವಾಸಿ ಮಂದಿರ ಅರಸೀಕೆರೆ.

ವಿಶೇಷ ಸೂಚನೆ: ದಿನಾಂಕ: 15.03.2024ರಲ್ಲಿನ ದಿನಪತ್ರಿಕೆ ಪ್ರಕಟಣೆಯಂತೆ ಅರಸೀಕೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ್ದ 3G ವಿಚಾರಣೆಯನ್ನು ಮೇಲ್ಕಂಡಂತೆ ದಿನಾಂಕ: 27.08.2024ರಂದು ಪ್ರವಾಸಿ ಮಂದಿರ, ಅರಸೀಕೆರೆ ಇಲ್ಲಿ ಮರುನಿಗದಿಪಡಿಸಲಾಗಿದೆ.

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ – 234
ಬಾಣಾವರ–ಹುಳಿಯಾರ್ ಸೆಕ್ಷನ್
ಕೆ.ಆರ್. ವೃತ್ತ, ಪಿ.ಡಬ್ಲ್ಯೂಡಿ. ಆವರಣ, ಬೆಂಗಳೂರು–560001.

ಷೆಡ್ಯೂಲ್

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವರ–ಹುಳಿಯಾರ್ ಸೆಕ್ಷನ್) ರವರೆಗೆ ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ತುಮಕೂರು

ಕ್ರ. ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
ತಾಲ್ಲೂಕು: ಚಿಕ್ಕನಾಯಕನಹಳ್ಳಿ					
ಗ್ರಾಮದ ಹೆಸರು : ದೊಡ್ಡಹುಳ್ಳೇನಹಳ್ಳಿ					
1	52/1	ಖಾಸಗಿ	ಖುಷ್ಕಿ	0.0202	ಆರ್. ರಂಗಸ್ವಾಮಿ ಬಿನ್ ರಂಗಯ್ಯ, ಸಿದ್ದಗಂಗಮ್ಮ ಕೋಂ ದಿವಂಗತ ನಂಜುಂಡಪ್ಪ
ಗ್ರಾಮದ ಹೆಸರು : ಬೊಮ್ಮೇನಹಳ್ಳಿ					
2	48	ಖಾಸಗಿ	ಖುಷ್ಕಿ	0.0075	ಬಿ.ಎಚ್.ಕಾಂತರಾಜು ಬಿನ್ ದೊಡ್ಡಹನುಮಂತಪ್ಪ, ಬಿ.ಟಿ.ಲಿಂಗದೇವರು ಬಿನ್ ದಿವಂಗತ ತಿಮ್ಮಣ್ಣ, ಎನ್.ಪಂಕಜ ಕೋಂ ಲೇಟ್ ಬಿ.ಎನ್.ಲಿಂಗದೇವರು 48/1, 48/2, 48/3
ಗ್ರಾಮದ ಹೆಸರು : ಹಾಲುಮಲ್ಲೆದೇವರಕಾವಲ್					
3	487	ಖಾಸಗಿ	ಖುಷ್ಕಿ	0.0278	ಪುಟ್ಟನಾಯ್ಕ ಬಿನ್ ರಾಮಾನಾಯ್ಕ
ಗ್ರಾಮದ ಹೆಸರು : ಚಿಕ್ಕಯ್ಯಣ್ಣೆಗೆರೆ					
4	77	ಖಾಸಗಿ	ಭಾಗಾಯ್ತು	0.005	ಶಿವರುದ್ರಪ್ಪ ಬಿನ್ ದಿವಂಗತ ಮಲ್ಲಪ್ಪ, ಜಯಣ್ಣ ಬಿನ್ ದಿವಂಗತ ಗುರುಬಸವಯ್ಯ, ಲಿಂಗರಾಜು ಬಿನ್ ದಿವಂಗತ ಗುರುಬಸವಯ್ಯ ಮಂಜಮ್ಮ ಬಿನ್ ದಿವಂಗತ ಗುರುಬಸವಯ್ಯ
5	78	ಖಾಸಗಿ	ಭಾಗಾಯ್ತು	0.0075	ಮಾದನಾಯಕ, ಚಿಕ್ಕಲಿಂಗನಾಯಕ, ಬಸವನಾಯಕ, ಮಲ್ಲೇಶಯ್ಯ ಬಿನ್ ಮೈಲಾರಪ್ಪ 78/1, 78/4
ಗ್ರಾಮದ ಹೆಸರು : ನಡುವನಹಳ್ಳಿ					
6	22	ಖಾಸಗಿ	ಖುಷ್ಕಿ	0.0025	ಬೈರನಾಯಕ ಬಿನ್ ಸಿದ್ದಣ್ಣ, ಹನುಮಂತಯ್ಯ ಬಿನ್ ರಂಗಣ್ಣ, ಲಕ್ಷ್ಮಮ್ಮ ಕೋಂ ಗವಿರಂಗಯ್ಯ, ಅನುಸೂಯಮ್ಮ ಕೋಂ ದಿವಂಗತ ರಾಮಣ್ಣ, ಜಯಶೀಲಾ, ತೊಳಸಮ್ಮ, ಬಸವರಾಜು ಬಿನ್ ಲೇಟ್ ರಾಮಣ್ಣ, ಮರುಳಮ್ಮ ಕೋಂ ಲೇಟ್ ರಾಮಣ್ಣ ಮತ್ತು ಇತರರು. 22/2ಎ, 22/2ಬಿ, 22/3
			ಒಟ್ಟು	0.0705	

[F.No.NH-234-KNT-2017-18-870/3D1]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

ಇಂದೋರ್ ಬಾಲಾಶ್ರಮ ಮತ್ತೊಂದು ಮಗು ಮೃತ

ಇಂದೋರ್ (ಪಿಟಿಐ): ಕಾಲರಾ ರೋಗಕ್ಕೆ ಒಳಗಾಗಿ 10 ಮಕ್ಕಳು ಮೃತಪಟ್ಟ ಕಾರಣ ಸುದ್ದಿಯಲ್ಲಿದ್ದ ಮಧ್ಯಪ್ರದೇಶದ ಇಂದೋರ್‌ನ ಶ್ರೀ ಯುಗಪುರುಷ ಧಾಮ ಬಾಲಾಶ್ರಮದಲ್ಲಿ ಮೂರು ವರ್ಷ ವಯಸ್ಸಿನ ಬಾಲಕಿ ಸೋಮವಾರ ರಾತ್ರಿ ಮೃತಪಟ್ಟಿದ್ದಾಳೆ. ಈ ಮೂಲಕ, ಕಳೆದ ಒಂದೂವರೆ ತಿಂಗಳಲ್ಲಿ ಈ ಆಶ್ರಮದಲ್ಲಿ 11 ಮಕ್ಕಳು ಮೃತಪಟ್ಟಂತಾಗಿದೆ.

'ವಾಂತಿ, ಅತಿಸಾರ, ನಿರ್ಜಲೀಕರಣದಿಂದ ಬಳಲುತ್ತಿದ್ದ ಬಾಲಕಿಯನ್ನು ಆಗಸ್ಟ್ 3ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಗಲೇ ಆಕೆಯ ಆರೋಗ್ಯ ಸ್ಥಿತಿ ತೀರಾ ಹದಗೆಟ್ಟಿತ್ತು. ವೈದ್ಯರ ಪರಿಶ್ರಮದ ಹೊರತಾಗಿಯೂ ಆಕೆ ಬದುಕುಳಿಯಲಿಲ್ಲ ಎಂದು ಇಲ್ಲಿಯ ಚಾಚಾ ನೆಹರೂ ಬಾಲ ಚಿಕಿತ್ಸಾಲಯದ ವೈದ್ಯರು ಹೇಳಿದ್ದಾರೆ.

ಬಾಲಕಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ. ಈಚೆಗಷ್ಟೇ ಪೋಷಕರ ಸುಪರ್ದಿಗೆ ಆಕೆಯನ್ನು ನೀಡಲಾಗಿತ್ತು ಎಂದು ಆಶ್ರಮದ ಆಡಳಿತ ತಿಳಿಸಿದೆ ಎಂದು ವೈದ್ಯರು ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಉದ್ಧವ್ ಠಾಕ್ರೆ ಪರ ವಕೀಲರನ್ನು ತರಾಟೆಗೆ ತೆಗೆದುಕೊಂಡ ಸಿಜೆಐ ಡಿ.ವೈ. ಚಂದ್ರಚೂಡ್

'ನ್ಯಾಯಾಲಯಕ್ಕೆ ಪಾಠ ಹೇಳಬೇಡಿ'

ನವದೆಹಲಿ (ಪಿಟಿಐ): 'ಒಂದು ದಿನ ಇಲ್ಲಿ (ನ್ಯಾಯಪೀಠದಲ್ಲಿ) ಕುಳಿತುಕೊಳ್ಳಿ. ಖಂಡಿತ ಓಡಿ ಹೋಗುತ್ತೀರಿ; ಜೀವನ ಪರ್ಯಂತ ಮತ್ತೆ ಇತ್ತ ಕಣ್ಣು ಹಾಯಿಸುವುದಿಲ್ಲ'– ಶಿವಸೇನೆ ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ ಸಲ್ಲಿಕೆಯಾದ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಲು ಕೋರಿದ ವಕೀಲರನ್ನು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಅವರು ತರಾಟೆ ತೆಗೆದುಕೊಂಡ ರೀತಿ ಇದು.

ಚಂದ್ರಚೂಡ್

ಸಿಜೆಐ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು, ಮಹಾರಾಷ್ಟ್ರದ ರಾಜಕೀಯ ವ್ಯಾಜ್ಯದ ಕುರಿತು ಸಲ್ಲಿಕೆಯಾದ ಎರಡು ಪ್ರತ್ಯೇಕ ಅರ್ಜಿಗಳನ್ನು ವಿಚಾರಣೆ ನಡೆಸಲು ದಿನಾಂಕ ನಿಗದಿ ಮಾಡಿದೆ.

ಈ ಮಧ್ಯೆ ಉದ್ಧವ್ ಠಾಕ್ರೆ ಬಣದ ಪರ ವಕೀಲರು, 'ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದೆ. ಹೀಗಾಗಿ ಅರ್ಜಿಯ ವಿಚಾರಣೆಯನ್ನು ತುರ್ತಾಗಿ ನಡೆಸಬೇಕು' ಎಂದು ನ್ಯಾಯಾಲಯವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಿಟ್ಟಾದ ಸಿಜೆಐ, 'ನ್ಯಾಯಾಲಯಕ್ಕೆ ಪಾಠ ಮಾಡಲು ಬರಬೇಡಿ' ಎಂದು ತೀಕ್ಷ್ಣವಾಗಿ ಹೇಳಿದರು.

'ಒಂದೇ ಒಂದು ದಿನ ನೀವೇಕೆ ಇಲ್ಲಿ (ನ್ಯಾಯಪೀಠ) ಕುಳಿತು, ನೀವು ಬಯಸಿದ ದಿನಾಂಕವನ್ನು ಕೋರ್ಟ್ ಮಾಸ್ಟರ್‌ಗೆ ತಿಳಿಸಬಾರದು. ಆಗ ಅತಿಯಾಯಿತು ಎಂದು ನಿಮಗೇ ಅನಿಸುತ್ತದೆ. ಕೋರ್ಟ್‌ಗಳ ಮೇಲಿರುವ ಒತ್ತಡವೂ ಅರಿವಿಗೆ ಬರುತ್ತದೆ... ದಯವಿಟ್ಟು ಇಲ್ಲಿ ಒಂದು ದಿನ ಕುಳಿತುಕೊಳ್ಳಿ. ಜೀವನಪರ್ಯಂತ ಮತ್ತೆ ನೀವು ಇತ್ತ ಬರುವುದಿಲ್ಲ' ಎಂದು ಹೇಳಿದರು.

ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಬಣವೇ 'ನಿಜವಾದ ಶಿವಸೇನೆ ಪಕ್ಷ' ಎಂದು ಮಹಾರಾಷ್ಟ್ರ ವಿಧಾನಸಭಾ ಸ್ಪೀಕರ್ ರಾಹುಲ್ ನಾರ್ವೇಕರ್ 2022ರಲ್ಲಿ ನೀಡಿದ್ದ ಆದೇಶವನ್ನು ಉದ್ಧವ್ ಠಾಕ್ರೆ ನೇತೃತ್ವದ ಬಣವು ಪ್ರಶ್ನಿಸಿದೆ.

ಇನ್ನೊಂದೆಡೆ, ಉಪಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣವೇ 'ನಿಜವಾದ ಎನ್‌ಸಿಪಿ' ಎಂದು ನಾರ್ವೇಕರ್ ನೀಡಿದ್ದ ಆದೇಶವನ್ನು ಶರದ್ ಪವಾರ್ ನೇತೃತ್ವದ ಬಣ ಪ್ರಶ್ನಿಸಿದೆ. ಇದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈಚೆಗೆ ಅಜಿತ್ ಮತ್ತು 40 ಶಾಸಕರಿಗೆ ನೋಟಿಸ್ ಜಾರಿ ಮಾಡಿದೆ. ಪ್ರತಿಕ್ರಿಯೆ ಸಲ್ಲಿಸಲು 10 ದಿನ ಕಾಲಾವಕಾಶ ನೀಡಿದೆ.

ಭೀಮ್‌ಸೇನಾ ಮುಖಂಡನ ಬಂಧನ

ಬೆತುಲ್, (ಮಧ್ಯಪ್ರದೇಶ) (ಪಿಟಿಐ): ಒಳ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಿಂದ ಆಕ್ರೋಶಗೊಂಡು ಸಾಮಾಜಿಕ ಜಾಲತಾಣದಲ್ಲಿ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್‌ಗೆ ಜೀವ ಬೆದರಿಕೆ ಒಡ್ಡಿದ್ದ ಆರೋಪದ ಮೇಲೆ ಮಧ್ಯಪ್ರದೇಶದ ಭೀಮ್‌ಸೇನಾ ಸಂಘಟನೆಯ ಉಸ್ತುವಾರಿ ಪಂಕಜ್ ಅತುಲ್‌ಕರ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

34 ವರ್ಷದ ಪಂಕಜ್‌ನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಜೈಲಿಗೆ ಕಳುಹಿಸಲಾಯಿತು ಎಂದು ಗಂಜ್ ಪೊಲೀಸ್ ಠಾಣಾಧಿಕಾರಿ ರವಿಕಾಂತ್ ದಹೇರಿಯಾ ತಿಳಿಸಿದರು.

ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ, ಮಾಹಿತಿ ಮತ್ತು ತಂತ್ರಜ್ಞಾನ ಕಾಯ್ದೆ ಅಡಿಯಲ್ಲಿ ಸೋಮವಾರ ಪ್ರಕರಣ ದಾಖಲಿಸಲಾಗಿತ್ತು.

ಸಿಸೋಡಿಯಾಗೆ ಜಾಮೀನು: ಆದೇಶ ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಎಎಪಿ ನಾಯಕ ಮನೀಷ್ ಸಿಸೋಡಿಯಾ ಸಲ್ಲಿಸಿರುವ ಜಾಮೀನು ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಕಾಯ್ದಿರಿಸಿದೆ. ಇದೆ ವೇಳೆ ಈ ಪ್ರಕರಣದ ತನಿಖೆಯನ್ನು 'ಯಾವಾಗ ಕೊನೆಗೊಳಿಸುತ್ತೀರಿ' ಎಂದು ನ್ಯಾಯಾಲಯವು ಸಿಬಿಐ ಹಾಗೂ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಪ್ರಶ್ನಿಸಿದೆ.

'ಈ ಪ್ರಕರಣದಲ್ಲಿ 493 ಸಾಕ್ಷಿಗಳಿವೆ. ಇದರಲ್ಲಿ ನೀವು ಶೇ 50ರಷ್ಟು ಸಾಕ್ಷಿಗಳನ್ನು ಕೈಬಿಟ್ಟರೂ ಇನ್ನೂ ಸುಮಾರು 250 ಸಾಕ್ಷಿಗಳು ಉಳಿಯಲಿವೆ. ಇಷ್ಟೆಲ್ಲಾ ಸಾಕ್ಷಿಗಳ ವಿಚಾರಣೆ ನಡೆಸುವುದು ವಾಸ್ತವದಲ್ಲಿ ಸಾಧ್ಯವಿದೆಯೇ? ನೀವು ಇದನ್ನೆಲ್ಲಾ ಯಾವಾಗ ಅಂತ್ಯಗೊಳಿಸುತ್ತೀರಿ ಎಂದು ನಿಮಗೆ ಅನ್ನಿಸುತ್ತದೆ ಎಂದು ಹೇಳಿ' ಎಂದು ನ್ಯಾಯಮೂರ್ತಿಗಾಳದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರು ಹೆಚ್ಚುವರಿಗೆ ಸಾಲಿಸಿಟರ್ ಜನರಲ್ ಸಿ.ವಿ.ರಾಜು ಅವರನ್ನು ಪ್ರಶ್ನಿಸಿದರು.

'ಸಿಬಿಐ ಹಾಗೂ ಇ.ಡಿ. ದಾಖಲಿಸಿರುವ ಪ್ರಕರಣಗಳಲ್ಲಿ ಕ್ರಮವಾಗಿ ಎಂಟು ಪ್ರಮುಖ ಸಾಕ್ಷಿಗಳಿವೆ' ಎಂದು ರಾಜು ಪೀಠಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ಯಾವಾಗ ವಿಚಾರಣೆ ಆರಂಭಿಸುತ್ತೀರಿ' ಎಂದು ಪ್ರಶ್ನಿಸಿತು. 'ಒಂದು ತಿಂಗಳಲ್ಲಿ ಆರೋಪಪಟ್ಟಿ ಸಲ್ಲಿಸಲಿದ್ದೇವೆ. ಆ ಬಳಿಕ ಸಾಕ್ಷಿಗಳ ವಿಚಾರಣೆ ನಡೆಸಲಿದ್ದೇವೆ' ಎಂದು ರಾಜು ಉತ್ತರಿಸಿದರು.

ಸುದ್ದಿ 2 ನಿಮಿಷ

ಮಾವಿನಹಣ್ಣಿಗಾಗಿ ವ್ಯಕ್ತಿ ಕೊಲೆ ಶಿಕ್ಷೆ ತಗ್ಗಿಸಿದ 'ಸುಪ್ರೀಂ'

ನವದೆಹಲಿ: ಮಾವಿನಹಣ್ಣಿಗಾಗಿ 40 ವರ್ಷದ ಹಿಂದೆ ನಡೆದಿದ್ದ ಜಗಳದಲ್ಲಿ ವ್ಯಕ್ತಿಯೊಬ್ಬರ ಸಾವಿಗೆ ಸಂಬಂಧಿಸಿ ಮೂವರ ವಿರುದ್ಧ ದಾಖಲಿಸಲಾಗಿದ್ದ ಕೊಲೆ ಪ್ರಕರಣವನ್ನು 'ಕೊಲೆ ಉದ್ದೇಶವಿಲ್ಲದ ಹಲ್ಲೆ ಪ್ರಕರಣ'ವಾಗಿ ಪರಿವರ್ತಿಸಿ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಅಲ್ಲದೆ, ಈ ಪ್ರಕರಣದಲ್ಲಿ ಮನ್ ಬಹದ್ದೂರ್ ಸಿಂಗ್, ಭರತ್ ಸಿಂಗ್, ಭಾನುಪ್ರತಾಪ್ ಸಿಂಗ್ ಅವರಿಗೆ ವಿಧಿಸಲಾಗಿದ್ದ ಜೀವಾವಧಿ ಸಜೆ ಬದಲಿಗೆ, ಏಳು ವರ್ಷಗಳ ಸೆರೆವಾಸ ಮತ್ತು ತಲಾ ₹25 ಸಾವಿರ ದಂಡ ವಿಧಿಸಿ ಸುಪ್ರೀಂ ಕೋರ್ಟ್ ಪೀಠವು ಮಂಗಳವಾರ ಆದೇಶಿಸಿತು.

ದಂಡದ ಒಟ್ಟು ಮೊತ್ತವನ್ನು ಮೃತನ ಕುಟುಂಬದವರಿಗೆ ನೀಡಬೇಕು ಎಂದು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹಸಾನುದ್ದೀನ್ ಅಮಾನ್‌ಉಲ್ಲಾ ಅವರಿದ್ದ ಪೀಠ ಆದೇಶಿಸಿತು.

ಏಪ್ರಿಲ್ 19, 1984ರಂದು ಎರಡು ಕುಟುಂಬಗಳಿಗೆ ಸೇರಿದ್ದ ನಾಲ್ವರು ಬಾಲಕರ ನಡುವೆ ಜಗಳವಾಗಿತ್ತು. ಜಗಳದಲ್ಲಿ ಭಾಗಿಯಾಗಿದ್ದ ಬಾಲಕ ಡಬ್ಬುವಿನ ತಂದೆ ವಿಶ್ವನಾಥ್ ಸಿಂಗ್ ಮೇಲೆ ಹಲ್ಲೆ ನಡೆದಿತ್ತು.

ಐವರು ಆರೋಪಿಗಳು ಲಾಠಿಯಿಂದ ಹಲ್ಲೆ ನಡೆಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ದಾಖಲಿಸಲಾಗಿತ್ತು. ಅಲಹಾಬಾದ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ವಿಚಾರಣೆಯಲ್ಲಿ ಇರುವಾಗಲೇ ಇಬ್ಬರು ಆರೋಪಿಗಳು ಮೃತಪಟ್ಟಿದ್ದರು.

'ಸಾಕ್ಷಿಗಳ ಹೇಳಿಕೆ ಗಮನಿಸಿದರೆ, ಈ ಕೊಲೆಯು ಪೂರ್ವನಿಯೋಜಿತವಲ್ಲ. ಮಾವಿನ ಹಣ್ಣಿಗಾಗಿ ಮಕ್ಕಳ ನಡುವೆ ಜಗಳ ಆರಂಭವಾಗಿದೆ. ನಂತರ ಜಗಳದಲ್ಲಿ ಹಿರಿಯರೂ ಸೇರಿದ್ದಾರೆ. ಅಂತಿಮವಾಗಿ ವಯಸ್ಕರೊಬ್ಬರ ಸಾವಿನಲ್ಲಿ ಜಗಳ ಅಂತ್ಯವಾಗಿದೆ' ಎಂದು ಹೇಳಿತು.

ಕೇಂದ್ರ ಸರ್ಕಾರದ ತೆರಿಗೆ ನೀತಿಗೆ ವಿರೋಧ ಪಕ್ಷಗಳ ಆಕ್ರೋಶ; ಪ್ರತಿಭಟನೆ

ಜೀವ ವಿಮೆಗೆ ಜಿಎಸ್‌ಟಿ: 'ಇಂಡಿಯಾ' ಕಿಡಿ

ನವದೆಹಲಿ (ಪಿಟಿಐ): ಆರೋಗ್ಯ ಮತ್ತು ಜೀವ ವಿಮಾ ಕಂತಿನ ಮೇಲೆ ವಿಧಿಸಲಾಗಿರುವ 18 ಶೇಕಡಾ ಜಿಎಸ್‌ಟಿಯನ್ನು ಹಿಂಪಡೆಯುಂತೆ ಆಗ್ರಹಿಸಿ 'ಇಂಡಿಯಾ' ಒಕ್ಕೂಟದ ಪಕ್ಷಗಳು ಸಂಸತ್ತಿನ ಆವರಣಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದವು.

ಸಂಸತ್ತಿನ ಮಕರ ದ್ವಾರದ ಮುಂದೆ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ (ಟಿಎಂಸಿ), ಅಮ್ ಆದ್ಮಿ(ಎಎಪಿ) ಮತ್ತು ಎನ್‌ಸಿಪಿ (ಶರದ್ ಪವಾರ್ ಬಣ) ಸೇರಿ ಹಲವು ಪಕ್ಷಗಳ ಸಂಸದರು, 'ತೆರಿಗೆ ಭಯೋತ್ಪಾದನೆ' ಎಂಬ ಫಲಕಗಳನ್ನು ಹಿಡಿದು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಬಳಿಕ 'ಎಕ್ಸ್'ನಲ್ಲಿ ಆಕ್ರೋಶ ವ್ಯಕ್ತಪಡಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಮೋದಿ ಸರ್ಕಾರದ ತೆರಿಗೆ ನೀತಿಯಿಂದಾಗಿ ಜನರು ಈಗಾಗಲೇ ಪರಿತಪಿಸುತ್ತಿದ್ದಾರೆ. ಈ ತೆರಿಗೆ ನೀತಿಯು ವಿಪತ್ತಿನ ಸಂದರ್ಭದಲ್ಲಿ ಲಾಭ ಮಾಡಿಕೊಳ್ಳುವ ಬಿಜೆಪಿಯ ತುಚ್ಛ ನೀತಿಗೆ ಒಂದು ಉದಾಹರಣೆಯಾಗಿದೆ' ಎಂದು ಟೀಕಿಸಿದರು.

> ಎಲ್ಲ ದುರಂತಗಳಲ್ಲಿಯೂ ತೆರಿಗೆ ಸಂಗ್ರಹಿಸುವ ಅವಕಾಶವನ್ನು ಹುಡುಕುವ ನಡೆಯು, ಬಿಜೆಪಿಯ ಸಂವೇದನಾರಹಿತ ಚಿಂತನೆಗೆ ಸಾಕ್ಷಿಯಾಗಿದೆ
>
> **ರಾಹುಲ್ ಗಾಂಧಿ**
> ಲೋಕಸಭೆಯ ವಿರೋಧ ಪಕ್ಷದ ನಾಯಕ

'ಆರೋಗ್ಯ ವಿಮಾ ಕಂತನ್ನು ಪಾವತಿಸುವ ಜನಸಾಮಾನ್ಯರಿಂದ ಮೋದಿ ಸರ್ಕಾರ ₹24 ಸಾವಿರ ಕೋಟಿ ಸಂಗ್ರಹಿಸುತ್ತಿದೆ. ಆರೋಗ್ಯ ಮತ್ತು ಜೀವ ವಿಮಾ ವಲಯವನ್ನು ಜಿಎಸ್‌ಟಿಯಿಂದ ಹೊರಗಿಡಬೇಕು' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆಗ್ರಹಿಸಿದರು.

'ಸೇನೆಯಲ್ಲಿ ಉದ್ಯೋಗ: ಸರ್ಕಾರದಿಂದ ಗುಟ್ಟು'

ನವದೆಹಲಿ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸೇನೆಯಲ್ಲಿ ಇರುವ ಉದ್ಯೋಗಾವಕಾಶಗಳ ಕುರಿತ ಮುಖ್ಯವಾದ ದತ್ತಾಂಶವನ್ನು ಗುಟ್ಟಾಗಿಡುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಆರೋಪಿಸಿದ್ದಾರೆ.

ಸೇನೆಯ ಉದ್ಯೋಗಾವಕಾಶದ ಮಾಹಿತಿ ನೀಡಿದರೆ, ಅಗ್ನಿಪಥ್ ನೇಮಕಾತಿ ಯೋಜನೆಯ ಕುರಿತು ಮತ್ತಷ್ಟು ಪ್ರಶ್ನೆಗಳು ಉದ್ಭವಿಸಲು ಕಾರಣವಾಗಬಹುದು ಎನ್ನುವ ಭಯ ಸರ್ಕಾರಕ್ಕೆ ಇರಬಹುದು ಎಂದೂ ಹೇಳಿದ್ದಾರೆ.

ಸೇನೆಯಲ್ಲಿ ಅಧಿಕಾರಿಗಳು, ಯೋಧರು, ವೈದ್ಯಕೀಯ ಸಿಬ್ಬಂದಿಯ ಕೊರತೆ ಇರುವುದು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ರಾಜ್ಯಸಭೆಯಲ್ಲಿ ಪ್ರಶ್ನೆ ಕೇಳಲಾಗಿತ್ತು. ಈ ಪ್ರಶ್ನೆಗೆ ಪೂರಕವಾಗಿ ಖರ್ಗೆ ಅವರು 'ಎಕ್ಸ್'ನಲ್ಲಿ ಈ ರೀತಿ ಪೋಸ್ಟ್ ಮಾಡಿದ್ದಾರೆ.

ರಕ್ಷಣಾ ಖಾತೆಯ ರಾಜ್ಯ ಸಚಿವ ಸಂಜಯ್ ಸೇಠ್ ರಾಜ್ಯಸಭೆಯಲ್ಲಿ ಕೇಳಲಾದ ಪ್ರಶ್ನೆಗೆ ಲಿಖಿತ ಉತ್ತರ ನೀಡಿ, 'ಕೇಳಿರುವ ಮಾಹಿತಿಯು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ಕಾರ್ಯತಂತ್ರ ಕುರಿತದ್ದಾಗಿದೆ. ಈ ಮಾಹಿತಿಯನ್ನು ಜನರಿಗೆ ಲಭ್ಯವಾಗುವಂತೆ ಮಾಡಲು ಸಾಧ್ಯವಿಲ್ಲ' ಎಂದಿದ್ದಾರೆ.

ಸಮೀರ್ ಕುಲಕರ್ಣಿ ಅರ್ಜಿ ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ: ಮಾಲೆಗಾಂವ್ ಸ್ಫೋಟ (2008) ಪ್ರಕರಣದ ಆರೋಪಿ ಸಮೀರ್ ಕುಲಕರ್ಣಿ ಅವರ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ತಮ್ಮ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ ಎನ್‌ಐಎ ಕಾನೂನು ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರವು ಅನುಮತಿ ನೀಡಿಲ್ಲ ಎಂದು ಕುಲಕರ್ಣಿ ಕೋರ್ಟ್ ಮೆಟ್ಟಿಲೇರಿದ್ದರು.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಅರವಿಂದ್ ಕುಮಾರ್ ಅವರಿದ್ದ ನ್ಯಾಯಪೀಠವು, 'ಅರ್ಜಿಯನ್ನು ವಜಾಗೊಳಿಸಿರುವ ಬಾಂಬೆ ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ಕುಲಕರ್ಣಿ ಅವರ ಪರ ವಕೀಲರಿಗೆ ತಿಳಿಸಿತು.

ನಾಸಿಕ್ ಜಿಲ್ಲೆಯ ಮಾಲೆಗಾಂವ್ ಪಟ್ಟಣದಲ್ಲಿ ಅವಳಿ ಸ್ಫೋಟ ಸಂಭವಿಸಿ ಆರು ಮಂದಿ ಮೃತಪಟ್ಟು, ನೂರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

32ನೇ ವರ್ಷದ ಚಿರಸ್ಮರಣೆ



ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸದಾಸ್ಮರಿಸುವ.

ಪತ್ನಿ: ಕಮಲಮ್ಮ, ಮಕ್ಕಳು, ಮೊಮ್ಮಕ್ಕಳು

ಪಿ.ಎಲ್.ಕುಮಾರಸ್ವಾಮಿ
ನಿವೃತ್ತ ಜಿಲ್ಲಾ ನ್ಯಾಯಾಧೀಶರು

19ನೇ ವರ್ಷದ ಚಿರಸ್ಮರಣೆ



ಎನ್. ತಿಮ್ಮರಾಜು
(ಮಾ. ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರು ಶಾಂತಿನಗರ)
ನಿಧನ: 07-08-2005
ಸದಾ ನಿಮ್ಮ ನೆನಪಿನಲ್ಲಿರುವ..
ಪತ್ನಿ–ಶ್ರೀಮತಿ ಮಂಜುಳ ತಿಮ್ಮರಾಜು
ಮಕ್ಕಳು ಹಾಗೂ ಕುಟುಂಬವರ್ಗದವರು.

ಛತ್ತೀಸಗಢ: ಶರಣಾದ ನಕ್ಸಲರು

ಸುಕ್ಮಾ, ಛತ್ತೀಸಗಢ (ಪಿಟಿಐ): ಮಹಿಳೆ ಸೇರಿದಂತೆ ಇಬ್ಬರು ನಕ್ಸಲರು ಮಂಗಳವಾರ ರಾಜ್ಯದ ಸುಕ್ಮಾ ಜಿಲ್ಲೆಯಲ್ಲಿ ಶರಣಾಗಿದ್ದಾರೆ.

ನಕ್ಸಲರ ವಿಸ್ತಾರ್ ಪಡೆಯಲ್ಲಿ ಸಕ್ರಿಯವಾಗಿದ್ದ ಮಹಿಳೆ ಸೋಮ್ಡಿ ಮದ್ಕಂ (24), ಮದ್ಕಾ ಸೋನಾ (36) ಶರಣಾದವರು. ಇಬ್ಬರಿಗೂ ತಲಾ ₹25 ಸಾವಿರ ನೆರವು ನೀಡಲಿದ್ದು, ಪುನರ್ವಸತಿ ಕಲ್ಪಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ರಾಜಸ್ಥಾನ: ಭಾರಿ ಮಳೆ ವಿವಿಧೆಡೆ ಪ್ರವಾಹ

ಜೈಪುರ: ರಾಜಸ್ಥಾನದ ಜೈಸಲ್ಮೇರ್, ಪಾಲಿ, ಜೋಧ್‌ಪುರ ಜಿಲ್ಲೆಗಳಲ್ಲಿ ಮಂಗಳವಾರವೂ ಮಳೆಯ ಅರ್ಭಟ ಮುಂದುವರಿದಿದ್ದು, ಕೆಲವಡೆಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮಳೆ ಹೆಚ್ಚಾದ ಪ್ರದೇಶಗಳಲ್ಲಿ ವಿಪತ್ತು ನಿರ್ವಹಣಾ ಪಡೆಯು ಟ್ಯಾಂಕರ್, ಪಂಪ್ ಸೇರಿದಂತೆ ಅಗತ್ಯ ಸಲಕರಣೆಗಳೊಂದಿಗೆ ಜನರಿಗೆ ನೆರವಾಗುತ್ತಿದೆ ಎಂದು ತಿಳಿಸಿದರು.

ಜೈಸಲ್ಮೇರ್ ಜಿಲ್ಲೆಯ ಮೋಹನ್‌ಗಡ, ಭಣಿಯಾಣಾದಲ್ಲಿ ಮಂಗಳವಾರ ಒಂದೇ ದಿನ 20 ಸೆಂ.ಮೀ. ಮಳೆಯಾಗಿದೆ. ಪಾಲಿ ಜಿಲ್ಲೆಯಲ್ಲಿ 25 ಸೆಂ.ಮೀ, ಜೋಧ್‌ಪುರ ಜಿಲ್ಲೆಯಲ್ಲಿ 24.6 ಸೆಂ.ಮೀ. ಮಳೆ ದಾಖಲಾಗಿದೆ ಎಂದು ತಿಳಿಸಿದರು.

ಜೈಸಲ್ಮೇರ್ ಜಿಲ್ಲಾಧಿಕಾರಿ ಪ್ರತಾಪ್‌ಸಿಂಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಧೀರ್ ಚೌಧರಿ ಅವರು ಪ್ರವಾಹಪೀಡಿತ ಸ್ಥಳಗಳಿಗೆ ಭೇಟಿ ನೀಡಿ, ಸಂಕಷ್ಟದಲ್ಲಿರುವ ಜನರಿಗೆ ಅಗತ್ಯ ನೆರವು ಒದಗಿಸಲು ಕ್ರಮ ಕೈಗೊಂಡರು.

ರಾಜಸ್ಥಾನದ ಪಶ್ಚಿಮ ಭಾಗದಲ್ಲಿ ಬುಧವಾರವೂ ಭಾರಿ ಪ್ರಮಾಣದಲ್ಲಿ ಮಳೆಯಾಗಲಿದೆ ಎಂದು ಇಲ್ಲಿನ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಮಳೆಯಿಂದ ಜೋಧ್‌ಪುರ ಮಾರ್ಗವಾಗಿ ಸಂಚರಿಸುವ ಎರಡು ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ ಎಂದು ವಾಯವ್ಯ ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರವಾಹ ಬರ್ಧಮಾನ್‌ನಲ್ಲಿ ಭಾರಿ ಮಳೆ ಸುರಿದು ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿರುವ ಕಾರಣ, ಜನರು ತಮ್ಮ ವಸ್ತುಗಳೊಂದಿಗೆ ಸುರಕ್ಷಿತ ಸ್ಥಳಗಳತ್ತ ತೆರಳಿದರು ಪಿಟಿಐ ಚಿತ್ರ

ಅಕ್ರಮ ವಲಸಿಗರೇ ಮಣಿಪುರಕ್ಕೆ ದೊಡ್ಡ ಸಮಸ್ಯೆ: ಸಿ.ಎಂ

ಇಂಫಾಲ್ (ಪಿಟಿಐ): 'ಅಕ್ರಮ ವಲಸಿಗರೇ ಮಣಿಪುರದ ಮೂಲ ನಿವಾಸಿಗಳಿಗೆ ದೊಡ್ಡ ಸಮಸ್ಯೆಯಾಗಿದ್ದು, 1961ರ ನಂತರ ರಾಜ್ಯಕ್ಕೆ ಅಕ್ರಮವಾಗಿ ಪ್ರವೇಶಿಸಿರುವವರನ್ನು ಕೇಂದ್ರ ಸರ್ಕಾರದ ನೆರವಿನಿಂದ ಹೊರಗೆ ಹಾಕಲಾಗುವುದು' ಎಂದು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್‌ಸಿಂಗ್ ತಿಳಿಸಿದರು.

ಬಿರೇನ್‌ಸಿಂಗ್

ವಿಧಾನಸಭೆಯಲ್ಲಿ ನಾಗಾ ಪೀಪಲ್ಸ್ ಫ್ರಂಟ್‌ನ ಶಾಸಕ ಲೆಯಿಶಿಯೊ ಕೈಶಿಂಗ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದ ಪರಿಸ್ಥಿತಿ ಆತಂಕಕಾರಿಯಾಗಿದ್ದು, ಅಕ್ರಮ ವಲಸಿಗರನ್ನು ಹೊರಹಾಕುವ ವಿಚಾರದಲ್ಲಿ ಏಕತೆ ಪ್ರದರ್ಶಿಸುವ ಅಗತ್ಯವಿದೆ' ಎಂದು ಈ ವೇಳೆ ಪ್ರತಿಪಾದಿಸಿದರು.

'ನಿಜಕ್ಕೂ ಇದೊಂದು ಆತಂಕಕಾರಿ ಸ್ಥಿತಿ. ಅಕ್ರಮ ವಲಸಿಗರಿಂದ ಭೌಗೋಳಿಕ ಬದಲಾವಣೆಗೆ ಕಾರಣವಾಗಿದೆ. ಕೆಲವರು ಇದನ್ನು ನಂಬದೇ ಇರಬಹುದು. ಈ ವಿಚಾರದಲ್ಲಿ ಏಕತೆ ಪ್ರದರ್ಶಿಸದಿದ್ದರೆ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ' ಎಂದು ತಿಳಿಸಿದರು.

'ರಾಜ್ಯವು ನೆರೆಯ ರಾಷ್ಟ್ರ ಮ್ಯಾನ್ಮಾರ್‌ನೊಂದಿಗೆ ಕಾವಲುರಹಿತ 398 ಕಿ.ಮೀ. ಅಂತರರಾಷ್ಟ್ರೀಯ ಗಡಿ ಹಂಚಿಕೊಂಡಿದ್ದು, ಅಕ್ರಮ ವಲಸಿಗರನ್ನು ಪತ್ತೆ ಹಚ್ಚುವುದು ಕೂಡ ಸವಾಲಾಗಿದೆ' ಎಂದರು.

ಅಕ್ರಮ ವಲಸಿಗರೇ ಹೊಸ ಗ್ರಾಮಗಳನ್ನು ನಿರ್ಮಿಸಿಕೊಂಡಿದ್ದು, ಮ್ಯಾನ್ಮಾರ್ ಮೂಲದ ಪೀಪಲ್ಸ್ ಡಿಫೆನ್ಸ್ ಫೋರ್ಸ್‌ನ ಜೊತೆಗೆ ಸ್ಥಳೀಯರ ಸಂಘರ್ಷದಿಂದ ಇಲ್ಲಿಗೆ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ಅಕ್ರಮ ವಲಸಿಗರಿಗೆ ಆಶ್ರಯ ನೀಡಿದರೆ, ಅಂತಹವರನ್ನು ಕಠಿಣವಾಗಿ ಶಿಕ್ಷಿಸಲಾಗುವುದು' ಎಂದು ಬಿರೇನ್ ಸಿಂಗ್ ಎಚ್ಚರಿಸಿದರು.

ಎಸ್‌ಬಿಐಗೆ ₹50 ಲಕ್ಷ ವಂಚಿಸಿದ್ದ ಆರೋಪಿ ವಿ.ಚಲಪತಿ

20 ವರ್ಷದ ನಂತರ ಬಂಧನ

ಹೈದರಾಬಾದ್ (ಪಿಟಿಐ): 20 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಬ್ಯಾಂಕ್ ವಂಚನೆ ಆರೋಪಿ ವಿ. ಚಲಪತಿ ರಾವ್ ಎಂಬುವರನ್ನು ತಮಿಳುನಾಡಿನ ತಿರುನಲ್ವೇಲಿಯ ನರಸಿಂಗನಲ್ಲೂರು ಗ್ರಾಮದಲ್ಲಿ ಆಗಸ್ಟ್ 4ರಂದು ಸಿಬಿಐ ಬಂಧಿಸಿದೆ.

ಈತ ಮೃತಪಟ್ಟಿರುವುದಾಗಿ ನ್ಯಾಯಾಲಯವೊಂದು ಕೆಲ ವರ್ಷಗಳ ಹಿಂದೆ ಘೋಷಿಸಿತ್ತು. ಬಂಧನದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆತ ತನ್ನ ಗುರುತನ್ನು ಆಗಾಗ ಬದಲಾಯಿಸಿಕೊಳ್ಳುತ್ತಿದ್ದ ಎಂದು ಸಿಬಿಐ ಪ್ರಕಟಣೆಯೊಂದರಲ್ಲಿ ತಿಳಿಸಿದೆ.

ಎಸ್‌ಬಿಐನ ಹೈದರಾಬಾದ್‌ನ ಚಂದೂಲಾಲ್ ಬಿರಾದಾರಿ ಶಾಖೆಯಲ್ಲಿ ಚಲಪತಿ ಕಂಪ್ಯೂಟರ್ ಆಪರೇಟರ್ ವೃತ್ತಿಯಲ್ಲಿದ್ದನು. ಬ್ಯಾಂಕ್‌ಗೆ ₹50 ಲಕ್ಷ ವಂಚನೆ ಎಸಗಿರುವ ಆರೋಪದ ಮೇಲೆ ಆತನ ವಿರುದ್ಧ ಸಿಬಿಐ 2002ರ ಮೇನಲ್ಲಿ ಪ್ರಕರಣ ದಾಖಲಿಸಿಕೊಂಡಿತ್ತು. 2004ರ ಡಿಸೆಂಬರ್ 31ರಂದು ಎರಡು ಆರೋಪಪಟ್ಟಿಗಳನ್ನು ಸಲ್ಲಿಸಿತ್ತು. 2004ರಿಂದಲೂ ಆರೋಪಿ ನಾಪತ್ತೆಯಾಗಿದ್ದಾನೆ.

ಆರೋಪಿಯು ಮೃತಪಟ್ಟಿದ್ದಾನೆ ಎಂದು ಅವರ ಪತ್ನಿ (ಪ್ರಕರಣದ ಸಹ ಆರೋಪಿ) ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಏಳು ವರ್ಷ ಆತನ ಸುಳಿವು ಪತ್ತೆಯಾಗದ ಕಾರಣ ಆತ ಮೃತಪಟ್ಟಿರುವುದಾಗಿ ನ್ಯಾಯಾಲಯ ಘೋಷಿಸಿತು.

ಗುರುತು ಬದಲಾವಣೆ: ಪದೇ ಪದೇ ತನ್ನ ಗುರುತು ಮತ್ತು ವಿಳಾಸ ಬದಲಿಸುತ್ತಿದ್ದ ಚಲಪತಿ ಮೊದಲಿಗೆ ಹೈದರಾಬಾದ್‌ನಿಂದ ಸೇಲಂಗೆ ಪರಾರಿಯಾಗಿದ್ದ. ತನ್ನ ಹೆಸರನ್ನು ಎಂ. ವಿನೀತ್ ಕುಮಾರ್ ಎಂದು ಬದಲಿಸಿಕೊಂಡು, 2007ರಲ್ಲಿ ಮತ್ತೊಂದು ಮದುವೆಯಾಗಿದ್ದ.

ಇದ್ದಕ್ಕಿದ್ದ ಹಾಗೆ 2014ರಲ್ಲಿ ಸೇಲಂ ತೊರೆದಿದ್ದ ಆತ ಬಳಿಕ ಮಧ್ಯಪ್ರದೇಶದ ಭೋಪಾಲ್, ಉತ್ತರಾಖಂಡದ ರುದ್ರಪುರದಲ್ಲಿ ನೆಲೆಸಿದ್ದನು. ಆ ಬಳಿಕ ಔರಂಗಾಬಾದ್ ಆಶ್ರಮವೊಂದರಲ್ಲಿ ಕೆಲಕಾಲ ನೆಲೆಸಿದ್ದ ಆತ, ಆಶ್ರಮಕ್ಕೆ ₹70 ಲಕ್ಷ ವಂಚನೆ ಮಾಡಿರುವ ಆರೋಪವನ್ನೂ ಹೊತ್ತಿದ್ದಾನೆ. ಅಲ್ಲಿ ತನ್ನನ್ನು ತಾನು ದೇವಮಾನವ ಎಂದು ಅವನು ಕರೆದುಕೊಂಡಿದ್ದ ಎಂದು ಸಿಬಿಐ ಹೇಳಿದೆ.

ಆ ನಂತರ ರಾಜಸ್ಥಾನ ಮತ್ತು ತಿರುನೆಲ್ವೇಲಿಯಲ್ಲಿ ನೆಲೆಸಿದ್ದ. ಈ ಅವಧಿಯಲ್ಲಿ ಆತ 10 ಬಾರಿ ಮೊಬೈಲ್ ಸಂಖ್ಯೆ ಬದಲಿಸಿದ್ದಾನೆ. ಹಲವು ಬಾರಿ ಆಧಾರ್ ಕಾರ್ಡ್ ಬದಲಿಸಿದ್ದಾನೆ ಎಂದು ತಿಳಿಸಿದೆ.

ಕೇರಳ: ಪದ್ಮಶ್ರೀ ಪುರಸ್ಕೃತ ಸುಂದರ್ ಮೆನನ್ ಬಂಧನ

ತ್ರಿಶ್ಶೂರ್ (ಕೇರಳ) (ಪಿಟಿಐ): ಹಣಕಾಸು ವಂಚನೆ ಆರೋಪದಡಿ ಕೇರಳದ ಉದ್ಯಮಿ, ಪದ್ಮಶ್ರೀ ಪುರಸ್ಕೃತ ಸುಂದರ್.ಸಿ.ಮೆನನ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಮೆನನ್ ಅವರನ್ನು ಭಾನುವಾರ ಬಂಧಿಸಿ, ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಬಳಿಕ ಜಿಲ್ಲಾ ಕಾರಾಗೃಹದಲ್ಲಿ ಇರಿಸಲಾಗಿದೆ' ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

'ಎರಡು ಕಂಪನಿಗಳ ಹೆಸರಿನಲ್ಲಿ 62 ಜನರಿಂದ ಠೇವಣಿ ಸ್ವೀಕರಿಸಿ, ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿ ಮೆನನ್ ಅವರ ಮೇಲೆ ಪಶ್ಚಿಮ ಪೊಲೀಸ್ ಠಾಣೆಯಲ್ಲಿ 18 ಪ್ರಕರಣಗಳು ದಾಖಲಾಗಿದ್ದವು. ಬಳಿಕ ಪ್ರಕರಣವನ್ನು ಅಪರಾಧ ವಿಭಾಗಕ್ಕೆ ವರ್ಗಾಯಿಸಲಾಯಿತು' ಎಂದು ಮಾಹಿತಿ ನೀಡಿದ್ದಾರೆ.

'ಮೆನನ್ ಅವರು ಜನರಿಂದ ಒಟ್ಟು ₹7.78 ಕೋಟಿ ಹಣ ಪಡೆದುಕೊಂಡಿದ್ದಾರೆ. ಆದರೆ ಯೋಜನೆಯ ಅವಧಿ ಮುಗಿದ ಬಳಿಕ ಹಣವನ್ನು ಮರುಪಾವತಿಸಿಲ್ಲ ಎಂಬ ಆರೋಪ ಕೇಳಿಬಂದಿದೆ. ರಿಸರ್ವ್ ಬ್ಯಾಂಕ್ ನಿಯಮಗಳನ್ನು ಉಲ್ಲಂಘಿಸಿರುವ ಮತ್ತು ಜನರಿಗೆ ವಂಚಿಸಿರುವ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ತ್ರಿಶ್ಶೂರ್ ಜಾತ್ರೆತ ಆಯೋಜಕ ಸಂಸ್ಥೆಗಳಲ್ಲಿ ಒಂದಾದ ತಿರುವಂಬಾಡಿ ದೇವಸಂನ ಅಧ್ಯಕ್ಷರಾಗಿರುವ ಮೆನನ್ ಅವರಿಗೆ 2016ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಲಾಗಿತ್ತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ. ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

TO FIND SUITABLE job for you in any sectors likeSchools/ Colleges, Engineering, Manufacturing, Hospitals. IT, Finance,Administration, Marketing, Media etc.Registeryour resume for free at www.checkmatejobs.com

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

13.09.2024 21.10.2024 06.11.2024 ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 23.09.2024 17.10.2024 ಭೂತಾನ್ 8 ದಿನಗಳು. 23.09.2024 07.10.2024 30.10.2024 ಅಸ್ಸಾಂ,ಮೇಘಾಲಯ 9 ದಿನಗಳು. 26.09.2024 17.10.2024 ಮಧ್ಯಪ್ರದೇಶ 10 ದಿನಗಳು. 17.10.2024 24.11.2024 ಶ್ರೀಲಂಕಾ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10 ದೇಶಗಳು ವಿಮಾನದರ ವೀಸಾ ಪ್ರವೇಶದರ ಊಟ,ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿನಿಂದ ಬೆಂಗಳೂರಿನ ತನಕ ಎಲ್ಲಾ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9880079644 9900080793 9900093613

12 ದಿನಗಳು ಚಾರ್‌ಧಾಮ್ ಯಾತ್ರಾ. 14 ದಿನಗಳು ಅಷ್ಟ ಜ್ಯೋತಿರ್ಲಿಂಗ. 7 ದಿನಗಳು ವೈಷ್ಣೋದೇವಿ. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಬೆಂಗಳೂರು. 9448294477.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ವಕ್ಫ್ ಕಾಯ್ದೆಗೆ ತಿದ್ದುಪಡಿ ಪ್ರಸ್ತಾವ; ಸ್ವಾಗತ

ನವದೆಹಲಿ (ಪಿಟಿಐ): ವಕ್ಫ್ ಮಂಡಳಿಗಳನ್ನು ನಿಯಂತ್ರಿಸುವ ಕಾನೂನಿಗೆ ತಿದ್ದುಪಡಿ ತರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಅಖಿಲ ಭಾರತ ಸೂಫಿ ಸಜ್ಜಾದನಶಿನ್ ಕೌನ್ಸಿಲ್ (ಎಐಎಸ್‌ಎಸ್‌ಸಿ) ಮಂಗಳವಾರ ಸ್ವಾಗತಿಸಿದ್ದು, ಇದು ದೀರ್ಘ ಕಾಲದಿಂದ ಬಾಕಿ ಉಳಿದಿದೆ ಎಂದು ಹೇಳಿದೆ.

ವಕ್ಫ್ ಮಂಡಳಿಯ ಕಾರ್ಯದಲ್ಲಿ ಹೆಚ್ಚು ಪಾರದರ್ಶಕತೆ ಮತ್ತು ಹೊಣೆಗಾರಿಕೆ ತರಲು ಹಾಗೂ ಮಂಡಳಿಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಕಡ್ಡಾಯ ಮಾಡಲು ಕೇಂದ್ರ ಸರ್ಕಾರವು 1995ರ ಕಾಯ್ದೆಗೆ ತಿದ್ದುಪಡಿ ತರಲು ಸಜ್ಜಾಗಿದೆ ಎಂದು ಮೂಲಗಳು ತಿಳಿಸಿವೆ.

ಅಖಿಲ ಭಾರತ ಸೂಫಿ ಸಜ್ಜಾದನಶಿನ್ ಕೌನ್ಸಿಲ್ ಅಧ್ಯಕ್ಷ ಹಜ್ರತ್ ಸೈಯದ್ ನಾಸಿರುದ್ದೀನ್ ಚಿಸ್ತಿ ಅವರು ತಿದ್ದುಪಡಿಗಳಡಿ ಪ್ರತ್ಯೇಕ ದರ್ಗಾ ಮಂಡಳಿ ರಚಿಸುವಂತೆ ಆಗ್ರಹಿಸಿದರು.

'ಪ್ರಸ್ತುತ ವಕ್ಫ್ ಕಾಯ್ದೆಯಲ್ಲಿ ದರ್ಗಾಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ನಮ್ಮ ಅನೇಕ ಸಂಪ್ರದಾಯಗಳು ಷರಿಯಾದಲ್ಲಿ ಇಲ್ಲದಿರುವುದರಿಂದ ವಕ್ಫ್ ಮಂಡಳಿಗಳು ದರ್ಗಾದ ಸಂಪ್ರದಾಯಗಳನ್ನು ಗುರುತಿಸುವುದಿಲ್ಲ. ಆದ್ದರಿಂದ ನಾವು ಪ್ರತ್ಯೇಕ ದರ್ಗಾ ಮಂಡಳಿಗಾಗಿ ಒತ್ತಾಯಿಸುತ್ತೇವೆ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ವಿದ್ಯುತ್ ಉತ್ಪಾದಿಸುವ ಶೂ ಆವಿಷ್ಕಾರ

ಇಂದೋರ್ (ಪಿಟಿಐ): ಇಂದೋರ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು (ಐಐಟಿ) ದೇಶದ ಸೈನಿಕರಿಗಾಗಿ ತಂತ್ರಜ್ಞಾನ ಆಧಾರಿತ ವಿಶೇಷ ಶೂಗಳನ್ನು ಅಭಿವೃದ್ಧಿಪಡಿಸಿದೆ. ಈ ಶೂಗಳಿಂದ ವಿದ್ಯುತ್ ಉತ್ಪಾದನೆ ಆಗಲಿದೆ ಮತ್ತು ಅವುಗಳನ್ನು ಧರಿಸಿರುವವರ ನಿಖರ ಲೊಕೇಶನ್ ಪತ್ತೆ ಮಾಡಬಹುದಾಗಿದೆ. ಈ ಆವಿಷ್ಕಾರವು ಸೇನಾಪಡೆಯ ಸುರಕ್ಷತೆ ಮತ್ತು ದಕ್ಷತೆಗೆ ಮತ್ತಷ್ಟು ಬಲ ತುಂಬಲಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದರು.

ಐಐಟಿಯು ಇಂಥ 10 ಜೊತೆ ಶೂಗಳನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ ಈಗಾಗಲೇ ಕಳುಹಿಸಿದೆ ಎಂದು ಹೇಳಿದರು.

'ಪ್ರೊ.ಐ.ಎ. ಪಳನಿ ಅವರ ಮಾರ್ಗದರ್ಶನದಿಂದ ಈ ಶೂಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅವುಗಳಲ್ಲಿ ಟ್ರೈಬೊ-ಎಲೆಕ್ಟ್ರಿಕ್ ನ್ಯಾನೊಜನರೇಟರ್ ಅಳವಡಿಸಿದ್ದು, ಅದರಿಂದ ಪ್ರತಿ ಸಲ ಹೆಜ್ಜೆ ಇಟ್ಟಾಗಲೂ ವಿದ್ಯುತ್ ಉತ್ಪಾದನೆಯಾಗುತ್ತದೆ. ಶೂಗಳಲ್ಲಿ ಅಳವಡಿಸಿರುವ ಸಾಧನವೊಂದರಲ್ಲಿ ವಿದ್ಯುತ್ ಸಂಗ್ರಹವಾಗುತ್ತದೆ' ಎಂದು ಅಧಿಕಾರಿಗಳು ತಿಳಿಸಿದರು.

ಷೇರುಪೇಟೆ ವಹಿವಾಟು 166



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,055
ಇಂದಿನ ಅಂತ್ಯ	23,992
	63
ದಿನದ ಕನಿಷ್ಠ	23,960

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕೆ.ಜಿ)	₹292-457
ದ್ವಿತಳಿ (ಕೆ.ಜಿ)	₹259-605

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹68
ಮೈಸೂರು	
100ಕ್ಕೆ	₹470

ಖಾದ್ಯ ತೈಲ ಮುಂಬೈ (10 ಕೆಜಿ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1560)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹912 (915)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9300-9625
ಬೆಂಗಳೂರು	₹10000-12000
ತಿಪಟೂರು	₹9300-9500
ತುರುವೇಕೆರೆ	₹8000-9500

2023–24ರಲ್ಲಿ ವಾಣಿಜ್ಯ ಬ್ಯಾಂಕ್‌ಗಳಿಗೆ ₹3.41 ಲಕ್ಷ ಕೋಟಿ ನಿವ್ವಳ ಲಾಭ

₹9.90 ಲಕ್ಷ ಕೋಟಿ ಸಾಲ ರೈಟ್‌ಆಫ್

ನವದೆಹಲಿ (ಪಿಟಿಐ): 2019–20ರಿಂದ 2023–24ರ ವರೆಗೆ ಬ್ಯಾಂಕ್‌ಗಳು ₹9.90 ಲಕ್ಷ ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿವೆ ಎಂದು ಕೇಂದ್ರ ಸರ್ಕಾರವು, ಸಂಸತ್ತಿಗೆ ತಿಳಿಸಿದೆ.

'2022–23ರಲ್ಲಿ ₹2.08 ಲಕ್ಷ ಕೋಟಿ ಹಾಗೂ 2023–24ರಲ್ಲಿ ₹1.70 ಲಕ್ಷ ಕೋಟಿ ಸಾಲವನ್ನು ರೈಟ್‌ಆಫ್ (ವಸೂಲಿ ಪ್ರಕ್ರಿಯೆ ಬಹುತೇಕ ಸ್ಥಗಿತಗೊಂಡಿರುವುದು) ಮಾಡಲಾಗಿದೆ' ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು, ಮಂಗಳವಾರ ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2019–20ರಲ್ಲಿ ₹2.34 ಲಕ್ಷ ಕೋಟಿ, 2020–21ರಲ್ಲಿ ₹2.02 ಲಕ್ಷ ಕೋಟಿ ಹಾಗೂ 2021–22ರಲ್ಲಿ ₹1.74 ಲಕ್ಷ ಕೋಟಿ ಸಾಲವು ರೈಟ್‌ಆಫ್ ಆಗಿದೆ ಎಂದು ವಿವರಿಸಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿ ಮತ್ತು ಬ್ಯಾಂಕ್‌ಗಳ ಆಡಳಿತ ಮಂಡಳಿಯ ನೀತಿ ಅನ್ವಯ, ಸತತವಾಗಿ ನಾಲ್ಕು ವರ್ಷ ಸುಸ್ತಿದಾರರು ಸಾಲದ ಬಗ್ಗೆ ಪ್ರತಿಕ್ರಿಯೆ ನೀಡದಿದ್ದರೆ ಆ ಸಾಲದ ಮೊತ್ತವನ್ನು ಬ್ಯಾಂಕ್‌ಗಳು ವಸೂಲಾಗದ ಸಾಲದ (ಎನ್‌ಪಿಎ) ಪಟ್ಟಿಗೆ ಸೇರಿಸುತ್ತವೆ. ಸಾಲಗಳನ್ನು ಬ್ಯಾಲೆನ್ಸ್‌ಶೀಟ್‌ನಿಂದ ಹೊರಗಿಡುತ್ತವೆ ಎಂದು ತಿಳಿಸಿದ್ದಾರೆ.

'ಬ್ಯಾಂಕ್‌ಗಳು ತಮ್ಮ ಲೆಕ್ಕಪತ್ರ ಸರಿಪಡಿಸಿಕೊಳ್ಳಲು ಒತ್ತು ನೀಡುತ್ತವೆ. ತೆರಿಗೆ ಪ್ರಯೋಜನ ಪಡೆಯುವ ಜೊತೆಗೆ ಪರಿಣಾಮಕಾರಿಯಾಗಿ ಬಂಡವಾಳ ಬಳಸಿಕೊಳ್ಳಲು ಮುಂದಾಗುತ್ತವೆ. ಹಾಗಾಗಿ, ಆರ್‌ಬಿಐ ಮಾರ್ಗಸೂಚಿ ಮತ್ತು ಆಡಳಿತ ಮಂಡಳಿಗಳ ನೀತಿಗಳಿಗೆ ಅನುಗುಣವಾಗಿ ವಸೂಲಾಗದ ಸಾಲವನ್ನು ರೈಟ್‌ಆಫ್ ಮಾಡುತ್ತವೆ' ಎಂದು ವಿವರಿಸಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ರೈಟ್‌ಆಫ್ ಮಾಡಲಾದ ಸಾಲದ ಪೈಕಿ ₹1.84 ಲಕ್ಷ ಕೋಟಿ (ಶೇ 18ರಷ್ಟು) ಸಾಲವನ್ನಷ್ಟೇ ವಸೂಲು ಮಾಡಲು ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ.

ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳ ವಸೂಲಾಗದ ಸಾಲ



ನಗದು ರಕ್ಷಣೆ ಅನುಪಾತ ಎಷ್ಟು?

ಬ್ಯಾಂಕ್‌ಗಳು ನಗದು ಕೊರತೆ ಸಮಸ್ಯೆಯಿಂದ ಪಾರಾಗುವ ಬಗ್ಗೆ ಆರ್‌ಬಿಐ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸುವ ಬ್ಯಾಂಕ್‌ಗಳ ನಗದು ರಕ್ಷಣೆ ಅನುಪಾತ (ಎಲ್‌ಸಿಆರ್) ಶೇ 100ರಷ್ಟು ಇರಬೇಕಿದೆ. ಭಾರತೀಯ ಬ್ಯಾಂಕ್‌ಗಳ ಎಲ್‌ಸಿಆರ್ ಪ್ರಮಾಣವು ಶೇ 130ಕ್ಕಿಂತಲೂ ಹೆಚ್ಚಿದೆ ಎಂದು ಸಚಿವ ಪಂಕಜ್ ಚೌಧರಿ ತಿಳಿಸಿದ್ದಾರೆ.

2017–18ರಲ್ಲಿ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳು ₹32,437 ಕೋಟಿ ನಷ್ಟ ಅನುಭವಿಸಿದ್ದವು. ಆದರೆ, 2023–24ರಲ್ಲಿ ₹3.41 ಲಕ್ಷ ಕೋಟಿ ನಿವ್ವಳ ಲಾಭ ಗಳಿಸಿವೆ ಎಂದು ವಿವರಿಸಿದ್ದಾರೆ.

2018ರ ಮಾರ್ಚ್ ಅಂತ್ಯಕ್ಕೆ ವಾಣಿಜ್ಯ ಬ್ಯಾಂಕ್‌ಗಳ ಬಂಡವಾಳ ಪರ್ಯಾಪ್ತತಾ ಅನುಪಾತವು (ಸಿಆರ್‌ಎಆರ್) ಶೇ 13.85ರಷ್ಟಿತ್ತು. ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ಶೇ 16.84ರಷ್ಟಕ್ಕೆ ಏರಿಕೆಯಾಗಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ನಕಲಿ ನೋಟುಗಳ ಹಾವಳಿ ಇಳಿಕೆಯಾಗಿದೆ. 2023–24ರಲ್ಲಿ 2.22 ಲಕ್ಷ ನಕಲಿ ನೋಟುಗಳು ಪತ್ತೆಯಾಗಿವೆ ಎಂದು ತಿಳಿಸಿದ್ದಾರೆ.

ಮತ್ತೆ ಕುಸಿದ ಸೂಚ್ಯಂಕಗಳು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು, ವಹಿವಾಟಿನ ಅಂತ್ಯಕ್ಕೆ ಇಳಿಕೆ ಕಂಡಿವೆ.

ಬ್ಯಾಂಕಿಂಗ್ ಮತ್ತು ಟೆಲಿಕಾಂ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು.

ಸತತ ಮೂರು ವಹಿವಾಟು ದಿನಗಳಿಂದ ಹೂಡಿಕೆದಾರರ ಸಂಪತ್ತು ₹22 ಲಕ್ಷ ಕೋಟಿ ಕರಗಿದೆ.

ಸೆನ್ಸೆಕ್ಸ್ 166 ಅಂಶ ಇಳಿಕೆಯಾಗಿ, 78,593ಕ್ಕೆ ಅಂತ್ಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,092 ಅಂಶ ಏರಿಕೆ ಆಗಿತ್ತು. ನಿಫ್ಟಿ 63 ಅಂಶ ಕಡಿಮೆಯಾಗಿ, 23,992ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 327 ಅಂಶ ಏರಿಕೆ ಕಂಡಿತ್ತು.

ಎಸ್‌ಬಿಐ, ಮಹೀಂದ್ರ ಆ್ಯಂಡ್ ಮಹೀಂದ್ರ, ಭಾರ್ತಿ ಏರ್‌ಟೆಲ್, ಟೈಟನ್, ಎಚ್‌ಡಿಎಫ್‌ಸಿ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ರೂಪಾಯಿ ಮೌಲ್ಯ 17 ಪೈಸೆ ಏರಿಕೆ

ನವದೆಹಲಿ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 17 ಪೈಸೆ ಏರಿಕೆಯಾಗಿದೆ. ವಹಿವಾಟಿನ ಅಂತ್ಯಕ್ಕೆ ₹83.92ಕ್ಕೆ ತಲುಪಿದೆ.

ಗುರುವಾರ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯ ನಿರ್ಧಾರ ಪ್ರಕಟವಾಗಲಿದೆ. ಇದರಿಂದ ರೂಪಾಯಿ ಮೌಲ್ಯವು ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಮೆರಿಕದಲ್ಲಿ ಆರ್ಥಿಕ ಹಿಂಜರಿತದ ಭೀತಿ ಮತ್ತು ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಸೋಮವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತ ಕಂಡಿದ್ದವು. ಡಾಲರ್ ಎದುರು ರೂಪಾಯಿ ಮೌಲ್ಯ 37 ಪೈಸೆ ಕುಸಿದಿತ್ತು.

ಸರ್ಕಾರ ವಿಫಲ: 'ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ರೂಪಾಯಿ ಮೌಲ್ಯವು ಶೇ 30ರಷ್ಟು ಕುಸಿದಿದೆ. ಸೋಮವಾರದಂದು ಸಾರ್ವಕಾಲಿಕ ಕನಿಷ್ಠಕ್ಕೆ ತಲುಪಿತ್ತು. ಇದು ಕೇಂದ್ರ ಸರ್ಕಾರದ ಆರ್ಥಿಕ ಪ್ರಮಾದ ಮತ್ತು ನಿರ್ವಹಣೆಯಲ್ಲಿನ ವೈಫಲ್ಯವನ್ನು ಸೂಚಿಸುತ್ತದೆ' ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ಸಮಿತಿ ಮುಖ್ಯಸ್ಥ ಪವನ್ ಖೇರಾ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಚಿನ್ನದ ಧಾರಣೆ ₹1,100, ಬೆಳ್ಳಿ ₹2,200 ಇಳಿಕೆ

ನವದೆಹಲಿ/ಬೆಂಗಳೂರು (ಪಿಟಿಐ): ದೆಹಲಿಯ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ ₹1,100 ಇಳಿಕೆಯಾಗಿ, ₹71,700ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹2,200 ಕಡಿಮೆಯಾಗಿ, ₹82 ಸಾವಿರ ಆಗಿದೆ.

ಕಳೆದ ನಾಲ್ಕು ದಿನಗಳ ವಹಿವಾಟಿನಲ್ಲಿ ಬೆಳ್ಳಿ ದರ ಕೆ.ಜಿಗೆ ₹4,200 ಕಡಿಮೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ಹೇಳಿದೆ.

ಆಭರಣ ತಯಾರಕರು, ಚಿಲ್ಲರೆ ಖರೀದಿದಾರರಿಂದ ಬೇಡಿಕೆ ಕಡಿಮೆಯಾಗಿದ್ದರಿಂದ ಚಿನ್ನದ ದರ ಇಳಿಕೆಯಾಗಿದೆ ಎಂದು ವ್ಯಾಪಾರಿಗಳು ಹೇಳಿದ್ದಾರೆ. ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹71,480 ಮತ್ತು ಕೆ.ಜಿ ಬೆಳ್ಳಿ ಧಾರಣೆಯು ₹82,100 ಇದೆ.

ಪ್ರತಿಕ್ರಿಯೆ ಸಲ್ಲಿಕೆಗೆ ಕಾಲಾವಕಾಶ ಕೇಳಿದ ಇನ್ಫೊಸಿಸ್

ತೆರಿಗೆ ರಿಯಾಯಿತಿಗೆ ನಕಾರ?

ನವದೆಹಲಿ (ರಾಯಿಟರ್ಸ್): ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) ವಂಚನೆಗೆ ಸಂಬಂಧಿಸಿದಂತೆ ದೇಶದ ಎರಡನೇ ಅತಿದೊಡ್ಡ ಐ.ಟಿ ಕಂಪನಿ ಇನ್ಫೊಸಿಸ್‌ಗೆ ಕೇಂದ್ರ ಸರ್ಕಾರವು ತೆರಿಗೆ ರಿಯಾಯಿತಿ ಸೌಲಭ್ಯ ನೀಡುವ ಸಾಧ್ಯತೆ ತೀರಾ ಕಡಿಮೆಯಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ತನ್ನ ಸಾಗರೋತ್ತರ ಶಾಖೆಗಳ ಸೇವೆಗೆ ಸಂಬಂಧಿಸಿದಂತೆ ಇನ್ಫೊಸಿಸ್ ಕಂಪನಿಯು ₹32,403 ಕೋಟಿ ಜಿಎಸ್‌ಟಿ ವಂಚನೆ ಎಸಗಿದ ಆರೋಪ ಹೊತ್ತಿದೆ. ಈ ಸಂಬಂಧ ಕರ್ನಾಟಕದ ಜಿಎಸ್‌ಟಿ ವಿಭಾಗದಿಂದ ಕಂಪನಿಗೆ ನೋಟಿಸ್ ನೀಡಲಾಗಿತ್ತು. ಸದ್ಯ ಈ ಪ್ರಕರಣವನ್ನು ಕೇಂದ್ರ ಮಟ್ಟದ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯಕ್ಕೆ (ಡಿಜಿಜಿಐ) ವರ್ಗಾಯಿಸಲಾಗಿದೆ.

ಈ ಕುರಿತು ಇನ್ಫೊಸಿಸ್‌ನ ಪ್ರತಿನಿಧಿಗಳು ಡಿಜಿಜಿಐ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಿದ್ದು, ಪ್ರತಿಕ್ರಿಯೆ ನೀಡಲು 10 ದಿನಗಳ ಕಾಲಾವಕಾಶ ಕೋರಿದ್ದಾರೆ ಎಂದು ಮೂಲಗಳು ಹೇಳಿವೆ.

ಜಿಎಸ್‌ಟಿ ವಂಚನೆಯ ವರದಿ ಬಹಿರಂಗಗೊಳ್ಳುವುದಕ್ಕೂ ಮೊದಲು ಇನ್ಫೊಸಿಸ್ ಷೇರಿನ ಮೌಲ್ಯದಲ್ಲಿ ಶೇ 1.6ರಷ್ಟು ಏರಿಕೆಯಾಗಿತ್ತು. ಸುದ್ದಿ ಹೊರಬಿದ್ದ ಬೆನ್ನಲ್ಲೇ ಶೇ 0.3ರಷ್ಟು ಕುಸಿಯಿತು. ಒಟ್ಟಾರೆ ಶೇ 1.2ರಷ್ಟು ಕುಸಿತ ಕಂಡಿದೆ.

2017ರ ಜುಲೈನಿಂದ 2021–22ರ ವರೆಗೆ ಇನ್ಫೊಸಿಸ್ ಇಷ್ಟು ಮೊತ್ತದ ವಂಚನೆ ಎಸಗಿರುವ ಆರೋಪವಿದೆ. ಈ ಮೊತ್ತವು 2024-25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ಗಳಿಸಿರುವ ವರಮಾನದ ಶೇ 85ರಷ್ಟಿದೆ. 2017-18ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ₹3,898 ಕೋಟಿ ತೆರಿಗೆ ಪಾವತಿಸಲು ನೋಟಿಸ್ ಸ್ವೀಕರಿಸಲಾಗಿತ್ತು. ಈ ಮೊತ್ತವನ್ನು ಪಾವತಿಸಲಾಗಿದೆ ಎಂದು ಆಗಸ್ಟ್ 3ರಂದು ಇನ್ಫೊಸಿಸ್, ಷೇರುಪೇಟೆಗೆ ಮಾಹಿತಿ ನೀಡಿದೆ.

ಜಿಎಸ್‌ಟಿ ಬಾಕಿ: ವಿದೇಶಿ ಏರ್‌ಲೈನ್‌ಗಳಿಗೆ ನೋಟಿಸ್

ನವದೆಹಲಿ (ಪಿಟಿಐ): ಭಾರತದಲ್ಲಿ ಕಾರ್ಯಾಚರಣೆ ನಡೆಸುವ ಹತ್ತು ಅಂತರರಾಷ್ಟ್ರೀಯ ವಿಮಾನಯಾನ ಕಂಪನಿಗಳಿಗೆ ₹10 ಸಾವಿರ ಕೋಟಿ ಜಿಎಸ್‌ಟಿ ಬಾಕಿಗೆ ಸಂಬಂಧಿಸಿದಂತೆ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶ-ನಾಲಯವು (ಡಿಜಿಜಿಐ) ಷೋಕಾಸ್ ನೋಟಿಸ್ ನೀಡಿದೆ.

'ಇಲಾಖೆ ನೀಡಿರುವ ಈ ನೋಟಿಸ್ ಭಾರತದ ವಿಮಾನಯಾನ ವಲಯದ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ, ಈ ಸಮಸ್ಯೆ ಬಗೆಹರಿಸಲು ಕೇಂದ್ರ ಸರ್ಕಾರವು ಕ್ರಮವಹಿಸಬೇಕಿದೆ' ಎಂದು ಅಂತರ ರಾಷ್ಟ್ರೀಯ ವಾಯು ಸಾರಿಗೆ ಸಂಘ (ಟಿಎಟಿಎ) ಒತ್ತಾಯಿಸಿದೆ.

ಭಾರತೀಯ ವಿಮಾನಯಾನ ಕಂಪನಿಗಳು ಸೇರಿದಂತೆ ಜಗತ್ತಿನ 330ಕ್ಕೂ ಹೆಚ್ಚು ಕಂಪನಿಗಳು ಈ ಸಂಘದಡಿ ಕಾರ್ಯ ನಿರ್ವಹಿಸುತ್ತವೆ.

'ವಿದೇಶದಲ್ಲಿ ಕೇಂದ್ರ ಕಚೇರಿ ಹೊಂದಿರುವ ಕಂಪನಿಗಳು ಭಾರತದಲ್ಲಿ ತನ್ನ ಶಾಖೆಗಳನ್ನು ತೆರೆದಿವೆ. ಈ ಶಾಖೆಗಳು ಕೇಂದ್ರ ಕಚೇರಿಯಿಂದ ಪಡೆದ ಆಮದು ಸೇವೆಗೆ ಜಿಎಸ್‌ಟಿ ಅನ್ವಯವಾಗಲಿದೆ' ಎಂದು ಡಿಜಿಜಿಐ ಹೇಳಿದೆ.

ವಿನಿಮಯ ದರ

$ ಡಾಲರ್	83.92
£ ಪೌಂಡ್	106.74
€ ಯುರೊ	91.65
¥ ಯೆನ್ (100ಕ್ಕೆ)	59

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸೀತಾರಾಮ ಕೆ.ಎಸ್., ಊರು ತಿಳಿಸಿಲ್ಲ.

- **ಪ್ರಶ್ನೆ: ನಾನು ಹಿರಿಯ ನಾಗರಿಕ (ವಯಸ್ಸು 87). ನಮಗೆ ಯಾವ ಬಗೆಯ ತೆರಿಗೆ ರಿಯಾಯಿತಿಗಳು ಲಭ್ಯವಿವೆ ಎನ್ನುವ ಮಾಹಿತಿ ನೀಡಿ. ನನ್ನಲ್ಲಿ ಬ್ಯಾಂಕ್ ಎಫ್.ಡಿ ಹಾಗೂ ಉಳಿತಾಯ ಖಾತೆ ಬಡ್ಡಿ ಆದಾಯ ಬರುತ್ತಿದೆ. ಇದಲ್ಲದೆ, ವೈದ್ಯಕೀಯ ವೆಚ್ಚ ಕೂಡ ಇದೆ. ಈ ರಿಯಾಯಿತಿಗಳಲ್ಲದೆ ಇನ್ನೂ ಇತರೆ ವಿಶೇಷ ರಿಯಾಯಿತಿ ಸೌಲಭ್ಯವು ನಮಗೆ ಸಿಗುವುದಿದ್ದರೆ ತಿಳಿಸಿ.**

ಉತ್ತರ: ನೀವು ಅತಿ ಹಿರಿಯ ನಾಗರಿಕರಾಗಿದ್ದೀರಿ. ಇದರಿಂದ ನಿಮ್ಮ ಆಯ್ಕೆಯ ತೆರಿಗೆ ಪದ್ಧತಿಯಂತೆ ನಿಮಗೆ ಸಿಗುವ ತೆರಿಗೆ ವಿನಾಯಿತಿ ಕಳೆದು ಉಳಿದ ಮೊತ್ತವು ಇನ್ನೂ ತೆರಿಗೆಗೆ ಒಳಪಡುವುದಿದ್ದರೆ, ತೆರಿಗೆ ಪಾವತಿಸಿ ರಿಟರ್ನ್ಸ್ ಸಲ್ಲಿಸಬೇಕಾಗುತ್ತದೆ. ನಿಮ್ಮ ವಿಚಾರದಲ್ಲಿ ನೀವು ಹಳೆಯ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡುವುದೇ ಲಾಭದಾಯಕವೆಂದು ಕಂಡುಬಂದರೆ ಮಾತ್ರ ಈ ಕೆಳಗಿನ ಮಾಹಿತಿಯಂತೆ ವಿನಾಯಿತಿ ಪಡೆಯಬಹುದು.

ಬಡ್ಡಿ ಆದಾಯಕ್ಕೆ ಸೆಕ್ಷನ್ 80ಟಿಟಿಬಿ ಅಡಿ ₹50,000, ಸೆಕ್ಷನ್ 80ಡಿ ಅಡಿ ಇನ್ಶೂರೆನ್ಸ್ ಇಲ್ಲದ ಸಂದರ್ಭದಲ್ಲಿ ಮೆಡಿಕಲ್ ವೆಚ್ಚಕ್ಕಾಗಿ ₹50,000, ವಿಶೇಷ ಕಾಯಿಲೆ ಇತ್ಯಾದಿ ಇದ್ದ ಸಂದರ್ಭದಲ್ಲಿ ಸೆಕ್ಷನ್ 80ಡಿಡಿಬಿ ಅಡಿ ನೈಜ ವೆಚ್ಚ ಅಥವಾ ₹1 ಲಕ್ಷದ ತನಕ ವಿನಾಯಿತಿ ಲಭ್ಯವಿದೆ.

ಸೆಕ್ಷನ್ 194ಪಿ ಅನ್ವಯ ಕೇವಲ ಪಿಂಚಣಿ ಆದಾಯ ಅಥವಾ ಬಡ್ಡಿ ಆದಾಯ ಇದ್ದಾಗ ನೀವು ಆಯ್ಕೆ ಮಾಡಿದ ಯಾವುದೇ ಪದ್ಧತಿಯಡಿ ಬ್ಯಾಂಕಿನವರು ನಿಮಗೆ ಅನ್ವಯವಾಗುವ ಸಮರ್ಪಕ ತೆರಿಗೆಯನ್ನು ಕಡಿತಗೊಳಿಸಿ ಈ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ಮಾಹಿತಿ ಸಲ್ಲಿಸಿದ್ದರೆ ನೀವು ರಿಟರ್ನ್ಸ್ ಸಲ್ಲಿಸುವ ಅಗತ್ಯವೂ ಇರುವುದಿಲ್ಲ. ಒಂದು ವೇಳೆ ನಿಮಗೆ ₹50,000ಕ್ಕಿಂತ ಅಧಿಕ ಬಡ್ಡಿ ಬರುತ್ತಿದ್ದು, ಒಟ್ಟಾರೆ ತೆರಿಗೆ ಅನ್ವಯಿಸುವುದಿಲ್ಲ ಎಂದಾದರೆ ಫಾರಂ 15 ಎಚ್ ಅನ್ನು ಬ್ಯಾಂಕಿಗೆ ಸಲ್ಲಿಸಿ.

ಮುರಗೋಡ್ ಎಂ.ಸಿ., ಊರು ತಿಳಿಸಿಲ್ಲ.

- **ಪ್ರಶ್ನೆ: ನಾನು ಬ್ಯಾಂಕ್‌ನ ನಿವೃತ್ತ ಉದ್ಯೋಗಿ. 2015ರ ಏಪ್ರಿಲ್ 30ರಂದು ನಿವೃತ್ತಿ ಹೊಂದಿದೆ. 8 ತಿಂಗಳ ರಜಾ ನಿವೃತ್ತಿ ವೇತನವಾಗಿ ₹6.02 ಲಕ್ಷ ಮೊತ್ತ ಸಿಕ್ಕಿತ್ತು. ಆ ಸಂದರ್ಭದಲ್ಲಿ ₹3 ಲಕ್ಷ ಮಾತ್ರ ರಜಾ ವೇತನಕ್ಕೆ ತೆರಿಗೆ ವಿನಾಯಿತಿ ಇತ್ತು. ತದನಂತರ ಈ ಮೊತ್ತವನ್ನು ₹25 ಲಕ್ಷಕ್ಕೆ ಹೆಚ್ಚಿಸಲಾಯಿತು. ಈ ಬಗ್ಗೆ ಗೆಜೆಟ್ ನೋಟಿಫಿಕೇಷನ್ (24.5.2023ರಂದು) ಹೊರಡಿಸಲಾಯಿತು.**

ಇದರಲ್ಲಿ ಇರುವಂತೆ ಪೂರ್ವಾನ್ವಯವಾಗುವ ರೀತಿ ವಿನಾಯಿತಿ ನೀಡಲಾಗಿದೆ. ಈ ಬಗ್ಗೆ ನಮ್ಮ ಬ್ಯಾಂಕ್‌ನ ಪೆನ್ಷನರ್ ಅಸೋಸಿಯೇಷನ್ ಕೂಡ ಈ ವಿನಾಯಿತಿ ಪೂರ್ವಾನ್ವಯವಾಗುವ ಕಾರಣಕ್ಕೆ ಹಿಂದಿನ ವರ್ಷಗಳಿಗೂ ವಿನಾಯಿತಿ ಪಡೆಯಬಹುದು ಎಂದು ಮಾಹಿತಿ ನೀಡುವ ತಿಳಿವಳಿಕೆ ಪತ್ರವನ್ನು ಸದಸ್ಯರ ಅವಗಾಹನೆಗೆ ತಂದಿರುತ್ತಾರೆ. ಈ ಬಗ್ಗೆ ನನ್ನ ಪ್ರಶ್ನೆ ಏನೆಂದರೆ, ಈ ನೋಟಿಫಿಕೇಷನ್ ಪ್ರಕಾರ ನಾವು 2015ಕ್ಕೆ ನಿವೃತ್ತಿಯ ಸಮಯ ಸಲ್ಲಿಸಿದ್ದ ರಿಟರ್ನ್ಸ್‌ಗಳಲ್ಲಿ ₹3 ಲಕ್ಷಕ್ಕೂ ಹೆಚ್ಚಿನ ಮೊತ್ತದ ರಜಾ ವೇತನಕ್ಕೆ ಪಾವತಿಸಿದ ತೆರಿಗೆ ಹಿಂಪಡೆಯಬಹುದೇ? ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ರಜಾ ವೇತನಕ್ಕೆ ಸಂಬಂಧಿಸಿದ ವಿನಾಯಿತಿ ಬಗ್ಗೆ ಆದಾಯ ತೆರಿಗೆಯ ಸೆಕ್ಷನ್ 10(10ಎಎ) ಅಡಿ ಹೇಳಲಾಗಿದೆ. 2023ರ ಕೇಂದ್ರ ಬಜೆಟ್‌ನಲ್ಲಿ ಈ ಸಂಬಂಧ ಇರುವ ವಿನಾಯಿತಿ ಮಿತಿಯನ್ನು ಹೆಚ್ಚಿಸಲಾಗಿತ್ತು.

ತಾವು ಉಲ್ಲೇಖಿಸಿರುವ ಹಾಗೂ ಪ್ರಶ್ನೆಯೊಂದಿಗೆ ಮಾಹಿತಿಗಾಗಿ ನೀಡಿದ ಗೆಜೆಟ್‌ನಲ್ಲಿ ಹೇಳಿರುವಂತೆ ಈ ಹೊಸ ವಿನಾಯಿತಿ ಮಿತಿಯ ಪೂರ್ವಾನ್ವಯ ದಿನಾಂಕವು 2023ರ ಏಪ್ರಿಲ್ 1 ಆಗಿದೆ. ಆಗ ಚಾಲ್ತಿಯಲ್ಲಿದ್ದ ವಿನಾಯಿತಿ ಮೊತ್ತವನ್ನು ₹3 ಲಕ್ಷದಿಂದ ₹25 ಲಕ್ಷಕ್ಕೆ ಹೆಚ್ಚಿಸುವ ಬಗ್ಗೆ ಭಾಷಣದಲ್ಲಿ ಪ್ರಸ್ತಾಪಿಸುತ್ತಾ, ಆ ಬಗ್ಗೆ ಸೂಕ್ತ ಈ ನೋಟಿಫಿಕೇಷನ್ ಹೊರಡಿಸುವ ಬಗ್ಗೆ ಬಜೆಟ್ ಭಾಷಣದಲ್ಲಿ ಉಲ್ಲೇಖಿಸಲಾಗಿತ್ತು. ಈ ಭಾಷಣದ ಪ್ರಸ್ತಾವನೆಯಂತೆ ಈ ಹಿಂದೆ ಈಗಾಗಲೇ ನಿವೃತ್ತಿ ಹೊಂದಿ, ಆಯಾ ಸಂದರ್ಭಕ್ಕೆ ಹೊಂದಿಕೊಂಡು, ಪಡೆಯಲಾದ ತೆರಿಗೆ ವಿನಾಯಿತಿಗಳಿಗೆ ಇನ್ನೂ ಹೆಚ್ಚುವರಿಯಾಗಿ ವಿನಾಯಿತಿ ಸಿಗುವ ರೀತಿ ಪೂರ್ವಾನ್ವಯವಾಗುವಂತೆ ತೆರಿಗೆ ಕಾನೂನು ನಿರೂಪಿಸುವುದು ಉದ್ದೇಶವಾಗಿರಲಿಲ್ಲ. ಬದಲಾಗಿ ಗೆಜೆಟ್ ಅಧಿಸೂಚನೆಯಲ್ಲಿ ಹೇಳಲಾದ ಮಾಹಿತಿಯಂತೆ 2023ರ ಏಪ್ರಿಲ್ 1ರಿಂದ ಹೆಚ್ಚುವರಿ ಮಿತಿ ಅನ್ವಯವಾಗುವುದಾಗಿ ಹೇಳಲಾಗಿತ್ತು.

ಹೀಗಾಗಿ, ಗೆಜೆಟ್ ಅಧಿಸೂಚನೆಯನ್ನು (24.5.2023ರಂದು) ತಡವಾಗಿ ಹೊರಡಿಸಲಾಗಿದ್ದರೂ ಅದನ್ನು 2023ರ ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವ ರೀತಿ ಕಾರ್ಯರೂಪಕ್ಕೆ ತರಲಾಗಿದೆ. ಆದರೆ, ತಡವಾಗಿ ಹೊರಡಿಸಲಾದ ಗೆಜೆಟ್‌ನಿಂದ ಯಾರಿಗೂ ವೃಥಾ ತೊಂದರೆಯಾಗಬಾರದು ಎನ್ನುವ ಉದ್ದೇಶದಿಂದ ವಿವರಣಾತ್ಮಕ ಮಾಹಿತಿ ನೀಡಲಾಗಿತ್ತು.

ಉದಾಹರಣೆಗೆ ಈ ಎರಡು ದಿನಾಂಕಗಳ ಅವಧಿಯಲ್ಲಿ ಯಾವುದೇ ವ್ಯಕ್ತಿ ನಿವೃತ್ತಿ ಹೊಂದಿದ್ದರೆ, ಅವರ ತೆರಿಗೆ ಲೆಕ್ಕ ಹಾಕುವಾಗ ₹3 ಲಕ್ಷದ ವಿನಾಯಿತಿ ಮಿತಿ ಎಂದು ಪರಿಗಣಿಸಿರುವ ಸಾಧ್ಯತೆ ಇರುವ ಕಾರಣ ಹಾಗೂ ಅದರಂತೆ ತೆರಿಗೆಯನ್ನೂ ಗೆಜೆಟ್ ಹೊರಡಿಸುವ ಮುನ್ನ ಕಡಿತಗೊಳಿಸಿರಬಹುದಾದ ಸಾಧ್ಯತೆ ಇದೆ. ಇದರಿಂದ, ಅಂತಹವರು ಅನಗತ್ಯ ತೊಂದರೆಗೆ ಒಳಪಡಬಾರದು ಎನ್ನುವ ಕಾರಣಕ್ಕೆ ವಾರ್ಷಿಕ ರಿಟರ್ನ್ಸ್ ಸಲಿಸುವಾಗ ರೀಫಂಡ್ ಪಡೆದುಕೊಳ್ಳಬಹುದು ಎಂಬುದೇ ಅದರಲ್ಲಿನ ವಿವರಣೆಯ ಪರೋಕ್ಷ ಅರ್ಥವಾಗಿದೆ.

ಹೀಗಾಗಿ, ಈ ಪೂರ್ವಾನ್ವಯ ವಿನಾಯಿತಿಯನ್ನು ಬಜೆಟ್ ಮಂಡನೆಯ ಪರಿವ್ಯಾಪ್ತಿಗಿಂತಲೂ ಹಿಂದಿನ ಆರ್ಥಿಕ ವರ್ಷಗಳಿಗೆ ತಳಕು ಹಾಕುವುದು ತೆರಿಗೆ ವಿನಾಯಿತಿಯ ಪರಿಷ್ಕರಣೆಯ ಉದ್ದೇಶವಲ್ಲ. ಜೊತೆಗೆ, ತೆರಿಗೆಯ ಆಡಳಿತಾತ್ಮಕ ದೃಷ್ಟಿಕೋನದಿಂದಲೂ ಅದು ಪ್ರಾಯೋಗಿಕವಲ್ಲ. ಏಕೆಂದರೆ ಈ ಬಗೆಗಿನ ತೆರಿಗೆ ಮೌಲ್ಯಮಾಪನವು ಕೂಡ ಮುಗಿದಿರುತ್ತದೆ. ರಿಟರ್ನ್ಸ್ ಪರಿಷ್ಕರಿಸಲು ಇರುವ ಅವಧಿಯೂ ಆಯಾ ವರ್ಷಕ್ಕೆ ಸಂಬಂಧಿಸಿ ಈಗಾಗಲೇ ಮುಗಿದಿರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಮುರ್ಮುಗೆ ಫಿಜಿ ನಾಗರಿಕ ಗೌರವ

ಸುವ(ಫಿಜಿ) (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಫಿಜಿಯ ಅತ್ಯುನ್ನತ ನಾಗರಿಕ ಪುರಸ್ಕಾರ 'ಕಂಪ್ಯಾನಿಯನ್ ಆಫ್ ದ ಆರ್ಡರ್ ಆಫ್ ಫಿಜಿ' ನೀಡಿ ಮಂಗಳವಾರ ಗೌರವಿಸಲಾಯಿತು.

ಈ ವೇಳೆ ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಶ್ಲಾಘಿಸಿದ ದ್ರೌಪದಿ ಮುರ್ಮು, ಫಿಜಿಯನ್ನು ಹೆಚ್ಚು ಸಮೃದ್ಧ ರಾಷ್ಟ್ರವನ್ನಾಗಿ ನಿರ್ಮಿಸುವ ನಿಟ್ಟಿನಲ್ಲಿ ಅಗತ್ಯ ಪಾಲುದಾರಿಕೆಗೆ ಭಾರತವು ಸಿದ್ಧವಾಗಿದೆ ಎಂದು ತಿಳಿಸಿದರು.

'ಫಿಜಿಯ ಅಧ್ಯಕ್ಷ ರತು ವಿಲಿಯಮ್ ಮೈವಿಲ್ಲಿ ಕಟೋನಿವಿರೆ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಇದು ಫಿಜಿಯ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ' ಎಂದು ರಾಷ್ಟ್ರಪತಿಗಳ ಕಚೇರಿಯು 'ಎಕ್ಸ್'ನಲ್ಲಿ ತಿಳಿಸಿದೆ.

ಫಿಜಿಗೆ ಎರಡು ದಿನಗಳ ಭೇಟಿಯು ಎರಡು ರಾಷ್ಟ್ರಗಳ ನಡುವಿನ ಅತ್ಯುನ್ನತ ಸ್ನೇಹ ಸಂಬಂಧ ದ್ಯೋತಕವಾಗಿದೆ ಎಂದು ಮುರ್ಮು ಬಣ್ಣಿಸಿದರು. ಫಿಜಿಗೆ ಭೇಟಿ ನೀಡಿದ ಭಾರತದ ಮೊದಲ ರಾಷ್ಟ್ರಪತಿ ಎಂಬ ಖ್ಯಾತಿಗೂ ಮುರ್ಮು ಪಾತ್ರರಾದರು.

ಇದಾದ ಬಳಿಕ ಫಿಜಿಯ ಸಂಸತ್ ಉದ್ದೇಶಿಸಿ ದ್ರೌಪದಿ ಮುರ್ಮು ಮಾತನಾಡಿದರು.

ಫಿಜಿಯ ರಾಜಧಾನಿ ಸುವದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷ ರತು ವಿಲಿಯಮ್ ಮೈವಿಲ್ಲಿ ಕಟೋನಿವಿರೆ ಅವರು, ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ 'ಕಂಪ್ಯಾನಿಯನ್ ಆಫ್ ದ ಆರ್ಡರ್ ಆಫ್ ಫಿಜಿ' ನೀಡಿ ಗೌರವಿಸಿದರು — ಪಿಟಿಐ ಚಿತ್ರ

ಕಮಲಾ ಡೆಮಾಕ್ರಟಿಕ್ ಅಧ್ಯಕ್ಷೀಯ ಅಭ್ಯರ್ಥಿ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಮುಂದಿನ ಅಧ್ಯಕ್ಷೀಯ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಮಂಗಳವಾರ ನಾಮನಿರ್ದೇಶನಗೊಂಡಿದ್ದಾರೆ. ಆ ಮೂಲಕ ಭಾರತೀಯ ಮೂಲದ ವ್ಯಕ್ತಿಯೊಬ್ಬರು ಇಲ್ಲಿನ ಅಧ್ಯಕ್ಷ ಸ್ಥಾನಕ್ಕೆ ಮೊಟ್ಟ ಮೊದಲ ಸಲ ನಾಮನಿರ್ದೇಶನಗೊಂಡಂತಾಗಿದೆ.

ಕಮಲಾ ಅವರು, ರಿಪಬ್ಲಿಕನ್ ಅಧ್ಯಕ್ಷೀಯ ಅಭ್ಯರ್ಥಿ 78 ವರ್ಷದ ಡೊನಾಲ್ಡ್ ಟ್ರಂಪ್ ವಿರುದ್ಧ ನವೆಂಬರ್‌ನಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಸೆಣಸಲಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ಟಿಮ್ ವಾಲ್ಜ್ ಸ್ಪರ್ಧೆ: 'ಉಪಾಧ್ಯಕ್ಷ ಸ್ಥಾನಕ್ಕೆ ಮಿನ್ನೆಸೋಟಾ ಗವರ್ನರ್ ಟಿಮ್ ವಾಲ್ಜ್ ಅವರನ್ನು ಆಯ್ಕೆ ಮಾಡಿಕೊಂಡಿದ್ದೇನೆ' ಎಂದು ಕಮಲಾ ಹ್ಯಾರಿಸ್ ಘೋಷಿಸಿದ್ದಾರೆ.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆಹೆಚ್‌ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು–560 079, ದೂರವಾಣಿ ಸಂಖ್ಯೆ: +91-80-29619801
ಮಿಂಚ್ ಅಂಚೆ : md.ksmscl@gmail.com
No.KSMSCL/DRUGS/TND/KFD/DEPA OIL/22/2024-25 Dated: 06.08.2024

ಟೆಂಡರ್ ಪ್ರಕಟಣೆ

ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: KSMSCL/DRUGS/TND/KFD/DEPA OIL/22/2024-25, Dated: 06.08.2024 (IND-0154).

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. 2024–25 ನೇ ಸಾಲಿಗೆ KFD-NFDS ಕಾರ್ಯಕ್ರಮದಡಿಯಲ್ಲಿ DEPA OIL ನ್ನು ಖರೀದಿಸಿ ಪೂರೈಸುವ ಕುರಿತು (IND-0154).

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್ ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ: 06.08.2024 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.
DIPR/CP/RO1324/AAPL/2024-25

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ-ಮೇಲ್: pdadvt@bmrc.co.in ವೆಬ್‌ಸೈಟ್: www.bmrc.co.in
ಆರ್‌ಎಫ್‌ಪಿ ಸಂಖ್ಯೆ: ಬಿಎಂಆರ್‌ಸಿಎಲ್/ಪಿಡಿ/ಎಂಎಸ್/ರಿಟೈಲ್/2024–25/01 ದಿನಾಂಕ: 06.08.2024

ತಿದ್ದುಪಡಿ–01

ಬಿಎಂಆರ್‌ಸಿಎಲ್‌ನ ಇಂದಿರಾನಗರದಲ್ಲಿ (ಇಂದಿರಾನಗರ ಮೆಟ್ರೋ ನಿಲ್ದಾಣದ ಹತ್ತಿರ) ವಾಣಿಜ್ಯ ಚಟುವಟಿಕೆಗಳಿಗಾಗಿ ನಿರ್ಮಿಸಲಾದ ಸ್ಥಳದ ಪರವಾನಗಿ ಹಕ್ಕುಗಳಿಗೆ ಬಿಎಂಆರ್‌ಸಿಎಲ್ ಟೆಂಡರ್ ಅನ್ನು ಆಹ್ವಾನಿಸಿದ್ದು, ಅದರ ಬಿಡ್‌ಗಳ ಆಫ್‌ಲೈನ್ ಮಾರಾಟವನ್ನು 29.08.2024, ಸಂಜೆ 5.00 ಗಂಟೆಯವರೆಗೆ ಮತ್ತು ಆನ್‌ಲೈನ್ ಮಾರಾಟವನ್ನು 29.08.2024ರ ಮಧ್ಯರಾತ್ರಿವರೆಗೆ ವಿಸ್ತರಿಸಲಾಗಿದೆ. ಸ್ಥಳ ಪರಿಶೀಲನೆಗೆ ಕೊನೆಯ ದಿನಾಂಕ: 29.08.2024. ಪ್ರೀ–ಬಿಡ್ ಸಭೆ ದಿನಾಂಕ: 29.08.2024, ಮಧ್ಯಾಹ್ನ 3.00 ಗಂಟೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06.09.2024, ಮಧ್ಯಾಹ್ನ 3.00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ: 080–22969280 ಅಥವಾ ಇ–ಮೇಲ್: pdadvt@bmrc.co.in ಅಥವಾ ಬಿಎಂಆರ್‌ಸಿಎಲ್ ವೆಬ್‌ಸೈಟ್: www.bmrc.co.in ಗೆ ಭೇಟಿನೀಡಿ.

ಸಹಿ/– ಉಪ ಮುಖ್ಯ ಅಭಿಯಂತರರು, (ಆಸ್ತಿ ಅಭಿವೃದ್ಧಿ)

ಸಾರ್ವಜನಿಕ ಆಸ್ಪತ್ರೆ, ಕೆ.ಆರ್. ಪುರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಕೆ.ಆರ್. ಪುರ, ಬೆಂಗಳೂರು–560064
ದೂರವಾಣಿ: 080–25612238, ಇ–ಮೇಲ್: amoghkrpuram@gmail.com
ಸಂ.: ಸಾಆಕೃ/ಸರಬ/ಟೆಂ/01/24–25 ದಿನಾಂಕ: 05.08.2024

ಇ–ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ, ಕೆ.ಆರ್. ಪುರ, ಬೆಂಗಳೂರು ಇಲ್ಲಿ 2024–25ನೇ ಸಾಲಿಗೆ ಒಳರೋಗಿಗಳಿಗೆ ಚಿಕಿತ್ಸೆಗೆ ಬೇಕಾಗುವ Ortho implants ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000ರಂತೆ ಟೆಂಡರ್‌ಗಳನ್ನು ದ್ವಿ ಲಕೋಟೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಿದ್ದು, ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಟೆಂಡರ್ ನಂ. DHFWS/2024-25/IND0828ರಲ್ಲಿ ಲಭ್ಯವಿರುತ್ತದೆ. ಹೆಲ್ಪ್‌ಲೈನ್ ನಂ. 080–2550 1216/227 ಟೆಂಡರ್‌ನ ಎಲ್ಲಾ ನಿಬಂಧನೆಗಳನ್ನು ಟೆಂಡರ್ ಬಿಡ್‌ನಲ್ಲಿ ನೀಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಎಲ್ಲಾ ಕೆಲಸದ ದಿನಗಳಲ್ಲಿ ಆಸ್ಪತ್ರೆಯ ಕಛೇರಿಯಿಂದ ಪಡೆದುಕೊಳ್ಳಬಹುದು.

ವಿಷಯದ ಷೆಡ್ಯೂಲ್‌ಗಳು: (1) ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 05.08.2024ರಂದು ಬೆಳಿಗ್ಗೆ 11:30 ಗಂಟೆಯಿಂದ. (2) ಟೆಂಡರ್ ಸಲ್ಲಿಕೆಗೆ ಕಡೇ ದಿನಾಂಕ ಮತ್ತು ಸಮಯ: 22.08.2024ರಂದು ಸಂಜೆ 5:30 ಗಂಟೆಗೆ. (3) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: 26.08.2024ರಂದು ಬೆಳಿಗ್ಗೆ 11:00 ಗಂಟೆಗೆ. ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ಸಮಯ: 28.08.2024ರಂದು ಬೆಳಿಗ್ಗೆ 11:30 ಗಂಟೆಗೆ.

ಸಹಿ/–, ಟೆಂಡರ್ ಸಮಿತಿ ಅಧ್ಯಕ್ಷರು/ಆಡಳಿತ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಕೆ.ಆರ್.ಪುರ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/1310/2024–25

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.
ಸಂ : ಆ.ಅ./ತೋವಿವಿಬಾ/ಸಖಕ/ಟೆ.ನಂ–190/2024–25 ದಿನಾಂಕ:05–08–2024

ಅಲ್ಪಾವಧಿ ಮರುಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು Solar Cold Storage ಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರುಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋ : 08354–230258.

ಟೆಂಡರನ ಘಟನಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	10–08–2024	@	14.00 ಘಂ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	13–08–2024	@	16.00 ಘಂ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	16–08–2024	@	11.00 ಘಂ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	19–08–2024	@	12.00 ಘಂ

ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/addendum ಬಗ್ಗೆ ಮಾಹಿತಿ ಪಡೆಯಬೇಕು.

ಸಹಿ/–ಆಸ್ತಿ ಅಧಿಕಾರಿಗಳು
ತೋ.ವಿ.ವಿ, ಬಾಗಲಕೋಟ
DIPR/BGK/RO-NO-164/KSMCA/2024-25

ನಗರಸಭಾ ಕಾರ್ಯಾಲಯ, ಸಾಗರ–577401.
Web: www.sagaracity.mrc.gov.in Phone: 08183-226021
Email: itstaff_ulb_sagar@yahoo.com
ನಂ: ನಸಾ/ಆ.ವಿ/57/2024–25 ದಿನಾಂಕ: 26.07.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಸಾಗರ ನಗರಸಭೆಗೆ 2024–25 ನೇ ಸಾಲಿಗೆ ಅವಶ್ಯವಿರುವ ಮಾನವ ಸಂಪನ್ಮೂಲ ಸರಬರಾಜು. ಆರೋಗ್ಯ ವಿಭಾಗದ ಪೌರಕಾರ್ಮಿಕರಿಗೆ ಬೆಳಗ್ಗಿನ ಉಪಹಾರ, ಮಾನವ ಸಾಗಾಟ ಬಾಡಿಗೆ ವಾಹನಗಳ ಸರಬರಾಜು ಬಗ್ಗೆ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಕೋರಿದೆ. ದಿನಾಂಕ:08/08/2024 ರ ಸಂಜೆ 5.30 ಘಂಟೆ ಬಿಡ್ಡು ಸಲ್ಲಿಕೆಗೆ ಅಂತಿಮ ದಿನವಾಗಿದ್ದು ದಿನಾಂಕ: 12/08/2024 ರ ಬೆಳಿಗ್ಗೆ 11.30 ಕ್ಕೆ ಬಿಡ್ಡು ತೆರೆಯಲಾಗುವುದು. ಸಾಧ್ಯವಾಗದಿದ್ದಲ್ಲಿ ಮುಂದಿನ ದಿನಾಂಕದಂದು ತೆರೆಯಲಾಗುವುದು ನಿಗದಿತ ಮತ್ತು ಅನ್ವಯಿಸುವ ಷರತ್ತುಗಳ ಬಗ್ಗೆ KPPP ವೆಬ್‌ಸೈಟ್ ನಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ ಹಾಗೂ ಸಾಗರ ನಗರಸಭೆಯ ಆರೋಗ್ಯ ವಿಭಾಗದಲ್ಲಿ ಪಡೆಯಬಹುದಾಗಿದೆ

ಕ್ರ ಸಂ.	ಇಂಡೆಂಟ್ ನಂ.	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	DMA/2024-25/SE3310	39.00	97500=00
2	DMA/2024-25/SE3312	35.50	88750=00
3	DMA/2024-25/SE3313	35.50	88750=00
4	DMA/2024-25/SE3314	13.80	34500=00
5	DMA/2024-25/SE3315	4.80	12000=00
6	DMA/2024-25/SE3316	4.80	12000=00

ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್ www.Kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಗಳು ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ Kppp ನಲ್ಲಿ ಟೆಂಡರ್‌ನಲ್ಲಿ ಪ್ರಚುರ ಪಡಿಸಲಾಗುವುದು

ಸಹಿ/– ಆಡಳಿತಾಧಿಕಾರಿಗಳು, ನಗರಸಭೆ ಸಾಗರ
ಸಹಿ/– ಪೌರಾಯುಕ್ತರು, ನಗರಸಭೆ, ಸಾಗರ.
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/24–25/16/08/409

ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ
ನಂ–2 ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ–576229.
ಕುಂದಾಪುರ (ತಾ), ಉಡುಪಿ (ಜಿಲ್ಲೆ), ಕರ್ನಾಟಕ.
ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಇಂ/ಕನೀನಿನಿ/ವಾಜಯೋವಿ–2/ಪಿಬಿ/ಟೆಂಡರ್/01/2024–25/481
ದಿನಾಂಕ : 01/08/2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ವೇದಿಕೆ) (ಡಬಲ್ ಕವರ್ ಸಿಸ್ಟಂ)

ಉಡುಪಿ ಜಿಲ್ಲೆಯ ವಾರಾಹಿ ನೀರಾವರಿ ಯೋಜನಾ ವ್ಯಾಪ್ತಿಯಡಿ, 2024–25 ಸಾಲಿನಲ್ಲಿ Heightening/Modification of Towers of 220KV Varahi Kemar Line-3 along with 110KV line between location No.112-114 as per the request of Karnataka Neeravari Nigam Limited (KNNL) for the construction of Overhead aqueduct structure near Shriooru village, coming under TLM section Hiriyadka of TL & SS Division, Karkala, Udupi District ಕಾಮಗಾರಿಯನ್ನು ಕೈಗೊಳ್ಳಲು Super Grade Electrical ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ:

1. ಗುತ್ತಿಗೆದಾರರು http://www.kppp.Karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು.
2. ಟೆಂಡರಿಗಿಟ್ಟ ಮೊತ್ತ ಕ್ರಮವಾಗಿ ರೂ. 146.94 ಲಕ್ಷ (ಜಿ.ಎಸ್.ಟಿ ಸೇರಿ)
3. ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿನಾಂಕ: 03/08/2024
4 ಗುತ್ತಿಗೆದಾರರು ಟೆಂಡರ್ ಬಗ್ಗೆ ಸ್ಪಷ್ಟೀಕರಣ ಕೇಳಲು ಕೊನೆಯ ದಿ:08/08/2024
5. ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 12/08/2024
6. ತಾಂತ್ರಿಕ ಬಿಡ್ ತೆರೆಯುವ ದಿ:14/08/2024ರ ಸಮಯ ಬೆಳಿಗ್ಗೆ 11.00 ಘಂಟೆ
7. ಹೆಚ್ಚಿನ ವಿವರಗಳಿಗಾಗಿ http://www.kppp.karnataka.gov.in ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ–2 ವಾರಾಹಿ ಜಲಾಶಯ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು.
8. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ–2 ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ.

ಪುರಸಭಾ ಕಾರ್ಯಾಲಯ ವಿಜಯಪುರ
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂ. : 080–2766 6100 ಇ–ಮೇಲ್ : itstaff_ulb_vijayapura@yahoo.co.in
ವೆಬ್‌ಸೈಟ್ : www.vijayapuratown.mrc.gov.in
ಸಂಖ್ಯೆ : ಪು.ಸ.ವಿ./ತಾಂ.ಶಾ./ಟೆ.ಪ್ರ./01/2024–25 ದಿನಾಂಕ : 05–08–2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯಾಧಿಕಾರಿಗಳು, ಪುರಸಭೆ, ವಿಜಯಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು 2024–25 ನೇ ಸಾಲಿನ 15ನೇ ಹಣಕಾಸು ಯೋಜನೆ, ಎಸ್.ಎಫ್.ಸಿ ಕುಡಿಯುವ ನೀರು, ಯೋಜನೆ ಮತ್ತು ಸ್ವಚ್ಛ ಭಾರತ್ ಮಿಷನ್ – 2.0 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು : ಪ್ಯಾಕೇಜ್ ಸಂಖ್ಯೆ 1) ಕೆಲಸದ ವಿವರ : DMA/2024-25/OW/WORK_INDENT23912, ಪ್ಯಾಕೇಜ್ ಸಂಖ್ಯೆ 2) ಕೆಲಸದ ವಿವರ : DMA/2024-25/WS/WORK_INDENT23919, ಪ್ಯಾಕೇಜ್ ಸಂಖ್ಯೆ 3) ಕೆಲಸದ ವಿವರ : DMA/2024-25/BD/WORK_INDENT19063/CALL-2, ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : ಪ್ಯಾಕೇಜ್ ಸಂಖ್ಯೆ 4) ಕೆಲಸದ ವಿವರ : DMA/ 2024-25/RD/WORK_INDENT23913, ಸಾಮಾನ್ಯ ವರ್ಗದ ಕಾಮಗಾರಿಗಳು : ಪ್ಯಾಕೇಜ್ ಸಂಖ್ಯೆ 5) ಕೆಲಸದ ವಿವರ : DMA/2024-25/RD/WORK_INDENT23906, ಪ್ಯಾಕೇಜ್ ಸಂಖ್ಯೆ 6) ಕೆಲಸದ ವಿವರ : DMA/2024-25/WS/WORK_INDENT23892, ಪ್ಯಾಕೇಜ್ ಸಂಖ್ಯೆ 7) DMA/2024-25/WS/WORK_INDENT23862, ಪ್ಯಾಕೇಜ್ ಸಂಖ್ಯೆ 8) ಕೆಲಸದ ವಿವರ : DMA/ 2024-25/OW/WORK_INDENT24212, ಪ್ಯಾಕೇಜ್ ಸಂಖ್ಯೆ 9) DMA/2024-25/OW/WORK_INDENT24202, ಪ್ಯಾಕೇಜ್ ಸಂಖ್ಯೆ 10) ಕೆಲಸದ ವಿವರ : DMA/2024-25/WS/WORK_INDENT24184, ಪ್ಯಾಕೇಜ್ ಸಂಖ್ಯೆ 11) ಕೆಲಸದ ವಿವರ : DMA/2024-25/ WS/WORK_INDENT24368.

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮುಖಾಂತರ ಕಾಮಗಾರಿ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೊತ್ತ ಕನಿಷ್ಠ 2.60 ಲಕ್ಷದಿಂದ ಗರಿಷ್ಠ 78.50 ಲಕ್ಷಗಳಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 20–08–2024 ರ 17.00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ : 21–08–2024 ರಂದು 17.15 ಗಂಟೆಗೆ ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಯಿದ್ದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/– ಆಡಳಿತಾಧಿಕಾರಿ, ಪುರಸಭೆ, ವಿಜಯಪುರ.
ಸಹಿ/– ಮುಖ್ಯಾಧಿಕಾರಿ, ಪುರಸಭೆ, ವಿಜಯಪುರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/1316/2024–25

ಡೈವಿಂಗ್ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 10 ಮೀಟರ್ ಪ್ಲಾಟ್‌ಫಾರ್ಮ್ ಡೈವಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಚೀನಾದ ಹಾಂಗ್‌ಚಾನ್ ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

ಪವಾಡಕ್ಕಿಂತ ಕಡಿಮೆಯಲ್ಲ'

ಪ್ಯಾರಿಸ್ (ಪಿಟಿಐ): 'ಇದು ಪವಾಡ. ವಿನೇಶಾ ಇವತ್ತು ಏನನ್ನು ಸಾಧಿಸಿದರೂ ಅದು ಪವಾಡಕ್ಕಿಂತ ಕಡಿಮೆಯೇನಲ್ಲ. ಸೋಮವಾರ ನಡೆದ ಸೆಣಸಾಟದಲ್ಲಿ ನಿಶಾ (ದಹಿಯಾ) ಅವರಿಗೆ ಗಾಯವಾಗಿದ್ದರಿಂದ ನಮಗೆಲ್ಲಾ ಬೇಸರವಾಗಿತ್ತು. ಆದರೆ ವಿನೇಶಾ ಅವರ ಗೆಲುವು ಮಂಗಳವಾರ ದಿನವನ್ನು ಪ್ರಕಾಶಮಾನಗೊಳಿಸಿತು' ಎಂದು ಭಾರತ ತಂಡದ ಕೋಚ್ ವಿರೇಂದರ್ ದಹಿಯಾ ಹೇಳಿದರು.

'ನಿಶಾ ಗೆಲುವು ಭಾರತದ ಪಾಳಯದಲ್ಲಿ ಮಾತ್ರ ಸಂಭ್ರಮ ತರಲಿಲ್ಲ. ಅವರು ಇದ್ದ 'ಡ್ರಾ' ದಲ್ಲಿನ ಇತರ ಕುಸ್ತಿಪಟುಗಳೂ ನಿಟ್ಟುಸಿರು ಬಿಡುವಂತೆ ಮಾಡಿತು. ಅದು ನಂತರದ ಸೆಣಸಿನಲ್ಲಿ ಸೋತ ಲಿವಾಚ್ ಮಾತಿನಲ್ಲಿ ಬಿಂಬಿತವಾಯಿತು.

'ವಿಶ್ವ ಚಾಂಪಿಯನ್ ಸೋತ ಕಾರಣ ನನಗೆ ಉತ್ತಮ ಅವಕಾಶವಿದೆಯೆಂದು ಯೋಚಿಸಿದ್ದೆ. ಆದರೆ ವಿನೇಶಾ ತುಂಬಾ ಬಲಿಷ್ಠ' ಎಂದು ಎಂಟರ ಘಟ್ಟದಲ್ಲಿ ಅವರೆದುರು ಸೋತ ಲಿವಾಚ್ ಹೇಳಿದರು.

ಭಾರತದ ವಿನೇಶಾ ಫೋಗಟ್ (ಕೆಂಪು) ಸೆಮಿಫೈನಲ್ ಪಂದ್ಯದಲ್ಲಿ ಕ್ಯೂಬಾದ ಯುಸೇನೆಯಲಿಸ್ ಗುಜ್ಮನ್ ಲೋಪೇಜ್ (ನೀಲಿ) ವಿರುದ್ಧ ಸೆಣಸಿದರು ಪ್ರಜಾವಾಣಿ ಚಿತ್ರ: ಕೆ.ಎನ್. ಶಾಂತಕುಮಾರ್

ಕುಸ್ತಿ ಫೈನಲ್ ತಲುಪಿದ ಭಾರತದ ಮೊದಲ ಮಹಿಳೆ • ಚಿನ್ನಕ್ಕಾಗಿ ಅಮೆರಿಕದ ಸೆರಾ ವಿರುದ್ಧ ಸೆಣಸು

ಚಿನ್ನದ ಹೊಸ್ತಿಲಲ್ಲಿ ವಿನೇಶಾ ಫೋಗಟ್

ಪ್ಯಾರಿಸ್ (ಪಿಟಿಐ): ವಿನೇಶಾ ಫೋಗಟ್ ಅವರು ಒಲಿಂಪಿಕ್ಸ್ ಕುಸ್ತಿಯಲ್ಲಿ ಫೈನಲ್ ತಲುಪುವ ಮೂಲಕ ಇತಿಹಾಸ ಬರೆದರು. ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಕುಸ್ತಿಪಟುವೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಮಂಗಳವಾರ ನಡೆದ 50 ಕೆ.ಜಿ ವಿಭಾಗದ ಮಹಿಳೆಯರ ಕುಸ್ತಿಯ ಸೆಮಿಫೈನಲ್‌ನಲ್ಲಿ ವಿನೇಶಾ 5–0 ಯಿಂದ ಕ್ಯೂಬಾದ ಯುಸೇನೆಯಲಿಸ್ ಗುಜ್ಮನ್ ಲೋಪೇಜ್ ವಿರುದ್ಧ ಗೆದ್ದರು. ಚಿನ್ನ ಜಯಿಸುವ ಅವಕಾಶ ಈಗ ಅವರ ಮುಂದಿದೆ. ಫೈನಲ್‌ನಲ್ಲಿ ಸೋತರೂ ಅವರಿಗೆ ಬೆಳ್ಳಿ ಪದಕ ಲಭಿಸುವುದು ಖಚಿತ.

ರಿಯೊ ಒಲಿಂಪಿಕ್ಸ್‌ನಲ್ಲಿ ಸಾಕ್ಷಿ ಮಲಿಕ್ ಅವರು ಕಂಚು ಗೆದ್ದಿದ್ದರು. ಈ ಸಾಧನೆ ಮಾಡಿದ ಭಾರತದ ಪ್ರಥಮ ಮಹಿಳಾ ಕುಸ್ತಿಪಟು ಅವರಾಗಿದ್ದರು. ಆತ್ಮವಿಶ್ವಾಸ ಮತ್ತು ಪರಾಕ್ರಮ ಮೇಳೈಸಿದ್ದ ಅವರ ಪಟ್ಟುಗಳಿಗೆ ಪ್ರತ್ಯುತ್ತರ ನೀಡಲು ಕ್ಯೂಬಾ ಕುಸ್ತಿಪಟುವಿಗೆ ಸಾಧ್ಯವಾಗಲಿಲ್ಲ.

ವಿನೇಶಾ ಅವರು ಇಡೀ ದಿನದಲ್ಲಿ ಆಡಿದ ಮೂರು ಬೌಟ್‌ಗಳಲ್ಲಿಯೂ ಪಾರಮ್ಯ ಮೆರೆದಿದ್ದು ವಿಶೇಷ. ಅದರಲ್ಲೂ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಅವರು ವಿಶ್ವ ಚಾಂಪಿಯನ್ ಮತ್ತು ಹೋದ ಒಲಿಂಪಿಕ್ಸ್‌ನ ಚಿನ್ನದ ಪದಕ ವಿಜೇತ ಕುಸ್ತಿಪಟು, ಜಪಾನಿನ ಯುಯಿ ಸುಸಾಕಿಯನ್ನು ಸೋಲಿಸಿದರು. ಕ್ವಾರ್ಟರ್‌ಫೈನಲ್‌ನಲ್ಲಿ ಉಕ್ರೇನ್‌ನ ಒಕ್ಸಾನಾ ಲಿವಾಚ್ ಅವರ ಸವಾಲನ್ನು 7–5 ರಿಂದ ಗೆದ್ದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸುಸಾಕಿ ಅವರು ಎದುರಾಳಿಗಳಿಗೆ ಒಂದೂ ಪಾಯಿಂಟ್ ಕೊಡದೇ ಚಿನ್ನ ಗೆದ್ದಿದ್ದರು. ಪ್ಯಾರಿಸ್‌ನಲ್ಲೂ ಅವರು ಚಿನ್ನಕ್ಕೆ ನೆಚ್ಚಿನ ಸ್ಪರ್ಧಿ ಆಗಿದ್ದರು. ಆದರೆ ಈ ಕ್ರೀಡೆಗಳ ಮೊದಲ ಸೆಣಸಾಟದಲ್ಲೇ 2–3 ರಿಂದ ಅನಿರೀಕ್ಷಿತ ರೀತಿ ಸೋತರು. ಅಗ್ರಶ್ರೇಯಾಂಕದ ಸುಸಾಕಿ ಅವರಿಗೆ ಇದು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಎದುರಾದ ಮೊದಲ ಸೋಲು ಕೂಡ. ಇದು ವಿನೇಶಾ ಆತ್ಮವಿಶ್ವಾಸವನ್ನು ಇಮ್ಮಡಿಸಿತು. ಅದರಿಂದಾಗಿ ಕ್ವಾರ್ಟರ್‌ಫೈನಲ್ ಮತ್ತು ಸೆಮಿಫೈನಲ್‌ನಲ್ಲಿ ಗೆದ್ದು ಚಿನ್ನದ ಪದಕ ಜಯದ ಹೊಸ್ತಿಲಿಗೆ ಬಂದು ನಿಂತಿದ್ದಾರೆ.

ವಿನೇಶಾ ಮನೆಯ ಕಪಾಟಿನಲ್ಲಿ ಇತರೆಲ್ಲಾ ಸ್ಪರ್ಧೆಗಳಲ್ಲಿ ಗೆದ್ದ ಪದಕಗಳಿವೆ. ಮೂರು ಬಾರಿ ಕಾಮನ್‌ವೆಲ್ತ್ ಕ್ರೀಡೆಗಳ ಚಾಂಪಿಯನ್, ಒಂದು ಏಷ್ಯನ್ ಗೇಮ್ಸ್ ಚಿನ್ನ, ಎಂಟು ಬಾರಿ ಏಷ್ಯನ್ ಚಾಂಪಿಯನ್‌ಷಿಪ್ ಪದಕ, ಎರಡು ವಿಶ್ವ ಚಾಂಪಿಯನ್‌ಷಿಪ್ ಕಂಚು ಗೆದ್ದಿದ್ದಾರೆ. ಆದರೆ ಈ ಹಿಂದಿನ ಎರಡು ಒಲಿಂಪಿಕ್ಸ್‌ಗಳಲ್ಲಿ ಯಶಸ್ಸು ದೊರೆತಿರಲಿಲ್ಲ.

ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವ ಚಾಂಪಿಯನ್, ಜಪಾನಿನ ಯುಯಿ ಸುಸಾಕಿ ವಿರುದ್ಧ ಗೆದ್ದ ಭಾರತದ ವಿನೇಶಾ ಫೋಗಟ್ ಎಪಿ/ಪಿಟಿಐ ಚಿತ್ರ

ಸವಾಲುಗಳ ಮೆಟ್ಟಿನಿಂತ ದಿಟ್ಟೆ ಫೋಗಟ್

ಪ್ಯಾರಿಸ್ (ಪಿಟಿಐ): ಯಶಸ್ಸಿನ ಹಾದಿಯಲ್ಲಿ ವಿನೇಶಾ ಅವರು ಎದುರಿಸಿದ ಸವಾಲುಗಳು, ಮೆಟ್ಟಿನಿಂತ ಒತ್ತಡಗಳು ಹಲವು. ಅಖಾಡದಲ್ಲೂ, ಅದರಾಚೆಗೂ ಅವರ ಹೋರಾಟ ನಡೆದೇ ಇತ್ತು.

ಹೋದ ವರ್ಷ ಬಹುತೇಕ ಅವಧಿಯಲ್ಲಿ ವಿನೇಶಾ ಅವರಿಗೆ ಅಭ್ಯಾಸ ನಡೆಸಲು ಸಾಧ್ಯವಾಗಿರಲಿಲ್ಲ. ಭಾರತ ಕುಸ್ತಿ ಫೆಡರೇಷನ್‌ನ ಆಗಿನ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪಗಳು ಕೇಳಿಬಂದಾಗ ಅವರ ವಿರುದ್ಧ ದೆಹಲಿಯ ಜಂತರ್‌ಮಂತರ್‌ನಲ್ಲಿ ನಡೆದ ಧರಣಿಯಲ್ಲಿ ವಿನೇಶಾ ಮುಂಚೂಣಿಯಲ್ಲಿದ್ದರು. ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಜೊತೆ ಹೋರಾಟದ ನೇತೃತ್ವ ವಹಿಸಿದ್ದರು. ಪೊಲೀಸರು ಅವರನ್ನು ಅಲ್ಲಿಂದ ಬಲವಂತವಾಗಿ ತೆರವುಗೊಳಿಸಲು ಮುಂದಾದರು. ಈ ಮಧ್ಯೆ ವಿನೇಶಾ ತೇಜೋವಧೆಗೂ ಪ್ರಯತ್ನಗಳೂ ನಡೆದವು.

ಇದರ ನಂತರ ಅವರು ಮಂಡಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಐದು ವರ್ಷಗಳಿಂದ ಹರಿಯಾಣದ ಈ ಕುಸ್ತಿಪಟು 53 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು. ಒಲಿಂಪಿಕ್ಸ್‌ನಲ್ಲೂ ಇದೇ ವಿಭಾಗದಲ್ಲಿ ಕಣಕ್ಕಿಳಿಯಲು ಬಯಸಿದ್ದರು. ಆದರೆ ಆ ತೂಕ ವಿಭಾಗದಲ್ಲಿ ಅಂತಿಮ್ ಪಂಘಲ್ ಪ್ಯಾರಿಸ್ ಕ್ರೀಡೆಗಳಿಗೆ ಕೋಟಾ ಗಿಟ್ಟಿಸಿದ ಮೇಲೆ ಅವರಿಗೆ 50 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಬೇಕಾದ ಸವಾಲು ಎದುರಾಯಿತು. ಅದನ್ನೂ ಸಾಧಿಸಿ ಒಲಿಂಪಿಕ್ಸ್‌ಗೆ ಸಜ್ಜಾದರು.

ಈ ಕ್ರೀಡೆಗಳಿಗೆ ಮೊದಲು, ಜುಲೈ ಆರಂಭದಲ್ಲಿ ಅವರು ಸ್ಪ್ಯಾನಿಶ್ ಗ್ರ್ಯಾನ್‌ಪ್ರಿ ಕುಸ್ತಿಯಲ್ಲಿ ಸ್ವರ್ಣ ಗೆದ್ದಿದ್ದರು. ಈ ಗೆಲುವು ಅವರಿಗೆ ಅಗತ್ಯವಿದ್ದ ಸಿದ್ಧತೆಗೆ ನೆರವಾಯಿತು.

ಎರಡು ಬಾರಿ ನಿರಾಸೆ: 2016ರ ರಿಯೊ ಕ್ರೀಡೆಗಳಲ್ಲಿ ಅವರಿಗೆ ಮಂಡಿನೋವಿನಿಂದ ಸಮಸ್ಯೆಯಾಗಿತ್ತು. 2021ರ ಟೋಕಿಯೊ ಕ್ರೀಡೆಗಳಲ್ಲಿ ಅವರು ಅನಿರೀಕ್ಷಿತವಾಗಿ ಬೇಗ ಹೊರಬಿದ್ದರು.

ವಿನೇಶಾ ಅವರು ಬುಧವಾರ ರಾತ್ರಿ ಫೈನಲ್‌ನಲ್ಲಿ ಅಮೆರಿಕದ ಸೆರಾ ಹಿಲ್ಡಿಬ್ರೆಟ್ ಅವರನ್ನು ಎದುರಿಸಲಿದ್ದಾರೆ. ಸೆರಾ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತೆ.

'ಅಲ್ಲಿ ಗೆದ್ದಳು.... ಇಲ್ಲಿ ಸೋತಳು...'

ನವದೆಹಲಿ (ಪಿಟಿಐ): 'ಈ ಹುಡುಗಿಯನ್ನು ಸ್ವಂತ ದೇಶದಲ್ಲಿ ತುಳಿದು ಅವಮಾನಿಸಲಾಯಿತು. ರಸ್ತೆಯಲ್ಲಿ ಎಳೆದೊಯ್ಯಲಾಯಿತು. ಈಗ ಈ ಹುಡುಗಿ ವಿಶ್ವವನ್ನೇ ಗೆಲ್ಲಲು ಹೊರಟಿದ್ದಾಳೆ. ಆದರೆ ನಮ್ಮದೇ ದೇಶದ ವ್ಯವಸ್ಥೆಯಲ್ಲಿ ಸೋತಿದ್ದಾಳೆ....'

ಹೀಗೆಂದು ಬಜರಂಗ್ ಪೂನಿಯಾ ಎಕ್ಸ್ ಖಾತೆಯಲ್ಲಿ ವಿನೇಶಾ ಯಶಸ್ಸಿಗೆ ಅಭಿನಂದನೆ ಸಲ್ಲಿಸುವ ವೇಳೆ ಬರೆದಿದ್ದಾರೆ. ಮೊದಲ ಬಾರಿ ಫೈನಲ್ ತಲುಪಿರುವ ವಿನೇಶಾ ಅವರನ್ನು 'ಭಾರತದ ಸಿಂಹಿಣಿ' ಎಂದು ಬಣ್ಣಿಸಿದ್ದಾರೆ.

'ವಿನೇಶಾ ಫೋಗಟ್ ಭಾರತದ ಸಿಂಹಿಣಿ. ಇಂದು ಸತತ ಸೆಣಸಾಟಗಳಲ್ಲಿ ಜಯಗಳಿಸಿದ್ದಾರೆ. ನಾಲ್ಕು ಬಾರಿಯ ವಿಶ್ವ ಚಾಂಪಿಯನ್ನಳನ್ನು ಸೋಲಿಸಿದ್ದಾರೆ' ಎಂದು ಬರೆದಿದ್ದಾರೆ.

ವಿನೇಶಾ ಭಾರತದ ದಿಟ್ಟ ಸುಪುತ್ರಿ: ರಾಹುಲ್

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಮಹಿಳೆಯರ ಕುಸ್ತಿಯ ಫೈನಲ್ ಪ್ರವೇಶಿಸಿದ ವಿನೇಶಾ ಫೋಗಟ್ ಸಾಧನೆಯನ್ನು ಕೇಂದ್ರದ ವಿಪಕ್ಷ ನಾಯಕ ರಾಹುಲ್ ಗಾಂಧಿ ಶ್ಲಾಘಿಸಿದ್ದಾರೆ.

'ಮೈದಾನದಲ್ಲಿ ಸಾಧನೆ ಮಾಡುವ ಮೂಲಕವೇ ಸವಾಲುಗಳಿಗೆ ಉತ್ತರ ನೀಡುವುದೇ ಚಾಂಪಿಯನ್ನರ ಹೆಗ್ಗುರುತು. ವಿನೇಶಾ ಫೋಗಟ್ ಅಂತಹ ದಿಟ್ಟ ಸಾಧನೆ ಮಾಡಿದ್ದಾರೆ. ಒಂದೇ ದಿನದಲ್ಲಿ ಮೂವರು ಘಟಾನುಘಟಿ ಪೈಲ್ವಾನರನ್ನು ಸೋಲಿಸಿ ಫೈನಲ್ ಪ್ರವೇಶಿಸಿದ್ದಾರೆ' ಎಂದು ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

'ವಿನೇಶಾ ಮತ್ತು ಅವರ ಸಂಗಡಿಗರ ಸಾಮರ್ಥ್ಯ ಹಾಗೂ ಪ್ರಾಮಾಣಿಕತೆಯ ಬಗ್ಗೆ ಅವಮಾನಿಸಿದವರಿಗೆ ಈಗ ಉತ್ತರ ಸಿಕ್ಕಿದೆ. ಈ ಹಿಂದೆ ತಮ್ಮ ಕಂಗಳಿಂದ ರಕ್ತದ ಕಣ್ಣೀರು ಹರಿಯುವಂತೆ ಮಾಡಿದ ಅಧಿಕಾರಸ್ಥರಿಗೆ ತಕ್ಕ ಉತ್ತರ ನೀಡಿರುವ ವಿನೇಶಾ ಭಾರತದ ದಿಟ್ಟ ಸುಪುತ್ರಿಯಾಗಿದ್ದಾರೆ. ವಿನೇಶಾ, ಪ್ಯಾರಿಸ್‌ನಲ್ಲಿ ನೀವು ಮಾಡಿದ ಸಾಧನೆಯ ಸದ್ದು ದೆಹಲಿಯಲ್ಲಿಯೂ ಪ್ರತಿಧ್ವನಿಸುತ್ತಿದೆ. ಚಿನ್ನ ಗೆದ್ದು ಬನ್ನಿ' ಎಂದು ಹಾರೈಸಿದ್ದಾರೆ.

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.- 23102023-249617
CG - DL - E -23102023-249617
असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 4426] नई दिल्ली, शुक्रवार, अक्तूबर 20, 2023 / आश्विन 28, 1945
No. 4426] NEW DELHI, FRIDAY, OCTOBER 20, 2023 / ASVINA 28, 1945

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
ಬಾಣಾವರ–ಹುಳಿಯಾರ್ ಸೆಕ್ಷನ್ (ರಾ.ಹೆ. 234)
ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ವೃತ್ತ, ಪಿ.ಡಬ್ಲ್ಯೂ.ಡಿ. ಆವರಣ, ಬೆಂಗಳೂರು–560001.

ಸಾರ್ವಜನಿಕ ಪ್ರಕಟಣೆ
(ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಜಿ) ರಂತೆ)

ಎಸ್.ಓ. ನಂ. 4600(ಇ) – ಅಧಿಸೂಚನೆ ಸಂಖ್ಯೆ : ಎಸ್.ಓ. ನಂ. 1946(ಇ) ದಿನಾಂಕ: 27.04.2023ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997 ರ ಸೆಕ್ಷನ್ 3 (ಡಿ) (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು **ಕರ್ನಾಟಕ ರಾಜ್ಯದಲ್ಲಿರುವ ಚಿಕ್ಕಮಗಳೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವರ–ಹುಳಿಯಾರ್ ಸೆಕ್ಷನ್)** ರವರೆಗೆ ಎರಡು/ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ ಮಾಡುವ ಸಲುವಾಗಿ **ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು** ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಕಾಯ್ದೆಯ ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **"ಪ್ರಜಾವಾಣಿ"** ಮತ್ತು **"ಡೆಕ್ಕನ್ ಹೆರಾಲ್ಡ್"** ದಿನಪತ್ರಿಕೆಗಳಲ್ಲಿ ದಿನಾಂಕ **27.05.2023 ರ** ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) (1) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ. ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದುಪಡಿ ಕಾಯಿದೆ 1997ರ ಪ್ರಕಾರ 3(ಜಿ)(1), 3(ಜಿ)(2), 3(ಜಿ)(3) ಮತ್ತು 3(ಜಿ)(4) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮದ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯ	ಭೂಮಾಲೀಕರು/ ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
ಕಡೂರು ತಾಲ್ಲೂಕು: ತಿಮ್ಲಾಪುರ	27.08.2024 ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ	ಪ್ರವಾಸಿ ಮಂದಿರ ಅರಸೀಕೆರೆ.

ವಿಶೇಷ ಸೂಚನೆ: ದಿನಾಂಕ: 15.03.2024ರಲ್ಲಿನ ದಿನಪತ್ರಿಕೆ ಪ್ರಕಟಣೆಯಂತೆ ಅರಸೀಕೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ್ದ 3G ವಿಚಾರಣೆಯನ್ನು ಮೇಲ್ಕಂಡಂತೆ ದಿನಾಂಕ: 27.08.2024ರಂದು ಪ್ರವಾಸಿ ಮಂದಿರ, ಅರಸೀಕೆರೆ ಇಲ್ಲಿ ಮರುನಿಗದಿಪಡಿಸಲಾಗಿದೆ.

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ – 234
ಬಾಣಾವರ–ಹುಳಿಯಾರ್ ಸೆಕ್ಷನ್
ಕೆ.ಆರ್. ವೃತ್ತ, ಪಿ.ಡಬ್ಲ್ಯೂ.ಡಿ. ಆವರಣ, ಬೆಂಗಳೂರು–560001.

ಷೆಡ್ಯೂಲ್

ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 234 ರಲ್ಲಿ ಕಿ.ಮೀ. 194.900 ರಿಂದ ಕಿ.ಮೀ. 243.200 (ಬಾಣಾವರ–ಹುಳಿಯಾರ್ ಸೆಕ್ಷನ್) ರವರೆಗೆ ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಚಿಕ್ಕಮಗಳೂರು

ಕ್ರ. ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
ತಾಲ್ಲೂಕು: ಕಡೂರು					
ಗ್ರಾಮದ ಹೆಸರು : ತಿಮ್ಲಾಪುರ					
1	40	ಸರ್ಕಾರಿ	ಸರ್ಕಾರಿ	0.0175	ಸೇಂದಿವನ
			ಒಟ್ಟು	0.0175	

[F. No. NH-234-KNT-2017-18-870/3D2]
ಅಭಯ್ ಜೈನ್, ಉಪ ಕಾರ್ಯದರ್ಶಿಗಳು

ಚಿನ್ನದ ಪದಕ ಉಳಿಸಿಕೊಂಡ ಸ್ವೀಡನ್‌ನ ಅಥ್ಲೀಟ್

ಪೋಲ್‌ವಾಲ್ಟ್: ಡುಪ್ಲಾಂಟಿಸ್ ವಿಶ್ವದಾಖಲೆ

ಪ್ಯಾರಿಸ್ (ಎಎಫ್‌ಪಿ): ಸ್ವೀಡನ್‌ನ ಅರ್ಮಾಂಡ್ ಡುಪ್ಲಾಂಟಿಸ್ ಅವರು ಒಲಿಂಪಿಕ್ಸ್‌ನ ಪುರುಷರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ವಿಶ್ವದಾಖಲೆಯೊಂದಿಗೆ ಚಿನ್ನದ ಪದಕವನ್ನು ಉಳಿಸಿಕೊಂಡರು.

ಸೋಮವಾರ ತಡರಾತ್ರಿ ನಡೆದ ಫೈನಲ್ ಸ್ಪರ್ಧೆಯಲ್ಲಿ 69 ಸಾವಿರ ಪ್ರೇಕ್ಷಕರ ಸಮ್ಮುಖದಲ್ಲಿ 24 ವರ್ಷ ವಯಸ್ಸಿನ ಡುಪ್ಲಾಂಟಿಸ್ 6.25 ಮೀಟರ್ ಎತ್ತರ ಜಿಗಿದು ತಮ್ಮದೇ ದಾಖಲೆಯನ್ನು ಉತ್ತಮ ಪಡಿಸಿಕೊಂಡರು.

ಟೋಕಿಯೊ ಒಲಿಂಪಿಕ್ಸ್‌ನ ಚಾಂಪಿಯನ್ ಡುಪ್ಲಾಂಟಿಸ್, ಏಪ್ರಿಲ್‌ನಲ್ಲಿ ಚೀನಾದ ಕ್ಸಿಯಾಮೆನ್‌ನಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ 6.24 ಮೀಟರ್ ಸಾಧನೆಯೊಂದಿಗೆ ದಾಖಲೆ ನಿರ್ಮಿಸಿದ್ದರು. ಇದೀಗ ಅದಕ್ಕಿಂತ ಒಂದು ಸೆಂಟಿ ಮೀಟರ್ ಎತ್ತರಕ್ಕೆ ಜಿಗಿದ ಅಮೆರಿಕ ಮೂಲದ ಅಥ್ಲೀಟ್, ಸತತ ಒಂಬತ್ತನೇ ಬಾರಿ ದಾಖಲೆಯನ್ನು ಸುಧಾರಿಸಿದರು.

ಈ ಸ್ಪರ್ಧೆಯಲ್ಲಿ ಅಮೆರಿಕದ ಸ್ಯಾಮ್ ಕೆಂಡ್ರಿಕ್ಸ್ (5.95 ಮೀಟರ್) ಮತ್ತು ಗ್ರೀಸ್‌ನ ಎಮ್ಯಾನೌಯಿಲ್ ಕರಾಲಿಸ್ (5.90) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಅಮೆರಿಕದ ರಿಕನ್ ಬಾಬ್ ರಿಚರ್ಡ್ಸ್ ನಂತರ ಪೋಲ್ ವಾಲ್ಟ್ ಪ್ರಶಸ್ತಿಯನ್ನು ಎರಡು ಬಾರಿ ಗೆದ್ದ ಮೊದಲ ಅಥ್ಲೀಟ್ ಎಂಬ ಹಿರಿಮೆಗೂ ಡುಪ್ಲಾಂಟಿಸ್ ಪಾತ್ರವಾದರು. ರಿಚರ್ಡ್ಸ್ ಅವರು 1952 ಮತ್ತು 1956ರಲ್ಲಿ ಚಿನ್ನ ಗೆದ್ದಿದ್ದರು.

ಫಲಿತಾಂಶಗಳು: ಪುರುಷರು: ಪೋಲ್ ವಾಲ್ಟ್: ಅರ್ಮಾಂಡ್ ಡುಪ್ಲಾಂಟಿಸ್ (ಸ್ವೀಡನ್, 6.25 ಮೀಟರ್)–1; ಸ್ಯಾಮ್ ಕೆಂಡ್ರಿಕ್ಸ್ (ಅಮೆರಿಕ, 5.95 ಮೀ)–2; ಮ್ಯಾನೌಯಿಲ್ ಕರಾಲಿಸ್ (ಗ್ರೀಸ್, 5.90 ಮೀ)–3.

ಮಹಿಳೆಯರು: 800 ಮೀಟರ್ ಓಟ: ಕೀಲಿ ಹಾಡ್ಗ್‌ಕಿನ್ಸನ್ (ಗ್ರೇಟ್ ಬ್ರಿಟನ್, 1 ನಿ.56.71 ಸೆ)– 1; ತ್ಸಿಗೆ ಡುಗುಮಾ (ಇಥಿಯೋಪಿಯಾ, 1:57.15)–2; ಮೇರಿ ಮೊರಾ (ಕೆನ್ಯಾ, 1:57.42)– 3.

5000 ಮೀಟರ್ ಓಟ: ಬೀಟ್ರಿಸ್ ಚೆಬೆಟ್ (ಕೆನ್ಯಾ, 14 ನಿ. 28.56 ಸೆ)– 1; ಫೈತ್ ಕಿಪಿಗೋನ್ (ಕೆನ್ಯಾ, 14:29.60)– 2; ಸಿಫಾನ್ ಹಸನ್ (ನೆದರ್ಲೆಂಡ್ಸ್, 14:30.61)–3. ಡಿಸ್ಕಸ್ ಥ್ರೋ: ವಲೇರಿ ಅಲೆನ್ (ಅಮೆರಿಕ, 69.50 ಮೀ)– 1; ಬಿನ್ ಫೆಂಗ್ (ಚೀನಾ, 67.51)–2; ಸಾಂಡ್ರಾ ಎಲ್ಕಾಸೆವಿಕ್ (ಕ್ರೊವೇಷ್ಯಾ, 67.51)–3.



ಪ್ಯಾರಿಸ್‌ನ ಒಲಿಂಪಿಕ್ಸ್‌ನ ಪುರುಷರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ ಸ್ವೀಡನ್‌ನ ಅರ್ಮಾಂಡ್ ಡುಪ್ಲಾಂಟಿಸ್ ಅವರ ವಿಶ್ವದಾಖಲೆಯ ಜಿಗಿತ ಪ್ರಜಾವಾಣಿ ಚಿತ್ರ:ಕೆ.ಎನ್. ಶಾಂತಕುಮಾರ್

6.25 ಮೀಟರ್ ಎತ್ತರ ಜಿಗಿದು ತಮ್ಮದೇ ದಾಖಲೆಯನ್ನು ಉತ್ತಮಪಡಿಸಿದ ಸ್ವೀಡನ್‌ನ ಅರ್ಮಾಂಡ್ ಡುಪ್ಲಾಂಟಿಸ್

ಒಲಿಂಪಿಕ್ಸ್‌ನಲ್ಲಿ ಇಂದು
(ಭಾರತದ ಸ್ಪರ್ಧೆ)

ಅಥ್ಲೆಟಿಕ್ಸ್

ಮಿಶ್ರ ಮ್ಯಾರಥಾನ್ ವಾಕ್ ರಿಲೆ (ಪದಕ ಸುತ್ತು): ಪ್ರಿಯಾಂಕಾ ಗೋಸ್ವಾಮಿ, ಸೂರಜ್ ಪನ್ವರ್, ಬೆಳಗ್ಗೆ **11**

ಪುರುಷರ ಹೈಜಂಪ್ (ಅರ್ಹತಾ ಸುತ್ತು): ಸರ್ವೇಶ್ ಕುಶರೆ, ಮಧ್ಯಾಹ್ನ **1.35**

ಮಹಿಳೆಯರ ಜಾವೆಲಿನ್ ಥ್ರೋ (ಅರ್ಹತಾ ಸುತ್ತು): ಅನು ರಾಣಿ, ಮಧ್ಯಾಹ್ನ **1.55**

ಮಹಿಳೆಯರ 100 ಮೀ. ಹರ್ಡಲ್ಸ್ (ಮೊದಲ ಸುತ್ತು): ಜ್ಯೋತಿ ಯರ್‍ರಾಜಿ (ಹೀಟ್–4), ಮಧ್ಯಾಹ್ನ **2.09**

ಪುರುಷರ ಟ್ರಿಪಲ್ ಜಂಪ್ (ಅರ್ಹತಾ ಸುತ್ತು): ಪ್ರವೀಣ್ ಚಿತ್ರವೇಲ್, ಅಬ್ದುಲ್ಲಾ ಅಬೂಬಕರ್, ರಾತ್ರಿ **10.45**

ಪುರುಷರ 3,000 ಮೀ. ಸ್ಟೀಪಲ್ ಚೇಸ್: ಅವಿನಾಶ್ ಸಾಬ್ಳೆ ರಾತ್ರಿ **1.13** (ಗುರುವಾರ)

ಗಾಲ್ಫ್

ಮಹಿಳೆಯರ ವೈಯಕ್ತಿಕ (ಫೈನಲ್ಸ್): ಅದಿತಿ ಅಶೋಕ್, ದೀಕ್ಷಾ ದಾಗರ್ ಮಧ್ಯಾಹ್ನ **12.30**

ಟೇಬಲ್ ಟೆನಿಸ್

ಮಹಿಳೆಯರ ತಂಡ (ಕ್ವಾರ್ಟರ್ ಫೈನಲ್): ಭಾರತ (ಶ್ರೀಜಾ ಅಕುಲಾ, ಮಣಿಕಾ ಬಾತ್ರಾ, ಅರ್ಚನಾ ಕಾಮತ್) ವಿರುದ್ಧ ಜರ್ಮನಿ ಮಧ್ಯಾಹ್ನ **1.30**

ಕುಸ್ತಿ

ಮಹಿಳೆಯರ ಫ್ರೀಸ್ಟೈಲ್ (1/8 ಫೈನಲ್ಸ್): ಅಂತಿಮ್ ಪಂಘಲ್ ವಿರುದ್ಧ ಝೆನೆಪ್ ಯೆಟ್ಗಿಲ್ ಮಧ್ಯಾಹ್ನ **3.05**

ವೇಟ್‌ಲಿಫ್ಟಿಂಗ್

ಮಹಿಳೆಯರ 46 ಕೆ.ಜಿ. (ಪದಕ ಸುತ್ತು): ಸೈಕೋಮ್ ಮೀರಾಬಾಯಿ ಚಾನು, ಮಧ್ಯಾಹ್ನ **11**

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಮಿಂಚಿದ ಹಾಲಿ ಚಾಂಪಿಯನ್ ಚೋಪ್ರಾ • ಫಿಟ್‌ನೆಸ್ ಕುರಿತ ಊಹಾಪೋಹಗಳಿಗೆ ತೆರೆ

ಮೊದಲ ಎಸೆತದಲ್ಲೇ ಫೈನಲ್‌ಗೆ ನೀರಜ್ ಲಗ್ಗೆ

• ಸಿದ್ದಿ ಕಿರಣ್

ಪ್ಯಾರಿಸ್: ಭಾರತದ ಚಿನ್ನದ ಹುಡುಗ ನೀರಜ್ ಚೋಪ್ರಾ ಅವರು ತಮ್ಮ ಫಿಟ್‌ನೆಸ್ ಮತ್ತು ಫಾರ್ಮ್ ಬಗ್ಗೆ ಇದ್ದ ಊಹಾಪೋಹಗಳಿಗೆ ತೆರೆ ಎಳೆದರು. ಒಲಿಂಪಿಕ್ ಕೂಟದ ಪುರುಷರ ಜಾವೆಲಿನ್ ಥ್ರೋನಲ್ಲಿ ಫೈನಲ್‌ಗೆ ಅರ್ಹತೆ ಗಿಟ್ಟಿಸಿದರು.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ನೀರಜ್ ಈ ವರ್ಷವೂ ಚಾಂಪಿಯನ್ ಪಟ್ಟಕ್ಕೆ ನೆಚ್ಚಿನ ಅಥ್ಲೀಟ್ ಆಗಿದ್ದಾರೆ. ಮಂಗಳವಾರ ನಡೆದ ಅರ್ಹತಾ ಸುತ್ತಿನ ಬಿ ಗುಂಪಿನಲ್ಲಿ 89.34 ಮೀಟರ್ಸ್ ದೂರ ಥ್ರೋ ಮಾಡಿ ಫೈನಲ್‌ಗೆ ಲಗ್ಗೆ ಇಟ್ಟರು.

ಹೋದ ವರ್ಷ ವಿಶ್ವ ಅಥ್ಲೆಟಿಕ್ಸ್ ಮತ್ತು ಏಷ್ಯನ್ ಗೇಮ್ಸ್‌ಗಳಲ್ಲಿ ಚಿನ್ನದ ಪದಕ ಜಯಿಸಿದ್ದರು. ಅವರು ಈಚೆಗೆ ತೊಡೆಯ ಸ್ನಾಯುವಿನ ನೋವಿನಿಂದ ಬಳಲಿದ್ದರು. ಅದರಿಂದಾಗಿ ಅವರು ಪ್ಯಾರಿಸ್‌ನಲ್ಲಿ ಭಾಗವಹಿಸುವ ಕುರಿತ ಚರ್ಚೆಗಳು ನಡೆದಿದ್ದವು. ಇದೀಗ ಚೋಪ್ರಾ ತಾವು ಈ ಬಾರಿಯೂ ಚಿನ್ನದ ಪದಕಕ್ಕೆ ಕೊರಳೊಡ್ಡುವ ಇರಾದೆಯನ್ನು ತೋರಿಸಿದರು. ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಲ್ಲಿ ನಡೆದ ಅರ್ಹತಾ ಸುತ್ತಿನ ತಮ್ಮ ಮೊದಲ ಎಸೆತದಲ್ಲಿಯೇ 89.34 ಮೀಟರ್ಸ್ ಸಾಧನೆ ಮಾಡಿದರು. ಈ ಎಸೆತದ ನಂತರ ತಮ್ಮ ತೋಳಗಲಿಸಿ ಎರಡೂ ಕೈಗಳನ್ನು ಎತ್ತಿ ಸಂಭ್ರಮಿಸಿದರು. ತಮ್ಮ ಗುರಿಸಾಧನೆ ಆಯಿತು ಎಂಬ ಸಂತಸ ಅವರ ಮುಖದಲ್ಲಿತ್ತು.

ಇದು ಅವರ ಕ್ರೀಡಾಜೀವನದ ವೈಯಕ್ತಿಕ ಎರಡನೇ ಶ್ರೇಷ್ಠ ಥ್ರೋ ಆಗಿದೆ. 2022ರ ಜೂನ್‌ನಲ್ಲಿ ಅವರು 89.94 ಮೀ ದೂರ ಥ್ರೋ ಮಾಡಿದ್ದರು.

ಗುರುವಾರ ನಡೆಯಲಿರುವ ಫೈನಲ್‌ನಲ್ಲಿ ಅವರು ಕಣಕ್ಕಿಳಿಯಲಿದ್ದಾರೆ. ಅವರು ಎರಡು ಬಾರಿಯ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್, ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಜೇಕಬ್ ವಾಡ್ಲೆಚ್, ಜರ್ಮನಿಯ ಜೂಲಿಯನ್ ವೆಬರ್ ಮತ್ತು ಪಾಕಿಸ್ತಾನದ ಅರ್ಷದ್ ನದೀಮ್ ಅವರ ಪೈಪೋಟಿಯನ್ನು ಎದುರಿಸಲಿದ್ದಾರೆ.

'ಇದು ಅರ್ಹತಾ ಸುತ್ತು ಮಾತ್ರ. ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಇದು ಉತ್ತಮ ಹಾದಿಯಾಗಿದೆ. ಅಂದುಕೊಂಡ ಗುರಿಯನ್ನು ಸಾಧಿಸಿದ್ದಕ್ಕೆ ಸಂತಸವಾಗಿದೆ. ಮುಂದಿನ ಗುರಿ ಚಿನ್ನದ ಪದಕವನ್ನು ಉಳಿಸಿಕೊಳ್ಳುವುದು. ಅರ್ಹತಾ ಸುತ್ತಿನಲ್ಲಿರುವ ಮನಸ್ಥಿತಿಗೂ ಮತ್ತು ಫೈನಲ್‌ಗೂ ವ್ಯತ್ಯಾಸವಿರುತ್ತದೆ. ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದಿದ್ದು ಉತ್ತಮ ಸಾಧನೆ. ಆದರೆ ಫೈನಲ್‌ನಲ್ಲಿ ಉತ್ತಮವಾದ ಸಾಧನೆ ಮಾಡುವುದು ಮುಖ್ಯವಾಗುತ್ತದೆ. ನಾನು ಫೈನಲ್ ಮೇಲೆ ಪೂರ್ಣವಾಗಿ ಚಿತ್ತ ನೆಟ್ಟಿರುವೆ' ಎಂದು ಚೋಪ್ರಾ ಹೇಳಿದರು.

ತಮ್ಮ ಗಾಯದ ಸಮಸ್ಯೆಯ ಕುರಿತು ಪ್ರತಿಕ್ರಿಯಿಸಿದ ಅವರು, 'ಸಮಸ್ಯೆಗಳು ಇದ್ದವು. ಆದರೆ ಇಲ್ಲಿಗೆ ಬರುವ ಬಹಳ ಸಮಯದ ಮುನ್ನವೇ ಎಲ್ಲವನ್ನೂ ಪರಿಹರಿಸಿಕೊಳ್ಳಲಾಗಿದೆ. ಈಗ ಏನಿದ್ದರೂ ಫೈನಲ್ ಮೇಲೆ ನನ್ನ ಚಿತ್ತ' ಎಂದರು.

ನೀರಜ್ ಅವರು ಹೆಚ್ಚು ಬೆವರು ಹರಿಸದೇ ಫೈನಲ್ ತಲುಪಿ ನಿರಾಳರಾದರು.

ಆದರೆ ಇದೇ ಅರ್ಹತಾ ಸುತ್ತಿನಲ್ಲಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಕಿಶೋರ್ ಕುಮಾರ್ ಜೇನಾ ತಮ್ಮ ಸಾಮರ್ಥ್ಯಕ್ಕೆ ತಕ್ಕ ಥ್ರೋ ಮಾಡುವಲ್ಲಿ ಸಫಲರಾಗಲಿಲ್ಲ. 80.73 ಮೀ ದೂರ ಥ್ರೋ ಮಾಡಿದ ಅವರು 18ನೇ ಸ್ಥಾನ ಪಡೆದರು.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೋ ಮಾಡಿದ ಭಾರತದ ನೀರಜ್ ಚೋಪ್ರಾ –ಪಿಟಿಐ ಚಿತ್ರ

ಫೈನಲ್ ಪ್ರವೇಶಿಸಿದವರು

ಅಥ್ಲೀಟ್	ಅರ್ಹತಾಸುತ್ತಿನ ಫಲಿತಾಂಶ
ನೀರಜ್ ಚೋಪ್ರಾ (ಭಾರತ)	89.34 ಮೀ
ಆ್ಯಂಡರ್ಸನ್ ಪೀಟರ್ಸ್ (ಗ್ರೆನೆಡಾ)	88.63 ಮೀ
ಜೂಲಿಯನ್ ವೆಬರ್ (ಜರ್ಮನಿ)	87.76 ಮೀ
ಅರ್ಷದ್ ನದೀಂ (ಪಾಕಿಸ್ತಾನ)	86.59 ಮೀ
ಜೂಲಿಯಸ್ ಯೆಗೊ (ಕೆನ್ಯಾ)	85.97 ಮೀ
ಲ್ಯೂಜ್ ಮಾರ್ಸೆ ಡಿಸಿಲ್ವಾ (ಬ್ರೆಜಿಲ್)	85.91 ಮೀ
ಜೇಕಬ್ ವಾಡ್ಲೆಚ್ (ಜೆಕ್ ಗಣರಾಜ್ಯ)	85.63 ಮೀ
ಟೋನಿ ಕೆರಾನೆನ್ (ಫಿನ್ಲೆಂಡ್)	85.27 ಮೀ
ಆ್ಯಂಡ್ರಿನ್ ಮಾರ್ಡ್ರೆ (ಮೊಲ್ಡೊವಾ)	84.13 ಮೀ
ಒಲಿವರ್ ಹಿಲ್ಯಾಂಡರ್ (ಫಿನ್ಲೆಂಡ್)	83.81 ಮೀ
ಕೆಶಾರ್ನ್ ವಾಲ್ಕಾಟ್ (ಟ್ರಿನಿಡಾಡ್ ಮತ್ತು ಟೊಬಾಗೊ)	83.02 ಮೀ
ಲೆಸಿ ಎಟ್ಲಾಟಲೊ (ಫಿನ್ಲೆಂಡ್)	82.91 ಮೀ



ಕಿಶೋರ್ ಕುಮಾರ್ ಜೇನಾ –ಪಿಟಿಐ ಚಿತ್ರ

ಭಾರತದ ಕಿರಣ್ ಪಹಲ್ ಮಂಗಳವಾರ ಒಲಿಂಪಿಕ್ಸ್‌ನ ಮಹಿಳೆಯರ 400 ಮೀಟರ್ ಸ್ಪರ್ಧೆಯ ರೆಪೆಷಾಜ್ ಸುತ್ತಿನಲ್ಲಿ ಓಡಿದರು. ಆದರೆ, ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ವಿಫಲರಾದರು – ಪಿಟಿಐ ಚಿತ್ರ

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಮೆರಿಕ	22	31	29	82
ಚೀನಾ	22	20	16	58
ಆಸ್ಟ್ರೇಲಿಯಾ	14	12	9	39
ಫ್ರಾನ್ಸ್	13	16	19	48
ಬ್ರಿಟನ್	12	15	18	45
ದ.ಕೊರಿಯಾ	11	08	7	26
ಜಪಾನ್	11	6	11	28
ಇಟಲಿ	9	10	6	25
ನೆದರ್‌ಲೆಂಡ್ಸ್	8	5	6	19
ಭಾರತ	0	0	3	3

ಪಟ್ಟಿಯಲ್ಲಿ ಭಾರತ 61ನೇ ಸ್ಥಾನದಲ್ಲಿದೆ

ಕಂಚಿನ ಪದಕ ಪಂದ್ಯದಲ್ಲಿ ಭಾರತಕ್ಕೆ ಸ್ಪೇನ್ ಸವಾಲು • ಫೈನಲ್‌ಗೆ ಜರ್ಮನಿ, ನೆದರ್ಲೆಂಡ್ಸ್

ಹಾಕಿ ತಂಡದ ಕೈತಪ್ಪಿದ ಫೈನಲ್ ಅವಕಾಶ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ ಕೂಟದಲ್ಲಿ 44 ವರ್ಷಗಳ ನಂತರ ಫೈನಲ್‌ಗೆ ಪ್ರವೇಶಿಸುವ ಭಾರತ ತಂಡದ ಕನಸು ಕಮರಿತು.

ಮಂಗಳವಾರ ಇಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಭಾರತ ತಂಡವು 2–3 ಗೋಲುಗಳಿಂದ ಜರ್ಮನಿ ವಿರುದ್ಧ ಸೋತಿತು. ನಾಲ್ಕರ ಘಟ್ಟದ ರೋಚಕ ಹಣಾಹಣಿಯಲ್ಲಿ ಭಾರತದ ನಾಯಕ ಹರ್ಮನ್‌ಪ್ರೀತ್ ಸಿಂಗ್ (7ನೇ ನಿಮಿಷ) ಹಾಗೂ ಸುಖಜೀತ್ ಸಿಂಗ್ (36ನೇ ನಿ) ಗೋಲು ಗಳಿಸಿದರು. ಜರ್ಮನಿಯ ಗೋಂಜಾಲೊ ಪೀಲತ್ (18ನಿ), ಕ್ರಿಸ್ಟೋಫರ್ ರೂರ್ (27ನೇ ನಿ) ಮತ್ತು ಮಾರ್ಕೊ ಮಿಲ್ಕಾವು (54ನಿ) ಗೋಲು ಹೊಡೆದರು.

ಈ ಪಂದ್ಯದಲ್ಲಿ ಭಾರತ ತಂಡವೇ ಮೊದಲು ಗೋಲಿನ ಖಾತೆ ತೆರೆಯಿತು. ಕ್ವಾರ್ಟರ್‌ಫೈನಲ್‌ನಲ್ಲಿ ಬ್ರಿಟನ್ ಎದುರು ವೀರಾವೇಶದಿಂದ ಹೋರಾಡಿ ಗೆದ್ದಿದ್ದ ಭಾರತ ತಂಡವು ಇಲ್ಲಿಯೂ ಉತ್ತಮ ಆರಂಭ ಪಡೆಯಿತು. ಏಳನೇ ನಿಮಿಷದಲ್ಲಿ ಹರ್ಮನ್ ಗೋಲು ಹೊಡೆದು 1–0 ಮುನ್ನಡೆ ಒದಗಿಸಿದರು.

ಇದಾಗಿ ಹನ್ನೊಂದು ನಿಮಿಷಗಳು ಕಳೆದ ನಂತರ ಜರ್ಮನಿಯ ಗೊಂಜಾಲೊ ತಿರುಗೇಟು ನೀಡಿದರು. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಹೊಡೆದರು. 9 ನಿಮಿಷಗಳ ನಂತರ ಕ್ರಿಸ್ಟೋಫರ್ ಗೋಲು ಹೊಡೆದು ಜರ್ಮನಿಗೆ 2–1 ರ ಮುನ್ನಡೆ ನೀಡಿದರು. ನಂತರದ ಹತ್ತು ನಿಮಿಷ ಉಭಯ ತಂಡಗಳಲ್ಲಿ ಪೈಪೋಟಿ ಮುಗಿಲು ಮುಟ್ಟಿತು.

ಮೂರನೇ ಕ್ವಾರ್ಟರ್‌ನಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಸುಖಜೀತ್ ಮೇಲುಗೈ ಸಾಧಿಸಿದರು. ಇದರಿಂದಾಗಿ 2–2ರ ಸಮಬಲವಾಯಿತು. ಮುಂದಿನ 18 ನಿಮಿಷಗಳ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಉಭಯ ತಂಡಗಳ ಆಟಗಾರರೂ ಛಲದ ಆಟವಾಡಿದರು. ಆದರೂ ಗೋಲು ಗಳಿಸುವುದು ಸಾಧ್ಯವಾಗಲಿಲ್ಲ.

ಆದರೂ ಪಂದ್ಯದ 54ನೇ ನಿಮಿಷದಲ್ಲಿ ಮಾರ್ಕೊ ಕೈಚಳಕ ಮೆರೆದರು. ಜರ್ಮನಿಗೆ ಮುನ್ನಡೆ ಗಳಿಸಿಕೊಟ್ಟರು. ಕೊನೆಯವರೆಗೂ ಈ ಅಂತರ ಕಾಪಾಡಿಕೊಂಡ ಜರ್ಮನಿ ಗೆದ್ದು ಫೈನಲ್ ಪ್ರವೇಶಿಸಿತು.

ಭಾರತ ತಂಡವು ಗುರುವಾರ ಕಂಚಿನ ಪದಕಕ್ಕಾಗಿ ನಡೆಯಲಿರುವ ಪಂದ್ಯದಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ. ಭಾರತ ತಂಡವು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿತ್ತು.

ನೆದರ್ಲೆಂಡ್ಸ್‌ಗೆ ಜಯ: ಇನ್ನೊಂದು ಸೆಮಿಫೈನಲ್‌ನಲ್ಲಿ ನೆದರ್ಲೆಂಡ್ಸ್ ತಂಡವು 4–0ಯಿಂದ ಸ್ಪೇನ್ ವಿರುದ್ಧ ಜಯಿಸಿತು. ನೆದರ್ಲೆಂಡ್ಸ್ ಫೈನಲ್‌ಗೆ ಪ್ರವೇಶಿಸಿತು.

ಜರ್ಮನಿ ವಿರುದ್ಧದ ಪಂದ್ಯದಲ್ಲಿ ಭಾರತದ ಹಾಕಿ ಆಟಗಾರರು –ಎಎಫ್‌ಪಿ ಚಿತ್ರ

ಗಾಯದ ಸಮಸ್ಯೆ ಮೀರಿ ಗೆಲ್ಲುವರೇ ವೇಟ್‌ಲಿಫ್ಟರ್ ಮೀರಾಬಾಯಿ ಚಾನು?

ಪ್ಯಾರಿಸ್ (ಪಿಟಿಐ): ಟೋಕಿಯೊ ಒಲಿಂಪಿಕ್ ಕೂಟದ ಬೆಳ್ಳಿ ಪದಕ ವಿಜೇತ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರು ಪ್ಯಾರಿಸ್‌ನಲ್ಲಿ ಬುಧವಾರ ಕಣಕ್ಕಿಳಿಯಲಿದ್ದಾರೆ.

ದೀರ್ಘ ಅವಧಿಯಿಂದ ಅವರು ಗಾಯದ ಸಮಸ್ಯೆ ಎದುರಿಸುತ್ತಿದ್ದಾರೆ. ಆದ್ದರಿಂದ ಹೆಚ್ಚು ಸ್ಪರ್ಧೆಗಳಲ್ಲಿ ಭಾಗವಹಿಸಿಲ್ಲ. ಸಾರ್ವಜನಿಕವಾಗಿಯೂ ಹೆಚ್ಚು ಕಾಣಿಸಿಕೊಂಡಿಲ್ಲ. ಫಿಟ್‌ನೆಸ್ ಕೊರತೆಯನ್ನು ಎದುರಿಸುತ್ತಿದ್ದಾರೆ. ಇವೆಲ್ಲವನ್ನೂ ಈಗ ಹಿಂದಿಕ್ಕಿ ಮತ್ತೊಂದು ಪದಕ ಗಳಿಸುವ ಛಲದೊಂದಿಗೆ ಕಣಕ್ಕಿಳಿಯುತ್ತಿದ್ದಾರೆ. 2020ರ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದ ಪದಕ ಖಾತೆಯನ್ನು ಮೀರಾಬಾಯಿ ತೆರೆದಿದ್ದರು. ಹೋದ ಅಕ್ಟೋಬರ್‌ನಲ್ಲಿ ಏಷ್ಯನ್ ಗೇಮ್ಸ್‌ನಲ್ಲಿ ಅವರು ಸೊಂಟದ ನೋವು ಅನುಭವಿಸಿದ್ದರು.

ಅದಕ್ಕೂ ಮುನ್ನ ಅವರು 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಒಟ್ಟು 201 ಕೆ.ಜಿ (88 +113) ತೂಕ ಎತ್ತಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು 202 ಕೆ.ಜಿ ತೂಕ ಎತ್ತಿದ್ದರು.

49 ಕೆ.ಜಿ ವಿಭಾಗದಲ್ಲಿ ಅವರು ಕಣಕ್ಕಿಳಿಯಲಿದ್ದಾರೆ. ಚೀನಾದ ಹೌ ಝಿಹುಯಿ ಅವರ ಸ್ಪರ್ಧೆ ಎದುರಿಸಲಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿಯೂ ಝಿಹುಯಿ ಚಿನ್ನ ಜಯಿಸಿದ್ದರು.

'ಮೀರಾ 200 ಕೆ.ಜಿ ಗಿಂತ ಹೆಚ್ಚು ತೂಕವನ್ನು ಎತ್ತಬೇಕಿದೆ. ಈ ಬಾರಿ 205 ಕೆಜಿಗಿಂತ ಹೆಚ್ಚು ಹೋದರೆ ಪದಕ ಜಯಿಸುವ ಸಾಧ್ಯತೆಗಳು ಹೆಚ್ಚಬಹುದು. ಈ ಸವಾಲಿಗೆ ಪೂರ್ಣವಾಗಿ ಸಿದ್ಧರಾಗಿದ್ದೇವೆ' ಎಂದು ಕೋಚ್ ವಿಜಯ್ ಶರ್ಮಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಣಿಪುರದ 29 ವರ್ಷದ ಮೀರಾ ಅವರು ಅಮೆರಿಕದ ತಜ್ಞ ವೈದ್ಯ ಆ್ಯರನ್ ಹಾರ್ಷಿಗ್ ಅವರಿಂದ ಚಿಕಿತ್ಸೆ ಪಡೆದಿದ್ದಾರೆ.



ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು –ಪಿಟಿಐ ಚಿತ್ರ

ಟಿಟಿ: ಚೀನಾಕ್ಕೆ ಮಣಿದ ಭಾರತ ತಂಡ

ಪ್ಯಾರಿಸ್ (ಪಿಟಿಐ): ಅನುಭವಿ ಆಟಗಾರ ಅಚಂತ ಶರತ್ ಕಮಲ್ ಅವರು ಪ್ರತಿರೋಧ ತೋರಿದರೂ, ಭಾರತ ತಂಡ ಒಲಿಂಪಿಕ್ಸ್ ಟೇಬಲ್ ಟೆನಿಸ್ ತಂಡ ಸ್ಪರ್ಧೆಯ ಪ್ರಿ-ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಬಲ ಚೀನಾಕ್ಕೆ ಮಂಗಳವಾರ 0–3 ರಲ್ಲಿ ಮಣಿಯಿತು.

ಹರ್ಮಿತ್ ದೇಸಾಯಿ ಮತ್ತು ಮಾನವ್ ಠಕ್ಕರ್ ಅವರು ಮೊದಲ ಡಬಲ್ಸ್‌ನಲ್ಲಿ ಚೀನಾದ ಅನುಭವಿ ಜೋಡಿ ಮಾ ಲಾಂಗ್ ಮತ್ತು ಚುಕಿನ್ ವಾಂಗ್ ಅವರಿಗೆ 2-11, 3-11, 7-11 ರಲ್ಲಿ ಮಣಿದರು.

ಮೊದಲ ಸಿಂಗಲ್ಸ್‌ನಲ್ಲಿ ಫಾನ್ ಝೆನ್‌ಡಾಂಗ್ ಅವರನ್ನು ಎದುರಿಸಿದ ಶರತ್ ಕಮಲ್ 11–9ರಲ್ಲಿ ಮೊದಲ ಗೇಮ್ ಗೆದ್ದರೂ ನಂತರ ಚೀನಾ ಆಟಗಾರ ಚೇತರಿಸಿಕೊಂಡು 11–7, 11–7, 11–5 ರಿಂದ ಜಯಗಳಿಸಿ ತಂಡಕ್ಕೆ 2–0 ಮುನ್ನಡೆ ಒದಗಿಸಿದರು. 24 ವರ್ಷದ ಮಾನವ್ ನಂತರ ಎರಡನೇ ಸಿಂಗಲ್ಸ್‌ನಲ್ಲಿ 9–11, 6–11, 9–11 ರಲ್ಲಿ ಚುಕಿನ್ ಎದುರು ಸೋಲನುಭವಿಸಿದರು.

ಸೋಮವಾರ ನಡೆದ ಮಹಿಳೆಯರ ವಿಭಾಗದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಭಾರತ (ಮಣಿಕಾ ಬಾತ್ರಾ, ಶ್ರೀಜಾ ಅಕುಲಾ ಮತ್ತು ಅರ್ಚನಾ ಕಾಮತ್) ತಂಡ, ತನಗಿಂತ ಮೇಲಿನ ಕ್ರಮಾಂಕದ ರುಮೇನಿಯಾ ತಂಡವನ್ನು ಮಣಿಸಿತ್ತು.



ಗೋಲು ಗಳಿಸಿದ ಸಂಭ್ರಮದಲ್ಲಿ ಫ್ರಾನ್ಸ್ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ಫುಟ್‌ಬಾಲ್: ಫೈನಲ್‌ಗೆ ಫ್ರಾನ್ಸ್, ಸ್ಪೇನ್

ಪ್ಯಾರಿಸ್ (ಎಎಫ್‌ಪಿ): ಜೀನ್ ಫಿಲಿಪ್ ಮಟೆಟಾ ಗಳಿಸಿದ ಎರಡು ಗೋಲುಗಳ ಬಲದಿಂದ ಆತಿಥೇಯ ಫ್ರಾನ್ಸ್ ತಂಡವು ಒಲಿಂಪಿಕ್ಸ್‌ನ ಪುರುಷರ ಫುಟ್‌ಬಾಲ್‌ನಲ್ಲಿ ಫೈನಲ್ ಪ್ರವೇಶಿಸಿದೆ. ಚಿನ್ನದ ಪದಕಕ್ಕಾಗಿ ಶುಕ್ರವಾರ ಟೋಕಿಯೊ ಒಲಿಂಪಿಕ್ಸ್‌ನ ರನ್ನರ್ ಅಪ್ ಸ್ಪೇನ್ ವಿರುದ್ಧ ಸೆಣಸಾಟ ನಡೆಸಲಿವೆ.

ಮಂಗಳವಾರ ನಡೆದ ಸೆಮಿಫೈನಲ್‌ನಲ್ಲಿ ಆರಂಭದಲ್ಲಿ ಹಿನ್ನಡೆ ಅನುಭವಿಸಿದ್ದ ಆತಿಥೇಯ ಫ್ರಾನ್ಸ್ ತಂಡವು ಹೆಚ್ಚುವರಿ ಅವಧಿಯಲ್ಲಿ ಎರಡು ಗೋಲು ದಾಖಲಿಸಿ, 3–1ರಿಂದ ಈಜಿಪ್ಟ್ ತಂಡವನ್ನು ಮಣಿಸಿತು.

ಪಂದ್ಯದ 83ನೇ ಮತ್ತು 99ನೇ ನಿಮಿಷದಲ್ಲಿ ಮಟೆಟಾ ಚೆಂಡನ್ನು ಗುರಿ ಸೇರಿಸಿ ಫ್ರಾನ್ಸ್ ತಂಡದ ಗೆಲುವಿನ ರೂವಾರಿಯಾದರು. ಮತ್ತೊಂದು ಗೋಲನ್ನು ಮೈಕೆಲ್ ಅಕ್ಪೋವಿ ಒಲಿಸ್ (108ನೇ ನಿಮಿಷ) ದಾಖಲಿಸಿದರು. ಈಜಿಪ್ಟ್ ಪರ ಏಕೈಕ ಗೋಲನ್ನು ಮೊಹಮ್ಮದ್ ಸಾಬರ್ (62ನೇ ನಿ) ತಂದಿತ್ತರು.

ಇದಕ್ಕೂ ಮೊದಲು ನಡೆದ ಮತ್ತೊಂದು ಸೆಮಿಫೈನಲ್‌ನ ರೋಚಕ ಹಣಾಹಣಿಯಲ್ಲಿ ಯುರೋ ಕಪ್ ಚಾಂಪಿಯನ್ ಸ್ಪೇನ್ ತಂಡವು 2–1ರಿಂದ ಟೋಕಿಯೊದಲ್ಲಿ ಕಂಚು ಗೆದ್ದಿದ್ದ ಮೊರಾಕ್ಕೊ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿತು.

ಸ್ಪೇನ್‌ಪರಫರ್ಮಿನ್‌ಲೋಪೆಜ್(65ನೇನಿ)ಮತ್ತುಜುವಾನ್ಲು ಸ್ಯಾಂಚೆಜ್ (85ನೇ ನಿ) ಗೋಲು ಗಳಿಸಿದರು. ಸೋಫಿನ್ ರಹಿಮಿ (37ನೇ ನಿ) ಅವರು ಮೊರಕ್ಕೊ ಪರ ಗೋಲು ಗಳಿಸಿದರು.

ಪ್ರಕಾಶ್ ಪಡುಕೋಣೆ ಹೇಳಿಕೆಗೆ ಅಶ್ವಿನಿ ಅಸಮಾಧಾನ

ಅಶ್ವಿನಿ ಪೊನ್ನಪ್ಪ

ನವದೆಹಲಿ (ಪಿಟಿಐ): ಒಬ್ಬ ಆಟಗಾರನ ಜಯದ ಶ್ರೇಯವನ್ನು ಪಡೆಯಲು ಎಲ್ಲರೂ ಧಾವಿಸುತ್ತಾರೆ. ಆದರೆ ಸೋತಾಗ ತಪ್ಪೆಲ್ಲವೂ ಆ ಕ್ರೀಡಾಪಟುವಿನದ್ದೇ ಆಗುತ್ತದೆ. ಇದು ಬೇಸರದ ಸಂಗತಿ. ಗೆಲುವು ತಂಡದ ಪ್ರಯತ್ನದ ಫಲ. ಸೋಲು ಕೂಡ ತಂಡದ್ದೇ ಜವಾಬ್ದಾರಿ. ಪರಾಭವಗೊಂಡಾಗ ಏಕಾಏಕಿ ಆಟಗಾರನನ್ನು ಬಸ್ ಕೆಳಗೆ ಬಿಸಾಕಬಾರದು ಎಂದು ಬ್ಯಾಡ್ಮಿಂಟನ್ ಆಟಗಾರ್ತಿ ಅಶ್ವಿನಿ ಪೊನ್ನಪ್ಪ ಹೇಳಿದ್ದಾರೆ.

ಸೋಮವಾರ ಬ್ಯಾಡ್ಮಿಂಟನ್‌ನಲ್ಲಿ ಪುರುಷರ ಸಿಂಗಲ್ಸ್ ಕಂಚಿನ ಪದಕ ಸುತ್ತಿನಲ್ಲಿ ಲಕ್ಷ್ಯ ಸೇನ್ ಸೋತ ನಂತರ ಅವರ ಮೆಂಟರ್ ಪ್ರಕಾಶ್ ಪಡುಕೋಣೆ ಅವರು ನೀಡಿದ್ದ ಹೇಳಿಕೆಗೆ ಅಶ್ವಿನಿ ಪ್ರತಿಕ್ರಿಯಿಸಿದ್ದಾರೆ. ಅವರು ಇನ್ಸ್ಟಾಗ್ರಾಮ್‌ನಲ್ಲಿ ತಮ್ಮ ಅಭಿಪ್ರಾಯ ಪೋಸ್ಟ್ ಮಾಡಿದ್ದಾರೆ.

'ಆಟಗಾರರಿಗೆ ಎಲ್ಲ ಸೌಲಭ್ಯಗಳು ಮತ್ತು ನೆರವು ಸಿಗುತ್ತಿದೆ. ಆದ್ದರಿಂದ ಸೋಲು ಮತ್ತು ಗೆಲುವಿನ ಉತ್ತರದಾಯಿತ್ವವನ್ನು ಕ್ರೀಡಾಪಟುಗಳೇ ಹೊರಲು ಇದು ಸಕಾಲವಾಗಿದೆ. ಉತ್ತಮ ಫಲಿತಾಂಶ ನೀಡುವ ಹೊಣೆಗಾರಿಕೆ ನಿಭಾಯಿಸಬೇಕು' ಎಂದು ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ್ ಹೇಳಿದ್ದರು. ಆಟಗಾರರು ಒತ್ತಡ ಪರಿಸ್ಥಿತಿಯನ್ನು ನಿಭಾಯಿಸಲು ಕಲಿಯಬೇಕು. ಅವರಿಗೆ ಮನೋವಿಜ್ಞಾನ ಪರಿಣತರಿಂದ ತರಬೇತಿ ಕೊಡಿಸಬೇಕು ಎಂದೂ ಹೇಳಿದ್ದರು.

ಅಶ್ವಿನಿ ಪೊನ್ನಪ್ಪ ಅವರು ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ ಅವರೊಂದಿಗೆ ಆಡಿದ್ದರು.

'ಆಟಗಾರ ಸೋತಾಗ ಕೋಚ್‌ಗಳು ಯಾಕೆ ಹೊಣೆಗಾರರಾಗುವುದಿಲ್ಲ. ಪೂರ್ವಸಿದ್ಧತೆಯಲ್ಲಿ ಆಗಿರುವ ಲೋಪಗಳ ಬಗ್ಗೆ ಯಾಕೆ ಹೇಳುವುದಿಲ್ಲ?. ಆಟಗಾರ ಗೆದ್ದಾಗ ಅದರ ಮೊದಲ ಶ್ರೇಯ ಪಡೆಯುವುದು ಕೋಚ್‌ಗಳೇ ಆಗಿರುತ್ತಾರೆ. ಹೊಣೆಗಾರಿಕೆಯನ್ನೂ ನಿಭಾಯಿಸಬೇಕು ಅವರು' ಎಂದು ಅಶ್ವಿನಿ ಖಾರವಾಗಿ ಬರೆದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಮಾಜಿ ಆಟಗಾರ್ತಿ ಜ್ವಾಲಾ ಗುಟ್ಟಾ, 'ಆಟಗಾರರೂ ಸೋಲಿನ ಹೊಣೆಯನ್ನು ಏಕೆ ಹೊರಬಾರದು. ಗೆದ್ದಾಗ ಎಲ್ಲ ಲಾಭವನ್ನೂ ತಾವೇ ತೆಗೆದುಕೊಳ್ಳುತ್ತಾರೆಲ್ಲವೇ. ಕೋಚ್ ಅಥವಾ ನೆರವು ಸಿಬ್ಬಂದಿಗೆ ಹಂಚುತ್ತಾರೆಯೇ? ಆಟಗಾರರು ಒಂದು ಹಂತ ತಲುಪಿದ ನಂತರ ಜವಾಬ್ದಾರಿ ತೆಗೆದುಕೊಳ್ಳಬೇಕು' ಎಂದಿದ್ದಾರೆ.

ಹಿನ್ನಡೆಯಿಂದ ಗೆದ್ದ ಸರ್ಬಿಯಾ ಸೆಮಿಗೆ

ಪ್ಯಾರಿಸ್ (ಎಎಫ್‌ಪಿ): ತೀವ್ರ ಹೋರಾಟದ ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡ ಸರ್ಬಿಯಾ, ಒಲಿಂಪಿಕ್ಸ್ ಬ್ಯಾಸ್ಕೆಟ್‌ಬಾಲ್ ಕ್ವಾರ್ಟರ್‌ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಮಂಗಳವಾರ 95–90 ಪಾಯಿಂಟ್‌ಗಳಿಂದ ಸೋಲಿಸಿತು. ವಿರಾಮದ ವೇಳೆ ಸರ್ಬಿಯಾ 24 ಪಾಯಿಂಟ್‌ಗಳ ಹಿನ್ನಡೆಯಲ್ಲಿತ್ತು.

ಸೆಮಿಫೈನಲ್‌ನಲ್ಲಿ ಸರ್ಬಿಯಾದ ಸಂಭವನೀಯ ಎದುರಾಳಿ ಸತತ ಐದು ಬಾರಿ ಒಲಿಂಪಿಕ್ ಚಾಂಪಿಯನ್ ಅಮೆರಿಕ.

ಎನ್‌ಬಿಎದ ಅತಿ ಮೌಲ್ಯಯುತ ಆಟಗಾರ ಎನಿಸಿರುವ ನಿಕೋಲಾ ಜೋಕಿಕ್ 14 ರಿಬೌಂಡ್ಸ್ ಸೇರಿದಂತೆ 21 ಪಾಯಿಂಟ್ಸ್ ಗಳಿಸಿದರು. ಬೊಗ್ದಾನ್ ಬೊಗ್ದಾನೋವಿಕ್ 17 ಪಾಯಿಂಟ್ಸ್ ಹಾಕಿದರು. ಎರಡನೇ ಕ್ವಾರ್ಟರ್ ಕೊನೆಗೆ ಆಸ್ಟ್ರೇಲಿಯಾ 44–20ರಲ್ಲಿ ಮುಂದಿತ್ತು.

ಸೆಮಿಗೆ ಜರ್ಮನಿ: ವಿಶ್ವ ಚಾಂಪಿಯನ್ ಜರ್ಮನಿ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಗ್ರೀಸ್ ತಂಡವನ್ನು 76–63 ಪಾಯಿಂಟ್‌ಗಳಿಂದ ಸೋಲಿಸಿತು.

ಮೊದಲ ಕ್ವಾರ್ಟರ್ ನಂತರ 12 ಪಾಯಿಂಟ್‌ಗಳಿಂದ ಹಿಂದಿದ್ದ ಜರ್ಮನಿ ನಂತರ ಚೇತರಿಸಿ ವಿರಾಮದ ವೇಳೆ 36–36ರಲ್ಲಿ ಸಮ ಮಾಡಿಕೊಂಡಿತು. ತೀವ್ರ ಹೋರಾಟದ ಮೂರನೇ ಕ್ವಾರ್ಟರ್ ನಂತರ ಉತ್ತಮ ಹಿಡಿತ ಪಡೆಯಿತು.

ಜರ್ಮನಿ ಪರ ಫ್ರಾಂಝ್ ವ್ಯಾಗ್ನರ್ 22 ಪಾಯಿಂಟ್ ಗಳಿಸಿ ಮಿಂಚಿದರು.

ಒಲಿಂಪಿಕ್ಸ್ ಬ್ಯಾಸ್ಕೆಟ್‌ಬಾಲ್ ಕ್ವಾರ್ಟರ್‌ಫೈನಲ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಸರ್ಬಿಯಾ ತಂಡಗಳ ಆಟಗಾರರು ಪೈಪೋಟಿ ನಡೆಸಿದರು –ಎಎಫ್‌ಪಿ ಚಿತ್ರ

ಶ್ರೀಲಂಕಾ ವಿರುದ್ಧ ಮೂರನೇ ಏಕದಿನ ಪಂದ್ಯ ಇಂದು

ಸರಣಿ ಸೋಲು ತಪ್ಪಿಸುವ ಗುರಿ

ನೆಟ್ ಅಭ್ಯಾಸ ನಡೆಸಿದ ವಿರಾಟ್ ಕೊಹ್ಲಿ —ಪಿಟಿಐ ಚಿತ್ರ

ಕೊಲಂಬೊ (ಪಿಟಿಐ): ಭಾರತ ತಂಡ ಬುಧವಾರ ನಡೆಯಲಿರುವ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಶ್ರೀಲಂಕಾವನ್ನು ಎದುರಿಸಲಿದ್ದು, 27 ವರ್ಷಗಳಲ್ಲಿ ಮೊದಲ ಬಾರಿ ಸರಣಿ ಸೋಲು ತಪ್ಪಿಸುವ ಒತ್ತಡದಲ್ಲಿದೆ. ಬ್ಯಾಟರ್‌ಗಳ ಮೇಲೆ, ವಿಶೇಷವಾಗಿ ವಿರಾಟ್ ಕೊಹ್ಲಿ ಮೇಲೆ ಹೆಚ್ಚಿನ ಹೊಣೆಯಿದೆ.

ಚೆಂಡಿಗೆ ತಿರುವು ನೀಡುತ್ತಿರುವ ಪಿಚ್‌ನಲ್ಲಿ ಆತಿಥೇಯರ ಸ್ಪಿನ್ ದಾಳಿಯನ್ನು ನಿಭಾಯಿಸುವುದು ಭಾರತದ ಬ್ಯಾಟರ್‌ಗಳಿಗೆ ಸವಾಲಾಗುತ್ತಿದೆ. ಸದಾ ಗೆಲುವನ್ನೇ ಧೇನಿಸುವ ನೂತನ ಕೋಚ್ ಗೌತಮ್ ಗಂಭೀರ್ ಅವರಂತೂ ಬಯಸಿರುವ ಆರಂಭ ಇದಲ್ಲ. ರಾಷ್ಟ್ರೀಯ ತಂಡದ ಕೋಚ್ ಆದ ಮೇಲೆ ಇದು ಅವರಿಗೆ ಮೊದಲ ಸರಣಿ.

1997ರಲ್ಲಿ ಅರ್ಜುನ ರಣತುಂಗ ನೇತೃತ್ವದ ಶ್ರೀಲಂಕಾ ಕೈಲಿ, ಭಾರತ ಕೊನೆಯ ಬಾರಿ ದ್ವಿಪಕ್ಷೀಯ ಸರಣಿಯನ್ನು 0–3 ರಿಂದ ಸೋತಿತ್ತು. ಆಗ ಸಚಿನ್ ತೆಂಡೂಲ್ಕರ್ ನಾಯಕರಾಗಿದ್ದರು. ನಂತರ ತವರು ಮತ್ತು ಹೊರಗೆ ಭಾರತ 11 ದ್ವಿಪಕ್ಷೀಯ ಸರಣಿಗಳನ್ನು ಆಡಿದ್ದು ಒಂದನ್ನೂ ಸೋತಿಲ್ಲ.

ಮೊದಲ ಪಂದ್ಯ ಟೈ ಆಗಿರುವ ಕಾರಣ ಭಾರತ ಈಗ ಸರಣಿ ಗೆಲ್ಲುವ ಸ್ಥಿತಿಯಲ್ಲಿಲ್ಲ. ಆದರೆ 1–1ರಲ್ಲಿ ಸರಣಿ ಸಮಬಲ ಮಾಡುವ ಅವಕಾಶವಂತೂ ಪ್ರವಾಸಿ ತಂಡಕ್ಕೆ ಇದೆ.

ತಂಡದ ಈ ಪರಿಸ್ಥಿತಿಗೆ ಬ್ಯಾಟರ್‌ಗಳ ವೈಫಲ್ಯ ಕಾರಣ. ಪ್ರೇಮದಾಸ ಕ್ರೀಡಾಂಗಣದ ಪಿಚ್ ಸ್ಪಿನ್ನರ್ ಸ್ನೇಹಿ ಆಗಿದ್ದು ಆತಿಥೇಯ ಬೌಲರ್‌ಗಳು ಮೇಲುಗೈ ಸಾಧಿಸಿದ್ದಾರೆ.

ಕೊಹ್ಲಿ 2 ಪಂದ್ಯಗಳಿಂದ 38 ರನ್ ಗಳಿಸಿದ್ದಾರೆ. ಆದರೆ ಈ ಮೊತ್ತಕ್ಕಿಂತ ಹೆಚ್ಚಾಗಿ ಅವರು ವಿಕೆಟ್ ಒಪ್ಪಿಸುತ್ತಿರುವ ರೀತಿ ಚಿಂತೆಗೆ ಕಾರಣವಾಗಿದೆ.

ಲಯದಲ್ಲಿರುವ ಲಂಕಾದ ಆಟಗಾರ ಪಥುಮ್ ನಿಸಾಂಕ —ಎಎಫ್‌ಪಿ ಚಿತ್ರ

ನಾಯಕ ರೋಹಿತ್ ಶರ್ಮಾ ಬಿರುಸಿನ ಆರಂಭ ನೀಡಿದರೂ, ಲಂಕೆಯ ಬೌಲರ್‌ಗಳು ಕೊಹ್ಲಿ ಅವರನ್ನು ಅಂಕೆಯಲ್ಲಿಟ್ಟುಕೊಂಡಿದ್ದಾರೆ.

ಸ್ಪಿನ್ ದಾಳಿಯನ್ನು ವಿಶ್ವಾಸದಿಂದ ಆಡುವ ಶಿವಂ ದುಬೆ ಕೂಡ ಸಪ್ಪೆಯೆನಿಸಿದ್ದಾರೆ. ವಂಡರ್ಸೆ ಲೆಗ್‌ಬ್ರೇಕ್ ದಾಳಿಗೆ ಅವರಲ್ಲಿ ಉತ್ತರವಿರಲಿಲ್ಲ. ಶ್ರೇಯಸ್ ಅಯ್ಯರ್, ಕೆ.ಎಲ್.ರಾಹುಲ್ ಕಥೆ ವಿಭಿನ್ನವಾಗಿಲ್ಲ. ಆರಂಭ ಆಟಗಾರ ರೋಹಿತ್ ಮಾತ್ರ ಎಂದಿನ ವಿಶ್ವಾಸದಿಂದ ಆಡುತ್ತಿದ್ದಾರೆ.

ದುಬೆ ಸ್ಥಾನದಲ್ಲಿ ಸ್ಪಿನ್ನರ್ ಪಾತ್ರ ನಿರ್ವಹಿಸಬಲ್ಲ ರಿಯಾನ್ ಪರಾಗ್ ಅವಕಾಶ ಪಡೆಯಬಹುದು. ಪರಾಗ್ ವೇಗವಾಗಿ ರನ್‌ಗಳಿಸಬಲ್ಲರು.

ಇನ್ನು ಭಾರತದ ಬೌಲರ್‌ಗಳು ಆರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದರೂ, ಲಂಕಾದ ಕೆಳ ಮಧ್ಯಮ ಕ್ರಮಾಂಕವನ್ನು ಬೇಗ ಕಟ್ಟಿಹಾಕಲು ವಿಫಲರಾಗುತ್ತಿದ್ದಾರೆ. ಅವರ ಉಪಯುಕ್ತ ರನ್‌ಗಳು ತಂಡದ ಪಾಲಿಗೆ ನಿರ್ಣಾಯಕವಾಗುತ್ತಿವೆ.

ಪಂದ್ಯ ಆರಂಭ: ಮಧ್ಯಾಹ್ನ 2.30.
ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್

ಎಸ್‌ಎ20 ಲೀಗ್‌ಗೆ ಕಾರ್ತಿಕ್



ದಿನೇಶ್ ಕಾರ್ತಿಕ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ವಿಕೆಟ್ ಕೀಪರ್–ಬ್ಯಾಟರ್ ದಿನೇಶ್ ಕಾರ್ತಿಕ್ ಅವರು ದಕ್ಷಿಣ ಆಫ್ರಿಕ20 (ಎಸ್‌ಎ20) ಲೀಗ್‌ನಲ್ಲಿ ಆಡಲಿರುವ ಭಾರತದ ಮೊದಲ ಆಟಗಾರ ಎನಿಸಿದ್ದಾರೆ. ಅವರು ಪಾರ್ಲ್ ರಾಯಲ್ಸ್ ಪರ ಆಡಲಿದ್ದಾರೆ.

ಈ ಲೀಗ್ ಜನವರಿ 9ರಂದು ಆರಂಭವಾಗಲಿದೆ. 39 ವರ್ಷ ವಯಸ್ಸಿನ ಕಾರ್ತಿಕ್ ಈ ವರ್ಷದ ಜೂನ್‌ನಲ್ಲಿ ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಅವರನ್ನು ಐಪಿಎಲ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೆಂಟರ್ ಕಂ ಬ್ಯಾಟಿಂಗ್ ಕೋಚ್ ಆಗಿ ಸೆಳೆದುಕೊಂಡಿದೆ.

ಅವರು ಐಪಿಎಲ್‌ನಲ್ಲಿ ಕೊನೆಯ ಬಾರಿ ಆಡಿದ್ದರು. ಕಳೆದ ಸಾಲಿನಲ್ಲಿ ಅವರು ಆರ್‌ಸಿಬಿಗೆ 14 ಪಂದ್ಯಗಳಿಂದ 187.36 ಸ್ಟ್ರೈಕ್‌ರೇಟ್‌ನಲ್ಲಿ 326 ರನ್ ಪೇರಿಸಿದ್ದರು.

2022ರ ಟಿ20 ವಿಶ್ವಕಪ್‌ನಲ್ಲಿ ಅವರು ಬಾಂಗ್ಲಾದೇಶ ವಿರುದ್ಧ ಕೊನೆಯ ಬಾರಿ ಅಂತರರಾಷ್ಟ್ರಿಯ ಪಂದ್ಯ ಆಡಿದ್ದರು.

ರಾಯಲ್ಸ್ ತಂಡದಲ್ಲಿ ಅವರೊಂದಿಗೆ ಇತರ ಅಂತರರಾಷ್ಟ್ರೀಯ ಆಟಗಾರರಾದ ಡೇವಿಡ್ ಮಿಲ್ಲರ್, ಜೋ ರೂಟ್, ಲುಂಗಿ ಗಿಡಿ, ಆ್ಯಂಡಿಲೆ ಪಿಶುವಾಯೊ ಮತ್ತು ಕ್ವೆನಾ ಎಂಫಾಕ ಆಡಲಿದ್ದಾರೆ.

ಪಿಕೆಎಲ್: ಹರಾಜಿಗೆ ಪವನ್, ಪ್ರದೀಪ್ ನರ್ವಾಲ್ ಲಭ್ಯ

ಪ್ರದೀಪ್ ನರ್ವಾಲ್

ಪವನ್ ಸೆಹ್ರಾವತ್

ಮುಂಬೈ (ಪಿಟಿಐ): ಏಷ್ಯನ್ ಗೇಮ್ಸ್ ತಂಡದಲ್ಲಿದ್ದ ಅನುಭವಿ ಪವನ್ ಸೆಹ್ರಾವತ್ ಮತ್ತು ಪ್ರದೀಪ್ ನರ್ವಾಲ್ ಅವರು ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) 11ನೇ ಆವೃತ್ತಿಗೆ ಮೊದಲಿನ ಹರಾಜಿಗೆ ಲಭ್ಯರಿರುವ ಆಟಗಾರರಲ್ಲಿ ಪ್ರಮುಖರಾಗಿದ್ದಾರೆ.

ಹರಾಜು ಪ್ರಕ್ರಿಯೆ ಇಲ್ಲಿ ಇದೇ ತಿಂಗಳ 15 ಮತ್ತು 16ರಂದು ನಡೆಯಲಿದೆ. ಫ್ರಾಂಚೈಸಿಗಳು 88 ಆಟಗಾರರನ್ನು ಉಳಿಸಿಕೊಂಡಿವೆ. ಉಳಿಸಿಕೊಂಡವರಲ್ಲಿ ಪ್ರಮುಖ ರೈಡರ್‌ಗಳಾದ ಆಶು ಮಲಿಕ್ ಮತ್ತು ನವೀನ್ ಕುಮಾರ್ ಒಳಗೊಂಡಿದ್ದಾರೆ. ಅವರನ್ನು ದಬಾಗ್ ಡೆಲ್ಲಿ ಕೆ.ಸಿ. ತಂಡ ಉಳಿಸಿಕೊಂಡಿದೆ.

ಪುಣೇರಿ ಪಲ್ಟನ್ ತಂಡ 10ನೇ ಸೀಸನ್‌ನ ಅತ್ಯಂತ ಮೌಲ್ಯಯುತ ಆಟಗಾರ ಪ್ರಶಸ್ತಿಗೆ ಪಾತ್ರರಾಗಿದ್ದ ಅಸ್ಲಂ ಇನಾಮದರ್ ಅವರನ್ನು ಉಳಿಸಿಕೊಂಡಿದೆ. ಜೈಪುರ್ ಪಿಂಕ್ ಪ್ಯಾಂಥರ್ಸ್ ತನ್ನ ಸ್ಟಾರ್ ರೈಡರ್ ಅರ್ಜುನ್ ದೇಶ್ವಾಲ್ ಅವರನ್ನು ಉಳಿಸಿಕೊಂಡಿದೆ.

ತಂಡಗಳು ಉಳಿಸಿಕೊಂಡ 88 ಆಟಗಾರರಲ್ಲಿ 22 ಮಂದಿ ಎಲೈಟ್ ರಿಟೇನ್ಡ್ ಕೆಟಗರಿಗೆ (ಇಆರ್‌ಪಿ) ಸೇರಿದ್ದಾರೆ. 26 ಮಂದಿ ರಿಟೇನ್ಡ್ ಯಂಗ್ ಪ್ಲೇಯರ್ಸ್ (ಆರ್‌ವೈಪಿ) ವಿಭಾಗಕ್ಕೆ ಸೇರಿದ್ದಾರೆ. ಉಳಿದ 40 ಮಂದಿ ಎಕ್ಸಿಸ್ಟಿಂಗ್ ನ್ಯೂ ಯಂಗ್ ಪ್ಲೇಯರ್ಸ್ (ಇಎನ್‌ವೈಪಿ) ಕೆಟಗರಿಯಲ್ಲಿದ್ದಾರೆ.

ಈ ಬಾರಿ ಉಳಿಸಿಕೊಳ್ಳದ ಆಟಗಾರರ ಯಾದಿಯಲ್ಲಿ ಮಣಿಂದರ್ ಸಿಂಗ್, ಫಜಲ್ ಅತ್ರಾಚಲಿ ಮತ್ತು ಮೊಹಮದ್‌ರೇಝಾ ಶಾಡ್ಲುಯಿ ಚಿಯೆನಾ ಒಳಗೊಂಡಿದ್ದಾರೆ.

ದೇಶಿಯ ಮತ್ತು ವಿದೇಶಿ ಆಟಗಾರರನ್ನು 'ಎ', 'ಬಿ', 'ಸಿ' ಮತ್ತು 'ಡಿ' ಎಂದು ವರ್ಗೀಕರಿಸಲಾಗಿದೆ. ಇವರನ್ನು ಮತ್ತೆ ಆಲ್‌ರೌಂಡರ್ಸ್, ಡಿಫೆಂಡರ್ಸ್ ಮತ್ತು ರೈಡರ್ಸ್ ಎಂದೂ ವಿಂಗಡಿಸಲಾಗಿದೆ.

'ಎ' ಕೆಟಗರಿಯಲ್ಲಿರುವ ಆಟಗಾರರ ಮೂಲ ಬೆಲೆ ₹30 ಲಕ್ಷ, 'ಬಿ' ಕೆಟಗರಿಯಲ್ಲಿರುವ ಆಟಗಾರರ ಮೂಲ ಬೆಲೆ ₹20 ಲಕ್ಷ ಮತ್ತು 'ಸಿ' ಕೆಟಗರಿಯಲ್ಲಿರುವ ಆಟಗಾರರ ಮೂಲಬೆಲೆ ₹13 ಲಕ್ಷದಿಂದ ಶುರುವಾಗಲಿದೆ. 'ಡಿ' ವಿಭಾಗದಲ್ಲಿರುವ ಆಟಗಾರರ ಮೂಲಬೆಲೆ ₹9ಲಕ್ಷದಿಂದ ಆರಂಭವಾಗುತ್ತದೆ.

500ಕ್ಕೂ ಹೆಚ್ಚು ಖರೀದಿ ಪ್ರಕ್ರಿಯೆಗೆ ಲಭ್ಯರಿದ್ದಾರೆ. ತಂಡವೊಂದು ಆಟಗಾರರನ್ನು ಪಡೆಯಲು ಒಟ್ಟು ₹5 ಕೋಟಿಯವರೆಗೆ ತೊಡಗಿಸಲು ಅವಕಾಶವಿದೆ.

ಈಜು: ರಾಜ್ಯ ತಂಡದಲ್ಲಿ ಧೀನಿಧಿ

ಧೀನಿಧಿ ದೇಸಿಂಗು

ಬೆಂಗಳೂರು: ಒಡಿಶಾದಲ್ಲಿ ಮಂಗಳವಾರ ಆರಂಭವಾದ 40ನೇ ಸಬ್ ಜೂನಿಯರ್ ಮತ್ತು 50ನೇ ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ರಾಜ್ಯ ಈಜು ತಂಡದಲ್ಲಿ ಒಲಿಂಪಿಯನ್ ಧೀನಿಧಿ ದೇಸಿಂಗು ಅವರಿಗೆ ಸ್ಥಾನ ಕಲ್ಪಿಸಲಾಗಿದೆ.

ತಂಡಗಳು ಹೀಗಿದೆ: ಬಾಲಕರ ಗುಂಪು –3: ಅಮಿತ್ ಪವನ್ ಎಚ್., ಅವ್ಯಕ್ತ್ ಮೋಹನ್, ಭುವನ್ ಎಚ್.ಪದ್ಮಶಲ್ಲಿ, ಲೋಹಿತಾಶ್ವ ನಾಗೇಶ್ ಎಚ್., ಮೊಹಮ್ಮದ್ ಅರ್ಮಾನ್ ಸಮೀರ್, ಎನ್.ಪವನ್ ಕೃಷ್ಣಾ, ರಕ್ಷಿತ್ ಎ.ಕೋರೆ, ರುತ್ವ ಎಸ್., ಸಮೃಧ್ ಎ. **ಬಾಲಕಿಯರ ಗುಂಪು–3:** ಆರಾಧ್ಯಾ ಆಚಾರ್, ಆರೋಹಿ ಚಿತ್ರಗಾರ, ಇಮಾಯಾ ಎ.ಎಚ್., ನಯನಾ ಮಧ್ಯಸ್ಥ, ನೈರಾ ಬೋಪಣ್ಣ ಕೆ., ಸಾನ್ವಿ ಜೈನ್, ಶ್ರೇಯಾ ಸುರೇಶ್ ಪೂಜಾರ್, ಶ್ವಿತಿ ದಿವಾಕರ್ ಸುವರ್ಣ, ಸ್ತುತಿ ಸಿಂಗ್, **ಬಾಲಕರ ಗುಂಪು–2:** ಆರವ್ ಜೆ., ಅಡ್ರಿಯಾನ್ ನೀಲ್ ಸೆರ್ರಾವೊ, ಅದ್ವಿತ ವಿ.ಎಂ., ಅಗಸ್ತ್ಯ ಮಂಜುನಾಥ್, ಅಕ್ಷಜ್ ಪಿ., ಅಕ್ಷಜ್ ಠಾಕೂರಿಯಾ, ದ್ರುಪದ್ ರಾಮಕೃಷ್ಣ, ರಕ್ಷಣ್ ಪಿ., ರಿಷಿತ್ ರಂಗನ್, ಸಮರ್ಥ್‌ಗೌಡ ಬಿ.ಎಸ್., ಶರಣ್ ಎಸ್., ಸುಬ್ರಮಣ್ಯ ಜೀವಾಂಶ್ ಎಂ., ವೇದಾಂತ್ ಮೆಹ್ರಾ, ಯಶ್ ಎಚ್.ಪಾಲ್. **ಬಾಲಕಿಯರ ಗುಂಪು–2:** ಆನ್ಯಾ ಎ. ಚಕ್ರವರ್ತಿ, ಅದಿತಿ ವಿನಾಯಕ ರೆಲೆಕರ್, ಓರೆಲಿಯಾ ಪೌಲಿನಿ ದಿಯಾಸ್, ಚೈತ್ರಾ ಫಣೀಂದ್ರನಾಥ್, ಧೀನಿಧಿ ದೇಸಿಂಗು, ಡಿಂಪಲ್ ಸೋನಾಕ್ಷಿ ಎಂ.ಗೌಡ, ಹಿತಶ್ರೀ ಎನ್, ಮಿಹಿಕಾ ದತ್, ನೈಶಾ, ನಿಧಿ ಕುಲಕರ್ಣಿ, ಸಮೃದ್ಧಿ ಹಾಲ್ಕೆರೆ, ಶೆಲಿನ್ ಸುನಿಲ್, ತಾನ್ಯಾ ಎಂ.ಎನ್., ತಿಸ್ಯಾ ಸೋನಾರ್, ತ್ರಿಶಾ ಸಿಂಧು. **ಬಾಲಕರ ಗುಂಪು–1:** ಆಲಿಸ್ಟೆರ್ ಸ್ಯಾಮುಯೆಲ್ ರೆಗೊ, ಅಮಾನ್ ಅಭಿಜಿತ್ ಸುಣಗಾರ್, ಆರ್ಯನ್ ಭಟ್, ಚಿಂತನ್ ಎಸ್.ಶೆಟ್ಟಿ, ಡೆನಿಯಲ್ ಪೌಲ್, ಇಧಾಂತ್ ಶಾಶ್ವತ್ ಚತುರ್ವೇದಿ, ಕ್ರಿಷ್ ಸುಕುಮಾರ್, ನವನೀತ್ ಆರ್. ಗೌಡ, ನಿರಂಜನ್ ಕಾರ್ತಿಕ್ ಬಿ., ಎಸ್.ದಕ್ಷಣ್, ಎಸ್.ದರ್ಶನ್, ಸೊಹಮ್ ಮೊಂಡಾಲ್, ಸೂರ್ಯ ಜೋಯಪ್ಪ ಒ.ಆರ್., ಸ್ವರೂಪ್ ಧನುಚೆ, ವೇದಾಂತ್ ವಿ.ಎಂ., **ಬಾಲಕಿಯರ ಗುಂಪು–1:** ಆರುಷಿ ಅಗರವಾಲ್, ಅದಿತಿ ಎಂ.ಮುಲಾಯ್, ಹಷಿಕಾ ರಾಮಚಂದ್ರ, ಲಿನೆಯ್‌ಶಾ ಎ.ಕೆ., ಮಾನವಿ ವರ್ಮಾ, ಮೀನಾಕ್ಷಿ ಮೆನನ್, ರಿದಿಮ್ ವೀರೇಂದ್ರಕುಮಾರ್, ರಿತಿಕಾ ಬಿ.ಎಂ., ಖುಜುಲಾ ಎಸ್., ಶಾಲಿನಿ ಎಸ್.ದೀಕ್ಷಿತ್, ಶಿರಿನ್, ಶ್ರೀ ಚರಣಿ ತುಮು, ಸುಹಾಸಿನಿ ಘೋಷ್, ಸುನಿಧಿ ಹಾಲ್ಕೆರೆ, ತಾನ್ಯಾ ಎಸ್., ವಿಹಿತಾ ನಯನಾ. **ನೆರವು ಸಿಬ್ಬಂದಿ:** ರೋಹಿತ್ ಬಾಬು ಎನ್. (ಮ್ಯಾನೇಜರ್), ಜಯರಾಜನ್ ಎ.ಸಿ., ಜಾನ್ ಕ್ರಿಸ್ಟೋಫರ್ ನಿರ್ಮಲ್ ಕುಮಾರ್, ನಟರಾಜ್ ವಿ., ಮಧುಕುಮಾರ್ ಬಿ.ಎಂ., ಬಿನೇಶ್ (ಕೋಚ್‌ಗಳು)

^ನಿಯಮ ಮತ್ತು ಷರತ್ತುಗಳು ಅನ್ವಯ. ##ಪೈನ್ ಲ್ಯಾಬ್ಸ್ ಮಶೀನ್‌ಗಳ ಮೂಲಕ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟುಗಳಿಗೆ ಮಾತ್ರ ಎಲ್ಲ ಹೋಂಡಾ ಟೂ-ವೀಲರ್ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿರುತ್ತದೆ. ##ಗ್ರಾಹಕರು ರೂ. 5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಪಡೆಯಬಹುದಾಗಿದೆ. ##ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಮಾಡಿದ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ##2024 ಆಗಸ್ಟ್ 31ರ ವರೆಗೆ ಕ್ಯಾಶ್‌ಬ್ಯಾಕ್ ಕೊಡುಗೆ ಮಾನ್ಯವಾಗಿದೆ. ##ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. **ಹಣಕಾಸು ಯೋಜನೆ ಮತ್ತು ಕ್ರೆಡಿಟ್ ಸೌಲಭ್ಯವು IDFC ಫಸ್ಟ್ ಬ್ಯಾಂಕ್‌ನ ("ಬ್ಯಾಂಕ್") ವಿವೇಚನೆಯ ಮೇರೆಗೆ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. *ಮೂಲ: HMSI ಆಂತರಿಕ ಡೇಟಾ ಆಧಾರದಲ್ಲಿ 2001 ಜೂನ್ ಇಂದ 2024 ಜೂನ್‌ವರೆಗಿನ ಬ್ರ್ಯಾಂಡ್ Activaದ ಸಂಚಿತ ಮಾರಾಟ ಅಂಕಿಅಂಶ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com